ಆದಿಲಶಾಹಿ ಸಾಹಿತ್ಯ ಸಂಪುಟ : ೧೫

ಫರ್ಮಾನುಗಳು/ಸನದುಗಳು/ಕೈಫಿಯತ್ತುಗಳು

(ಭಾಗ – ೨)

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೫

ಫರ್ಮಾನುಗಳು / ಸನದುಗಳು / ಕೈಫಿಯತ್ತುಗಳು

ಆದಿಲಶಾಹಿ ಸಾಹಿತ್ಯ ಸಂಪುಟ : ೧೫

ಫರ್ಮಾನುಗಳು / ಸನದುಗಳು / ಕೈಫಿಯತ್ತುಗಳು

ಅನುವಾದಕರು

ಚಂದ್ರಕಾಂತ ಪೋಕಳೆ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

Farmans / Sanads / Kaifiyats (Volume - 15) –Translated by, **Chandrkant Pokale**

Published by : **Dr. P.G.Halakatti Research Centre,**
B.L.D.E. Association, Vijayapur, Karnataka

Edition : **2016**

Pages : **xxvi + 280 = 306**

Copies : **1000**

Price : **Rs. 200.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಫರ್ಮಾನುಗಳು / ಸನದುಗಳು / ಕೈಫಿಯತ್ತುಗಳು (ಸಂಪುಟ–೧೫):
ಅನುವಾದಕರು : ಚಂದ್ರಕಾಂತ ಪೋಕಳೆ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಹಕ್ಕುಗಳು : ಪ್ರಕಾಶಕರು

ಆವೃತ್ತಿ : ಪ್ರಥಮ ೨೦೧೬

ಪುಟಗಳು : xxvi + ೨೮೦ = ೩೦೬

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

(ದಿನಾಂಕ ೩೦-೮-೨೦೧೫ರ ವರೆಗೆ)

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಯಪುರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರವರೆಗೆ ರಾಜ್ಯಭಾರ ಮಾಡಿದ ರಾಜಮನೆತನವಿದು. 'ದೀನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕ್ಬರ್‌ನಂತೆ 'ದಾದ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಷಹನು ಸಮನ್ವಯ ಸಮಾಜಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು

ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ-ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯದ ಖಣಿ, ಉರ್ದು-ಪರ್ಶಿಯನ್ ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಸೂತಕಗಳನ್ನು ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ-ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ-ನೆರವುಗಳಿಗೆ, ಈ ಯೋಜನೆಯ ಸಲಹಾ ಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು.ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿ ವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ-ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ

ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮ ಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ಎಂ.ಎಸ್.ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ–ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦–೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ

ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫೆರಿಸ್ತಾ : ತಾರೀಖ–ಇ–ಫೆರಿಸ್ತಾ [ಪರ್ಶಿಯನ್]**
ಇಂಗ್ಲೀಷಿಗೆ ಅನುವಾದಿಸಿದ್ದಾರೆ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ.೧೮೭೯] ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ : ಇಬ್ರಾಹಿಮನಾಮಾ [ದಖಣಿ]**
ಪ್ರಕಟವಾಗಿದೆ. ಮೂಲ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಔಂಧ ಅರ್ಕೀವ್ಸ ಸಾತಾರಾದಲ್ಲಿವೆ.

೩. **ಅಸದಬೇಗ : ವಾಕಾಯತೆ ಅಸದಬೇಗ [ಪರ್ಶಿಯನ್]**

ಚಾಪ್‌ಮನ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿ ಭಾಗಶಃ ಅನುವಾದವಾಗಿದೆ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]**
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ ಹೈದ್ರಾಬಾದಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]**
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ.ಭಾಗಶಃ ಬಿ.ಡಿ.ವರ್ಮಾರಿಂದ ಇಂಗ್ಲಿಷಿನಲ್ಲಿ ಅನುವಾದ.

೬. **ನುಸ್ರತಿ : ಅಲಿನಾಮಾ [ದಖಣಿ]**
ಪ್ರಕಟವಾಗಿದೆ. ಪ್ರತಿ ದುರ್ಮಿಳ.

೭. **ಬಶೀರುದ್ದೀನ ಅಹ್ಮದ : ವಾಕಾತೆ ಮಾಮಲಕತ್ ಬಿಜಾಪುರ [ಉರ್ದು]**
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ : ಘುತುಹತೆ ಆದಿಲಶಾಹಿ [ಪರ್ಶಿಯನ್]**
ಮುಂಬಯಿ ಅರ್ಕೀವ್ಸ, ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ : ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್‌ಜೈನುದ್ದೀನ ಅಲ್ ಮಾಬಾರಿ: ತುಹಫತುಲ್ ಮುಜಾಹಿದೀನ [ಪರ್ಶಿಯನ್]**

೧೧. **ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು]**

೧೨. ಸಯ್ಯದ ಮೊಹಿಯುದ್ದೀನ ಪೀರಜಾದಾ : ಅಹವಾಲೆ ಸಲಾತೀನ ಬಿಜಾಪುರ [ಪರ್ಶಿಯನ್]
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸೀ [ಪರ್ಶಿಯನ್]
ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದ್ರಾಬಾದ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. ೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ [ದಖಣಿ ಹಿಂದಿ]
ಕರ್ನಾಟಕ ವಿ.ವಿ.ಯಿಂದ ಪುಸ್ತಕ ಪ್ರಕಟವಾಗಿದೆ.

೧೫. ಜುಬೇರಿ : ರೌಜತ್ ಅಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್]
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಹಸ್ತಪ್ರತಿ ಸಂಖ್ಯೆ ೧೪೮೧೩

೧೬. ಜುಬೇರಿ : ಬುಸಾತಿನೆ ಸಲಾತೀನ [ಪರ್ಶಿಯನ್]
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಸಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. ಮೀರ ಅಹಮದ ಅಲಿ ಖಾನ: ಗುಲದಸ್ತಾ ಎ ಬಿಜಾಪುರ [ದಖಣಿ]
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಬಿಜಾಪುರ ಸೂಫಿ ಸಂತರ ಚರಿತ್ರೆ ೧೭೯೬] [ಪರ್ಶಿಯನ್]
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. ಆದಿಲಶಾಹಿಕಾಲದ ಫರ್ಮಾನುಗಳು: ಭಾರತ ಇತಿಹಾಸ ಸಂಶೋಧಕ ಮಂಡಳ [ಸಾವಿರಕ್ಕೂ ಮಿಕ್ಕಿ] **ಮತ್ತು ಸನದುಗಳು** ಪುಣೆ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : **ತಾರೀಖೆ ಅಲಿ ಆದಿಲಶಹ [ದಖಣಿ]**

೨. ಮೀರ್ ರಫೀಯುದ್ದೀನ ಶಿರಾಜಿ : **ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : **ಹಪ್ತ ಕುರ್ಸೀ [ಪರ್ಶಿಯನ್]**

೪. ಮೀರ ಅಹಮದ ಅಲಿ ಖಾನ : **ಗುಲದಸ್ತಾ ಎ ಬಿಜಾಪುರ [ದಖಣಿ]**

೫. ಜುಹೂರ್ ಬಿನ್ ಜುಹೂರಿ : **ಮಹಮ್ಮದನಾಮಾ [ಪರ್ಶಿಯನ್]**

ಇದಲ್ಲದೆ, ಫೆರಿಸ್ತಾನ ತಾರೀಖ-ಇ-ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಘುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾವ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ. ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಘತ್‌ಉಲ್ಲಾಹ್, ಬೆಂಗಳೂರು

೧೪. ಡಾ. ಮಹನೂರ್ ಜಮಾನಿ ಬೇಗಂ, ಬೆಂಗಳೂರು

೧೫. ಪ್ರೊ. ಎ.ಎಚ್. ಮಾಸಾಪತಿ, ಬೆಂಗಳೂರು

೧೬. ಫಕೀರ್ ಮುಹಮ್ಮದ ಕಟ್ಪಾಡಿ, ಬೆಂಗಳೂರು

೧೭. ಮೌಲಾನಾ ಸಯ್ಯದ್ ರಶೀದ್ ಅಲ್ ಖಾಸಿಮಿ, ಬೆಂಗಳೂರು

೧೮. ಶ್ರೀ ಬೋಡೆ ರಿಯಾಜ್ಞ್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

೧೯. ಡಾ. ಚಂದ್ರಕಾಂತ ಪೋಕಳೆ, ಬೆಳಗಾವಿ

ಈ ಮಹನೀಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ : ೪ ಸಂಪುಟಗಳು.

೨. ಬುಸಾತಿನೆ ಸಲಾತೀನ : ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಫುತುಹತೆ ಅಲಂಗೀರ ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ೧೦ನೆಯ ಸಂಪುಟ

೮. 'ಕಿತಾಬೆ ನವರಸ' ೧೧ನೆಯ ಸಂಪುಟ

೯. ರೌಜತುಲ್ ಔಲಿಯಾಯೆ ಬಿಜಾಪುರ ೧೨ನೆಯ ಸಂಪುಟ.

೧೦. ಕರ್ನಾಟಕದಲ್ಲಿಯ ಅರೇಬಿಕ್, ಪರ್ಶಿಯನ್, ಉರ್ದು ಶಾಸನಗಳ ಸೂಚಿ ೧೩ನೆಯ ಸಂಪುಟ

೧೧. ಫರ್ಮಾನುಗಳು

ಹೀಗೆ ೧೪ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೫ನೆಯ ಸಂಪುಟವಾಗಿ 'ಫರ್ಮಾನುಗಳು/ಸನದುಗಳು/ಕೈಫಿಯತ್ತುಗಳು' ಎಂಬ ಕೃತಿಯು ಪ್ರಕಟವಾಗುತ್ತಿದೆ.

ಇದನ್ನು ಮರಾಠಿಯಿಂದ ಕನ್ನಡಕ್ಕೆ ಶ್ರೀ ಚಂದ್ರಕಾಂತ ಪೋಕಳೆ ಅವರು ಅನುವಾದ ಮಾಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ' ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ, ಶ್ರೀ ಡಿ.ರಂದೀಪ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಬಿ. ಶಿವಕುಮಾರ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ವಿಜಯಪುರದ ಆದಿಲಶಾಹಿಗಳು ಸುಮಾರು ೨೦೦ ವರುಷ (ಕ್ರಿ. ಶ. ೧೪೮೯-೧೬೮೬) ಈ ಪ್ರದೇಶವನ್ನು ಆಳಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಅಧೀನ ಸರದಾರರು, ಸುಬೇದಾರರು, ದೇಸಾಯರು, ದೇಶಮುಖರೇ ಆದಿಯಾಗಿ ಹಲವರಿಗೆ ಆದಿಲಶಾಹಿಗಳು, ಕಾಲಕಾಲಕ್ಕೆ ಆದೇಶಗಳನ್ನು ನೀಡಿದ್ದಾರೆ. ಅವರ ರಾಜ್ಯ ಮುಂಬಯಿಯಿಂದ [ಮಹಾರಾಷ್ಟ್ರ] ತಂಜಾವೂರು [ತಮಿಳುನಾಡು], ಗೋವೆಯಿಂದ ಕರ್ನೂಲ [ಆಂಧ್ರಪ್ರದೇಶ] ವರೆಗೆ ಹಬ್ಬಿತ್ತು. ಆಡಳಿತದ ದೃಷ್ಟಿಯಿಂದ ನೂರಾರು ಸುಭೆಗಳು, ಪರಗಣೆಗಳು, ದೇಸಗತಿಗಳಲ್ಲಿ ವಿಭಜಿಸಲಾಗಿತ್ತು. ಅವರೆಲ್ಲರೊಂದಿಗೆ ಅನೇಕ ವಿಷಯಗಳಲ್ಲಿ ಆದೇಶಗಳನ್ನು ನೀಡಬೇಕಾಗುತ್ತಿತ್ತು. ಅವುಗಳು ಸೈನ್ಯದ ವ್ಯವಸ್ಥೆಯಿಂದ ಅರಮನೆಗೆ ಹಾಲುಕೊಡುವ ಎಮ್ಮೆ ಹಸುಗಳನ್ನು ವ್ಯವಸ್ಥೆ ಮಾಡಿ ಕಳಿಸುವವರೆಗೂ ವಿಷಯಗಳನ್ನು ಒಳಗೊಂಡಿವೆ.

ಈ ಆದೇಶಗಳು ಪರ್ಶಿಯನ್ ಭಾಷೆಯಲ್ಲಿವೆ. ಹುಡುಕುತ್ತ ಹೋದಂತೆ, ಸಾವಿರಾರು ಆದೇಶಗಳು ದೊರೆತವು. ಎಲ್ಲೆಲ್ಲಿ ಹೋಗಿದೆಯೋ ಅಲ್ಲೆಲ್ಲ ಆದಿಲಶಾಹಿಗಳ ಫರ್ಮಾನುಗಳು ದೊರೆತಿವೆ. ರಾಷ್ಟ್ರೀಯ ಪತ್ರಾಗಾರ ಹೊಸ ದೆಹಲಿ, ಆಂಧ್ರಪ್ರದೇಶ ಪತ್ರಾಗಾರ, ಔರಂಗಾಬಾದ ಪತ್ರಾಗಾರ ಇತ್ಯಾದಿ ಬಹುತೇಕ ಎಲ್ಲ ಪತ್ರಾಗಾರಗಳಲ್ಲಿ, ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯಗಳಲ್ಲಿ ಆದಿಲಶಾಹಿಗಳ ಆದೇಶಗಳು ದೊರಕುತ್ತವೆ. ಎಲ್ಲವನ್ನೂ ಸಂಗ್ರಹಿಸಲಾಗಿಲ್ಲ. ಮುಖ್ಯವಾಗಿ ಕಳೆದ ಶತಮಾನದ ಆದಿಯಲ್ಲಿ ಪುಣೆಯ ಭಾರತೀಯ ಇತಿಹಾಸ ಸಂಶೋದಕ ಮಂಡಳವು ಉತ್ತರಕರ್ನಾಟಕದ ಬಹುತೇಕ ದೇಸಾಯಿ, ದೇಶಪಾಂಡೆ, ದೇಶಮುಖರ ಮನೆತನಗಳಲ್ಲಿಯ ಕಾಗದ ಪತ್ರಗಳನ್ನು ಸಂಗ್ರಹಿಸಿತ್ತು. ಅವುಗಳಲ್ಲಿಯ ಆದಿಲಶಾಹಿಗಳ

ಆದೇಶಗಳಲ್ಲಿಯ ಕೆಲವನ್ನು ಪರ್ಶಿಯನ್ ಮಿಶ್ರಿತ ಮರಾಠಿಗೆ ಅನುವಾದಿಸಿ ೧೯೨೦ ರಿಂದ ೪೦ರ ಮಧ್ಯದಲ್ಲಿ ತಮ್ಮ ಮಂಡಳದ ತ್ರೈಮಾಸಿಕದಲ್ಲಿ ಪ್ರಕಟಿಸಿತು. ಜೊತೆಗೆ ಕೆಲವು ಫರ್ಮಾನುಗಳನ್ನು ಮೂಲ ಪರ್ಶಿಯನ್ನದಲ್ಲೂ ಪ್ರಕಟಿಸಿದೆ. ಹೀಗೆ ದೊರೆತ ಸುಮಾರು ೬೦೦ ಫರ್ಮನುಗಳಲ್ಲಿ ೨೬೦ ಫರ್ಮಾನುಗಳ ಕನ್ನಡ ಅನುವಾದವನ್ನು ಸಂಪುಟ ೧೪ರಲ್ಲಿ ಕೊಟ್ಟಿದೆ. ಉಳಿದವುಗಳಲ್ಲಿ ಮತ್ತೆ ೬೬ ಫರ್ಮಾನುಗಳ ಕನ್ನಡ ಅನುವಾದವನ್ನು ಇಲ್ಲಿ ಕೊಟ್ಟಿದೆ.

ಇಲ್ಲಿಯ ವಿಶೇಷವೆಂದರೆ ಹುಕ್ಕೇರಿ ಮತ್ತು ಅಥಣಿ ಪ್ರದೇಶದ ಫರ್ಮಾನುಗಳಲ್ಲಿ ಹಲವಾರು ವಿಶೇಷ ಸಂಗತಿಗಳಿವೆ. ಅಥಣಿಯ ಫರ್ಮಾನುಗಳಲ್ಲಿ ಅಲ್ಲಿಯ ಲಿಂಗಾಯತರು ಮತ್ತು ಜೈನರು ತಂತಮ್ಮ ಶ್ರೇಷ್ಠತೆಗಾಗಿ ವಿಜಯಪುರದ ಆದಿಲಶಾಹಿಗಳ ವರೆಗೂ ಬಂದದ್ದು ಮತ್ತು ಆದಿಲಶಾಹಿಗಳು ಅವರನ್ನು ಕಾಶಿಯ ವಿದ್ಯಾಪೀಠಕ್ಕೆ ಕಳಿಸಿ ಶ್ರೇಷ್ಠತೆಯನ್ನು ಕಂಡುಕೊಳ್ಳಬೇಕು ಎಂದು ಹೇಳಿ ಕಳುಹಿಸಿದ್ದು ಮಹತ್ವದ್ದಾಗಿದೆ. ಇನ್ನುಳಿದ ಫರ್ಮಾನುಗಳು ಗೋವೆಯ ಪೋರ್ತುಗೀಸರು ಮತ್ತು ಆದಿಲಶಾಹಿಗಳ ಮಧ್ಯದ ಪತ್ರವ್ಯವಹಾರಗಳು ಆದಿಲಶಾಹಿ ಚರಿತ್ರೆಯನ್ನು ಕಟ್ಟುವಲ್ಲಿ ಹೊಸ ಬೆಳಕನ್ನು ನೀಡುತ್ತವೆ.

ಆದಿಲಶಾಕಾಲದ ೧೭ ಸನದುಗಳ ಕನ್ನಡ ಅನುವಾದವನ್ನು ಇಲ್ಲಿ ಕೊಟ್ಟಿದೆ. ವಿಶೇಷ ಸಂದರ್ಭಗಳಲ್ಲಿ ವಿಶೇಷ ವ್ಯಕ್ತಿಗಳಿಗೆ ಹಾಕಿ ಕೊಟ್ಟ ಸನದುಗಳು ಇವು. ಇಲ್ಲಿಯೂ ವೈವಿಧ್ಯತೆ ಇದೆ. ಸ್ವತಃ ಬಾದಶಹರು ಕೊಡುವ ಸನದುಗಳಲ್ಲದೆ ಅಲ್ಲಿಯ ಸರದಾರರು, ಸಚಿವರು ಕೂಡ ಕೆಲವು ಸಂದರ್ಭಗಳಲ್ಲಿ ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ನೀಡಿದ ಸನದುಗಳೂ ಇವೆ. ಉದಾಹರಣೆಗೆ ಸುಲ್ತಾನ ಮುಹಮ್ಮದ ಆದೀಲಶಾಹನು ಅಮ್ಮಿನ ಭಾವಿ ಮಠದ ಸಿಂಹಾಸನಾಧೀಶ್ವರ ಚಿಕ್ಕ ಶಾಂತದೇವರಿಗೆ ಕೊಟ್ಟ ಸನದು, ಶ್ರಿಂಗೇರಿಯ ಶ್ರೀ ಶಂಕರ ಭಾರತಿ ಜಗದ್ಗುರುಗಳಿಗೆ ಯತನಹಾಳ [ಯತ್ನಾಳ] ಗ್ರಾಮವನ್ನು ಉಂಬಳಿಯಾಗಿ ಹಾಕಿಕೊಟ್ಟ ಸನದು, ಮಹತ್ವದ ದಾಖಲೆಗಳಾಗಿವೆ.

ಕೈಫಿಯತ್ತುಗಳು ಬ್ರಿಟಿಶರ ಕಾಲದಲ್ಲಿ ಅವರು ಪ್ರತಿಯೊಂದು ಐತಿಹಾಸಿಕ ಮನೆತನಗಳಿಂದ ಕೇಳಿ ಪಡೆದುಕೊಂಡ ವಿವರಗಳು. ಇಂದು ಕೂಡ ಪ್ರಸಿದ್ಧವಾದ ಕೆಲವು ಮನೆತನಗಳ ಚರಿತ್ರೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಉದಾಹರಣೆ ಸವಣೂರ ನವಾಬರು, ಮುಧೋಳ, ಗಜೇಂದ್ರಗಡ ಘೋರಪಡೆ, ಪಟವರ್ಧನ, ರಾಸ್ತೆ ಮನೆತನಗಳು ಇಂದಿನ ಉತ್ತರಕರ್ನಾಟಕದ ಹಲವಾರು ಕಡೆಗೆ ಅಧಿಕಾರವನ್ನು ಅನುಭವಿಸಿದವರು. ಅದರಂತೆಯೇ ರಾಮದುರ್ಗದ ಸಂಸ್ಥಾನಿಕರು ಕೂಡ. ಜೊತೆಗೆ ಅಥಣೀಕರ ದೇಶಪಾಂಡೆ, ಜಾಲಿಹಾಳ ದೇಸಾಯರು, ನಂದಗಡ ದೇಸಾಯರು,

ಬಾಗಲಕೋಟಕರ ದೇಸಾಯಿಗಳ ಕೈಫಿಯತ್ತುಗಳು ಕರ್ನಾಟಕದ ಇತಿಹಾಸವನ್ನು ಪುನಃ ರಚಿಸುವಲ್ಲಿ ತುಂಬ ಮಹತ್ವದ ಪಾತ್ರವನ್ನು ವಹಿಸುತ್ತವೆ.

ಈ ಫರ್ಮಾನುಗಳು, ಸನದುಗಳು ಮತ್ತು ಕೈಫಿಯತ್ತುಗಳ ಅನುವಾದ ಭಾರತ ಇತಿಹಾಸ ಸಂಶೋಧಕ ಮಂಡಳದ ತ್ರೈಮಾಸಿಕ ಪತ್ರಿಕೆಗಳು ಮತ್ತು ಪುರುಷೋತ್ತಮ ವಿಶ್ರಾಮ ಮಾವಜಿ ಅವರು ಪ್ರಕಟಿಸಿದ (೧೯೦೮) 'ಕೈಫಿಯತ್ತು, ಯಾದೀಜ' ಎಂಬ ಪುಸ್ತಕಗಳ ಮರಾಠೀ ಅನುವಾದವನ್ನು ಅವಲಂಬಿಸಿವೆ. ಅವುಗಳನ್ನು ಅನುವಾದ ಮಾಡಿ ಕೊಟ್ಟವರು ಬೆಳಗಾವಿಯ ಶ್ರೀ ಚಂದ್ರಕಾಂತ ಪೋಕಳೆ ಅವರು. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಫರ್ಮಾನುಗಳನ್ನು ಮತ್ತು 'ಕೈಫಿಯತ್ತು, ಯಾದೀಜ' ಎಂಬ ಪುಸ್ತಕವನ್ನು ಒದಗಿಸಿ ಕೊಟ್ಟ, ಭಾರತೀಯ ಇತಿಹಾಸ ಸಂಶೋಧಕ ಮಂಡಳದ ಕಾರ್ಯದರ್ಶಿ ಪ್ರೊ. ಭಾವೆ ಮತ್ತು ಪುಣೆಯ ಪರ್ಶಿಯನ್, ಮರಾಠೀ ವಿದ್ವಾಂಸೆ ಡಾ. ಅನುರಾಧಾ ಕುಲಕರ್ಣಿ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಕರಡು ತಿದ್ದುವಲ್ಲಿ ಸಹಾಯ ಮಾಡಿದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ, ಸಂಯೋಜಕರಾದ ಡಾ. ವಿ.ಡಿ.ಐಹೊಳ್ಳಿ ಅವರನ್ನು ಇಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಅಂದವಾಗಿ ಮುದ್ರಿಸಿದ ಬೆಂಗಳೂರಿನ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಗೆ ಕೃತಜ್ಞತೆಗಳು.

■

*

ಪರಿವಿಡಿ

■

I. ಫರ್ಮಾನುಗಳು

ಹುಕ್ಕೇರಿ ಪ್ರದೇಶ

೧

ಶ. ೧೫೫೧
ಇ. ೧೬೨೯

ಮಕರಂದ ಮುಸ್ತಕ ಕಾಜಿ ಮೀರ ಮೊಹಮ್ಮುದ ವಜೀರ ಕಚೇರಿ ಸರಕಾರ ಬಿಜಾಪುರ ಹಜೇರತ ಹಸಕುಷು ಬಮೋಜಿಬ ಕೌಲನಾಮಾ ಮನಾಮ ತಮಾಜಿ ನಾಯಕ ದೇಸಾಯಿ ಮತ್ತು ಆಲಮಗೌಡ ದೇಸಾಯಿ ಮತ್ತು ತಿಷಜಿ ಪಂಡಿತ ದೇಸಕುಲಕರ್ಣಿ ಹುಕ್ಕೇರಿ ಪ್ರದೇಶ ಬಿ ಸುರ ಸನ್ ೧೦೩೯ ಸಲಾಸಿನ್ ಆಲಷ ನೀವು ಈ ಮನೆತನದ ಹಳೆಯ ವ್ಯಕ್ತಿ. ದರಬಾರದ ಬಾದಶಾಹರ ಕಾರ್ಯದಲ್ಲಿ ಹಗಲು ರಾತ್ರಿ ಸೇವೆಯಲ್ಲಿ ತೊಡಗಿದವರು. ನಿಮ್ಮ ಮನೆತನದವರು ದೊಡ್ಡ ದೊಡ್ಡ ಹುದ್ದೆಯನ್ನು ಪಡೆದವರಾಗಿದ್ದವರು. ಸದ್ಯ ಹುಕ್ಕೇರಿ ಇಲಾಖೆಯ ಊರು ಲೂಟಿಯಿಂದಾಗಿ ಸರ್ವನಾಶವಾಗಿ ಹೋಗಿತ್ತು. ಆಗ ನೀವು ಪಟೇಲ ಕುಲಕರ್ಣಿ ಹಾಗೂ ಪ್ರಜೆಗಳಿಗೆ ಸಮಾಧಾನ ಮಾಡಿ, ಊರಿನ ಹೊಲಗದ್ದೆಗಳಲ್ಲಿ ಫಸಲಿನ ಲಾವಣಿ, ನೀರು ಸಿಂಚನ ಮಾಡಿದಿರಿ. ಅದಕ್ಕಿಂತ ಮೊದಲು ಗಿಡಗಂಟಿ, ಕಾಡು ಕಡಿದು ಹಸನು ಮಾಡಿದಿರಿ. ಇಲಾಖೆಯ ಸರಕಾರಿ ಕಂದಾಯವನ್ನು ಮಾಫಿ ಮಾಡಿದಿರಿ. ಆದರೂ ಸರಕಾರದ ಸೇವೆಯಲ್ಲಿ ಹಿಂದೆ ಉಳಿಯಲಿಲ್ಲ. ನಿಮ್ಮ ಮನೆತನದ ನಿಷ್ಠೆಯನ್ನು ಕಂಡು, ನಿಮ್ಮ ಮೇಲೆ ಮೆಹರಬಾನರಾಗಿ ನಿಮಗೆ ಹುಕ್ಕೇರಿ ಇಲಾಖೆಯ ಆಡಳಿತವನ್ನು ವಹಿಸಿಕೊಡಲಾಗಿದೆ. ಸದರಿ ಇಲಾಖೆಯ ಕಂದಾಯದ ಲೆಕ್ಕ ಹೀಗಿದೆ, ೮೦,೦೦೦/ – ಹೊನ್ನು ಬಾದಶಾಹರ ಕಾರ್ಯಕ್ಕೆ ನೀಡುವುದು. ಈ ಗ್ರಾಮಗಳ ಕಂದಾಯದ ಬೇರಿಜನ್ನು ಈ ಕೆಳಗಿನಂತೆ ನಿಗದಿ ಮಾಡಲಾಗಿದೆ. ತಪಶೀಲು

೨೩೨೨	ಕಸಬಾ ಹುಕ್ಕೇರಿ	೮೦೦೦	ತಾ। ಮಸೋಲಿ
೧೦೦	ಪೇಟೆ ಗಜಪುರ	೨೦೬೦	ತಪೆ ಕಬೂರ

೭೭೫೬ ತಾ। ಮಜತಿ	೬೦೧೩ ತಪೆ ಜುಸುಳ
೩೨೪೬ ತಾ। ನೇಸರಿ	೪೯೬೬ ತಪೆ ಸಾವಗಾವ
೪೧೮೭ ತಾ। ಕಾಪಸಗೋಳ	೩೭೭೨ ತಪೆ ಆಲತ
೩೦೨೪ ತಾ। ಜೇನ	
೯೬೬೬ ತಾ। ಕಟೆ	೧೦೫೬ ತಪೆ ಸಾವಳಜಿ
೧೦೬೬೬ ತಾ। ಸೋಲಾಪುರ	೨೭೨೦ ತಪೆ ದೂಧಗಾಂವ
೫೯೮೦ ತಾ। ಸದಲಗ	೪೪೬೬ ತಪೆ ಜುಗುಳ
೪೬೯೪೪/-	೩೩೦೫೩/-

ಕಂದಾಯದ ಬೇರಿಜ ೮೦,೦೦೦ವನ್ನು ಬಾದಶಹಾ ನೀಡಿದ್ದಾರೆ. ಕಂತು ಅಸಲು + ವರ್ಷದ ಕೊನೆಗೆ ನೀಡುತ್ತಿರಬೇಕು. ನಿಮ್ಮ ಸಂಬಳದ ಹೊರತು ಬೇರೆ ಯಾವುದರ ಬಗೆಗೂ ತಕರಾರು ಮಾಡಬಾರದು. ನಿಮ್ಮ ಆದಾಯವನ್ನು ಸಂರಕ್ಷಿಸಿಕೊಂಡು ಪೀಳಿಗೆ ಪ್ರತಿ ಪೀಳಿಗೆ ಬಾದಶಹಾರ ಸೇವೆಯನ್ನು ಯಾವುದೇ ನೆಪಮಾಡಿ ತಪ್ಪಿಸದೆ ಮಾಡುತ್ತಿರಬೇಕು. ನಿಮಗೆ ವತನವೆಂದು ಹಳ್ಳಿಗಳನ್ನು ಇನಾಮ ಭೂಮಿಯೆಂದು ನೀಡಲಾಗಿದೆ. ಸೇವಕರು, ಚಾಕರರು, ಪಲ್ಲಕ್ಕಿ, ಗಳಿಕೆಯ ಹಣ, ಕಾಳು-ಕಡಿ, ಕೂಲಿಯಾಳು, ತರಕಾರಿ ಮತ್ತು ಆಯಗಾರರನ್ನು, ಗೌಡ-ಕುಲಕರ್ಣಿಯರನ್ನು ನಿಮಗೆ ವ್ಯವಸ್ಥೆ ಮಾಡಿ ಕೊಡಲಾಗಿದೆ. ನಿಮ್ಮ ಕುಟುಂಬದವರು ತಿಂದುಂಡು ಹಾಯಾಗಿದ್ದು ಬಾದಶಹಾ ಅವರ ಸೇವೆಯಲ್ಲಿ ತೊಡಗಿಕೊಂಡಿರಬೇಕು. ನಿಮ್ಮ ಹೊಲಮನೆಗಳಿಗೆ ಇನಾಮ ಭೂಮಿಗೆ ಸರಕಾರದ ಕಂತು ಇದೆಲ್ಲವನ್ನು ಮಾಫ ಮಾಡಲಾಗಿದೆ. ನಿಮ್ಮ ಕಾರ್ಯಗಳಿಗೆ ಹಿಂದೂಗಳಾಗಲಿ, ಮುಸಲ್ಮಾನರಾಗಲಿ ಅಡ್ಡಿಯನ್ನುಂಟು ಮಾಡಿದರೆ ಅವರಿಗೆ ಬಾದಶಹಾನ ಆಣೆಯಿದೆ. ತಾರೀಕ ಫಾರ್ಸಿ, ಮುದ್ರೆ ಅಕ್ಷರ ಫಾರ್ಸಿ..

ಕ್ರಿ.ಶ. ೧೨/೫/೧೬೬೯
ಶ. ೧೫೯೧, ವೈಶಾಖ ವದ್ಯ ೭

(ಕರಾರು ಪತ್ರ) ಕೌಲನಾಮಾ ಅಜರಖ್ತುಖಾನ ಖೋದಾಯೆವದಖಾನ ಅಲಿಖಾನ ರಫಿಅಲ ಕದರ ಬುಲಂದಮಕಾನ ಖಾನ ರುಸ್ತುಮ ಜಮಾ ಖಲದ ಆಯಾ ದೌಲತ ಹೂ ಮೊ। ಸಿದಗೌಡ ದೇಸಾಯಿ ಸು. ತಿಸಾಸಿತ್ತೈನ ಅಲಫ ದರಿವಿಲಾ ಪುತ್ರ ಮಹಮ್ಮದಖಾನ ನಿಮ್ಮ ಬಗೆಗೆ ತಿಳಿದು ಬರುವುದೇನೆಂದರೆ, ದೇಸಾಯಿ ದೇಶ ಕುಲಕರ್ಣಿ ಪಾರಮಾರ ಇವರು ಸಾಹೇಬರ ಹಳೆಯ ಕಾಲದ ಬಾದಶಹಾನ ನೌಕರರಾಗಿದ್ದು, ನಿಷ್ಠೆ, ಪ್ರಾಮಾಣಿಕರಾಗಿ ಸೇವೆ ಸಲ್ಲಿಸಿದ್ದಾರೆ. ಹೀಗಾಗಿ ಸಾಹೇಬರು ಇವರ ಬಗ್ಗೆ ಮೆಹರ್‌ಬಾನರಾಗಿ ಖಾಲಸಾ ಪ್ರದೇಶದ ಭೂಗಂದಾಯವನ್ನು ರಾಜ್ಯದ ಲೆಕ್ಕದಂತೆ ನಿರ್ಧರಿಸಿ ಶಿವಾಜಿ ಭೋಸಲೆಯ ಭಂಡಾರಕ್ಕೆ ೪ ಕಂದಾಯವನ್ನು ಜಮೆ ಮಾಡಬೇಕು. ಸಾಹೇಬ ನೌಕರಿಯಲ್ಲಿ ಪೀಳಿಗೆ-ಪ್ರತಿಪೀಳಿಗೆಯುವರು ಮುಂದುವರೆಸಿಕೊಂಡು ಹೋಗುತ್ತಾರೆಂದು ಖಾತ್ರಿಪಡಿಸಿಕೊಳ್ಳಬೇಕು. ಒಟ್ಟು ೮೦,೦೦೦/- ಹೊನ್ನು ಬಾದಶಹಾನ ಕಂದಾಯವನ್ನು ನಿರ್ಧರಿಸಲಾಗಿದ್ದು, ಶಿವಾಜಿ ಭೋಸಲೆಯ ೧/೪ ಪಾಲನ್ನು ಕಳೆದು ಬಾಕಿ ೬೦೦೦೦/- ಹೊನ್ನನ್ನು ಭಂಡಾರಕ್ಕೆ ಜಮೆ ಮಾಡಬೇಕೆಂದು ನಿರ್ಧರಿಸಲಾಗಿದೆ. ಪ್ರತಿವರ್ಷ ಮುಂಗಾರಿನಿಂದ ಹಿಂಗಾರಿನವರೆಗೆ ಆರು ಕಂತಿನಂತೆ ೧೦೦೦೦/- ಅಸಲನ್ನು ನೀಡುತ್ತ ಬರಬೇಕು. ತಕರಾರು ಮಾಡಬಾರದು. ನೀವು ಪುತ್ರರಾಗಿದ್ದೀರಿ. ನಿಮ್ಮಿಂದ ದೊರೆಗಳಿಗೆ ಎಂದೂ ಮೋಸವಾಗುವುದಿಲ್ಲ ಎಂಬ ನಂಬಿಕೆಯಿದೆ. ವಿಲಾಯತಿಯ ಆದಾಯವನ್ನು ವೃದ್ಧಿಸುವಂತೆ ಮಾಡಿ, ಕಂದಾಯವನ್ನು ಜಮೆ ಮಾಡಿ, ಪ್ರತಿಪೀಳಿಗೆ ಬಾದಶಹಾನ ಸೇವೆಯಲ್ಲಿ ತೊಡಗಿ, ನಿಮ್ಮ ನಿಷ್ಠೆಯನ್ನು ವ್ಯಕ್ತ ಮಾಡಬೇಕು. ಈ ವಿಷಯದಲ್ಲಿ ಯಾರಾದರೂ ಕಿಚ್ಚು ಹಚ್ಚುವ ಪ್ರಯತ್ನ ಮಾಡಿದರೆ ಅವರಿಗೆ ತಕ್ಕ ಪಾಠ ಕಲಿಸಬೇಕು. ಇದಕ್ಕೆ ತಪ್ಪಿದರೆ ಆಣೆಯಿದೆ.

ರುಜು ದಫ್ತರ ಮುಖ್ಯಸ್ಥ	ರುಜು	ರುಜು
ತಾರೀಖ ೨೨೧ ಜಿಲ್ಹೇಜ	ಸಂರಕ್ಷಕ	ಸನದಿ ಸಚಿವ

ಕ್ರಿಶ. ೧೬೭೦
ಶ. ೧೫೯೨
ಇ. ೧೬೭೦

ರಾಜಾಧಿರಾಜ ರಾಜಮಾನ್ಯ ರಾಜಶ್ರೀ ಮುಧೋ ತಿಮಾಜಿ ಹೇಜಿಬ ಜಮಾಚೀ(ರಿ) ಕಾಬ ಗೋಸಾವಿ ಇವರಿಗೆ,

॥ ಸ್ನೇಹಾಂಕಿತ ಪ್ರತಿ ಲಖಮಣಗೌಡ ದೇಸಾಯಿ ಪ್ರದೇಶ ಹುಕ್ಕೇರಿ ಸುರುಸನ್ ಇಹಿದೇ। ಸಬೈನ ಆಲಫ ಶರಣು ಶರಣಾರ್ಥಿ ವಿನಂತಿ. ಹುಬ್ಬಳ್ಳಿ ತಾಲೂಕಿನ ಸಂಪಗಾಂವ ಸರದೇಸಾಯಿ ಅವರು ನಿಮ್ಮ ಅಧಿಕಾರದ ಅನುಮತಿಯಿಂದ ಅಶ್ವದಳವನ್ನು ಉಳಿಸಿಕೊಂಡಿದ್ದಾರೆ. ಪೇಶ್ವೆಯವರ ಸಂಬಳ ಹೋನ್ ೧೨೫- ಮತ್ತು ನೌಕರ ಚಾಕರರು, ಇಬ್ಬರು ಸೇವಕರ ಎಲೆ ತಾಂಬೂಲ, ಹೋನ್ ೭೫- ಕುದುರೆಗಳನ್ನು ಪ್ರತಿವರ್ಷ ನಿಮಗೆ ನೀಡಲಾಗುವುದು. ಇದಕ್ಕೆಲ್ಲ ನಾವೇ ಧಣಿಗಳು. ನಿಮಗೆ ಇದೆಲ್ಲ ತಲುಪಿದಾಗ ನೀವು ಅಧಿಕಾರವನ್ನು ಚಲಾಯಿಸುತ್ತಿರಬೇಕು. ಹಾಗೆಯೆ ಉಪಮಂತ್ರಿಯನ್ನು ನೇಮಿಸಬೇಕು. ಅದೂ ಅಲ್ಲದೆ ಸರದೇಸಾಯಿ ಹಕ್ಕಿನಂತೆ ನಡೆದುಕೊಳ್ಳಬೇಕು. ಅದೇನೆ ಇದ್ದರೂ ನಾವೇ ಧಣಿಗಳು ಎನ್ನುವುದು ತಿಳಿದಿರಲಿ ಈ ವಿನಂತಿ.

(ಫಾ.ಮೊ. ಷಟ್ಕೋನದ ಮುಕ್ರಿ)

(ಎಡಬದಿಯ ಕಾಗದ ಮುಕ್ತ ಸಮಾಸದಲ್ಲಿ ನೇಗಿಲ ಮುದ್ರೆಯಿದೆ.)

■

ಅಥಣಿ–ಶೆಟ್ಟಿ

೪

ಶ.೧೫೭೭, ಅಶ್ವಿನಿ.ಶು.೫
ಕ್ರಿ.ಶ. ೧೬೫೫, ಸ.ಪ. ೨೪

ಮಹಾಮೇಹ ರಾಜಶ್ರೀ ಶಿವಪ್ಪಾ ಬಿನ್ ಲಿಂಗಪ್ಪ
ಪುಚುಡಿ. ಮೊ–ಪೇಠ, ಕಾ–ಅಥಣಿ
ಗೋಸಾವಿ ಇವರಿಗೆ

ದಾ.ಬೋ. ಬಸಪ್ಪಾ ಬಿನ್ ಬಸಲಣಾ ತೇಲಿ ಮೊ–ಪೇಠ, ಕಾ ಮಜಕುರು ಸಾ ನೀತತ ಖಮಸೈನ ಒಂದು ಸಾವಿರ ರೂಪಾಯಿ ಸಾಲಕ್ಕಾಗಿ ಬರೆದುಕೊಂಡ ಅರ್ಜಿ– ನಮ್ಮ ಸ್ವಂತ ಖರ್ಚಿಗಾಗಿ ಸ್ವಾಮಿಯಿಂದ ರಕಮನ್ನು ಪಡೆದಿದ್ದೇವೆ. ೨ ೪ ಹೊನ್ನು ಎರಡು ಪಟ್ಟು ಬಡ್ಡಿಯನ್ನು ಪ್ರತಿತಿಂಗಳ ದರ ಒಂದು ಹೊನ್ನಿನಂತೆ ಮರಳಿಸುತ್ತೇನೆ. ಪ್ರತಿ ಸುಗ್ಗಿಗೆ ಸದರಿ ಅಸಲು ಬಡ್ಡಿ ಸಹಿತ ನೀಡುತ್ತೇವೆ. ಇದು ನಾವು ನೀಡಿದ ವಚನ. ಈ ಹೊನ್ನನ್ನು ರೋಖ ಮುಂಗಡವಾಗಿ ಪಡೆದಿದ್ದೇವೆ.

ತಾರೀಖ ೩, ತಿಂಗಳು ಹನ್ನೆರಡು

ಸಾಕ್ಷಿ

(ಕನ್ನಡ ಅಕ್ಷರಗಳು)

ಶ. ೧೫೭೮, ಕಾರ್ತಿಕ ವ.೬
ಇ. ೧೬೫೬, ಅಕ್ಟೋಬರ ೨೯

ಅಲಿ ಹಜರತ್ ಕೈವಾನ ರಂಫಅತ್ ಮುರಾತಾರಿ ಮಂಜಲತ ಮಿರಿಖಕೌತ ಸುರಸೇಖತ ಲಾತ ಇಜತವಾರ... ಗಾಹಾ..ಅ- ಫೌಜದಾರ ಕ್ಷೇತ್ರ ಕಾಸಿ..ಸಾಮ ಇಜತಮು ವಾ ಅಫಲತಹು ವಾ ಶೌಕತಹು ಸೇವಕರ ಶುಭಲೋಪರಿ.

॥ ಅಜಿ ಮರವಲೀಸ ಸಾದಕುಲದವನಾದ ಅಬ್ದುಲ್ ಅಲಿ ಹವಲ್ದಾರ. ತಾ- ಅಥಣಿ, ಪೊ- ಸುರಪುರ ಮಹಮುದಾಪುರ ಸಲಾವ್ ನಮ್ರ ಶಿಪಾಯಿ ತಿಳಿಸುವುದೇನೆಂದರೆ, ಶಿಬಿರದ ಊಳಿಗರಾದ ಲಿಂಗಾಯತ ಮತ್ತು ಜೈನರ ನಡುವೆ ಜಗಳ ಆರಂಭಗೊಂಡಿದ್ದು, ಇದು ವಿಕೋಪಕ್ಕೆ ಹೋಗಿದೆ. ಸದರಿ ಲಿಂಗಾಯತ ಮತ್ತು ಜೈನರಲ್ಲಿ ಏಕೆ ಜಗಳ ಶುರುವಾಗಿದೆ. ಯಾವ ಕಾರಣಕ್ಕಾಗಿ ಜಗಳವಾಡುತ್ತಿದ್ದಾರೆ ಎಂದು ವಿಚಾರಣೆ ನಡೆಸಿದಾಗ, ಈ ಕೆಳಗಿನ ಉತ್ತರವನ್ನು ಬರೆದು ನೀಡಿದ್ದಾರೆ.

ಲಿಂಗಾಯತರು ನೀಡಿದ ತಕರಾರು ಏನೆಂದರೆ, ಸೈನ್ಯದಲ್ಲಿರುವ ಜಂಗಮದೇವರು ಜೈನರನ್ನು ಮೊದಲಿನಿಂದಲೂ ನಿಂದೆ ಮಾಡುತ್ತಲಿರುತ್ತಾರೆ. ಲಿಂಗಾಯತರದೇ ಕಾರಭಾರ ನಡೆದಿದೆ. ವೇದಶಾಸ್ತ್ರದ ಆಜ್ಞೆಯಂತೆ ಉಳಿದವರು ವಾಸಿಸುತ್ತಿದ್ದಾಗ ಜೈನರು ಕಾಲು ಕೆದರಿ ಜಗಳವನ್ನು ಆರಂಭಿಸಿದ್ದಾರೆ. ಆದರೂ ಜಂಗಮರು ವೇದಶಾಸ್ತ್ರದಂತೆ ನಡೆದುಕೊಳ್ಳುತ್ತಿದ್ದಾರೆ. ಹೀಗಿರುವಾಗ ಸಾಹೇಬರಿಂದ ಜಾಮೀನು ಪಡೆದು ಬ್ರಹ್ಮಸಭೆಯ ಪಂಡಿತರು ಶಾಸ್ತ್ರಿಗಳು ಇದ್ದಲ್ಲಿ ಕಳಿಸಬೇಕು. ವೇದಶಾಸ್ತ್ರ ಬ್ರಹ್ಮಸಭೆಯಿಂದಲೂ ಹಿಂದಿನಿಂದಲೂ ನಡೆದಿದೆಯೇ ಎನ್ನುವುದನ್ನು ಖಾತ್ರಿಪಡಿಸಿಕೊಡಬೇಕೆಂದು ಹೇಳಿದಾಗ, ಸಹಿ ಮಾಡದಿದ್ದರೂ ತಾವು ಸೋತಿದ್ದೇವೆ ಎಂದು ಬರೆದುಕೊಟ್ಟಿದ್ದಾರೆ.

ಜೈನ ಜನರು ನೀಡಿದ ತಕರಾರು ಏನೆಂದರೆ- ಸೈನ್ಯಶಿಬಿರದಲ್ಲಿರುವ ಜಂಗಮರು ಜೈನದೇವರು-ಗುರು-ಮತ್ತು ಜನರನ್ನು ಬಯ್ಯುತ್ತ ಇರುತ್ತಾರೆ. ಈ ಕಾರಣದಿಂದಾಗಿ ನಮ್ಮ ಮತ್ತು ಲಿಂಗಾಯಿತರ ನಡುವೆ ಜಗಳ ಶುರುವಾಗಿದೆ. ಆದ್ದರಿಂದ ಸಾಹೇಬರಾದ ನಮ್ಮ ಬಳಿಗೆ ಲಿಂಗಾಯತರನ್ನು ಕರೆಯಿಸಿ ಬ್ರಹ್ಮಸಭಾ ಪಂಡಿತ ಶಾಸ್ತ್ರಿಗಳಿದ್ದಲ್ಲಿಗೆ ಕಳಿಸಲಾಯಿತು. ಅಲ್ಲಿ ಜಂಗಮರು ಜೈನ ದೇವರನ್ನು ಗುರುವನ್ನು ಜನರನ್ನು ನಿಂದೆ ಮಾಡುವುದಾಗಿ ಬರೆದುಕೊಟ್ಟು ಸೋತಿರುವುದಾಗಿ ಸಹಿ ಮಾಡಿದ್ದಾರೆ. ಇನ್ನುಮುಂದೆ ವೇದಶಾಸ್ತ್ರಗಳು ಹೇಳಿದಂತೆ ವರ್ತಿಸುವುದಾಗಿ ಉತ್ತರ ಬರೆದುಕೊಟ್ಟಿದ್ದಾರೆ.

ಹೀಗೆ ಉಭಯತರಿಂದ ಉತ್ತರವನ್ನು ಪಡೆದು, ತರ್ಕಶಾಸ್ತ್ರದ ಪ್ರಕಾರ ನಿರ್ಣಯವನ್ನು ಕೈಕೊಳ್ಳಲೆಂದು ನಾಲ್ಕು ಪೀಠ ಷಟ್‌ಶಾಸ್ತ್ರ ಪರಾಯಣ ಶಡ್‌ದರುಶನರೇ ಜನರ ಹಾಗೂ ರಾಜ್ಯ ರಾಜ್ಯಗಳ ಪಂಡಿತರಾದ ಕಾಶಿಶಾಸ್ತ್ರಜ್ಞರ ಬಳಿಗೆ ಕಳಿಸಲಾಗಿದೆ. ಇದು ಅದರ ತಪಶೀಲು.

ಲಿಂಗಾಯತ ಗುಂಪಿನ ಅನ್ನದಾನಿ ಜಂಗಮ ಆರಾಧ್ಯ ಮತ್ತು ಶಿಬಿರದ ಜಂಗಮರು ಮತ್ತು ಕೋಡಿಸೆಟ್ಟಿ, ಆಚಸೆಟ್ಟಿ ಲಿಂಗಾಯತ.

ಜೈನರ ಗುಂಪಿನ ಸಿಲಾಸ ಉಪಾಧ್ಯೆ ಮತ್ತು ಇಬ್ಬರು ಸೆಟ್ಟಿ ಸಾಹಾಲ್ ಮತ್ತು ಚೇನಿ ಸೆಟ್ಟಿಕಾರ ಶಾಹಾಪುರ

ಹೀಗೆ ಬರೆದು ಕಳಿಸಲಾಗಿದೆ. ಶ್ರೇಷ್ಠ ಪಂಡಿತರನ್ನು ಶಾಸ್ತ್ರಜ್ಞರನ್ನು ಷಡ್‌ದರುಶನದ ಜನರನ್ನು ಕರೆಯಿಸಿ, ಉಭಯ ಪಕ್ಷದ ತಕರಾರನ್ನು ಆಲಿಸಿ, ಆ ಬ್ರಹ್ಮಸಭೆಯ ವೇದಶಾಸ್ತ್ರವು ಏನು ನಿರ್ಣಯವನ್ನು ತೆಗೆದುಕೊಳ್ಳುವುದೋ, ಅದನ್ನು ಯಥಾವತ್ತಾಗಿ ಬರೆದು ಕಳಿಸಬೇಕು. ಉಭಯಪಕ್ಷಗಳಲ್ಲಿ ಈ ದ್ವೇಷ ಬೆಳೆಯದಂತೆ ನಿರ್ಣಯ ಪತ್ರವನ್ನು ಬರೆದು ಕಳಿಸುವ ಕೃಪೆಯಾಗಬೇಕು ಮೊ। ರವಾನೆ ಛ ೭೦ ಮೊಹರಂ ಸದರಸಾಲ ಸನ್ ಸಭಾ ಖಮಸೇನ ಅಲಫ ಮೊ ॥

೬

ಶ- ೧೫೮೦
ಇ-೧೬೫೮

(ಮೇಲಿನ ಭಾಗ ಹರಿದಿದೆ)
ಬಿಹುಜೂರ

ಗಿರಿಮಾಜಿ ವಸವಂತರಾವ

(ಫಾ.ವಾ.ಶಿ)
ಅಪಾಜಿ ಮಹಾದೇವೂ ಹವಾಲ್ದಾರ

ಮತ್ತು ರಮಾಜಿ ಭಿಕಾಜಿ ಮಜಮದಾರ

ಪಾ । ಜಬಖಡಿ (ಜಮಖಂಡಿ)

(ಫಾ.ವಾ.ಶಿ.)

ಗಂಗಪಾನಾಯಿಕ್ ಭಂಡಿ ಸೌದಾಗರ

ಶಂಕರಾಜಿ ರಾಜೇ ಮಾಹಲಗಾರ

ಲಿಂಗೋಜಿ ಜೇವ್ರೋಡು ಹುದೆದಾರ
ಮೌಜೇ ಸಾಲಿ

ಬಾಬಸೆಟ್ಟಿ ಸೆಟಿಗಾರ ಮತ್ತು

ಮಹಂತಸೆಟಿ ಚಟಕಿ ಮತ್ತು

ಸಿದವೀರ ಸೆಟ ಮತ್ತು ಗಂಗಾಸೆಟಿ

ಸೋ-ಪೇಠ ಜೋಹರಾಪುರ ಮತ್ತು

ಪಾದಶಾಹಪೂರ

ಮಹಾಮೇಹ ರಾಜಶ್ರೀ ಪಾರ್ವತಿ ಅಬಾ ದೇಸಾಯಣಿ ಮತ್ತು ಗದಗಿ ಅಪ್ಪಾ ಸಿದಣ ಸಂದಿರಾವೂ ದೇಸಾಯಿ ಪಾ। ಜಬಖಡಿ... ಸಮಸ್ತ ಮಹಾವಾಡ ಮತ್ತು ರೈಯಾನಿ ಪೇಠ ಅಥಣಿ ಸು। ಸನ್ ತಿಸಾ ಖ (ಮಸೇನ ಅ) ಲಫ್ ಕಾರಣವನ್ನು ಬರೆದು ನೀಡಲಾಗಿದೆ... ನಾವು ನಿಮ್ಮ ಸೇವಕರು....ಎಲ್ಲರೂ ಒಂದೇ

(ಮುಂದಿನ ಭಾಗ ಅವ್ಯವಸ್ಥಿತವಾಗಿದೆ)

ಬಿಹುಜೂರ ಹಾಜೀರ ಮಜಾಲಸಿಯಾನಿ ದರಜಾಗಾ ಹಣಮಂತದೇವರ ಗುಡಿ ಪಾ। ಜಮಖಂಡಿ ಹವಾಲ್ದಾರ ಮತ್ತು ಕಾರಕೂನ ದೇಸಾಯಿ ಅಪ್ಪಾಜಿ ಮಹಾದೇವು ಪವಾಲ್ದಾರ (ಫಾರಸಿ ವರ್ತುಳಾಕಾರದ ಮುದ್ರೆ) ಪಾರ್ವತಿ ಆಬಾ ಗದಿಗಪ್ಪ ಸಿಧಣ ಕಾರಪಾ ನಂದಿರಾವು ದೇಸಾಯಿ (ಫಾರ್ಸಿ ಮುದೆ)

ರಾಮಾಜಿ ಭೀಮಾಜಿ ಮುಜುಮದಾರ, ರುಜು ಮಜದಾರ ಒಬ್ಬ ಭರ್ಡಿ ಸೌದಾಗರ ರು।

ಕಾರಕೂನಗಳು ಕಾ। ಅಥಣಿ

ಮೀರಮಿಯಾ ಹುದೇದಾರ (ಫಾರ್ಸಿ ಬದಾಮಿ ಆಕಾರದ ಮುದ್ರೆ)

ಶಂಕರಾಜಿ ಮಾಹಲದಾರ ಮಾಹಲ ಮೋಹಜಮಿ (ಫಾರ್ಸಿ ವರ್ತುಳಾಕಾರದ ಮುದ್ರೆ)

ಚಿನಗೌಡ ಪಟೇಲ ಮುಕ್ತಾ ಕೊಟ್ಟಲಗಿ (ನೇಗಿಲ ಚಿತ್ರ)

ವೆಂಕಟಾದ್ರಿ ತಿರಮಲ ನಿಸೋದ ರುಜು ನಿಸೀದಾ

ಲಿಂಗೋಜಿ ಜಿಲೋ ಕುಲಕರ್ಣಿ ಮುಕ್ಕಾಂ ಕೊಟ್ಟಲಗಿ

ತಕರಾರು ಸಲ್ಲಿಸಿದರು. ಸಿದ್ದಣ್ಣ ಭೂಪತಿ ದೇಸಾಯಿ ಮತ್ತು ಸಿದಗೌಡ ಲಿಂಗೌಡ ದೇಸಾಯಿ ತಾ ರಾಮಾಜಿ ಅಪಜಿ ದೇ ಕುಲಕರ್ಣಿ ಮತ್ತು ಸೂಟಿ ಮತ್ತು ನಾಗಪ್ಪ ಮಹಾಜನ ಮತ್ತು ಸಮಸ್ತರು, ೧೨ ಆಯಗಾರರು (ಕುಶಲಕರ್ಮಿಗಳು) ಕಾ ಅಥಣಿ ಸು ಸನ್ ತಿಸಾ ಖಮಸೇನ ತಕರಾರು ನೀಡಿದ ಮೇರೆಗೆ ಸದ್ಯದ ಮಹಾನಾಡ ಬಂದಿ ಸದರಿಯವರೊಂದಿಗೆ ಮತ್ತು ನಮ್ಮೊಂದಿಗೆ ಬಂದು ನಿರ್ಣಯದ ಬಗೆಗೆ ಲಿಂಗಾಯತರ ಜಂಗಮದೇವರು ಮತ್ತು ಜೈನ ಸಮುದಾಯದವರು ಜಯಪಟ್ಟವನ್ನು ಪಡೆದುಕೊಂಡು ಬಂದರು. ಹೀಗಾಗಿ ಅವರನ್ನು ನಾವು, ದಿವಾನರು, ಬಂಧು ಬಳಗದವರೆಲ್ಲ ಹೋಗಿ ಗೌರವಿಸಿ ಕರೆದುಕೊಂಡು ಬಂದೆವು. ಆ ಕಾಲಕ್ಕೆ ಅಡಚಣೆಯುಂಟು ಮಾಡಿ ಸದರಿ ಹುಜೂರ ಬಳಿಗೆ ಬರಲಿಲ್ಲ. ಅನಂತರ ಐದು ತಿಂಗಳ ಬಳಿಕ ಜೈನರಗುರು ಮತ್ತು ಜೈನ ಜನರು ಹೋಗಿ ಬೇರೊಂದು ಜಯಪತ್ರ ತಂದರು. ದಿವಾನ ಮತ್ತು ಸಮಸ್ತ ಜನರು ಸೇರಿ ಅವರನ್ನು ಸ್ವಾಗತಿಸಲು ಮುಂದಾದಾಗ ಲಿಂಗಾಯತರು ಬಂದು ಜೈನರು ಸುಳ್ಳುಪತ್ರ ತಂದಿದ್ದಾರೆಂದು ಹುಜೂರರಿಗೆ ಹೇಳಿದರು. ಅವರನ್ನು ಸ್ವಾಗತಿಸಲು ನಮ್ಮ ಸಮ್ಮತಿಯಿಲ್ಲ. ನಾವು ಇದಕ್ಕೆ ರಾಜಿಯಿಲ್ಲ ಎಂದವರು

ದೂರಸರಿದರು. ಆಗ ಐನಾಪುರದ ಪಟೇಲರಾದ ಅಮಗೌಡ ಅವರ ಕುದುರೆ ಸವಾರ ಮತ್ತು ಬಳಗದವರು ಕರೆಯಿಸಿ, ಹೊರಗೆ ಕೂರಿಸಿಕೊಂಡು ನಮಗೆ ಸಂದೇಶ ಕಳಿಸಿದರು. ಆಗ ನಾವು, ದಿವಾನ ಹಾಗೂ ಸಮಸ್ತ ಜನರು ಹೋಗಿ ಕರೆದುಕೊಂಡು ಬಂದೆವು ಎಂದು ಬರೆದುಕೊಂಡು ತಕರಾರು ಸಹಿ ಛ ೧೭ ಮಾಯೆ ರಬಿತೊವವ/ ಮೂರನೇ ತಿಂಗಳು.

(ಅಷ್ಟಕೋನದ ಮುದ್ರೆ) ದಾ। ರಾಮಾಜಿ ಮಠಪತಿ ದೊ

(ನೇಗಿಲ ಚಿತ್ರ)

(ತಕ್ಕಡಿಯ ಚಿತ್ರ ಮತ್ತು ಕನ್ನಡ ರುಜು)

೮

ಶ. ೧೫೮೦, ಪೌಷ್ಯ ವ ೧
ಇ. ೧೬೫೮, ಡಿಸೆ, ೩೦

ಮಾಹಜರ ಬತೇರೀಖ ೧೫ ಮಾಹೆ ರಬಲಾಖರ ಬಿಹುಜೂರ ಹಾಜೀರ ಮಜಾಲಸಿಯಾನಿ ಕಾರಕೂನಾನಿ ಮತ್ತು ದೇಸಿಕಾನಿ ಮಾಹಲದಾರ ವಾಮುಖ್ತಸರ ಸೇಟಿಯಾನಿ ಹುಜುರಾತ

ಶಂಕರಾಜಿ ಮಾಗಳದಾರ ಮಾಹಳ
ಮೊಹಜಮ (ಫಾ.ವ.ಮು)
ಲಿಂಗೋಜಿ ಜಿತೋ ಹುದೆದಾರ
ಮೌಜೆ ಸೋಲಿ
(ಕನ್ನಡ ಅಕ್ಷರಗಳ ರುಜು)
ಲಿಂಗಪಾ ಆಕಿ
ಯಾಲಪಾ ಆಡಿಕಿ

ಬಾವಿಸೇಟಿ ಸೇಟಿಕಾರ
ಪೇಠ ಜೋಹರಾಪುರ
(ಕನ್ನಡ ಅಕ್ಷರಗಳ ರುಜು)
ಸಿದವೀರ ಸೇಟಿ ಬೋನು

ಕಾರಕೂನರು ಅಥಣಿ

ಪೀರಮಿಯಾ ಹುದೇದಾರ
(ಫಾ.ಉದ್ದ ಬದಾಮಿ) ದೇಸಕಾನಿ
ಪಾರ್ವತಿ ಅವ್ವಾ ಗಡಗಿ ಅಪ್ಪಾ
ಸಿದಣಾ ರವಿರಾವೂ ದೇಸಾಯಿ
ಪಾ। ಜಮಖಂಡಿ
(ಫಾ.ವ. ಮುದ್ರೆ)
ರಾಮಾಜಿ ಅಪಾಜಿ ದೇಸ
ಕುಲಕರ್ಣಿ, ಕಾ ಮಜಕೂರ
ಬಿ ।

ವೆಂಕಟಾದ್ರಿ ತಿರ್ಮಲ ಪಂಡಿತ
ನಿಸೀದ
ಸಿದಣ ಭೂಪತಿ ದೇಸಾಯಿ
ಮತ್ತು ಸಿದಗೌಡ ಲಿಂಗೌಡ
ದೇಸಾಯಿ ಮತ್ತು ಪಟೇಲ
ಕಾ/ ಅಥಣಿ (ಫಾ.ಅ.ಮು)
ಸಿದಗೌಡ ಚೌಧರಿ

ಸು। ಸನ್ ಖಮಸ್ಸೈನ ಆಲಫ ಕಾರಣವೇನೆಂದರೆ, ಅಥಣಿಯ ಪೇಠದ ಲಿಂಗಾಯತ (ಒಂದು ಸಾಲ ಪರಿದಿದೆ) ಉಸು ಲಿಂಗಾಯತ ಮಾಹನಾಡ ಪಾ। ಜಮಖಂಡಿಯವರು ಸ್ಥಳಕ್ಕೆ ಆಗಮಿಸಿದ್ದರು. ಚರ್ಚೆ ಮಾಡಲು ಬಂದಿದ್ದರು. ಕಾರಕೂನ, ದೇಸಾಯಿ, ದೇಸ ಕುಲಕರ್ಣಿ, ಪಟೇಲ, ಚೌಧರಿ ಮತ್ತು ಮಹಾಜನ ಸೇವೆ ಹಾಗೂ ಸಮಸ್ತ ರೈತರು, ಬಲೂತೆದಾರರು (ಆಯಗಾರರು) ಇವರನ್ನೆಲ್ಲ ಕರೆಯಿಸಿದರು. ಹಿಂದಿನ

ಪ್ರಕರಣದ ಕಾರಣವನ್ನು ಕೇಳಿದರು– ಯಾಕೆ ಜೈನ ಮತ್ತು ಲಿಂಗಾಯಿತರ ನಡುವೆ ಜಗಳವಾಯಿತು. ಲಿಂಗಾಯಿತ ಮಹಾನಾಡಿನ ಗುರು ಯಾವ ಮಾತುಕತೆಗಾಗಿ ಬರುತ್ತಿದ್ದಾರೆ ಮತ್ತು ಜೈನರ ಗುರು ಹೇಗೆ ಬರುತ್ತಾರೆ. ಪ್ರತಿ ವರ್ಷದಂತೆ ಜಂಗಮ ಗುರು ಸಂಚಾರ ಮಾಡುತ್ತಾರೊ ಇಲ್ಲವೋ, ಈ ವರ್ಷ ಏನೇನು ನಡೆಯಿತು ಇದನ್ನೆಲ್ಲ ಹೇಳುವಂತೆ ಕೇಳಿದರು. ಆಗ ಸಿದಣ್ಣ ಭೂಪತಿ ದೇಸಾಯಿ, ಸಿದಗೌಡ ಲಿಂಗೌಡ ದೇಸಾಯಿ, ರಾಮಾಜಿ ಅಪ್ಪಾಜಿ ದೇಸ ಕುಲಕರ್ಣಿ, ನಾಡಗೌಡ ಪಟೇಲ, ಸಿದಗೌಡ ಚೌಧರಿ, ಲಿಂಗಸೆಟಿ ಪಟ್ಟಣಸೇಟಿ ಮತ್ತು ನಾಗಪ್ಪ ಜೈನ ಮಹಾಜನ ಮತ್ತು ಸಮಸ್ತ ಆಯಗಾರರು ಎಲ್ಲ ಸೇರಿ ತಕರಾರಿನ ಮಜಕೂರು ಬರೆದುಕೊಟ್ಟರು. ಲಿಂಗಾಯತ ಮಾಹಾನಾಡಿನ ಗುರು ಬಂದಾಗ ಸಮಸ್ತ ಮಹಾನಾಡಿನ ಜನರು, ನಾಡಗೀರರು ಹೋಗಿ ಅವರನ್ನು ಸ್ವಾಗತಿಸಿ ಮೆರವಣಿಗೆಯ ಮೂಲಕ ಕರೆತರುತ್ತಾರೆ. ಆದರೆ ಜೈನರ ಗುರು ಬಂದರೆ ಅವರನ್ನು ಸ್ವಾಗತಿಸದೆ, ತಮ್ಮ ತಮ್ಮ ವಸತಿಯಲ್ಲಿ ಉಳಿದುಬಿಡುತ್ತಾರೆ. ಈ ತಕರಾರಿನ ಅಹವಾಲನ್ನು ಹುಜೂರರಿಗೆ ಬರೆದು ತಿಳಿಸಲಾಯಿತು. ಆಗ ಹುಮಾಯು ಹಾಗೂ ಹಜರತ ಸಾಹೇಬರು ಆಜ್ಞೆ ಹೊರಡಿಸಿದ್ದೇನೆಂದರೆ– ಲಿಂಗಾಯತ ಗುರುವನ್ನು ಸ್ವಾಗತಿಸಿ ಜೈನರ ಗುರುವನ್ನು ಸ್ವಾಗತಿಸದೇ ಈ ವಚನವನ್ನು ಹಾಗೂ ಅಡ್ಡಿಪಡಿಸುವವರು ಅಪರಾಧಿ ಎನಿಸುತ್ತಾರೆ. ಸಹಿ (ಫಾ. ಲಂಬವರ್ತುಳ ಮುದ್ರೆ)

(ಜೋಡುಗೆರೆಯ ಮೇಲೆ । ವರ್ತುಳಾಕಾರದ ಮಹಾಲದಾರರದ್ದು, । ಎತ್ತರದ ಬಾದಾಮಿ ಹುದೇದಾರರ ಮತ್ತು । ಅಷ್ಟಕೋನದ ದೇಸಾಯಿಯರದ್ದು. ಹೀಗೆ ಮೂರು ಫಾ. ಮುದ್ರೆಯಿದೆ.)

೯

ಶ. ೧೫೮೧, ಮಾರ್ಗಶೀರ್ಷ ಶು ೫
ಇ. ೧೬೫೯, ಡಿಸೆಂಬರ್ ೯

(ಫಾರ್ಸಿ ಏಳುಸಾಲಿನ ಮಜಕೂರು ಮತ್ತು ಎರಡು ಮುದ್ರೆ)

ಬಜಾನೆಬ ಸಮಸ್ತ ಮಾಹಾನಾಡ ಪೇಠ ಕಾ। ಅಥಣಿ ಮಾಮಲೆ ಮಹಮದಪುರ ಅಂಕಿ ಸು। ಸನ್ ಸಿತ್ತೈನ ಮತ್ತು ಅಲಫ ದರಿವಿಲಾ, ನೀವು ಛ। ಮಾತೊ ಮಿರಾರಂದು ಅರ್ಜಿಯನ್ನು ಬರೆದಿದ್ದೀರಿ. ಪೇಠೆಗೆ ಈಗ ಹೊಸ ಠಾಣೇದಾರ ಬರುತ್ತಾನೆ. ಅವನ ಎದುರಿಗೆ ಹೋಗುವ ಧೈರ್ಯ ನನಗಿಲ್ಲ ಎಂದಿದ್ದೀರಿ. ಹುಜೂರ ಈ ವಿಷಯದ ಬಗ್ಗೆ ಮುಜುಗರ ಪಡುವಂತಹುದು ಏನೂ ಇಲ್ಲ. ಈ ವಿಷಯದ ಬಗೆಗೆ ನೀವೇಕೆ ಧೈರ್ಯ ಕಳೆದುಕೊಳ್ಳುತ್ತಿದ್ದೀರಿ. ನೀವು ಬರೆದ ವಿಷಯ ತಪ್ಪಾಗಿದೆ. ನೀವು ಯಾವುದೇ ಸಂಗಾತಿಯ ಬಗೆಗೆ ಊಹೆಯನ್ನು ಮಾಡದೆ, ಅದನ್ನು ಖಾತ್ರಿ ಪಡಿಸಿಕೊಂಡು ನಿಮ್ಮ ಉದ್ದಿಮೆ ಖರೀದಿ– ಮಾರಾಟವನ್ನು ಮಾಡಿ ಸಂಪತ್ತು ಗಳಿಸಿ ಸುಖವಾಗಿ ಇರಿ. (ಫಾ.ಮು) ತಾರೀಖ ೪ ಮಾಹೇ ಮೂರನೆಯದು.

೧೦

ಶ. ೧೫೪೫/ ಫಾಲ್ಗುಣ ಶು ೧೨
ಇ. ೧೬೭೦, ಫೆಬ್ರುವರಿ ೨೧

ಕತಬಾ
॥ ಕೌಲನಾಮಾ ಸೇಖ... ... ...

ಠಾಣೇದಾರ, ಕಾರಕೂನರು, ಕಾ ಪೇಠ ಅಥಣಿ, ತಾ। ಸಮಸ್ತ ಮಹಾನಾಡ ಪೆಟ ಮಜಕೂರು (ಫಾರ್ಸಿ ಮಂಡಳದ ಮುದ್ರೆ) ಸು । ಸನ್ ಸಬೈನ ಆಲಫ ದಾದೇ ಕೌಲನಾಮಾ ಹೀಗಿದೆ–ಪೇಠೆಯಲ್ಲಿ ಗಸ್ತು ಪಹರೆಯ ಸ್ವತಂತ್ರ ವ್ಯವಸ್ಥೆಯಿಲ್ಲ. ಊರು ಮತ್ತು ಪೇಠೆಯಲ್ಲಿ ದರೋಡೆ ಬೀಳುತ್ತಿದೆ– ಎಂದು ಜನರು ಹೈರಾಣಾಗಿದ್ದಾರೆ. ಆದರೂ ನೀವು ಯಾವುದೇ ಶಂಕೆ, ಊಹೆ, ವದಂತಿಗೆ ಒಳಗಾಗದೆ ವ್ಯಾಪಾರ ಉದ್ದಿಮೆಯನ್ನು ಮಾಡುತ್ತ ಸುಖವಾಗಿರಬೇಕು. ಪಹರೆಗೆ ಮತ್ತು ದಿವಾನರಿಗೆ ಊರಲ್ಲಿ ಸ್ವತಂತ್ರ ವ್ಯವಸ್ಥೆ ಮಾಡಿಕೊಟ್ಟು ನೀವು ನಿಮ್ಮಟಿಯಾಗಿರಿ. ಎಲ್ಲದಕ್ಕೂ ನಾವೇ ಧಣಿಗಳು. ಪೇಠೆಯಲ್ಲಿ ಎತ್ತು ಮತ್ತು ಧಾನ್ಯದ ಚೀಲ ಏನೇ ಹೋದರೂ ನಾವು ನಿಗಾ ವಹಿಸುತ್ತೇವೆ.

(ಮುದ್ರೆ ಫಾರ್ಸಿ ಅಕ್ಷರಗಳು)

ತಾರೀಖ ೧೦ ತಿಂಗಳ ಶಿವಾಲ

ಶ. ೧೯೫೨, ಪೌಷ್ಯ ಶು ೧೩
ಇ. ೧೯೭೦, ಡಿಸೆ. ೧೪

ಆಲಂಪನಾ
ಹಿರಿಯ ರಾಣಿ ಸಾಹೇಬರು

॥ (ಫಾ.ಮಂ. ಮುದ್ರೆ) ಕೌಲನಾಮಾ ವಂದಾಜಿ ವೆಂಕಟಾದ್ರಿ ಪಂಡಿತ ಹವಾಲ್ದಾರ ಮತ್ತು ಮೇಲುಗಿರಿ ವೆಂಕಟಾದ್ರಿ ಪಂಡಿತ ಮಜುಮದಾರ ಮತ್ತು ಸಿದ್ಧಗೌಡ ಫರ್ಜಂದ ಭೂಪತಿ ದೇಸಾಯಿ ಮತ್ತು ಸಿದಗೌಡ ಲಿಂಗೌಡ ದೇಸಾಯಿ ಮತ್ತು ರಾಮಜಿ ಅಸಾಜಿ ದೇಸ ಕುಲಕರ್ಣಿ ಮತ್ತು ಸಿದಗೌಡ ಭೂಪತಿ ಪಟೇಲ ಮತ್ತು ಸಿದಗೌಡ ಲಿಂಗೌಡ ಪಟೇಲ ಮತ್ತು ಸಿದಗೌಡ ಭೂಪತಿ ಪಟೇಲ ಮತ್ತು ಸಿದಗೌಡ ಚೌಧರಿ ಕಾ। ಪೇಠ ಅಥಣಿ ತಾಲೂಕಾ ಮಮದಾಪೂರ ಸು। ಇಹಿದೆ ಸಬೈನ ಅಲಫ ಕಾರಣವೇನೆಂದರೆ – ತಾ–ಸೇಟಿ ಮತ್ತು ಸಮಸ್ತ ಮಹಾನಾಡ ಪೇಠ ಕಾ। ಮಜಕೂರ ಕರಾರುಪತ್ರ ಹೀಗಿದೆ– ನಿಮಗೂ, ಜೈನರಿಗೂ ತೀವ್ರ ಜಗಳ ಏರ್ಪಟ್ಟು, ಈ ಹಿಂದೆ ಎರಡೂ ಪಕ್ಷದವರನ್ನು ಕಾಶಿಗೆ ಹೋಗಿ ನಿರ್ಣಯವನ್ನು ತೆಗೆದುಕೊಂಡು ಬರುವಂತೆ, ಸೋಲು ಗೆಲುವಿನ ಪತ್ರವನ್ನು ತರುವಂತೆ ತಿಳಿಸಿ ಕಳಿಸಿಕೊಡಲಾಯಿತು. ಅಲ್ಲಿ ನೀವು ಗೆದ್ದು ಬಂದಿರಿ. ಕಳಸವನ್ನು ಹಿಡಿಯಲು ಜೈನರಿಗೆ ಹಕ್ಕಿಲ್ಲವೆಂದು ಜಯಪತ್ರವನ್ನು ನೀವು ತಂದಿರಿ. ಹೀಗಾಗಿ ನೀವು ಗೆದ್ದಿರಿ ಎಂದು ಹಜರತ ಸಾಹೇಬರು ಫರ್ಮಾನು ಹೊರಡಿಸಿದರು. ರಾಣಿಸಾಹೇಬರ ಅನುಮತಿಪತ್ರವೂ ಲಭಿಸಿತ್ತು.

ಆ ಪತ್ರದಂತೆ ನಿಮ್ಮನ್ನು ಸನ್ಮಾನಿಸಲಾಯಿತು. ಆದರೂ ಸದ್ಯ ಸಿದ್ದಪ... ಜೈನನು ಮತ್ತೆ ಹೊಸದಾಗಿ ತಕರಾರು ಮಾಡಿ ಏಳು ಕಳಸವನ್ನು ಕಟ್ಟಕೊಂಡು ಸತ್ಯವನ್ನು ತಿಳಿಯಲು ಹೋದನು. ಆಗ ನೀವು ಮಹಾನಾಡಿನ ಸಮಸ್ತ ಜನರು ಬಂದು ಕೇಳಿದ್ದೇನೆಂದರೆ–ಜೈನರಿಗೂ ನಮಗೂ ಜಗಳವಾಗಿ, ಸೋಲು–ಗೆಲುವಿನ ನಿರ್ಣಯವಾಗಿ, ಅಂಥ ಕಾಗದ ಪತ್ರದ ದಾಖಲೆಯಿರುವಾಗ, ಸದ್ಯ ಮತ್ತೆ ಹೊಸ ತಕರಾರು ಮಾಡಿ, ಕಳಸವನ್ನು ಕಟ್ಟಿಕೊಂಡು ಜೈನರು ಹೋಗಿದ್ದು ಏಕೆ ಎಂದು ಪ್ರಶ್ನಿಸಿದಾಗ, ಎಲ್ಲ ಜೈನರನ್ನು ಅಲ್ಲಿಗೆ ಕರೆಯಿಸಿ ವಿಚಾರಣೆ ನಡೆಸಿದಾಗ, ಅವರು ಹೇಳಿದ್ದೇನೆಂದರೆ – ನಾವು ಅಜ್ಞಾನದಿಂದ ಒಯ್ದಿದ್ದೇವೆ. ಮುಂದೆ ಯಾವ ರೀತಿಯಲ್ಲಿ ನಿರ್ಣಯವಾಗುವುದೋ ಹಾಗೆ ವರ್ತಿಸುತ್ತೇವೆ. ಈ ಮಾತಿಗೆ ಯಾರು ತಪ್ಪುತ್ತಾರೋ

ಅವರು ದಿವಾನಿನ ಅಪರಾಧಿ ಎಂದು ಹೇಳಿ ಜೈನರು (ಮುಂದಿನ ಎರಡು ಮೂರು ಸಾಲುಗಳ ಮಜಕೂರು ಮಾಯವಾಗಿದೆ)

ತಾರೀಕ ॥ ಯಾಹೇ ಶಾಬಾನ

(ಫಾರ್ಸಿ ಅಷ್ಟಕೋನದ ಮುದ್ರೆ) ಮುದೇಸ ಕುಲಕರ್ಣಿ ವಲಬಾ.....ಮುತಾಲಿಕ ದೇಸಾಯಿ

೧೨

ಶ.೧೫೫೩, ಚೈತ್ರ ಶು ೩
ಇ. ೧೬೭೧, ಮಾರ್ಚ್

ಶ್ರೀ ಬಿಹುಜೂರ

ಅಲಗೌಡ ಪರ್ಜಂದ	ಸಿದಗೌಡ ಲಿಂಗೌಡ	ರಾಮಜಿ ಅಣಾಜಿ
ಭೂಪತಿ ದೇಸಾಯಿ ಅಥವಾ	ದೇಸಾಯಿ ಅಥವಾ ಪಟೇಲ	ದೇಸ ಕುಲಕರ್ಣಿ
ಪಟೇಲ ಕಾ।ಮಾ।	ಕಾ। ಮಜಕೂರರ	ಕಾ । ಮಜಕೂರ
(ಅಷ್ಟಕೋನ ಮುದ್ರೆ)	ಯೆಲಬೋಹೊ ನರಸಾ	
(ನೇಗಿಲ ಚಿತ್ರ)	ಮಾ। ದೇಸಾಯಿ	
ಸಿದಗೌಡ ಚೌಧರಿ	ಕಾ। ಮಜಕೂರ	

ಕ್ರಯಪತ್ರ ಸ್ವಸ್ತಿಶ್ರೀ ನೃಪಶಾಲಿವಾನ ಶಕೆ ೧೫೫೩ ವಿರೋಧನಾಮ ಸಂವತ್ಸರ ಚೈತ್ರ ಶುದ್ಧ ತೃತೀಯಾ ಶುಕ್ರವಾರ ತಿಥಿ ಬೊ॥ ಶಿವಪ್ಪ ಮುಚುಡಿ ಮೊಕಾಂ ಪೇಠ ಕಾ। ಅಥಣಿ ಮಾಮಲೇ (ತಾಲೂಕು)ಪುರಸೂರ ಮಹಮದಾಪುರ ಇವರಿಗೆ ಬರೆದುಕೊಟ್ಟದ್ದೇನೆಂದರೆ , ಬೊ।ಶೇಖಬಾಯಿ ಬಿನ್ ಸೌದಾಬಾಯಿ ಕೋಡಬಲೆ ಕಾ। ಮಜಕೂರು ಬರೆದುಕೊಟ್ಟ ಕ್ರಯ ಪತ್ರವೇನೆಂದರೆ, ನಾವು ನಮ್ಮ ಮನೆಯನ್ನು ಆತ್ಮಸಂತೋಷದಿಂದ ೧೦ ಹೊನ್ನಿಗೆ ಕೊಟ್ಟಿರುತ್ತೇವೆ. ಸುತ್ತಮುತ್ತಲಿನ ಜಾಗ ಹಮ್ ಚೌರಸ ಬಿ ತಪಶೀಲು ಹೀಗಿದೆ. ಪೂರ್ವ–ಪಶ್ಚಿಮ–ದಕ್ಷಿಣ– ಭಾಗದಲ್ಲಿ ಮೂರುಕಡೆ ಶಿವಪ್ಪನ ಮನೆಯಿದೆ. ಉತ್ತರದಲ್ಲಿ ಹಾದಿ ಸನಿಹದಲ್ಲಿ ತಳವಾರರ ಮನೆಗಳಿವೆ.

ಆಜನಕ ನಜ ಸಾ । ೫ ತೊಲೆ ಗಜ ಸುಮಾರು ೪ ೪

ಅನಾರಿ ಐದು

ಈ ರೀತಿ ನಾವು ಆತ್ಮ ಸಂತೋಷದಿಂದ ಬಿಟ್ಟುಕೊಟ್ಟಿದ್ದೇವೆ. ಅಲ್ಲಿ ನೀವು ಇಮಾರತು ಕಟ್ಟಿಸಿಕೊಂಡು ಮಕ್ಕಳು ಮೊಮ್ಮಕ್ಕಳಾದಿಯಾಗಿ ಸಂಸಾರವಮಾಡಿ ಇರಬಹುದು. ಮುಂದೆ ನಮ್ಮ ಬಂಧು ಬಳಗದವರಾರೂ ತಕರಾರು ಮಾಡುವುದಿಲ್ಲ. ನಮ್ಮ ತಂದೆಯ ಸಾಕ್ಷಿಯಿದೆ –ಎಂದು ಬರೆದುಕೊಟ್ಟ ಕ್ರಯಪತ್ರ. ರುಜು (ಅಷ್ಟಕೋನ ಮುದ್ರೆ)

ತಾರೀಕ । ಮಾಹೇ ಜಿಲಕಾದ

ರಾಮಯ್ಯ ಬಿನ್ ರಾಮಯ್ಯ ಮಠಪತಿ

ಸಾಕ್ಷಿ

ಮಲ್ಲಪ್ಪ ಹೊನ್ನಪ್ಪ ವಾ...	ಧೂಳಿ ಮಾಲಾಬ ಸೆಟಿ	ಜವಾಜಿ ಸೊಮಾಜಿ ತಾ। ಪೇಠಕಾರ
ಕೊಟಪಾ ಮುಚುಡಿ	ಬೆಲ್ಲಣ್ಣ ಪಾಠೆ	ಮಜಕೂರು ಪತ್ರದಂತೆ
ತುಕಾಣಾ ಇದೇ ಜೈನ	ರುದ್ರಣ್ಣಾ ಬಿನ್ ಚೆನದಪ್ಪಾ	ರುದ್ರಸಾ ಧುಳಸೆಟ್ಟಿ ಡಿಣಿ ಹನಮಣ್ಣ
ನರಸಾ ಅಪ್ಪಾಜಿ	ಮೋಲೆ ದರಜಿ	ತಳವಾರ ರಾಮಣ ಸಿದರಾಜ ದರೆತಾ
ಮು। ಸರದೇಸಾಯಿ ಸಾಕ್ಷಿ		ಲಿಂಗಣ ತಳವಾರ । ತಾ। ಮಜಕೂರ
		ತೇಲಿ, ಸೋಮಣ ತಳವಾರ

ಬಿ. ಲಿಂಗೋಜಿ ತಿರಮಲ ಕುಲಕರ್ಣಿ ಕಾ। ಮಜಕೂರ

(ಈ ರುಜು ಈ ಪತ್ರದ ಬಲಬದಿಗೆ ಅಡ್ಡ ಬರೆಯಲಾಗಿದೆ)

೧೩

ಶ.೧೫೯೫, ವೈಶಾಖ ವದ್ಯ ೬
ಇ.ಸ. ೧೬೭೩, ಏಪ್ರಿಲ್ ೨೭

॥ ಕೌಲನಾಮಾ ಕಾರಕೂನನು ಕಾ। ಪೇಠ (ಫಾ.ವ.ಮು) ಅಥಣಿ ತಾಲೂಕಿನ ಮಹಮದಾಪುರ ಸಿ। ಸಲಾಸ ಸಬೈನ ಅಲಫಿ ತಾ। ಸಮಸ್ತ ಮಹಾಸಾಡಿಗರು ಕಾ। ಮಜಕೂರು ಬಾದೆ ಕೌಲನಾಮಾ ಹೀಗಿದೆ. ನೀವು ಶಿವಾಜಿ ಭೋಸಲೆಯ ಅನುಕೂಲಕ್ಕಾಗಿ ಗ್ರಾಮವನ್ನು ಬಿಟ್ಟು ಕಾ। ಕೊಗಟನೂರಿಗೆ ಬಂದಿರಿ. ಗದ್ದಲ ನಿಂತ ಬಳಿಕ ನಿಮಗೆ ಲೆಕ್ಕಾಚಾರದ ಕರ ಕೊಗಟನೂರಿಗೆ ಬಂದ ಬಳಿಕ ನೀವು ವಿಷಯ ಹೇಳಿದಿರಿ. ಪಜರತ ಸಾಹೇಬರು ಬಂದಾಗ ನಿಮ್ಮನ್ನು, ದೇಸರ ಅಥವಾ ಮಿರಾಸದಾರವನ್ನು ಭೇಟಿಯಾದ ಪ್ರವಾಸದ ಪಟ್ಟಿಯ ಬೇರಿಜು ಎರಡು ಮೂರು ಸಾವಿರ ರೋಖ ತೆಗೆದುಕೊಂಡಿದ್ದಾರೆ. ಹೀಗಾಗಿ ಎಷ್ಟೋ ಪ್ರಜೆಗಳು ರಾಜಿಗೆ ಒಪ್ಪಿಕೊಂಡರು. ಅನಂತರ ರೋಖ ಹಣವನ್ನು ನೀಡಿದ ಬಳಿಕ ಸೂಟು ಮಾಡಿದ ರಕಮಿನ ಪಟ್ಟಿಯಂತೆ ಸಂದಾಯ ಮಾಡುತ್ತ ಬಂದಿದ್ದೇನೆ. ಆದರೂ ಅಪ್ಪಿತಪ್ಪಿ ಬಾಕಿ ಏನಾದರೂ ಉಳಿದಲ್ಲಿ, ಅದನ್ನು ಅವರಿಂದ ಪಡೆಯಬೇಕು. ಈ ವಿಷಯದ ಕೌಲು ಬೇಕೆಂದಾಗ, ಅದನ್ನೇ ಖಾತ್ರಿಕ ಮಾಡಿಕೊಂಡು ಕೌಲು ನೀಡಲಾಗಿದೆ. ಮತ್ತೆ ಯಾರ ಮೇಲಾದರೂ ಬಾಕಿ ಉಳಿದಿದ್ದರೆ ಅದನ್ನು ವಸೂಲಿ ಮಾಡಿಕೊಡಲಾಗುವುದು. ನೀವು ನಿಶ್ಚಿಂತೆಯಿಂದ ಪೇಠೆಗೆ ಬಂದು ತಮ್ಮ ವ್ಯಾಪಾರೋದ್ದಿಮೆಯನ್ನು ಮಾಡುತ್ತ ಸುಖವಾಗಿರಬೇಕು ಎಂದು ಕೌಲು ನೀಡಲಾಗಿದೆ. ಮೊ–ಸುದ (ಫಾ.ಮು.)

ತಾರೀಕ ೧೯ ಮಾಹೇ ಮೊಹರಮ

ಶ. ೧೫೫೮ ಚೈತ್ರ ಶು ೧೦
ಇ.ಸ. ೧೬೭೬ ಮಾರ್ಚ ೧೪

ಅಷ್ಟಕೋನ ಮರಾಠಿ ಮುದ್ರೆ

(ಕರಾರುಪತ್ರ) ಕೌಲನಾಮಾ ಆಜ ದಿವಾಣ ಮಶಹುರಲ ಹಜರತ ರಾಜೇಶ್ರೀ ದತ್ತಾಜಿ ಪಂತ ವಾಕೆನಿವಸ ತಾ। ಮಹಾನಾಡಾನಿ ಮತ್ತು ಬಾಜಾರಪೇಠ ಅಥಣಿಯ ಹೆಸರಿನಲ್ಲಿ ಬಿ॥

ಸಿವಪಾ ಮುಚೆಂಡಿ ಸೆಟಿ ೧	ಜನಪಾ ಸಂಗೋರಾಮ
ತಾನಪ್ಪ ಜೈನ ೧	ಖಿಡ್ಯಾ ಚಾಟಾ ೧
ಗೋಪಾಲ ದಲಾಲ ೧	ಸಿದವೀರ ಸೆಟಿ ಶಹಾಪುರ ೧
ದಾದಾವಾ ದಲಾಲ ೧	ಸತ್ಯಣ್ಣ ಭಾಡೆ ೧
ಸಿದ್ದಪ್ಪ ಸಿದಾಪುರ ೧	ಕರಿ ೧
	ಅಪಾಜಿ ದಲಾಲ ೧
	ಸಿದಪಾ ಮುದ

	ರುದ್ರಯಾ ದಲಾಲ ೧
	ನರಪಾ ದಲಾಲ

ಕೌಲನಾಮಾ ಏನೆಂದರೆ, ಸೈನ್ಯದವರು ಪೇಠೆಗೆ ಹೋಗಿ ನಿಮ್ಮನ್ನು ಬಂಧಿಸಿ ತಂದು ಪನಾಳದಲ್ಲಿ ಇರಿಸಿದರು. ಆದಾಗ್ಯೂ ನೀವು ತಪ್ಪಿಸಿಕೊಂಡು ಓಡಾಡುತ್ತಿದ್ದರೂ ಏಳು ಸಾವಿರ ಕರವನ್ನು ನೀಡುವುದಾಗಿ ಒಪ್ಪಿದ್ದಿರಿ. ನಿಮ್ಮ ಸಂಪತ್ತಿನ ಪ್ರಕಾರ ಏಳು ಸಾವಿರ ಹೊನ್ನು ನೀಡುವ ಕರಾರು ಮಾಡಿದ್ದೀರಿ. ಕರಾರಿನಂತೆ ಮುದ್ದತಿನ ಒಳಗೆ ನೀಡಬೇಕು.

ಇ.ಥ. ೯ ಮೊಹರಂ	ಇ.ಥ. ೯ ಸಫರ ತಾ ಫ ೮
ಥ ರ ಸಫರ ಮಾಹವರೆ	ರಬಿತಾವಲ ಮಾಹವರೆ ಸಾವಿರ ಹೊನ್ನು

ಈ ಮೇಲಿನಂತೆ ಏಳು ಸಾವಿರ ಹೊನ್ನು ಸಂದಾಯ ಮಾಡಬೇಕು. ಪೇಟೆಯಲ್ಲಿ ವ್ಯಾಪಾರ ಉದ್ದಿಮೆ ಕೈಕೊಂಡು ಸುಖವಾಗಿರಬೇಕು. ಚಿಂತಿಸಬೇಡಿ. ಸಮ್ಮತಿಯಿದೆ.

ರಾ। ಛ ೯ ಮೊ/ ಹಂ ಪಾ। ಹುಜುರ
ಮುದ್ರೆ
ಸುದ
ಅಥಣಿ ಪೇಟೆಯ ವ್ಯಾಪಾರಿಗಳ ಹೆಸರಿನಲ್ಲಿ

ಶ. ೧೫೫೮ ಚೈತ್ರ ಶು ೧೩
ಇ. ೧೬೭೩ ಮಾರ್ಚ ೧೭
ಶ್ರೀರಾಮ
ಮಹಾರಾಜ ಸಾಹೇಬ

ಶಕೆ ೧೫೫೮ ನಳನಾಮ ಸಂವತ್ಸರ ಚೈತ್ರ ಶುದ್ಧ ೧೩ ಪಾನಾಲಾ ತಾ। ರಾಜಶ್ರೀ ಮುದಸೆ ಸೆಟಿಯ ಪೇಟೆ ರಾಮಾಪುರ ತಾ। ಮೊಗಲಪ ಕೋಮಟ ಹಿರಾಪುರ ತಾ। ಬಾಪೂಜಿರಾಮ... ಕರಾರು...ಇಗರಜ ಗೋಸಾವಿಗೆ ಬರೆದು ಕೊಟ್ಟವರು ಸಿವಪ್ಪ ಮುಚ್ಚೇಡಿ । ಪಾಸಪಾ ಜೈನ । ಸತ್ಯದ ಭಾಡೇಕಾರ । ಖಂಡೋಬ ಜಾಟಾ ।

ದಾಸೋಬಾ ದಲಾಲ । ರುದ್ರಾಜಿ ದಲಾಲ । ಒಟ್ಟು ಹದಿನಾಲ್ಕು ಜನರು ಬರೆದುಕೊಟ್ಟಿದ್ದೇನೆಂದರೆ, ರಾಜಶ್ರೀಯ ಸವಾರಿಯು ಅಥಣಿ ಪೇಟೆಗೆ ಆಗಮಿಸಿತ್ತು. ಅವರು ನಮಗೆ ಮೋಸಮಾಡಿ ಕರೆತಂದು ಬಂಧಿಸಿದರು. ಅಲ್ಲಿ ನಮ್ಮ ಮೇಲೆ ಕರ ವಿಧಿಸಿದರು. ನಾವು ನಿಮಗೆ ಏಳು ಸಾವಿರ ಹೊನ್ನು ಕೊಡುವುದಾಗಿ ಹೇಳಿದೆವು. ನೀವು ನಮ್ಮನ್ನು ಬಂಧಮುಕ್ತರಾಗಿ ಮಾಡಿದಿರಿ. ಸದರಿ ಹಣವನ್ನು ಪ್ರತಿ ತಿಂಗಳು ಒಂದಕ್ಕೆ ನೀವು ಎಲ್ಲಿ ಕೊಡಲು ಹೇಳುತ್ತೀರೋ ಅಲ್ಲಿಗೆ ಬಂದು ಕೊಡುತ್ತೇವೆ. ಎಂದೂ ಮಾತಿಗೆ ತಪ್ಪುವುದಿಲ್ಲ. ಇದು ತಂದೆಯ ಕಾಲದಿಂದಲೂ ಬಂದ ವಚನ– ಎಂದು ಮಾಡಿದ ಸಹಿ. ಈ ಹಣದ ಹಾನಿಯ ಧಣಿ ಶಿವಪ್ಪ ಮುಚಡಿ, ಸಿದಪ ಸಿವಪುರ । ತವನಪ್ಪ ಜೈನ । ಪಾಪಡಾ ಜೈನ । ಸದರಿ ಒಟ್ಟು ರಕಮು ಏಳು ಸಾವಿರ ಹೊನ್ನು ನೀಡುವುದಾಗಿ ರುಜು ಮಾಡಿದವರು

ಸಿವಪಾ ಮುಚಂಡಿ (ಕನ್ನಡ)	ಸತೆಪ್ಪ ಭಾಡೇಕರಿ
ಸಿದಪ ಸಿವಪುರ (ಕನ್ನಡ)	ಜನಪಾ...ಸಂಗಾರಾಮ
ಸಿದವೀರ ಸೆಟಿ ಶಹಾಪುರ (ಕನ್ನಡ)	ದಲಾಲರು ಬರೆದದ್ದು
ಸಿದಪ ಬರಡೂರ (ಕನ್ನಡ)	ಪ್ರಮಾಣ – ದಾದೋಬಾ ದಲಾಲ ಪತ್ರ
ತವನಪ್ಪ, ಪಾಪಾನ ಜಪೇಟೆ ವಾಸಿಂ	ಪ್ರಮಾಣ ನಾರಪಾ ಹಿರೆಮನೆ ದಲಾಲ

ಜಿ। ಹಜೀಬ ವಾ । ಮುದನೋಟ ಪೇಠರಾಮಾಪೂರ ಅಥವಾ ಲಖಮೋಜಿ ಲಷ್ಕರಿ ಗರ್ಜ್ ಸುಜರಾತಿಯಿಂದ ಶಾಹಾರದಲ್ಲಿ ನಗದು ಬಾದಶಾಹಿ ಹೊಸಮಾನ

+ ೦೪೫ ನೀಡಿದೆ ಥ ೨೪ ರಬಿ ಲಾಸರ

೧೫೫ ಮೊಗಲಪ ಕೊಮಟಿ ಹಿರಾಪುರ

೧೫೦ ಕೊಕಟನೂರದಲ್ಲಿ ಹೇಸಾಮಾನ ನಗದು

೫೦ ಥ ೩೦ ರಬಿಲಾಖರ

+ ೫೦ ಬಾಪೂ ಪೈ ರಾಮ ಧಸ್ಟೆ ಕೊಲಾಪುರ ತವನಪ ಸತ್ಯಪ್ಪ ಸತ್ಯ ಶಾಹಾರಾದಲ್ಲಿ ನೀಡಿದ.

೧೬

ಶ. ೧೫೯೯
ಇ. ೧೬೭೭

ಶ್ರೀಮಂತ
ಖಡೋಬಾಯ
ದೇವಸ್ಯ ಮುದ್ರೆ ಭ
ದ್ರಾಯ ರಾಜತೆ ।

ಕರಾರು ಪತ್ರ ದಿವಾಣ ರಾಣಾ ರಾಜಶ್ರೀ ಖಡೋ। ಬಾಯ ಸೇವೂ ಹವಾಲದಾರ ಮತ್ತು ಕಾರಕೂನ ಸಾ। ಅಥಣಿ ತಾ। ಮಹಾನಾಡು ಮತ್ತು ರಯಾನಿ ಪೇಟೆ ಕಾ। ಅಥಣಿ ಸು। ಸಮಾನ ಸಬ್ಬೈನ ಆಲಫ ಬಾಜಿ ಕರಾರುಪತ್ರ ಹಿಲಾದೆ ಹುಜೂರ ಮಹಾರಾಜ ಸಾಹೇಬರು ನಮಗೆ ಆಜ್ಞೆ ಮಾಡಿದರು ಮತ್ತು ಪ ತ ಯಾನಿ ಮತ್ತು ಸುಭೇದಾರರಿಗೆ ಹುಕುಂ ಮಾಡಿದ್ದೇನೆಂದರೆ, ಪೇಟೆಗೂ ತಿಳಿಸಿದ್ದೇನೆಂದರೆ, ಪೇಟೆಯ ಎರಡು ವರ್ಷಗಳ ವಸೂಲಿ ಹಣ ಬಾಕಿಯಿದೆ ಎಂದು ಸರಕಾರದ ಪತ್ರ ಬಂದಿದೆ. ಆ ರೀತಿಯಲ್ಲಿ ಮಹಾನಾಡಿನ ಜನರಿಗೂ, ರೈತರಿಗೂ ಸಮಾಧಾನ ಹೇಳಿ ಕರಾರು ನೀಡಿ, ಪೇಟೆಯನ್ನು ಆರಂಭಿಸುತ್ತೇವೆ ಎಂದು ಹೇಳಿದ್ದೇವೆ. ಆ ರೀತಿ ನಾವು ಪೇಟೆಗೆ ಬಂದು ಮಹಾನಾಡು ಜನರಿಗೆ ವಿಷಯವನ್ನು ಹೇಳಿದೆವು.

ರಾಜಶ್ರೀ ರಾಜೇಸಾಹೇಬರ ಕುದುರೆ ಸವಾರರು ಬಂದು ಕರ ಮತ್ತು ಸುಂಕವನ್ನು ಮತ್ತಷ್ಟು ಹೆಚ್ಚಿಸಿ, ಲೂಟಿ ಮಾಡಿ ಚೀಲ ತುಂಬಿಕೊಂಡು ಹೋಗುತ್ತಾರೆ.

(ಮುಂದಿನ ಮಜಕೂರು ಮಾಯ)

೧೭

ಶ. ೧೬೦೧, ಮಾರ್ಚ್ ವ. ೨
ಇ. ೧೬೭೯, ಫೆಬ್ರುವರಿ ೬

ಶಕೆ ೧೬೦೧ ಸಿದ್ಧಾರ್ಥಿ ನಾಮ ಸಂವತ್ಸರ ಮಾಘ ವದ್ಯ ದ್ವಿತೀಯಾ ಸು ಸಮಾನೀನ ಆಲಫ ಫ ೧೫ ಮಾಹೇ ಮೋಹರು ಬಿನ ಮುಕ್ಕಾಂ ಪಾ। ತೇರದಾಳ ಪ್ರತಿಸ್ಥಳ ದೇಸಾಯಿ ಶ್ರೀ ದೇವರ ಗುಡಿ ಪೇಟೆ ಕಾ। ಅಥಣಿ ಅಥವಾ ಐವತ್ತಾರು ದೇಶಗಳ ಸಮಸ್ತ ದೇವರು ಕೂತು ನೇಮ ಮಾಡಿದರು. ಉತ್ಪನ್ನವನ್ನು ಒಂದು ಹಿಡಿ ಪಡೆದಾಗ ಎರಡು ಹಿಡಿಯಷ್ಟು ದಾನ ಮಾಡಬೇಕು. ಸದ್ಯ ಹೊಸ ಜಿಮಣತನ ಶುರುವಾಗಿದೆ. ಲಾಭ ಒಂದು ಅಂಗೈಯಾದರೆ, ದಾನ-ತೆರಿಗೆ ಒಂದು ನಾಲ್ಕಾಂಶ ಭಾಗವಾಗಿದೆ. ದೇವರು ನೀಡಿದ್ದನ್ನು ಯಾರು ಕಸಿದುಕೊಳ್ಳುತ್ತಾರೆ, ಅವರು ದೇವರಿಂದ ದೂರ ಸರಿಯುತ್ತಾರೆ. ಶಿವಾಜಿಯ ಕುಲಾಚಾರ ಬೇರೆ. ಮೊಗಲರ ಉಪಟಳ ಶುರುವಾದಾಗ ಎಲ್ಲ ದೇವರು ಬಂದಿದ್ದರು. ಆಗ ಪೇಟೆಯ ಮೊಕಾಡಿ, ದೇಸಾಯಿಗಳು ಬಂದು ಎಲ್ಲ ದೇವರನ್ನು ಸವಾಧಾನಪಡಿಸಿದರು. ಪೇಟೆಯಲ್ಲಿ ಲಾಭ ಮಾಡಿಕೊಂಡವರು ಒಂದು ಮುಷ್ಟಿ ಲಾಭ, ಒಂದು ಮುಷ್ಟಿ ಕಾಳುಮೆಣಸು ಅಡಕೆ ನೀಡುತ್ತಿದ್ದರು. ಹಾಗೆಯೇ ಕಾಳು ಮೆಣಸು, ಅಡಿಕೆಯ ವ್ಯಾಪಾರಿಗಳ ಲಾಭ ಒಂದು ಮುಷ್ಟಿ, ತೆರಿಗೆ ಒಂದು ಮುಷ್ಟಿ ನೀಡುತ್ತಿದ್ದರು. ಹಾಗೆ ಮಾಡಬೇಕು. ಮೋಸ, ವಂಚನೆ ಅಥವಾ ಸಂಕಟ ಬಂದೆರಗಿದರೆ ಎಲ್ಲ ದೇವರು, ಯಾವ ಜಾಗದಲ್ಲಿ ದೇವರು ನೆಲೆಸುತ್ತಾನೋ, ಅಲ್ಲಿ ಅದರ ಸುತ್ತಮುತ್ತ ಜನರು ವಾಸಿಸಬಹುದು. ದೇವರಿಗೆ ಬಟ್ಟೆ, ಅಡಿಕೆ, ಕಾಳ ಮೆಣಸು ನೀಡುತ್ತಾರೆ. ಪೇಟೆಯ ಜನರೂ ಪ್ರತಿವರ್ಷದಂತೆ ಒಂದು ಮುಷ್ಟಿ ಲಾಭ ಮತ್ತೊಂದು ಮುಷ್ಟಿ ತೆರಿಗೆ ನೀಡಬೇಕು. ಈ ನೇಮಕ್ಕೆ ಯಾರಾದರೂ ತಪ್ಪಿದರೆ ಅವರನ್ನು ಶಿವಾಜಿಯ ಕುಲಾದಿಕ ಐವತ್ತಾರು ದೇವರಿಂದ ಬೇರ್ಪಡಿಸುವ ನಿಯಮವನ್ನು ಮಾಡಲಾಗಿದೆ. ಇದಕ್ಕೆ ಸಹಿ, ದಸ್ತೂರ (ನಿಯಮ)ವನ್ನು ಹಾಕಲಾಗಿದೆ. ಬಿ. ತಿಮಾಜಿ ರಾವೂ ಜಿವಾ...ನಾರಾಯಣ.

ಇದರ ಕೆಳಗೆ ಕನ್ನಡ, ಮೋಡಿ ಮತ್ತು ಬಾಲಬೋಧ ಸೇರಿ ಎಪ್ಪತ್ತೈದು ಜನರ ರುಜು ಪಡೆಯಲಾಗಿದೆ.

ಶ- ೧೬೦೨
ಇ. ೧೬೮೦ ( )

ಮಹಾಮೇರು ರಾಜಮಾನ್ಯ ರಾಜಶ್ರೀ
ಶಿವಪ್ಪ ಮುಚೆಡಿ ಅಥವಾ ಜಿವಾಜಿ
ಸೋಮಾಜಿ ಗೋಸಾವಿ ಇವರಿಗೆ

ವಿನಂತಿ ವಿಶೇಷ ಜಿವಾಜಿ ಕೃಷ್ಣ ನಿ। ಜಾವೀಬ ರಾ। ತಿಮಾಜಿ ನಾಯಿಕ ಶರಣು-ಶರಣಾರ್ಥಿ ಅನುಕ್ರಮವಾಗಿ ನಮಸ್ಕಾರ ವಿನಂತಿ ಮೇಲೆ ತಿಳಿಸಿದ ರಾ। ನಾಯಿಕರಿಂದ ನೀವು ಸಾಲ ಪಡೆದಿದ್ದೀರಿ. ೯೦೦ ಹೊನ್ನು, ಅದು ನಮ್ಮ ಮಧ್ಯಸ್ಥಿಕೆಯಿಂದ ರಾ। ನಾಯಿಕರಿಗೆ ತಲುಪಿದೆ. ನಿಮ್ಮ ರಕಮನ್ನು ನಿಮಗೆ ನೀಡಲಾಯಿತು. ಈಗ ರಾ। ನಾಯಿಕರಿಗೆ ಏನೂ ಸಂಬಂಧವಿಲ್ಲ. ವಿಶೇಷವೇನಿಲ್ಲ. ವಿನಂತಿ.

ಸಾಕ್ಷಿ
ಶಿವರಾವ ಸುಬೇದಾರ ಪಾ। ತ್ರಿದಳ ಪತ್ರ ಪ್ರಮಾಣ
ಸಾಕ್ಷಿ ವಿಸಾಜಿ ಗಂಗಾಧರ ಮುಜುಮದಾರ

ಮುಧಾಜಿ ಆನಂದ ಹವಾಲ್ದಾರ
ಪತ್ರದಂತೆ,
ಸಾಕ್ಷಿ
ಲಕ್ಷ್ಮವ್ವ ಮತ್ತು ಮೊಘೆಪಾ ದೇಸಾಯಿ
ಮು। ದೇಸಾಯಿ। ಪಾ। ಮಜಕೂರ ಬಿ।
ತಿಮಾಜಿ
ನಾಗೋಜಿ ದೇಸ ಕುಲಕರ್ಣಿ ಪಾ।
ತೇರದಾಳ

(ಕನ್ನಡ ಅಕ್ಷರಗಳ ಮೂರುಸಾಲು)

೧೯

(ಮ.ಮು.) ಶ– ೧೬೦೪
ಇ– ೧೬೮೨

ಕರಾರುಪತ್ರ ಅಜಸುಭಾ ರಾಜಶ್ರೀ ನಾರೋರಾಮ ಸುಭೇದಾರ ಮತ್ತು ಕಾರಕೂನ ಮಹಾಲನಿಹಾಯ ಸುಭಾ ತಾ। ಆಜಿರೆ ತಾ। ಬಹಲಾನಿ ಸಹಉಪರಿ (?) ದೇಶ ತೇರದಾಳ ಮತ್ತು ರಾಯಬಾಗ ಮತ್ತು ಪೇಠ ಹುಕ್ಕೇರಿ, ಬಾಜೇ ದೇಹಾಯ ಮಾಲುಮ ಬಾದ ಸುಹೂರ ಸನ್ ಸಲಾಸ ಸಮಾದೀನ ಆಲಫ ಬಾದೇ ಕರಾರುಪತ್ರ ಹೀಗಿದೆ, ಸಾ। ಅಡಗಲ ಎಂಬ ಬೇರೆ ಪ್ರದೇಶದಲ್ಲಿ ಪ್ರತಿಗ್ರಾಮದ ಹಲವು ಎತ್ತುಗಳನ್ನು ತಂದು ಮೇಯಲು ಬಿಡಲಾಗುತ್ತಿತ್ತು. ಅದೇ ಕಾಲಕ್ಕೆ ಎತ್ತುಗಳನ್ನು ಕಳಿಸುವ ವಿಷಯ ತಿಳಿಸದೆ ತನ್ನ ಹಕ್ಕು ಎಂದು ಭಾವಿಸಿ ಮೇಯಲು ಬಿಡುತ್ತಿದ್ದ. ಅದರಿಂದ ಸರಕಾರದ ಆದಾಯ ಮುಳುಗುತ್ತಿತ್ತು ಎಂಬುದು ತಿಳಿದು ಬಂತು. ಈ ವಿಷಯದ ಖಾತ್ರಿ ಮಾಡಿಕೊಂಡು ನಿಮಗೆ ಕರಾರು ಪತ್ರ ಕಳಿಸಲಾಗಿದೆ. ಮುಂಗಡ ರಕಮು ನೀಡಿ ಎತ್ತುಗಳನ್ನು ಮೇಯಲು ಕಳಿಸಬೇಕು. ಈ ವಿಷಯದ ಬಗೆಗೆ ಶಂಕೆ ಪಡಬೇಕಿಲ್ಲ. ಖಾತ್ರಿಪಡಿಸಿಕೊಂಡು ಬಂದುಹೋಗಿ ಮಾಡುತ್ತಿರಬೆಕು. ಇದಕ್ಕೆ ಸಮ್ಮತಿ ಇದೆ. ಛ ೯ ರಮಜಾನ ಮುದ್ರೆ (ಮಂಡಳದ ಲೇಖನ ಸೀಮೆ)

೨೦

೧೬೦೧-ಫಾಲ್ಗುಣ ಶು.೯
೧೬೮೦ ಫೆಬ್ರುವರಿ ೨೮

ಖಾನ ಅಲಿಶಾನ ..... ಸಾ
ಹೆ । ಬ ಸಲಾಮ ++++

.... ವಜಿಬುಲ್ ಅಜಸಮಸ್ತ ಮಹಾನಾಡ ಪೇಠ ಕಾ। ಅಥಣಿ ತಾರೀಕ ಮಾಮರ ಪಾ। ತೇರದಾಳ ಸುರಸನ ಸಮಾನೀನ ಆಲಫ ಬಾ। ತಾ। ಛ ಮೂಹೇ ಸಫರ...... ಸಮಸ್ತ ಮಹಾನಾಡಿನ ಹಜರತಖಾನ ದಿಲಲಖಾನ ಅವರ ಉಪಟಳದಿಂದ ಫಸಲು ದನಕರುಗಳನ್ನೆಲ್ಲ ತೊರೆದು ಜನರು ಪಗಡಿ ರಕ್ಷಿಸಿಕೊಳ್ಳುತ್ತ ಹೊರಬಿದ್ದರು. ಆಸ್ತಿ-ಪಾಸ್ತಿಗಳೆಲ್ಲ ಲೂಟಿಯಾಯಿತು. ಹಾಗೆಯೇ, ಮನೆ-ಅಂಗಡಿಗಳಿಗೆ ಬೆಂಕಿ ಹಚ್ಚಿ ಸುಟ್ಟರು. ಇಂತಹದರಲ್ಲಿ ಪಶುರುಲ ರಾವೂ ಅಜಮ ಶಿವ ಸುಭೇದಾರ ಅವರು ಸಾಕಷ್ಟು ಖಾತ್ರಿ ಮಾಡಿಕೊಂಡು ಮನೆ, ಜಾಗ, ಅಂಗಡಿಯನ್ನು ಕೊಟ್ಟು ಆಸರೆ ನೀಡಿದರು. ನಾಲ್ಕಾರು ದಿನ ಆರಾಮಾಗಿ ಇರಿ, ಬಳಿಕ ಏನು ಉಳಿದಿದೆ ಅದನ್ನೆಲ್ಲ ಕೊಡಿಸುವುದಾಗಿ ಹೇಳಿ ಆಸರೆ ನೀಡಿದರು. ಸಾಹೇಬರಿಗೂ ತಿಳಿಸಲಾಗುವುದು ಎಂದರು. ಇದನ್ನು ಆಲಿಸಿ ಸಂತೋಷವಾಯಿತು. ಆದರೂ ಸಾಹೇಬರು ಮಹಾನಾಡಿನ ಬಗ್ಗೆ ಕಾಳಜಿ ವಹಿಸಲಿಲ್ಲ. ಹೀಗಾಗಿ ಎಲ್ಲ ಸಮುದಾಯದ ಜನರು ತಮ್ಮ ಜಾಗಗಳಿಗೆ, ತಮ್ಮ ಪ್ರದೇಶಗಳಿಗೆ ನೆಲೆಸಿ ಬಾಳ್ವೆ ಮಾಡಬೇಕೆಂದು ನಿರ್ಧರಿಸಿದಾಗ ರಾಯಾ ಆಜಮ ಶಿವರಾವೂ ಹೇಳಿದ್ದೇನೆಂದರೆ, ತಾನು ಸಾಹೇಬರಿಗೆ ಪತ್ರ ಕಳಿಸಿದ್ದೇನೆ-ಮಹಾನಾಡಿನ ಜನರಿಗೆ ಮರಳಿ ಕಳಿಸುವುದು ಬೇಡ, ಅವರಿಗೆ ಆಸರೆ ನೀಡೋಣ. ಉಳಿದ ಮಹಾನಾಡಿನ ಜನರನ್ನೂ ಕರೆಸಿ ಆಸರೆ ನೀಡೋಣ ಎಂದು ಸಮಾಧಾನ ಹೇಳಿ ಆಸರೆ ನೀಡಿದರು. ಈ ನಿರ್ಣಯವನ್ನು ಕೇಳಿ ಖುಷಿಯಾಯಿತು. ಈಗ ಸಾಹೇಬರು ಮಹಾನಾಡಿನ ಮೇಲೆ ಕೃಪಾದೃಷ್ಟಿ ಬೀರಿ ನಮ್ಮ ಹಕ್ಕನ್ನು ನಮಗೆ ನೀಡಬೇಕು. ಏಕೆಂದರೆ ಮನೆ-ಮಾರು, ಫಸಲು, ದನಕರು ಎಲ್ಲ ಕಳಕೊಂಡ ರೈತರು, ಜನರು ಕಂಗಾಲಾಗಿದ್ದಾರೆ. ಈ ಎಲ್ಲ ವಿಷಯವನ್ನು ಸಾಹೇಬರ ಕೃಪೆಗಾಗಿ ತಂದಿದ್ದೇವೆ.

೨೧

ಶ-೧೬೦೫
ಇ. ೧೬೮೩

ರಾಜಶ್ರೀ ಶಿವಪ್ಪ ಮುಖೋಡಿ ಗೋಸಾವಿ ಇವರಿಗೆ,

॥ ಸೌಜನ್ಯ ಸದಾಚಾರ ಸಂಪನ್ನ ರಾಜಮಾನ್ಯ ಸ್ನೇಹಾಂಕಿತ ಕೋಟೊ ನಾಗೋಜಿ ನಾಮಜಾದ ಮಾಹಾಲಾನಿಕಾಯೆ ರಾಣಾ ಪ್ರೊ ಶರಣಾರ್ಥಿ ವಿನಂತಿ. ಮೇಲಿನಂತೆ ಕ್ಷೇಮಸಮಾಚಾರ ತಿಳಿಸಿ ದೇಸಾಯಿಯವರು ಪತ್ರ ಬರೆಯುವುದನ್ನು ನೆನಪಿಸಿ ನೀವು ಪತ್ರ ಕಳಿಸಿದ್ದು ಕಂಡು ಸಮಾಧಾನವಾಯಿತು. ಸದ್ಗುಣಿಗಳು ಹೀಗೇ ಮಾಡುತ್ತಾರೆ. ದೂರ ವಾಸವಾಗಿದ್ದರೂ ತಮ್ಮ ಸ್ನೇಹವನ್ನು ಮರೆಯುವದಿಲ್ಲ. ನೀವೂ ನಿರಂತರವಾಗಿ ಪತ್ರ ಬರೆಯುತ್ತ ನಮ್ಮ ಕುಶಲೋಪರಿಯನ್ನು ತಿಳಿದುಕೊಳ್ಳುತ್ತಿರಬೇಕು. ತೇರದಾಳದ ವ್ಯಾಪಾರದ ಬಗೆಗೆ ವಿವರವಾಗಿ ಗೊತ್ತಾಯಿತು. ನಿಮ್ಮದೆಲ್ಲ ಸುಖರೂಪವಾಗಿ ನಡೆಯುತ್ತಿದ್ದರೂ ನೀವು ನಿಲ್ಲಲು ಸಿದ್ಧರಿಲ್ಲ. (ಚೌಕೋನ ಮರಾಠಿ ಮುದ್ರೆ, ಎಡಬದಿಯ ಕೌಂಸದಲ್ಲಿ) ನಿಮಗೆ ಏನು ಕೊರತೆಯಿದೆ. ಜಂಗಮಸೆಟ್ಟಿ ಮುಧೋಳದಲ್ಲಿದ್ದಾರೆ. ಅಲ್ಲಿಯ ಜಾಗವೆಲ್ಲ ನಿಮ್ಮದು. ನಾವು ಯಾರನ್ನೂ ಮರೆಯುವದಿಲ್ಲ. ತೇರವಾಳದಲ್ಲಿ ಏನೋ ಗದ್ದಲ ನಡೆದು, ಅವರೆಲ್ಲ ಮುಧೋಳಕ್ಕೆ ಬರಲಿದ್ದಾರೆ ಎಂದು ಬರೆದಿದ್ದೀರಿ. ಅದೇನು ವಿಷಯ. ಸದಾಚಾರ ಯಾರ ಸಾಹೇಬರದ್ದೂ ಅಲ್ಲ. ನೀವು ಯಾವ ವಿಷಯದ ಬಗೆಗೂ ಚಿಂತಿಸಬಾರದು. ಚಿಕ್ಕ ಚೌಕೋನದ ಜಮಖಾನೆಯನ್ನು ಖರೀದಿಸಿ ಕೊಡಬೇಕು. ಅದರ ಹಣವನ್ನು ಜಮಖಾನೆ ನೀಡುವವನ ಕೈಯಲ್ಲಿ ಕೊಡುತ್ತೇನೆ. ಆಗಾಗ ಪತ್ರ ಬರೆದು ನಿಮ್ಮ ಕ್ಷೇಮ ಸಮಾಚಾರ ತಿಳಿಸುತ್ತ, ನಿಮ್ಮ ಕ್ಷೇಮದ ಬಗೆಗೂ ತಿಳಿಸಿಕೊಳ್ಳುತ್ತಿರಬೇಕು. ನೀವು ವಿವೇಕಿಯಾಗಿದ್ದೀರಿ ವಿನಂತಿ.

ಫಾರ್ಸಿಕ ಮುದ್ರೆ

ಶ. ೧೬೦೫
ಇ. ೧೬೮೩

ಕರಾರಪತ್ರ ಮಶರುಲ ಅನಾಮ ಭಗವಂತ ರಾವೂ ಸುಭೇದಾರ ಮತ್ತು ಕಾರಕೂನರು ಪಾ। ತೇರದಾಳ ಸಾ। ಸಿವಯಾ ಮುಧೋಡಿ ಮತ್ತು ಸಾ। ಮಹಾನಾಡ ಪೇಠ ಶರ್ಜಾಪುರ ಪಾ। ಕಾ। ಮಾ ಸು। ಅಬಾ ಸಮಾನೀನ ಅಲಫ ಬಾದೆ ಕರಾರುಪತ್ರ ಹೀಗಿದೆ– ನೀವೆಲ್ಲರೂ (ಅಷ್ಟಕೋನ ಫಾರ್ಸಿ ಮುದ್ರೆ) ಕಳೆದ ವರ್ಷ ಶಹಾಜಾದೆಯ ಸೇವೆ ಮಾಡುತ್ತಿದ್ದೀರಿ. ಈಗ ಅದನ್ನು ಬಿಟ್ಟು ಮುಧೋಳಕ್ಕೆ ಹೋಗಿ ನೆಲೆಸಿದಿರಿ. ದೇಸಾಯಿ ಮತ್ತು ನಾಡಗೀರರು ನಿಮ್ಮನ್ನು ಪುನಃ ಒಲಿಸಲು ಪ್ರಯತ್ನಿಸಿದರು. ಮೊಗಲರ ಸೇವೆಯನ್ನು ತೊರೆದು ಮಹಾನಾಡ ಪೇಠೆಯ ಸಮಸ್ತ ಜನರು ಮುಧೋಳ ಠಾಣೆಗೆ ಹೋಗಿದ್ದಾಗ ಸಾಹೇಬರ ಕೃಪೆ ಬೇಡಿ ಠಾಣೆಗೆ ಹೋಗಿ ಅವರನ್ನು ಸಮಾಧಾನಪಡಿಸಿ ಪೇಟೆಯ ವಹಿವಾಟನ್ನು ಮತ್ತೆ ಶುರು ಮಾಡಬೇಕೆಂದು ಹೋದರು. ಈ ರೀತಿ ದೇಸಾಯಿ, ನಾಡಗೌಡರು ಮುಧೋಳ ಠಾಣೆಗೆ ಬಂದು ಮಹಾನಾಡಿನವರ ಸಮಸ್ಯೆ ಏನು ಎಂದು ಕೇಳಿದೆವು. ಅವರು ರಾಜೆ, ಕದಂ, ಸುಭೇದಾರ ಮತ್ತು ಕಾರಕೂನರ ಸಮಕ್ಷಮದಲ್ಲಿ ವಿಷಯವನ್ನು ಹೇಳಿದರು. ಆಗ ಹಜರತ ಸಾಹೇಬರು ತಪಶೀಲನ್ನು ಬರೆದುಕೊಂಡರು. ಆ ರೀತಿ ಕರಾರುಪತ್ರ ಸಿದ್ಧಪಡಿಸಲು ಅರ್ಜಿ ಕಳಿಸಿದರು. ಆಗ ಹಜರತ ಸಾಹೇಬರು ಕೃಪೆತೋರಿ ಕರಾರುಪತ್ರವನ್ನು ನೀಡಿದರು. ಕರಾರಿನಂತೆ ನಾವು ನಡೆದುಕೊಳ್ಳುತ್ತೇವೆ. ಇದರಲ್ಲಿ ಯಾವ ವ್ಯತ್ಯಾಸವೂ ಆಗಲಾರದು. ಮಹಾರಾಜಾ ಛತ್ರಪತಿಯಿಂದಲೂ ಕರಾರುಪತ್ರವನ್ನು ತಂದು ಕೊಡುತ್ತೇವೆ. ನಿಮ್ಮ ಅಪೇಕ್ಷೆಯಂತೆ ಜಾಗ, ಇನಾಮ–ಭೂಮಿ, ಸಾಮಗ್ರಿ – ಹೀಗೆ ಎಲ್ಲ ವ್ಯವಸ್ಥೆಯನ್ನು ಮಾಡಿಕೊಡಲಾಗುವುದು. ಇದರ ಬಗ್ಗೆ ನಂಬಿಕೆಯಿಟ್ಟು ಮತ್ತೆ ಪೇಟೆಗೆ ಬಂದು ವ್ಯಾಪಾರವನ್ನು ಆರಂಭಿಸಬೇಕು. ಕರಾರಿನಂತೆ ದೇಸಾಯಿ ನಾಡಗೀರ ಪಟೇಲ, ಕಸುಬುದಾರರು ಮತ್ತು ವಿರಕ್ತಮಠಕ್ಕೆ ಇನಾಮ ಭೂಮಿಯನ್ನು ನೀಡಲಾಗಿದೆ. ಹಜರತ ಸಾಹೇಬರ ಅನುಮತಿಪತ್ರವನ್ನೂ ನೀಡಲಾಗಿದೆ. ಅದೇ ರೀತಿ ಗೋಪಾಲರಾವ, ರಾಜೇ ಸಾಹೇಬರು ಪಡೆದದ್ದು, ನೀಡಿದ್ದು ಹೀಗೆ ಎಲ್ಲವನ್ನೂ ತಂದುಕೊಡಲಾಗಿದೆ. ಇನ್ನು ಮುಂದೆ ಪೇಟೆಗೆ ಬಂದು ವ್ಯಾಪಾರ ಉದ್ದಿಮೆಯನ್ನು ಮುಂದುವರೆಸಿಕೊಂಡು ಹೋಗುವುದು ಎಂದು ನೀಡಿದ ಕರಾರುಪತ್ರ (ಮಂಡಳದ ಮುದ್ರೆ)

ತಾಜಾ ಕಲಮ್ ತಂಬಾಕನ್ನು ಮೂಟೆ ಕಟ್ಟಬೇಕು. ಪ್ರತಿ ಮೂಟೆಗೆ ೬– ಹೊನ್ನಿನ ಪ್ರಮಾಣದಲ್ಲಿ ನೀಡಬೇಕು. ಫಸಲಿನ ಸೆಟ್ಟಿಯ ಜಕಾತ ನೀಡಬೇಕು.

ವ್ಯತ್ಯಾಸವಾದಂದಿನಿಂದ ಧಣಿಯಿಂದ ಪಡೆದ ಪ್ರತಿಮಾಲಿನ ಲಾವಣಿಯನ್ನು ನೀಡಬೇಕು. ವ್ಯತ್ಯಾಸವಾದಂದಿನಿಂದ ಬೇರೆ ಪೇಟೆಗೆ ಸಾಗಿಸಿದ ಮಾಲಿನ ಜಕಾತಕರವನ್ನು ಆಕರಿಸುವುದಿಲ್ಲ. ತಂಬಾಕಿನ ಪ್ರತಿ ಮೂಟೆಗೆ ಹೊನ್ನುರ– ಪ್ರಮಾಣದಲ್ಲಿ ನೀಡಬೇಕು. ಮೊ॥ ಸೂದ (ಬದಾಮಿ ಫಾರ್ಸಿ ಮುದ್ರೆ)

ತಾರೀಕ ೧೭

ಮಾಹೇ ರಜಬ
ರಜಬ

೨೩

ಶ್ರೀ

ಶಕೆ-೧೬೦೫

ಇ.ಸ. ೧೬೮೩

ಶ್ರೀ ಸಿದ್ಧೇಶ್ವರ ದೇವರು
ಖಾಸಿ ಅಜಮ ಸಿದ್ಧಿ ಬೈರತಖಾನ

ಶ್ರೀಮತ್ ಸಜನ ಸುಧ ಶಿವಾಚಾರ ಸಕಲಗುರು ಲಿಂಗ ಜಂಗಮ ಪ್ರೇಮ ಶಿವಭಕ್ತಿ ಪರಾಯಣ ಪರೋಪಕಾರಮೂರ್ತಿ ಮಹಾಮೇರು ರಾಜಶ್ರೀ ಶಿವಣ್ಣ ಮುಖೇಡಿ ಹಾಗೂ ಸಮಸ್ತ ಮಹಾನಾಡ ಪೇಠ ಕಾ। ಅಥಣಿ, ಮೊ-ತೇರದಾಳ ಗೋಸಾವಿ ಇವರಿಗೆ

॥ ವಿನಂತಿ ಬಂದು + ಸಿದ್ಧಗೌಡ ಭೂಪತಿ ದೇಸಾಯಿ, ಪಟೇಲ ಸದ್ಯ ಶರಣು ಶರಣಾರ್ಥಿ ವಿನಂತಿ, ಮೇಲಿನವರ ಕ್ಷೇಮವನ್ನು ಅರಿತು, ತಮ್ಮ ಕ್ಷೇಮವನ್ನು ತಿಳಿಸುತ್ತಿರಬೇಕು-- ಮೊಗಲರ ಉಪದ್ರವದಿಂದಾಗಿ ನೀವು ಮತ್ತು ಎಲ್ಲ ದೇವರು ಸೇರಿ ಊರು ತೊರೆದು ಹೋದ ಬಳಿಕ ಹಜರತ ಸಾಹೇಬರ ಭೇಟಿಗಾಗಿ ಅಪ್ಪಣೆ ಪಡೆದು ಚೆನ್ನಪ್ಪ ಜಬಕಾರ ಸಾ। ಜಮಖಂಡಿಯ ಹಜರತ ಸಾಹೇಬರನ್ನು ಕಂಡು ಹೊಸದಾಗಿ ಪೇಟೆಯನ್ನು ಆರಂಭಿಸುವುದಾಗಿ ತಿಳಿಸಿದನು. ಪ್ರತಿವರ್ಷದ ಆದಾಯ, ಅಡಕೆ, ಕಾಳುಮೆಣಸುಗಳ ಪ್ರತಿಚೀಲಕ್ಕೆ ರೂ ೧, ಒಂದು ಮುಷ್ಠಿ ದಾನ ನೀಡುತ್ತ ಹೋಗುವುದಾಗಿ ಕೊನೆಗೆ ಒಪ್ಪಿಕೊಂಡನು. ಮಹಾನಾಡಿನ ಸಮಸ್ತ ಜನರು ತೇರದಾಳಕ್ಕೆ ಹೋಗುತ್ತಾರೆ. ಲಾಭಾಂಶದಲ್ಲಿ ಎರಡೂ ಮುಷ್ಟಿಯನ್ನು ಪ್ರತಿವರ್ಷದಂತೆ ನೀಡುವುದಾಗಿ ಹೇಳಿದನು. ತನ್ನ ಮೇಲೆ ಸಾಹೇಬರ ಕೃಪೆಯಿರಲಿ ಎಂದನು. ತೂಕ ದರ ೧, ಒಂದು ಕಾಲು ತೂಕ ಮಾಡಿ ನೀಡಬೇಕು....

ಈ ಸುದ್ದಿಯನ್ನು ನೀವು ಕೇಳಿದ್ದೀರಾದರೋ ಗೋಸಾವಿಗಳು ಈ ವಿಷಯದಲ್ಲಿ ಹಸ್ತಕ್ಷೇಪ ಪಡಿಸದಿರುವುದೇ ಯೋಗ್ಯ. ವಾರ್ಷಿಕ ಆದಾಯವನ್ನು ಎಂದಿನಿಂದ ಪೇಟೆಯಲ್ಲಿ ನಿಗದಿಪಡಿಸಲಾಗಿತ್ತೋ ಅಂದಿನಿಂದ ಲಾಭ ಮತ್ತು ಉತ್ಪನ್ನವನ್ನು ಎರಡೂ ಅಂಗೈತುಂಬ ಪಡೆಯುವುದು ನೀಡುವುದು ನಡೆದಿದೆ. ಅದೇರೀತಿ ಪೇಟೆ ಸಾಮಾನುಗಳ ವ್ಯಾಪಾರವನ್ನು ರಾಜಶ್ರೀ ಪಾರ್ವತಿ ಅವ್ವಾ ದೇಸಾಯಿ ಅವರನ್ನು ಕಟ್ಟಿಕೊಂಡು ಬಲವಂತದಿಂದ ಸಾಮಾನುಗಳ ಮಾರಾಟ ಮುಂದುವರೆಸಿದರು. ಇದನ್ನು ಖಾತ್ರಿಪಡಿಸಿಕೊಂಡಿದ್ದೇನೆ. ಹೀಗಾಗಿ ಗೋಸಾವಿಗಳ ಈ ವಿಷಯದಲ್ಲೂ ಪ್ರವೇಶಿಸದೇ ಹಿಂದಿನ ರಿವಾಜಿನಂತೆ ಈಗಲೇ ನಡೆದುಕೊಳ್ಳಬೇಕು. ನೀವು ನಮ್ಮ ಹೊರತು

ಬೇರೆಯವರಿಂದ ಸಾಮಾನು ಖರೀದಿಸಬಾರದು. ನೀವು ಸಮಸ್ತ ದೇವರನ್ನು ಸಮಾಧಾನಪಡಿಸಬೇಕು. ನಾವೂ ಇದರಿಂದ ದೂರ ಸರಿಯುವುದಿಲ್ಲ. ನಾವು ತಪ್ಪಿದರೆ ಶ್ರೀ ಸ್ವಾಮಿಯೇ ಸಾಕ್ಷಿ. ಎಂದಿನಂತೆ ವ್ಯವಹಾರ, ದಾನ, ಲಾಭ ಮುಂದುವರೆಯಲಿ. ಇದಕ್ಕಿಂತ ಹೆಚ್ಚಿಗೆ ಏನು ಬರೆಯಲಿ. ಶರಣಾರ್ಥಿ (ಷ.ಮುದ್ರೆ)

ಶ. ೧೬೦೫, ಜ್ಯೇಷ್ಠ ಶು.೩
ಇ.ಸ. ೧೯ ಮೇ ೧೬೮೩

(ಫಾರ್ಸಿ ಅಷ್ಟಕೋನ ಮುದ್ರೆ)

ಕರಾರುಪತ್ರ ಅಜರಕ್ತುಖಾನೆ ಖುದಾಯೆವಂದ ಖಾ। ಸರ್ಜಾಖಾನ ಖಲಯಾಮ ದೌಲತಹು । ತಾ । ಮಹಾನಾಡು ಪೇಠ । ಸರ್ಜಾಪುರ ತೇರದಾಳ ಬಿದಾವದ ಸು । ಸಲಾಸ (ಫಾರ್ಸಿ ಮಂಡಳದ ಮುದ್ರೆ) ಸಮಾದೀನ ಅಲಫ ದಾವೇ ಕರಾರುಪತ್ರ ಹೀಗಿದೆ– ಅಥಣಿ ಪೇಟೆಯಲ್ಲಿದ್ದಾಗ ದಿಲೇರ್‌ಖಾನನು ಸ್ನೇಹಕ್ಕಾಗಿ ಧಾವಿಸಿ ಬಂದನು. ಅತ್ತಕಡೆ ನಾವಿದ್ದೆವು. ನೀವು ತೇರದಾಳದ ಆಶ್ರಯಕ್ಕ ಬಂದಿರಿ. ಆ ಅಹವಾಲನ್ನು ಮಾರಿಯ ಕಾರಕೂನ ಬರೆದದ್ದೇನೆಂದರೆ, ಮಹಾನಾಡ ಹಾಗೂ ಮಾರಿಜನರನ್ನು ಸಮಾಧಾನಪಡಿಸಿ ಪೇಟೆಯನ್ನು ನಿರ್ಮಿಸಬೇಕು. ಅವರಿಂದ ನೀವು ನಿಶ್ಚಿಂತರಾಗಿರಬಹುದು ಭಾವಿಸಿ ಶಿಕಾರನ್ನು ಕಳಿಸಿದ್ದೆವು. ಪೇಟೆಯನ್ನು ನಿರ್ಮಿಸಿದರೆ ನೀವು ಸುಖವಾಗಿ ವ್ಯವಸಾಯ ಮಾಡಬಹುದೆಂದು ಭಾವಿಸಿ, ನಿಮ್ಮಿಚ್ಛೆಯಂತೆ ಸಮ್ಮತಿಸಿ ಪೇಟೆಯ ಕೆಲಸವನ್ನು ಮಾಡಿದೆವು. ರಾಜನು ಅತ್ತಕಡೆಯಿಂದ ಬರುತ್ತಾನೆಂಬ ಭಯದಿಂದ ನೀವು ಜಾಗವನ್ನು ಬಿಟ್ಟು ಪಲಾಯನ ಮಾಡಿದಿರಿ. ಸುಭೇದಾರನಾದ ಸುಜಾವತಮಾಹ ಮಿಯಾ ಅಶರಫ ಮಹಮ್ಮದನು ಈ ವಿಷಯವನ್ನು ಖಾತ್ರಿ ಮಾಡಿಕೊಂಡು ಬರೆದು ತಿಳಿಸಿದನು. ಇಬ್ಬರು–ಮೂವರು ಸ್ನೇಹದಿಂದ ಹೈರಾಣಾಗಿ ಜಾಗವನ್ನು ತೊರೆದಿದ್ದಾರೆ. ಹೀಗಾಗಿ ಮಹಾನಾಡಿನ ಕಂದಾಯವಸೂಲಿಯಾಗುತ್ತಿಲ್ಲ. ಆದ್ದರಿಂದ ಸರಕಾರದ ಕಂದಾಯವನ್ನು ನಿಗದಿ ಮಾಡುವ ಕರಾರು ಮಾಡಬೇಕು. ಸಾಹೇಬರ ಕರಾರಿನಂತೆ ಪೇಟೆಯ ವಸೂಲಿ ಕೆಲಸ ನಡೆದಿದೆ. ವಿಲಾಯತಿ ಜನರು ನೆಮ್ಮದಿಯಾಗಿ ಬದುಕಬಹುದಾಗಿದೆ. ಈ ವಿಷಯವನ್ನೆಲ್ಲ ಖಾತ್ರಿಪಡಿಸಿ ನಿಮಗೆ ಕರಾರುಪತ್ರವನ್ನು ಸಾದರಪಡಿಸಿದ್ದೇವೆ. ಪೇಟೆಯ ಮಹಾನಾಡಿನ ಉಸ್ತುವಾರಿಯನ್ನು ಸುಜಾವತನಿಗೆ ಧಣಿಯನ್ನಾಗಿ ಮಾಡಿ ಒಪ್ಪಿಸಿ, ನಮಗೂ ಜಾಗ ನೀಡಿದರೆ, ಅವರು ಏನು ಕರಾರು ಮಾಡುತ್ತಾರೋ, ಅದರಂತೆ ನಾವು ವರ್ತಿಸುತ್ತೇವೆ. ಅಥಣಿಯ ವಸೂಲಿಯ ಬಗೆಗೆ ಏನು ಕರಾರು ಮಾಡಿದ್ದಾರೋ, ಹಾಗೆಯೇ ಅದನ್ನು ಮಾಡಬೇಕು. ಸುಜಾವತಮಾಹಾನ ಹೊರತು ಮಾರಾಸಿ ಪೇಟೆ ಊರ್ಜಿತವಾಗುವುದಿಲ್ಲ. ಪರದೋ ಪೇಟೆಯ ಫರ್ಮಾನು, ಮದಾರೂಲನ ಹುಕುಮಿನ ಕರಾರು, ನಮ್ಮೂರಿನ ಪತ್ರವನ್ನು ಕಳಿಸಲಾಗಿದೆ. ಅದರ ಸಹಾಯದಿಂದ ಪೇಟೆಯು ವಸೂಲಿಯನ್ನು ಮಾಡಿ ಸುಖವಾಗಿರಬೇಕು. ಸಮಸ್ತ ಮಹಾನಾಡಿನ ಜನರು ಹೇಳಿ ಕಳಿಸಿದಂತೆ ಸಕಲ

ಸಾಮಗ್ರಿಯನ್ನು ಕಳಿಸಿಕೊಡಲಾಗುವುದು. ಗುನ್ಹೇಗಾರರು ನೌಕರರಾಗಿದ್ದರೂ ನೀವು ಸೂಚಿಸಿದರೆ ಬಿಟ್ಟು ಕೊಡುತ್ತೇವೆ. ನೀವು ಮೊಗಲರ ಭೀತಿಯಿಂದ ಅಥಣಿಯನ್ನು ತೊರೆದು, ನಿಮ್ಮ ಆಸ್ತಿಪಾಸ್ತಿಯನ್ನು ಹಾಗೇ ಬಿಟ್ಟು, ಜೀವಸಹಿತ ಓಡಿಬಂದಾಗ, ಮಹಾನಾಡಿನ ಕಾರಕೂನ, ದೇಸಾಯಿಗಳು ನಿಮಗೆ ಸಮಾಧಾನ ಹೇಳಿ, ನಿಮಗೆ ಆಸರೆಯನ್ನು ನೀಡಿದರು. ನಿಮ್ಮ ವ್ಯಾಪಾರ ಉದ್ದಿಮೆಗೆ ಕಡ್ಡಿಯಷ್ಟೂ ತೊಂದರೆಯಾಗದಂತೆ ಹುಜೂರರು ತಿಳಿಸಿದಂತೆ ಅದರಂತೆ ಆಜ್ಞೆ ಮಾಡಿದೆವು. ಪೇಟೆಯ ಸುಧಾರಣೆ ಮಾಡಲು ಮುಂಗಡ ಕರವನ್ನು ನೀಡುವ ಕುರಿತು ಮಾತುಕತೆ ನಡೆಯಿತು. ಮಳಿಗೆಗಳನ್ನು ಕಟ್ಟಿಸಿದ ವರ್ಷ, ಈ ಕಡೆಯಿಂದ ಮೊಗಲರ ಸ್ನೇಹದ ಮಾತುಕತೆ ಕಂಡು ಹೆದರಿ ಪಲಾಯನ ಮಾಡಿದರು. ಸುಜಾವತಮಹಾ ಹಾಗೂ ದೇಸಾಯಿಯವರು ಮುಧೋಳಿಗೆ ಬಂದು ಸಮಾಧಾನ ಹೇಳಿದರು. ಸಾಹೇಬರ ಹೆಸರಿನಲ್ಲಿ ವಸೂಲಿ ಮಾಡುವ ನಿರ್ಧಾರ ಮಾಡಿದರು. ಹನ್ನೊಂದು ವರ್ಷದ ಕರಾರು ಮಾಡಿದರೆ ಪೇಟೆ ಊರ್ಜಿತವಾಗಿರುತ್ತದೆ. ಪೇಟೆಗೆ ಬಂದ ಸಾಮಾನುಗಳ ಜಕಾತಿ ಸುಂಕ ಪ್ರತಿ ಗೋಣಿಚೀಲಕ್ಕೆ ಈ ರೀತಿ ನಿಗದಿಪಡಿಸಲಾಗಿದೆ.

೨. ಕರಾರು–ಉಪ್ಪು ಅಡಕೆ ಬೆಲ್ಲ ಸಕ್ಕರೆ ಬಟ್ಟೆ ಉಳಿದೆಲ್ಲ ಜಿನಸುಗಳನ್ನು ತಂದರೆ ಗೋಣಿಗೆ ಮುಂಗಡ ೧೦ ಕಳೆದು ಬಾಕಿ ೬೦ ಸೂಟು ಬಿಟ್ಟು ಪ್ರತಿ ಗೋಣಿಚೀಲಕ್ಕೆ ರುಕರ ೬ ದಿವಾಣ ಮತ್ತು ಹಕ್ಕುದಾರ ಮಿರಾಸರಾದ ರುಕಾ––– ಮಾರಾಟಗಾರರು, ಮುದ್ರಿತ ಕಾಗದ, ಕಂಬಳಿ ಮುಂತಾದ ಗಳಿಕೆಗೆ ಈ ಮೊದಲು ಪೇಟೆಯಲ್ಲಿ ಹೇಗೆ ನಿಗದಿಗೊಂಡಿತ್ತೋ ಹಾಗೆ ರಸ್ತೆ ನಿರ್ಮಾಣ, ಕೇರಿಯ ಹಕ್ಕುದಾರರಿಗೆ ಹೊನ್ನು ೧ ಕಣದ ಎತ್ತಿಗೆ ಪ್ರತಿಯೊಂದಕ್ಕೆ ಮಿರಾಸದಾರ ಹೊನ್ನು /–ಅಕ್ಕಿ ತೂಗಿ ಕೊಡಬೇಕು. ಅಳತೆ ಮಾಡಿಕೊಡಬೇಕು. ಆಸ್ವದರ ಸದೇಸಿ ಮಿರಾಸದಾರ ಹೊನ್ನು ೨ ೧/೨ ಬಾಂದಿ ಬರದಾ ಹಕ್ಕುದಾರ ಹೊನ್ನು೦/೨ ಹುಲ್ಲು ಚಿಪ್ಪಾಡಿ ಕಟ್ಟಿಗೆ ಹೊರೆಗೆ ಯಾವ ಸುಂಕವೂ ಇಲ್ಲ.

ಈ ಕರಾರಿನಂತೆ ರಕಮನ್ನು ಸಂದಾಯ ಮಾಡಿ ಸುಖವಾಗಿರಬೇಕು. ಮಾರಾಟಪೇಟೆಗೆ ಜಿನಸನ್ನು ಸಾಗಿಸುತ್ತಿರಬೇಕು. ನಿಮ್ಮ ಜಗಳ ತಂಟೆ–ತಕರಾರು, ಹೊಡೆದಾಟ, ಕೊಲೆ–ಸುಲಿಗೆ– ಹೀಗೆ ಬಾರಾಖೂನ ಮಾಫ್ ಮಾಡಲಾಗಿದೆ. ಸುಜಾವತಮಹಾ ದೇಸಾಯಿಗಳು ನಿರ್ಧರಿಸಿದ್ದೇನೆಂದರೆ ಸಾಲೆ॥ ವರೆಗೆ ಕರಾರು ಮಾಡಿಕೊಡಲಾಗಿದೆ. ಅಲ್ಲಿಯವರೆಗೆ ಪೇಟೆಯ ವ್ಯವಹಾರವನ್ನು ಮುಂದುವರೆಸಿಕೊಂಡು ಸುಖವಾಗಿರಬೇಕು. ಕರಾರು ಮುಗಿದ ಬಳಿಕ, ನೀವು ಹೇಳಿದಂತೆ ರಫಾಕ್ ಪಡೆದುಕೊಳ್ಳುತ್ತೇವೆ. ಮಾರೂನಿಯನ್ನು ದೂಷಿಸುವುದಿಲ್ಲ. ಸಂತೆ ನಡೆದಾಗ ಕಳ್ಳರು, ಪುಂಡ ಪೋಕರಿಗಳು ಉಪದ್ರವ ನೀಡಿದರೆ ಅವರಿಗೆ ಶಿಕ್ಷೆಯನ್ನು ನೀಡಿ, ನೀವು ಕಳೆದುಕೊಂಡದ್ದು ಕಡ್ಡಿಯಷ್ಟಿದ್ದರೂ ತಂದುಕೊಡುತ್ತೇವೆ.

೩. ಪೇಟೆಯಲ್ಲಿ ದನಕರು ಕಳ್ಳತನವಾದರೆ, ಕದ್ದೊಯ್ದರೆ ಅದನ್ನೂ ನಾವೇ ಕೊಡುತ್ತೇವೆ. ಪೇಟೆಯಲ್ಲಿ ಕೂಲಿ-ಹಮಾಲಿಗಳು ಸತ್ಯಾಗ್ರಹ ಮಾಡಬಾರದು, ನಿಪುತ್ರಕವಾದವನು ತೀರಿಕೊಂಡರೆ ಅವನ ವಿತ್ತ ಸಂಪತ್ತನ್ನು ಸಾಲಗಾರ ಪೇಟೆಯಿಂದ ತಂದ ಧಾನ್ಯಗಳನ್ನು ಗೋಣಿಚೀಲಗಳಲ್ಲಿ ಅಂಗಡಿಯಲ್ಲಿ ಸಂಗ್ರಹಿಸಬೇಕು. ಬಳಿಕ ಗೋಣಿಚೀಲದಲ್ಲಿ ರವಾನೆ ಮಾಡಬೇಕು. ಈ ನಡುವೆ ಮಳೆ ಬಹಳ ಸುರಿದರೆ, ದಾರಿಯಲ್ಲಿ ಗೊಂದಲವೇನಾದರೂ ಸಂಭವಿಸಿದರೆ, ಎಷ್ಟೋ ದಿನಗಳ ಬಳಿಕ ರವಾನೆಮಾಡಿದಾಗ ಜಕಾತಿ ಸುಂಕವನ್ನು ಆಕರಿಸಬಾರದು. ನೆಟ್ಟ ಸಸ್ಯವನ್ನು ನೀಡಬೇಕು. ಮಠಗಳಿಗೆ, ಫಕೀರರಿಗೆ, ದೇವರುಗಳಿಗೆ ಗೋವುಗಳನ್ನು ಸಾಗಿಸಿದರೆ ಸುಮಾರು ೬೦ರಷ್ಟು ಸೂಟು ಬಿಡಲಾಗುವುದು. ಸರಕಾರದಿಂದ ಜಿನಸು ಬಂದರೆ ಅಂಗಡಿಯವನೇ ಹಾನಿಯನ್ನು ತುಂಬಿ ಕೊಡಬೇಕು. ಇದರ ಹೊರತು.

ಕಾಳುಮೆಣಸು, ಅಡಕೆಯ ಲಾಭ, ಉತ್ಪನ್ನ ಪ್ರತಿಚೀಲಕ್ಕೆ ಎರಡು ಅಂಗೈ ಮುಷ್ಟಿಯಷ್ಟು ಲಾಭ ಮತ್ತು ಒಂದು ಮುಷ್ಟಿ ಉತ್ಪನ್ನ, ಒಂದು ಮುಷ್ಟಿ ಕೊಬ್ಬರಿ, ಲವಂಗ, ಪತ್ರೆ, ಜಾಯಫಲ, ಸಕ್ಕರೆ, ಪಾರಜ, ಅಫೀಮ, ಖಿಸ್‌ಮಿಸ್, ಬದಾಮು, ಜಾಜಿಕಾಯಿ- ಇದರ ೪೨ ತೂಕ ರ .೧. ೧೧.

ಕಿ॥ ಜಿನಸ್ ಉಪ್ಪು,ಬೆಲ್ಲ, ತೂಕ ರ. ೧೯, ಸಕ್ಕರೆ ರ. ೧.೧೧೧, ಅಕ್ಕಿ- ರ ೧.೧, ತುಪ್ಪ □.೨೧. ಪೇಟೆಯಲ್ಲಿ ದೇವರು ಬಂದು ಪಠನ ಮಾಡಬೇಕು. ದಳವತಿಕ ಆಟ ಆಡಬೇಕು. ಯಾರು ಹಿರಿಯ ಪುತ್ರನಾಗಿರುತ್ತಾನೋ, ಅವನೇ ದೇವರ ಕಾರಭಾರ ಮಾಡಬೇಕು. ಉಳಿದವರಿಗೆ ಆ ಅಧಿಕಾರವಿಲ್ಲ.

ಪೇಟೆಯಲ್ಲಿ ಜೈನರು ಮತ್ತ ಸಂತೆಯ ಜನರು□ ಯಾರಾದರೂ ಸತ್ತರೆ ಕಳಸ ಮಾಡಬಾರದು. ನೋಂದಣಿ ಮಾಡಬಾರದು. ಜೈನರ ಕಾಶಿಯ ವಿದ್ಯಮಾನದಿಂದ □ ಕಾಶಿಯ ಜಯಪತ್ರ, ದಿವಾನ ಫರ್ಮಾನು, ಗುತ್ತಿಗೆ ಪತ್ರ, ಜಮಖಿಂಡಿ ಮತ್ತು ಹಕಜವಾರ ಸ್ಥಳದ ಮಹಜರೂ ಪತ್ರವಾಗಿದೆ. ಅದರಂತೆ ನಡೆದುಕೊಳ್ಳಬೇಕು. ಹೊಸ ತಕರಾರು ಮಾಡಬಾರದು. ಮಾಡಿದರೆ ಅವರು ದಿವಾನಿಯ ಅಪರಾಧಿಗಳು.

ಈ ರೀತಿಯಲ್ಲಿ ಕರಾರು ಸಲಿಸಿದ್ದರಿಂದ ಸುಜಾವತಮಾಹಾ, ದೇಸಾಯಿ, ಮಿರಾಸದಾರ, ಇಲತಸೋಳ(?) ಮಾಡಲಾಗಿದೆ. ಇದರಂತೆ ಪೇಟೆ, ಉದ್ದಿಮೆಯನ್ನು ಮುಂದುವರೆಸಿ ಸುಖವಾಗಿರಬೇಕು. ನಮ್ಮಿಂದ ನಿಮಗೆ ಅನುಮತಿಯಿದೆ. ಪೇಠೆಯು ಸಾದಿಲ್ವಾರ ಮಾಡಬಾರದು. ಪಟ್ಟಣಸೆಟ ಚೀಟಿಯನ್ನು ಅಂಗಡಿಯಲ್ಲಿ ಹಚ್ಚಬೇಕು. ಜಗಳವನ್ನು ಮಾಡುವವರನ್ನು ದೈವದ ಬಳಿಗೆ ಕಳಿಸಿಕೊಡಬೇಕು. ದಿವಾನ ವಿಚಾರಣೆ ನಡೆಸಬಾರದು. ದೈವರಲ್ಲಿ ಯಾರು ಹಿರಿಯರಿದ್ದಾರೋ, ಅವರೇ ವಿಚಾರಣೆಯನ್ನು

ನಡೆಸಬೇಕು. ಬೇರೆ ಯಾರೂ ದಿವಾನದಲ್ಲಾಗಲಿ, ಪೇಠೆಯಲ್ಲಾಗಲಿ ವಿಚಾರಣೆ ನಡೆಸಬಾರದು. ಮಾಡಿದರೆ ಅವರೇ ಅಪರಾಧಿಗಳಾಗುತ್ತಾರೆ. ಸಮಸ್ತ ಮಹಾನಾಡಿನ ಯಾವ ಕೋರಿಕೆಯನ್ನು ಸಲ್ಲಿಸುತ್ತಾರೋ, ಆ ರೀತಿಯಲ್ಲಿ ಸಾಮಾನು- ಸರಂಜಾಮಿನ ವ್ಯವಸ್ಥೆಯನ್ನು ಮಾಡಲಾಗುವುದು. ಗುನ್ಹೇಗಾರರಿಗೆ ಶಿರಚ್ಛೇದದ ಆಜ್ಞೆಯಾಗಿದ್ದರೂ ದೈವ ಹೇಳಿದರೆ ಬಿಟ್ಟುಬಿಡಲಾಗುವುದು. ಈ ರೀತಿಯಲ್ಲಿ ಕಾರಕೂನರಿಂದ ಅನುಮತಿ ನೀಡಲಾಗಿದೆ. ನೀವು ಯಾವ ವಿಷಯ ಬಗೆಗೂ ಹಿಂಜರಿಕೆ ಮಾಡದೇ ನಿಶ್ಚಿಂತರಾಗಿ ಪೇಠೆಯ ವ್ಯವಹಾರವನ್ನು ನಡೆಸಿಕೊಂಡು ಹೋಗಬೇಕು, ಸುಖವಾಗಿರಬೇಕು ಎಂದು ನೀಡಿದ ಅನುಮತಿ ಹುಜೂರ ಮಾಸೂದ.

ಫಾರಸಿ ಮುದ್ರೆ

ತಾರೀಕ ೨ ಜಮಾದಿಲಾಖರ ಆಖೇರ

ರು ಶುರು ನಿವೀಸ ಮಾಹೇ ಜಮಾದಿಲಾಖರ ಸುರು ಸಾದ

೨೫

ಶ. ೧೬೦೫ ಜೇಷ್ಠ ಶು.೩
ಇ. ೧೬೮೩ ಮೇ ೧೯

(ಫಾರ್ಸಿ ಅಷ್ಟಕೋನ ಮುದ್ರೆ)

ಕರಾರುಪತ್ರ ಅಜ ರಕ್ತಖಾನೇ ಖುದಾಯೆವಂದ ಖಾ। ಸರ್ಜಾಖಾನ ಸಲದ ಆಯಾಮ ದೌಲತಹು ತಾ। ಮಹಾನಾಡು ಪೇಟೆ ಅಥಣಿ ತಾಲೂಕು ಸು। ಸಲಾಫ ಸಮಾನೀನ ಆಲಫ ದಾದೇ ಕರಾರುಪತ್ರ. (ಫಾರ್ಸಿ ಮಂಡಳಮುದ್ರೆ) ಔಸಾಜೇಪೇತ ಮಜಕೂರ ಮೊಗಲರ ನಗದಿಗಾಗಿ ಸುಟ್ಟು ಬೂದಿಯಾಯಿತು. ಜುಜುಬಿ ಪೇಠೆಯು ಏಳ್ಗೆ ಹೊಂದುತ್ತಿರುವಾಗ ಅಜಮ ಬೈರತಖಾನನು ಬಂದು ಪೇಟೆಯಲ್ಲಿ ದೋಚಿ ಹಾಳುಮಾಡಿದನು. ಆದರೂ ಮತ್ತೆ ಸುಧಾರಿಸಿಕೊಳ್ಳುವಷ್ಟರಲ್ಲಿ ಬೇರೊಬ್ಬ ಮೊಗಲರ ಬಳಗದವನು ಬಂದು ಅಳಿದುಳಿದ ಮನೆ–ಮಾರುಗಳನ್ನು ಸುಟ್ಟು ಹಾಳುಮಾಡಿದನು. ಅದರಿಂದ ನಾಲ್ಕು ವರ್ಷ ಪೇಟೆ, ದೈವ ಪಾ। ತೇರದಾಳದಲ್ಲಿ ಸುಖವಸ್ತು ಪೇಟೆ ಖಾತೆಯಾಗಿರುವುದಿಲ್ಲ. ಆದುದರಿಂದ ಉಳಿದವರು ಪೇಟೆ ಸಾಮಾನುಗಳ ಮೇಲೆ ಕಣ್ಣಿಟ್ಟು ಪೇಟೆಯ ಖಾತೆ ವ್ಯವಸ್ಥೆಗೆ ಹುಜೂರರು ಸುಜಾಹತಮಾಹಾನನ್ನು ಕಳಿಸಿದರು. ಸುಜಾಹತನು ಪೇಠೆಯಲ್ಲಿರುವ ದೇಸಾಯಿ, ಮಿರಾಸದಾರರನ್ನು ಕರೆಸಿ, ಅನುಮತಿ ನೀಡಿ ಪೇಟೆಯ ಉಸ್ತುವಾರಿಗಾಗಿ ಮಿರಾಸದಾರರನ್ನು (ವಚನಕಾರ) ನೇಮಿಸಿ, ಅನುಮತಿ ನೀಡಿ ಪೇಟೆ, ಗ್ರಾಮವನ್ನು ಏಳ್ಗೆ ಮಾಡುವಂತೆ ಕೇಳಿದರು. ಬಳಿಕ ಮಹಾನಾಡಿನ ಸಮಾಧಾನಕ್ಕಾಗಿ ಮುಧೋಳಕ್ಕೆ ಬಂದರು. ಅವರಿಗೂ ಅನುಮತಿ ನೀಡಿದರು. ಹುಜೂರರ ಅನುಮತಿ ತಂದು ಕೊಡುವುದಾಗಿ ಸುಜಹತಮಹಾ, ದೇಸಾಯಿ, ವಚನಕಾರರು ಹೇಳಿದರು.

ಕಾಳಮೆಣಸು, ಅಡಕೆಯ ಲಾಭದ ಉತ್ಪನ್ನದಲ್ಲಿ ಪ್ರತಿಚೀಲಕ್ಕೆ ಎರಡು ಮುಷ್ಠಿ ಲಾಭ, ಮುಷ್ಠಿ ಉತ್ಪನ್ನ, ಲವಂಗಪತ್ರ, ಜಾಯಫಲ, ಬೆಲ್ಲ ಕೊಬ್ಬರಿ, ಅಕ್ಕಿಯಂಥ ಜಿನಸಿಗೆ ಅದರದರ ಪ್ರಮಾಣಕ್ಕೆ ತಕ್ಕಂತೆ ಅಷ್ಟೆ ಸಾಮಾನು ಪಡೆಯುವುದು. ಪ್ರತಿವರ್ಷದ ವಸತಿಗೆ ತಕ್ಕಂತೆ ಅದೇ ಲಾಭವನ್ನು ನೀಡುವುದು. ತಕರಾರು ಮಾಡಬಾರದು. ಮಾಡಿದವರು ಅಪರಾಧಿಗಳು.

ಬಾದಶಹಾನ ದರಬಾರಿಗೆ ಯಜಮಾನನೇ ಹೋಗಬೇಕು. ಅವರ ಹೊರತು ಬೇರೆ ಯಾರೇ ಹೋದರೆ ಅವರು ಗುನ್ಹೇಗಾರರು. ಪೇಠೆಯಲ್ಲಿ ಜೈನರಿಗೂ, ಸಂತೆಯ ಜನರಿಗೂ ವ್ಯವಸ್ಥೆ ಮಾಡಲಾಗಿದೆ. ದತ್ತಕಲಶವನ್ನು ಇಡಬಾರದು, ಒಯ್ಯಬಾರದು,

ಜೈನರು ಕಾಶಿಯ ನಿರ್ಣಯದಲ್ಲಿ ಸೋತಿದ್ದಾರೆ. ಕಾಳಿಯ ಜಯಪತ್ರ, ರಾಜನ ಫರ್ಮಾನು, ಜಮಖಂಡಿ ಮತ್ತು ನ್ಯಾಯದ ಮಹಜರು ಪತ್ರದಲ್ಲಿ ಹೇಳಿದಂತೆ ವರ್ತಿಸಬೇಕು. ತಕರಾರು ಮಾಡಿದವರು ರಾಜನ ಅಪರಾಧಿಗಳು.

ಅಜ್ಞಾನಿಗಳು, ಮಾರತ ಕದೀಮರು ಎಂದಿನಂತೆ ಉಪಭೋಗವನ್ನು ಪಡೆಯಬೇಕು. ತಕರಾರು ಮಾಡಬಾರದು.

ಜಕಾತಿ ಹಣ, ಬಂದರು ಕಟ್ಟೆ, ಮಾರಿವಗತ, ಠಾಣೆದಾರಿ, ಅಸಲು, ಸಿಗಸಿಸೋಟ, ಖಜಾನೆ ಹಣ, ಸರಕು ಕುದುರೆ – ಏನಿದೆಯೋ ಅದನ್ನು ಪಾವತಿಸಬೇಕು. ತಕರಾರು ಮಾಡಬಾರದು. ಮಾಡಿದರೆ ರಾಜನ ಗುನ್ಹೇಗಾರರಾಗಿರುತ್ತಾರೆ.

ಈ ರೀತಿ ನಿಮಗೆ ಅನುಮತಿ ನೀಡಲಾಗಿದೆ. ನಾವು ದೇವರು, ಪೇಠೆಯೊಂದಿಗೆ ಹೋಗಿ, ವ್ಯಾಪಾರ ಆರಂಭಿಸಿ, ಸಂಪತ್ತು ಬಹಿರಂಗಪಡಿಸಬೇಕು. ಯಾವುದೇ ಸಾಮಾನು ಪೇಠೆಯಿಂದ ಹೊರಹೋದರೆ, ಪೇಠೆಯೊಳಗೆ ಬಂದರೆ ನೇರ ಅಥವಾ ಅಡ್ಡಮಾರ್ಗದಿಂದ ಕೊಂಡೊಯ್ದರೆ ಜಕಾತಿಯನ್ನು ಆಕರಿಸಲಾಗುವುದು. ಪೇಠೆಯಲ್ಲಾಗಲಿ, ಊರಲ್ಲಾಗಲಿ ನಿಮ್ಮಿಂದ ಬೇರೆಯವರಿಗೆ ಉಪದ್ರವವಾಗಬಾರದು, ನಿಮ್ಮ ನಿಮ್ಮಲ್ಲಿ ಜಗಳ, ತಂಟೆ-ತಕರಾರು ನಡೆಯಬಾರದು. ಕೊಲೆ-ಸುಲಿಗೆ, ಚಾಡಿ ಏನೇ ಮಾಡಿದರೂ ಬಾರಾಖೂನ ಮಾಫಿ. ನಮಗೆ ಬಾದಶಹಾದಿಂದ ಬಂದ ಆಜ್ಞೆಯನ್ನು ನಿಮಗೆ ಕಳಿಸಿದ್ದೇವೆ.

ರಾಜನು ಫರ್ಮಾನು। ಮದಾರೂಲ ಮಾಹಲಯ ಕರಾರು। ಮಹಾರಾಜಾ ಛತ್ರದಂತೆ ಕರಾರು । ಖಾವಖಾಸಾ ನಮ್ಮ ಕರಾರು । ಇಷ್ಟು ಕರಾರು ಸಿದ್ಧಮಾಡಿ ಕಳಿಸಲಾಗಿದೆ. ಪೇಟೆಯ ವ್ಯಾಪಾರಕ್ಕೆ ಏಳು ವರ್ಷಗಳ ಅನುಮತಿ ನೀಡಲಾಗಿದೆ. ಏಳು ವರ್ಷ ಫಲ-ತರಕಾರಿಯನ್ನು ಕೊಳ್ಳಬಾರದೆಂದು ತಿಳಿಸಲಾಗಿದೆ. ಎಲ್ಲಿವರೆಗೆ ಇರುತ್ತೀರೋ ಅಲ್ಲಿವರೆಗೆ ಪೇಠೆಯನ್ನು ನಡೆಸಿಕೊಂಡು ಮನೆ-ಮಳಿಗೆಗಳನ್ನು ಕಟ್ಟಿ ಸುಖವಾಗಿ ಬದುಕಬೇಕು. ಕರಾರು ಮುಗಿದ ಬಳಿಕ ನೀವು ಹೇಳಿದಂತೆ ನಡೆದುಕೊಳ್ಳಲಾಗುವುದು. ನಿಮಗೆ ಯಾವುದೇ ರೀತಿಯ ತೊಂದರೆಯಾಗಬಾರದು. ವಂಚಕರು, ಕಳ್ಳರು, ಪುಂಡ ಪೋಕರಿಗಳಿಂದ ಏನಾದರೂ ಉಪದ್ರವವಾದಲ್ಲಿ, ಅವರನ್ನು ಹಿಡಿದು ಶಿಕ್ಷಿಸಲಾಗುವುದು. ಸಂತೆಯಲ್ಲಿ ದನಕರು ಕುದುರೆ ಕಳಕೊಂಡರೆ, ಅಂಗಡಿ ಒಡೆದು ದವಸಧಾನ್ಯವನ್ನು ಕಳ್ಳತನ ಮಾಡಿದ್ದರೆ, ಅದನ್ನು ಸರಕಾರದಿಂದ ಕೊಡಿಸಲಾಗುವುದು. ಪೇಟೆಯಲ್ಲಿ ಸರಿಯಾಗಿ ವ್ಯವಹಾರ ನಡೆಯುವಂತೆ ನೋಡಿಕೊಳ್ಳಲಾಗುವುದು. ನಿಪುತ್ರನಾದವನು ಸತ್ತರೆ, ಸಾಲ ಮಾಡಿದ್ದರೆ. ಅವರ ಸಾಲ ಕೊಡಿಸಲಾಗುವುದು. ಅವನ ಸಂಪತ್ತನ್ನು ಸಾಲಗಾರರಿಗೆ ನೀಡಲಾಗುವುದು. ನೀವು ಹೇಳಿದಂತೆ ನಿಮಗೆ ಸಹಕಾರ ನೀಡಲಾಗುವುದು. ಪರಪೇಟೆಯಲ್ಲಿ ಕಾಳುಕಡಿ

ಹಾದಿಯಲ್ಲಿ ಏನಾದರೂ ಗದ್ದಲ-ಗಡಿಬಿಡಿಯಾದರೆ ಜಕಾತಿ ಸುಂಕವನ್ನು ಸ್ವೀಕರಿಸಬಾರದು. ಲಾವಣಿ ನೀಡಿ ಹೋಗಬೇಕು. ಫಕೀರರಿಗೆ, ಮಾಹಾಲದಾರರಿಗೆ ಪ್ರತಿಸಂತೆಯಲ್ಲಿ ಸುಮಾರು ಕರಚೀಲ ನಿಗದಿಪಡಿಸಲಾಗಿದೆ. ಸರಕಾರದಿಂದ ಏನಾದರೂ ಜಿನಸು ಬಂದರೆ ಪೇಟೆಯಲ್ಲಿ ಅದರ ಬದಲು ಹಣ ನೀಡಬೇಕು ಎಂದು ನಿಮಗೆ ಕರಾರು ನೀಡಲಾಗಿದೆ. ಹೊಸದೇನಾದರೂ ತಕರಾರು ಬಂದಲ್ಲಿ ಶಿಕ್ಷೆ ನೀಡಲಾಗುವುದು. ಗ್ರಾಮದ ಜಕಾತಿ ಪ್ರತಿ ನಗಕ್ಕೆ ರ- ಹೊನ್ನು, ರಾಜರ ಹೊನ್ನು ರ-೧, ಹಕ್ಕುದಾರನ ಹೊನ್ನು ರ-೧, ಒಟ್ಟು ಹೊನ್ನು ರ- ಬರಬೇಕಾದದ್ದು. ಅಲ್ಲದೆ ಒಂದು ಗ್ರಾಮದ ಜಕಾತಿಯನ್ನು ರಾಜನೂ ಹಕ್ಕುದಾರನೂ ಪಡೆದುಕೊಳ್ಳಬೇಕು. ಪೇಟೆಯಲ್ಲಿ ಸಾದಿಲ್ವಾರನ್ನು ಪಟ್ಟಣಶೆಟ್ಟಿ ತೆಗೆದುಕೊಳ್ಳಬಾರದು. ಅಂಗಡಿಯವನಿಂದ ಸಾದಿಲ್ವಾರ ಪಡೆಯಬಾರದು. ದೈವ ಹೇಳಿ ಕಳಿಸಿದಂತೆ, ಸರಂಜಾಮು ಮಾಡಿ ಕಳಿಸುತ್ತ ಇರಬೇಕು. ಅಪರಾಧಿಗೆ ಗುಂಡು ಹಾರಿಸುವ ಆಜ್ಞೆಯಾಗಿದ್ದರೂ ದೈವ ಹೇಳಿ ಕಳಿಸಿದರೆ ಬಿಡಲಾಗುವುದು. ನೀವು ಯಾವುದೇ ರೀತಿಯ ಆದೇಶ ಮಾಡಬಾರದು. ನಿಶ್ಚಿಂತೆಯಿಂದ ವ್ಯಾಪಾರ ಮಾಡಿ ಸಂಪತ್ತು ಗಳಿಸಿ ಸುಖವಾಗಿರಬೇಕು ಎಂದು ನೀಡಿದ ಕರಾರು. ಪಾ। ಹುಜೂರ ಮೊ। ಸುಧ (ಷಟ್ಕೋನದ ಮುದ್ರೆ)

ರು. ಶುರೂ

ನಿರ್ಮತ್ಸ

ತಾರೀಕ ೨ ಮಾಹೇ ಜಮಾದಿಲಾಖರ

ಜಮಾದಿಲಾಖರ ಆಖೇರ

ಸುರೂಸೂದ

೨೬

ಶ್ರೀ

೧೬೦೫ ಆಷಾಢ ವ. ೫
೧೬೮೩ ಜುಲೈ ೩

ಪ್ರಭುದೇವರು ಮತ್ತು ಸ್ವಾಮಿ ಕಿಬಲಗಾಹ — ಭಗವಂತರಾಹೂ ಮಾಧವರಾಹೂ ಸುಭೇದಾರ

ಸಕಲ ಸುಗುಣನಿಧಾನನಿಧಿ ಶಿರೋಮಣಿ ಪರೋಪಕಾರ ಮೂರ್ತಿ ಮಹಾಮೇರು ರಾಜಾಧಿರಾಜಶ್ರೀ ಶಿವಪ್ಪ ಮುಚಡಿ ಮತ್ತು ಸಮಸ್ತ ಮಹಾನಾಡ ಪೇಟೆ ಸರ್ಜಾಪುರ ಪಾ। ಮಜಕೂರ ಗೋಸಾವಿ ಇವರಿಗೆ–

॥ ವಿನಂತಿ ಯಾದಪ್ಪ ಜಲಪ್ಪ ದೇಸಾಯಿ ಪಾ। ತೇರದಾಳ ಪೇಟೆ ಸದ್ಯದ್ದು. ಶರಣು ಶರಣಾರ್ಥಿ ವಿನಂತಿ. ಮೇಲಿನ ಸು। ಆರ್ಜೈ ಸಮಾನೀನ ಆಲಫ ಬರೆದುಕೊಟ್ಟ ಕಾರಣವೇನೆಂದರೆ, ಸಾಲಗು। ಮೊಗಲರ ನಗದು ಉಪದ್ರವದಿಂದ ಪೇಟೆಯನ್ನು ತೊರೆದು ಜನರು ಮುಧೋಳಕ್ಕೆ ಹೋದರು. ಸಮಸ್ತ ದೇವರ ಸಮಾಧಾನಕ್ಕಾಗಿ ಮಹಾರಾಜರು ಬಂದು ಪೇಟೆಯನ್ನು ಊರ್ಜಿತಗೊಳಿಸುವ ಕಾರಣಕ್ಕಾಗಿ ಆಜ್ಞೆ ಮಾಡಿದರು. ದೇವರ ವಿಷಯವನ್ನು ಸಾಹೇಬರಿಗೆ ಅರ್ಜಿಮಾಡಿ ತಿಳಿಸಿದೆವು. ಅರ್ಜಿಯ ಖಾತ್ರಿಗಾಗಿ ಬಂದ ಠಾಣೆಯ ಸುಭೇದಾರನು ಪರಿಸ್ಥಿತಿಯನ್ನು ಸುಧಾರಿಸುವ ಭರವಸೆ ನೀಡಿ ಎಲ್ಲ ತಪಶೀಲನ್ನು ಬರೆದು ಸಾಹೇಬರಿಗೆ ಕಳಿಸಿದನು. ಹಜರತ ಸಾಹೇಬರು ಕೃಪೆತೋರಿ ರಾಜರ ಆಜ್ಞೆ ಮತ್ತು ಹುಕುಮಿನ ಕರಾರು ಮತ್ತು ಸಾಹೇಬರ ಕರಾರು ಎರಡನ್ನೂ ಕಳಿಸಿದ್ದಾರೆ. ಠಾಣೆ ಮತ್ತು ಸ್ಥಳ ವಿದ್ಯಮಾನದ ಸಂಪೂರ್ಣ ಕೌಲು ಪಾಲು, ಸಮಸ್ತ ವತನದಾರರ ಕೌಲು–ಸರಿಯಾಗಿ ಮುನ್ನಡೆಸಿಕೊಂಡು ಹೋಗುತ್ತೇವೆ. ಸಮಸ್ತ ದೈವ ಮತ್ತು ಫರ್ಣಾಸಿಗೆ ನಾವೇ ಧಣಿಗಳು.... ಯಾವುದರ ಬಗೆಗೂ ಅನುಮಾನ ಪಡದೆ ಪೇಟೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುವುದು ಸುಖವಾಗಿರುವುದು. ನಾವು ಕೊಟ್ಟ ಮಾತಿಗೆ ತಪ್ಪುವುದಿಲ್ಲ. ಬೇಕಾದರೆ ಲಿಖಿತವಾಗಿ ಬರೆದುಕೊಟ್ಟು ಗ್ರಾಮದ ಮುದ್ರೆಸಹಿತ ಮಹಜರು ಮಾಡಿಕೊಡಲಾಗುವುದು. ೧೭ ಮಾಹೇ ರಜಬ (ಫಾ.ಮುದ್ರೆ)

೨೭

ಶಕೆ ೧೬೦೫ ಶ್ರಾವಣ ವದ್ಯ
ಇ.ಸ. ೧೬೮೩, ಅಗಸ್ಟ್ ೪

॥ ಸೌಜನ್ಯ ಸಾಗರ ಮಹಾಮೇರು ರಾಜಮಾನ್ಯ ರಾಜಶ್ರೀ ಶಿವಪ್ಪ ಮುಚೋಡಿ ಮತ್ತು ಸಮಸ್ತ ಮಹಾನಾಡ ಪೇಠ ಅಥಣಿ ಹಾಲಿ ಮೋ। ತೇರದಾಳ ಇವರಿಗೆ ಸಾಬಾಜಿ ರಾಜೇ ಘಾಟಗೆಯು ಬರೆಯುವುದೇನೆಂದರೆ ಮಾ। ಮಾಲೋಜಿ ಪೋಳ ಇವರು ನಿಮ್ಮ ವರ್ತಮಾನ ತಿಳಿಸುತ್ತಿದ್ದರು. ಕೃಷ್ಣಾಜಿ ಕಮಲಾಕರನನ್ನು ನಿಮ್ಮ ಬಳಿಗೆ ಕಳಿಸಿದ್ದೆ. ಅವನ ಹತ್ತಿರ ಸಹ ಎಷ್ಟೋ ಪ್ರಸಂಗವನ್ನು ಹೇಳಿ ಕಳಿಸಿದ್ದಿರಿ. ಅದರಿಂದ ನಿಮ್ಮ ಮನೋಭಿಲಾಶೆಯು ಗೊತ್ತಾಯಿತು. ಸಮಾಧಾನವಾಯಿತು. ಮೊದಲಿನಿಂದಲೂ ನಿಮಗೆ ಪೇಟೆಯ ಬಗೆಗೆ ಅಭಿಮಾನವಿದೆ. ನಮಗೆಲ್ಲ ನಿಮ್ಮದೇ ಭರವಸೆ. ನೀವು ಎಷ್ಟೋ ಪತ್ರಗಳಲ್ಲಿ ಸೂಚನೆ ನೀಡಿದಂತೆ ಮಹಾರೂಲ ಮಹಾಮಿಯ ಕರಾರು ಬರೆದು ಕಳಿಸಲಾಗಿದೆ. ದರ್ಗಾದ ದಸ್ತಾವೇಜನ್ನು ಮತ್ತು ಖಾನ ಅಲಿಶಾನನ ಪತ್ರವನ್ನು ಸದ್ಯಕ್ಕೆ ಕಳಿಸುತ್ತೇನೆ. ರಾಜಶ್ರೀ ಸಬಾಜಿ ರಾಜೆ। ಅವರ ಪತ್ರವನ್ನು ಪೇಠೆಯ ವಸತಿಗಾಗಿ ತರಲು ಪತ್ರ ಬರೆದಿದ್ದೇನೆ. (ಚಾ.ಮು.ಮು ಸಾಬಾಜಿ ಮಾಲೋಜಿ ಘಾಟಗೆ) ಅದೂ ಬರಬಹುದು. ನೀವು ಯಾವ ಅನುಮಾನವನ್ನು ಮಾಡದೆ ಪೇಟೆಯನ್ನು ಆರಂಭಿಸಿ, ಜನರು ಬರುವಂತಾಗಿ ಊರ್ಜಿತಗೊಳ್ಳಲಿ. ಅದರಿಂದ ನಿಮ್ಮ ಹೆಸರು ಚಿರಸ್ಥಾಯಿಯಾಗುತ್ತದೆ. (ಹಿಂದಿನ ಮುದ್ರೆ) ನಿಮ್ಮವನೇ ಆದ ಸುಜ್ಞರಿಗೆ ಹೆಚ್ಚೇನು ಬರೆಯಲಿ. ಮೊ। ಸಿ। ಆಬಾನ ಛ ೨೦ ಮಾಹೇ ಶಾಬಾನ (ಷ.ಘಾ. ಮುದ್ರೆ)

೨೮

ಶ್ರೀ

ಶ. ೧೬೦೫
ಸ. ೧೬೮೩

ಶ್ರೀ ಮಹಾದೇವ

॥ ರಾಜಶ್ರೀ ಶಿವಸೆಟ್ಟಿ ಮುಚಡಿ ಮತ್ತು ಸಮಸ್ತ ಮಹಾನಾಡ ಗೋಸಾವಿ ಇವರಿಗೆ,

॥ ಶ್ರೀಮತ್ ಸೌಜನ್ಯ ಸಾಗರ ರಾಜಮಾನ್ಯ ಪ್ರತಿ ರಾಜಶ್ರೀ ಸಾಬಾಜಿ ರಾಜೆ। ಘಾಟಗೆ ಶರಣಾರ್ಥಿ ಮೇಲಿನ ಗೋಸಾವಿ ಪೇಶೆ ವಸತಿ....

ಸಾಂಪ್ರತ ದೀಪಾವಳಿಯ ಕಾರಣದಿಂದ ವಿವೇಕ ಮಾಡೋಣ ಎಂದಿದ್ದೀರಿ. ಈಗ ಯಾವ ಕಾರಣಕ್ಕೂ ವಿಳಂಬ ಮಾಡದೇ, ದೀಪಾವಳಿಯಂದು ಅಂಗಡಿಯಲ್ಲಿ ಸಿದ್ಧಗೊಂಡು ಸಾಹುಕಾರ ಸೆಟ್ಟಿಗಾರನು ಬಂದು ತನ್ನ ಉದ್ದಿಮೆ, ವ್ಯವಸಾಯ ಆರಂಭಿಸುವಂತೆ ಮಾಡಬೇಕು. ಅದರಿಂದ ನಿಮ್ಮ ವಚನ ಸತ್ಯವಾಗಿರುತ್ತದೆ. ನಾವು ಆ ಶ್ರೀ...ಭಕ್ತರು ಆಣೆಯಿಟ್ಟು ನಿಮಗೆ ನೀಡಿದ ಮಾತು ತಪ್ಪುವುದಿಲ್ಲ. ಹಾಗದನ್ನು ಪೂರ್ಣಗೊಳಿಸುತ್ತೇವೆ. ಅದೂ ಅಲ್ಲದೆ ನಿಮಗೆ ಖಾನೇ ಅಜಮನ ಪತ್ರ ಪ್ರಮಾಣವನ್ನು ಕಳಿಸಲಾಗುವುದು ತಿಳಿದಿರಲಿ (ಮುದ್ರೆ)

ಖಾನ ಅಜಮನ ಪತ್ರ ಅಥವಾ ಮತ್ತೆ ಎಷ್ಟೋ ಪತ್ರಗಳನ್ನು ಸಿದ್ಧಪಡಿಸಬೇಕಿದೆ. ಆದರೆ ಇಲ್ಲಿಯ ವರ್ತಮಾನವು ರಾಜಕೀಯವಾಗಿದೆ. ಅದು ರಾಘುಲನಿಗೂ ಗೊತ್ತಿದೆ. ಕೆಲವೇ ದಿನಗಳಲ್ಲಿ ಪತ್ರವನ್ನು ಕಳಿಸಿ ತಿಳಿದುಕೊಳ್ಳಿ. ಈ ವಿನಂತಿ. (ಸ.ಮು.)

ಶಕೆ ೧೬೦೫
ಇ.ಸ. ೧೬೮೩ ಸನ್ ೧೬

(ಫಾ.ಮು)

ಕರಾರುಪತ್ರ ಅಜರಕ್ತಖಾನೆ ಖುದಾಯವದ ಖಾನ ಸರ್ಜಾಖಾನ ಸಲದ ಆಯಾಮ ದೌಲತಹೂ ತಾ। ಶಿವಪ್ಪ ಮುಚೋಡಿ ಮತ್ತು ಜಿವಾಜಿ ಸೋಮಾಜಿ ಮತ್ತು ಸಮಸ್ತ ಮಹಾನಾಡ ಪೇಠ ಸರ್ಜಾಪುರ ಮೊ। ಪಾ। ತೇರದಾಳ ಬಿದಾನದ ಸು। ಅರ್ಜಾ ಸಮಾನೀನ ಅಲಫ ಬಾದೇ ಕೌಲ್ (ಕರಾರ) (ಫಾ.ಮು.) ನೀವು ಮಾರಪೇಟೆ ಸರ್ಜಾಪುರದಲ್ಲಿ ನೆಲೆಸಿರುವುದು ಗೊತ್ತಾಗಿ ನಿಮ್ಮ ಮೇಲೆ ಕೃಪೆತೋರಿ, ನಿಮ್ಮನ್ನು ಹುಜೂರರು ಕರೆಯಿಸಿದರು. ಸಮಸ್ತ ಮಹಾನಾಡಿನವರು ಹುಜೂರ ಬಳಿಗೆ ಬಂದು ನಿಮ್ಮ ಅಹವಾಲನ್ನು ತಿಳಿಯಪಡಿಸಿದರು. ಬಹಳ ಸಂತೋಷಗೊಂಡು ನಿಮಗೆ ಅನುಮತಿ ನೀಡಿದರು. ಈ ವಿಷಯದಲ್ಲಿ ನಿಶ್ಚಿಂತರಾಗಿ ಪೇಟೆಯಲ್ಲಿ ನೆಲೆಸಿ ಸುಖವಾಗಿರಬೇಕು. ಎಂದಿನಂತೆ ಉಪಭೋಗದಲ್ಲಿ ನಿರತರಾಗಿ ಮುಂದುವರೆಸಿಕೊಂಡು ಹೋಗಬೇಕು. ಪೇಟೆಯಲ್ಲಾಗಲಿ, ದಾರಿಯಲ್ಲಾಗಲಿ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಲಾಗುವುದು. ನಿಶ್ಚಿಂತರಾಗಿ ತಮ್ಮ ಉದ್ದಿಮೆ-ವ್ಯವಸಾಯವನ್ನು ಮಾಡಿ, ಪೇಟೆಯನ್ನು ಊರ್ಜಿತಗೊಳಿಸಿ, ಸಂಪತ್ತನ್ನು ಬಹಿರಂಗಪಡಿಸಬೇಕು. ಸರಕಾರದ ವತಿಯಿಂದ ಅನುಮತಿಯಿದೆ. ಪೇಟೆಯ ಉಪಭೋಗ ಮತ್ತು ರಾಜನ ಫರ್ಮಾನೂ ಇದೆ. ಪೇಟೆಗೆ ಪುಂಡರ, ಪೋಲಿಗಳ ಉಪದ್ರವವೇನಾದರೂ ಆದರೆ ಅವರಿಗೆ ಶಿಕ್ಷೆ ನೀಡಲಾಗುವುದು. ವಾ। ಸಂಭಾಜಿ ರಾಜರ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು.

ಮೋತನಬ ಸೂದ (ಷ.ಮು)
ತಾರೀಕ ೭
ಜಿಲ್ಹೇಜ ಮಾಹೇ ಜಿಲ್ಹೇಜ

೩೦

ಶಕೆ ೧೬೦೫, ಮಾರ್ಗ ಶು. ೮

ಇ.ಸ. ೧೬೮೩ ಸನ್ ೧೬

(ಫಾ.ಮಂ.ಮು)

ಕರಾರುಪತ್ರ ಅಜರಖ್ತುವಾನೆ ಖುದಾಯೆವತ ಖಾನ ಸರ್ಜಾಖಾನ ಖಲದ ಆಯಾಮ ದೌಲತಹು ತಾ। ಶಿವಪ್ಪ ಮುಚೇಡಿ ಮತ್ತು ಜಿವಾಜಿ ಸೋಮಾಜಿ ಮತ್ತು ಸಮಸ್ತ ಮಹಾನಾಡಪೇಠೆ ಸರ್ಜಾಪುರ (ಫಾ.ಮ.ಮು) ಮೊ.ಪಾ. ತೇರದಾಳ ಬಿದಾನದ ಸು। ಅರ್ಬಾಸಮಾನೀನ ಅಲಫ ಬಾದೆ ಕರಾರುಪತ್ರ ಹೀಗಿದೆ. ಮೊಗಲರ ಉಪದ್ರವದಿಂದ ಅಥಣಿಯಿಂದ ತೇರದಾಳಕ್ಕೆ ಬಂದರು. ಪೇಠೆಯನ್ನು ನೆಲೆಸಬೇಕೆಂದು ಹುಜೂರ ಶಾಹು ಅಜಮ ಶಿವರಾವ ಸುಭೇದಾರನಿಂದ ಆಜ್ಞೆ ಹೊರಡಿಸಿದರು. ಶಾಹೂ ಒಪ್ಪಿದರು. ಅವರು ಅನುಮತಿ ನೀಡಿದರು. ನೀವು ಸರ್ಜಾಪುರ ಪೇಟೆಯಲ್ಲಿ ನೆಲೆಯೂರಿದಿರಿ. ಮಳಿಗೆಗಳನ್ನು ಕಟ್ಟಿ ಸಾಕಷ್ಟು ಏಳ್ಗೆ ಸಾಧಿಸಿದಿರಿ. ಅದರಿಂದ ನಿಮ್ಮ ಸಂಪತ್ತು ಬಹಿರಂಗವಾಯಿತು. ಕಳೆದ ವರ್ಷ ಶಹಾಜಾದೆಯ ಉಪದ್ರವದಿಂದ ಪೇಟೆಯನ್ನು ತೊರೆದು ಮುಧೋಳ ಠಾಣೆಗೆ ಹೋಗಿದ್ದರು. ಈ ವಿಷಯದ ಬಗ್ಗೆ ಹೇಳುವಂತೆ ಹುಜೂರರು ಆಜ್ಞೆ ಮಾಡಿದರು. ಮಹಾನಾಡಿನ ವಿಷಯದಲ್ಲಿ ಸೇರ್ಪಡೆಗೊಂಡಿತು. ಅಥಣಿ ಪೇಟೆಯಲ್ಲಿ ಉಪಭೋಗ ಮಾಡಲಾಯಿತು. ಅಲ್ಲಿಂದ ಮುಧೋಳ ಠಾಣೆಗೆ ಬರುವ ಅನುಮತಿ ನೀಡಲಾಯಿತು.. ಹುಜೂರರು ಕರೆಸಿದಾಗ ನೀವು ಅಹವಾಲನ್ನು ಒಪ್ಪಿಸಿದಿರಿ. ಇದರ ಬಗ್ಗೆ ಖಾತ್ರಿಪಡಿಸಿಕೊಂಡು ಅನುಮತಿ ನೀಡಲಾಯಿತು. ನೀವು ಪೇಟೆಯನ್ನು ಊರ್ಜಿತಗೊಳಿಸಿ ಸುಖವಾಗಿರಬೇಕು. ಈ ಹಿಂದೆ ನಿಮಗೆ ನೀಡಿದ ಅನುಮತಿಯಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಎಂದಿನಂತೆ ಉಪಭೋಗವನ್ನು ಪಡೆದು ಅಥಣಿ ಪೇಠೆಯನ್ನು ಊರ್ಜಿತಗೊಳಿಸಬೇಕು. ಜೈನರು ಹೊಸದಾಗಿ ತಕರಾರು ಮಾಡಬಾರದು. ಪ್ರತಿವರ್ಷದಂತೆ ನಡೆದುಕೊಳ್ಳಬೇಕು. ನಿಮಗೆ ತಾಜಾ ಫರ್ಮಾನು ನೀಡಲಾಗಿದೆ. ಈ ವಿಷಯದ ಬಗೆಗೆ ಖಾತ್ರಿ ಮಾಡಿಕೊಂಡು ಪೇಟೆಯನ್ನು ಏಳ್ಗೆಗೊಳಿಸಿ ಸುಖವಾಗಿರಬೇಕು. ಮಿರಾಸಿಯ ಕೌಲು ನಿಮಗೆ ನೀಡಲಾಗಿದೆ. ಸೋತನಬ ಸುದ. (ಫಾ.ಮು.)

ತಾರೀಕ ೭
ಜಿಲ್ಹೇಜ

ಮಾಹೇ ಜಿಲ್ಹೇಜ

೩೧

ಶ. ೧೬೦೫, ಪೌಷ್ಯ ವ ೧
ಇ.ಸ. ೧೬೮೩, ಡಿಸೆ. ೨೪

ತಾಲೀಕ

ರಾಜೇಶ್ರೀ ಖಂಡೋಬಾ ನಾಯಿಕ ಗೋಸಾವಿ ಇವರಿಗೆ,

ದೋ। ಬಾ। ಆದಿಸೇಟ ಸೆಟಗಾರ್ ಜೋಹರಾಪುರ ಪೇಟೆ ಸುಹುರಸನ್ ಅರಬಿ ಸಮಾನೀನ ಅಲಫ ಸಾಲ ಪಡೆದ ಬಗ್ಗೆ ಕಾರಣವನ್ನು ಈ ರೀತಿ ಬರೆದು ಕೊಡಲಾಗಿದೆ – ತೇರದಾಳದ ಮಹಾನಾಡಿನಿಂದ ನೀವೆ ಮುಂದಾಗಿ ಸರ್ಜಾಖಾನನಿಂದ ೨೮೦೦ ಹೊನ್ನನ್ನು ಸ್ವಾಧೀನ ಮಾಡಿಕೊಳ್ಳಲಾಗಿದೆ. ಬಾಕಿ ೪೬೪ ಹೊನ್ನು ಉಳಿದಿದೆ. ಅದರ ಬಗೆಗೆ ಖಾನಸಾಹೇಬರು ತಗಾದೆ ಶುರು ಮಾಡಿದ್ದರೆಂದು, ನಿಮ್ಮಿಂದ ೪೬೪ ಹೊನ್ನು ಸಾಲ ಪಡೆದು ನೀಡಲಾಗಿದೆ. ನೀವು ಪ್ರತಿತಿಂಗಳು ದರ ೫ರಂತೆ ಅಸಲು ಮತ್ತು ಬಡ್ಡಿಯನ್ನು ಮರಳಿ ನೀಡಿದರೆ, ಉಳಿದ ರಕಮಿಗೆ ಕಂತು ಹಾಕಿ ಕೊಡಲು ಯಾವ ಆಕ್ಷೇಪವೂ ಇಲ್ಲ – ಈ ಕತಬಾ ರುಜು

ಫರ್ಸಿ ಮೋಹರಂ

೩೨

ಶ. ೧೬೦೭
ಇ.ಸ. ೧೬೮೫

(ಬಲಬದಿಯ ಕಂಸದಲ್ಲಿ ಮಂಡಳರಿಂದ ಫಾರ್ಸಿ ಮುದ್ರೆ)

ಕರಾರುಪತ್ರ ಅಜ ಶುಭಾಖಾನ ಅಲಿಶಾನಖಾನಿ ಮಕಬುಲಖಾನ ಸುಭೇದಾರ ಮಹಾಲಾನಿಹಾಯೇ (ಜಿಲ್ಲೆ) ತಾಲೂಕ ಬಂಕಾಪುರ ತಾ। ಶಿವಪ್ಪ ಮುಳಡಿ ಮತ್ತು ಭೂಪಾಲಿ ಸೆಟ್ಟಿ ಲಿಂಗಪ್ಪ ಮತ್ತು ಗುರುವಾಣಾ ಕಬಲಿ ಮತ್ತು ಭೂಸದ ಮುದಿಯಪ್ಪ ಮತ್ತು ಗಣಾರಿ ದಾನಪ್ಪ, ಮಾಯಿಬ ಸೆಟ್ಟಿ, ಕಡಲಿ ಬಸೆಟ, ನವಲಗುಂದ ಸಿದಪ್ಪ, ದೂಪದ ಚೆನ್ನಪ್ಪ, ಬಪಳಸ ಗೈಯಾ, ಕಣಗಿ ಚೆನ್ನಪ್ಪ, ಭಗವಾನ ದಾಸ, ಇಗರೇಜ, ಬುಗಡಾಸಾ, ಧರ್ಮಸಾವ ಮತ್ತು ತವನಾಸಾವ, ಪಾಂಡುರಂಗ ಸಾವ, ರಂಗಪ ಸರಾಫ, ತಿಮ್ಮಣ್ಣ ಸರಾಫ, ಮಾಲಸಾನಿ ರಾಮಣ್ಣ, ಸರೋನಗಿ ಮಲಸೆಟ್ಟಿ, ಶಾಬರಿ ಸಿದ್ದಪ್ಪ, ತುಕಸೆಟಿ ತುಪ್ಪದ ನಾಗಪ್ಪ, ಪಾಚಿ ಪಾನ ಮಲಕಪ್ಪ, ಹಿರಪ್ಪ ಬಾಬಣ್ಣ ನಾಯಿಕ, ಅರಕಪ್ಪ ನಾಯಿಕ, ಕೊನಪ್ಪ ನಾಯಿಕ, ಗೋವಿಂದ ನಾಯಿಕ, ಲಿಂಗಣ್ಣ ದಾನಪ್ಪ ದಪಣಾನ ಕಲ್ಲಪ್ಪ, ಹವಲದ ರಾಜಣ್ಣ, ಕಾಗಿನಲ ಸಗಣ ಬಸೆಟಿ, ಕುರಸೋಡ ಮಲ್ಲಯ್ಯ, ಗಜಿ ನಾಗಯ್ಯ, ಗಂಗಣಶಾಹ ಬಾಜಾರ, ಲಿಂಗಣ್ಣ ತೇಲಿ, ಸೊಲಬಣ್ಣ ತಾಬೋಲಿ, ಜಾಲಿಹಾಳ ಬಸಪ್ಪ, ಭರಮಣ್ಣ ಬಾಗವಾನ, ಲಿಂಗಣ್ಣ ಪುರಿಯಾಲಿ ಸೆಟ್ಟಿ, ಕಬೂರ ಪಾವಾಡಿ ಸೆಟ್ಟ, ಬೋಲೆ ಒಡೆಯರು, ರುದ್ರಪ್ಪ ಪಟಣಿ, ನಾಗಪ್ಪ ಕರಿಯಪ್ಪ, ಮಂಗಣ್ಣ ನಾಯಿಕ, ರಾಮಣ್ಣಾ ನಾಯಿಕ ಪೂಜಾರಿ, ಲಕಪ್ಪ ಹುರಕಡ್ಲಿ, ಗುರುವಣ್ಣ ಮತ್ತು ಲಿಂಗಬಸೆಟಿ, ಬೋರಟಿ ಬಸಪ್ಪ, ಕೊರಳಿ ಸೋಪಣ್ಣ, ಮತೂರ ರುದ್ರಣ್ಣ ಮತ್ತು ಸಮಸ್ತ ಮಹನಾಡಿಗರು ಸ್ಥಳ ಪರಸ್ಥಳ ಉದ್ದಮಾರ್ಗ ಛಪ್ಪನ್ನ ದೇಶ ಪೇಠ ನವಾಬ ಅಬ್ದುಲ್ ಕೌನಗರ ಮಾಮಲೇ ಮಜಕೂರ ಸು। ಸನ್‌ಸತಿ ಸಮಾನೀನ ಅಲಫ ಕರಾರುಪತ್ರ ಹೀಗಿದೆ– ಪೇಟೆಯು ನೆಲೆಯೂರಲು ಹುಜೂರರಿಂದ ಹುಕುಂ ಆಗಿದೆ. ಬಾದಜ ಸುಭೆಯಿಂದ ಅಪ್ಪಣೆ ನೀಡಿ ನಿಶ್ಚಯಗೊಳಿಸಿ ನಿಮ್ಮ ಬಳಿ ಮಾ। ದೌಲತ ವೆಂಕಟರಾವೂ ಲೋಕನಾಥ ಮತ್ತು ಸಿದ್ದಪ್ಪ ದೇಸಾಯಿ, ಸಂಗಪ್ಪ ಪಟ್ಟಣಸೆಟ್ಟಿ ಮತ್ತು ಸಮಸ್ತ ಮಹಾನಾಡು ಕಸಬೆ ಮಾ। ರಾಮಚಂದ್ರಪುರ ಮತ್ತು ಮುರಗೋಡಿಗೆ ಕಳಿಸಿ ಇಜತಪೂರ್ವ ನೆವೆಡರ ಸುಭೇದಾರ ವಿದ್ಯಮಾನ ಮಾಮಲೆ ಮಜಕೂರಿಗೆ ಕರೆಸಿ ತಂದರು. ನೀವು ನಿಮ್ಮ ವಿಷಯವನ್ನು ಹೇಳಿದಿರಿ. ದೇಶಮುಖ ಮತ್ತು ಪಟ್ಟಣಶೆಟ್ಟಿ ಮಾಮಲೆ ಮಜಕೂರ ಮಾಡಿದರು– ಮುಲಾಮಸೀದ

ಮಠ ಬಿ...ಉಳವಿ ಬಸಣ್ಣದೇವರು
೧ ವಿರಕ್ತ ಮಠ
೧ ಚರಂತಿಗುರು ಬಸಪ್ಪನ ಮಠ
೧ ಮಹಂತ ದೇವರು ಮಠ
೧ ಚೆನ್ನಬಸಪ್ಪ ದೇವರಮಠ
ಪರ್ವತ ನದಿಕಾಲ, ಹಣಮಂತ ದೇವರು

೪

ತಾ। ತಾಲೂಕು		ಪೇಠ ಮಜಕೂರು	
ಸರದೇಸಾಯಿ		ಪೇಠಚಸೆಟಿ	ರುದ್ರಾಕ್ಷಿ ಬೆನಪು ಸೆಟ
		ಭೂಪಾಲಸೆಟಿ ಮತ್ತು ಮಹಾಜನ,	
ಮಾಮಲೆ ದೇಸಾಯಿ	ಪಟ್ಟಣಸೆಟಿ।	ಗುರು ಸೆಟಿ	ಮಹಾನಾಡ ಕುಲಕರ್ಣಿ
ದೇಸ ಕುಲಕರ್ಣಿ	ಮಹಾಜನ	ಸೆಟ	ಪೂಜಾರಿ ಚನವೀರಯ್ಯ
ನಾಡಗೌಡ	ಪೋತದಾರ	ಗುಣಾರಿ	ಬಸವಣ್ಣ ದೇವರು
ಪತಕಿ	ಗಣಾಚಾರಿ	ಬಸವರಾಜ	ಹಣಮಂತ ಛಲವಾದಿ
	ರೇವೂ ಪೂಜಾರಿ		ಕಾಲಕಾರ ವಿರಾ
	ದೇವೂ ಪೂಜಾರಿ		
	ಮಠಪತಿ		
	ರುದ್ರಯ್ಯ ಶಾಬಾದಿ ಷಂ		
	(ಫಾ.ಮು)		

ಈ ರೀತಿ ಚಿನವಾಲದಾರ, ಹಕ್ಕುದಾರ ಮತ್ತು ಇನಾಮ ಸಹಿತ ಚಿನವಾಲ ಜಕಾತಿ ಮತ್ತು ಪೇಠೆಗಾಗಿ ಅನುಮತಿ ಸಾಲದಾಬೆಗೆ, ಹಂಚುಮನೆಗೆ ಐದು ವರ್ಷ ವತನ, ಮನೆಗೆ ಮೂರುವರ್ಷ ಸದರಿಯಂತೆ ಕೌಲು ನೀಡಬೇಕು– ಕೌಲು ತುಂಬಿದ ಬಳಿಕ ದಿವಾಣ ಮತ್ತು ಸಮಸ್ತ ಮಹಾನಾಡ ಮತ್ತು ನಾಡಗೀರ ಕೂತುಕೊಂಡು ಕೌಲು ನೋಡಿ ಕುಲದಂತೆ ಬಿಡಾರ ನೋಡಬೇಕು. ಮಿರಾಸದಾರರೊಂದಿಗೆ ವರ್ತನೆ ಮಾಡಬೇಕು.

ಪಸಗಿ ಮತ್ತು ಪಳಗಿ ಕೌಲು ಪೂರ್ಣವಾಗಿರುವವರೆಗೆ ತಲಗ ಜಕಾತಿ ನಿಕಾ ಮತ್ತು ಪೈಸಾರು ಉದ್ದಮಾರ್ಗ ಬಿ

ಗಟ್ಟಿ ಜಿನಸು			ಭೂಸಾ ಜಿನಸು	
ಪಳದಿ	ಕೇಶರ	ನಾಲದಂಬೆ	ಜೋಳ	ದಲ ಜಿನಸು
ಅಡಕೆ	ಉತ್ತತ್ತಿ	ನಾಖ	ಗೋದಿ	ಕುಲಥಿ
ಕಾಳಮೆಣಸು	ಹುರುಳಿ	ಹರಡೆ	ಕಡಲೆ	ಉಪ್ಪು
ಸುಂಠಿ	ಜಿರಿಗೆ	ನೂಲು	ಧಾನ್ಯ	ತೆಂಗು
ಜಾಯಪತ್ರೆ	ನೀಲ	ನವಾರ	ರಾಗಿ	ಅವಲಕ್ಕಿ
ಜಾಯಫಳ	ಅಕ್ರೂಟ	ಸೋನೆಕಾವ	ಎಳ್ಳು	ಶಿಗೆಕಾಯಿ
ಆಫಿಮ	ಬಾದವ	ಸುಲಾಲ	ಕಾಲೇರಿ	ಗಜಸು
ಸಕ್ಕರೆ	ಅರಲಿ	ಕಾಚು	ಅಕ್ಕಿ	ಭಗ
ಬೆಲ್ಲ	ತಾಬ	ಕಂಬಳಿ	ಹಿಟ್ಟು	ಕುರಿ
ಲವಂಗ	ಕಪರಸ	ರೇಶ್ಮೆ	ಖಲ	ಅಂಬಾಡೆ
ಮಾಜೀಠ	ಬಾಕಿ	ಚಿನ್ನ	ಬಿಳಿ ಎಳ್ಳು	ಲಿಂಬು
ಇಂಗು	ಕುಸುಬಿ	ಕಸಡಿ	ಖಿಜಾಕ	ಬಾಳೆ
	ಅಲಿಕ	ರಾತ	ದಲಿಕಾಯಿ	ಅಂಬಲಿ
		ಕುಂಕುಮ	ಭಿಮವೆ	ಅದ್ರಕ
			ಅಮಸೋಲ (ಹಸಿಶುಂಠಿ)	
			ಚವಳಿ	

ಹತ್ತಿ	ಸಣಬು
ಪೊವಲೆ	ಚೌಲು
ಸೀಸ	ದೀಪದ--
ಶ್ರೀಖಂಡ	ಬೆಳ್ಳಿ
ಹಪ್ಪಳ	ಕತ್ತಿಲ್
ಗದವೀಡ	
ಹಿಕಾರಸ	ಹದಿನೆಂಟು ಜಿನಸು ಬತಯೇದ ಮಾಡಿ
ಮೌಮ	ಪ್ರತಿ ಚೀಲಕ್ಕೆ ಹೊನ್ನು – ಬಿ ಜಕಾತಿ ಚಿನಿವಾಲ
ಗುಡಗುಡಿಯ ನೆಲೆ	---

ಎಪ್ಪತ್ತೆರಡು ರೇಣೆ ಹತಯೇದ ಮಾಡಿ ಪ್ರತಿಚೀಲಕ್ಕೆ ಪೊ । ನಿ। ಜಕಾತಿರ % ಚಿನವಾಲ --

ತಂಬಾಕಿಗೆ ಕಸಬಾ ಮಜಕೂರಿಯಿದೆ. ಹೊಸಪೇಟೆಗೆ ಗಾದಿಯಿಲ್ಲ. ಹೊರಗಿನಿಂದ ಬಂದರೆ ಪೇಟೆಯಲ್ಲಿ ಇಳಿಸಿಕೊಳ್ಳಬೇಕು. ಪೇಟೆಯಲ್ಲಿ ಖರೀದಿ ಮಾಡಬೇಕು. ಬಾಗಿಲು

ಮೂಲಕ ಸರಕು ತಂದರೆ ☐ ಸೌದಾ ಸ್ವೀಕರಿಸಬೇಕು. ತಂಬಾಕು ಮಾಫ ಮಾಡಿ, ಪ್ರತಿನಡೆಗೆ ದಾ॥ ರ॥ ಚಿ॥ ರಂ।=

೩. ಹೊಸಪೇಟೆಯಲ್ಲಿ ಹೊಸದಾಗಿ ಏನೇ ವಿಕ್ರಯಾದಾಗ ಅದರ ಜಕಾತಿ ರಾ।ರ॥। ಮತ್ತು ಚಿ। ರ.।=

ಇದರ ಹೊರತು ಹಿಂದೆ ಮುಂದೆ ಇರುವ ನಗಗಳಿಗೆ ತಾಲೂಕಿನ ಜಕಾತಿಯಂತೆ ಹಣ ನೀಡಬೇಕು. ಸದರಿ ಪೇಟೆಯಲ್ಲಿ ಮಾರಾಟವಾದ ನಗಗಳಿಗೆ ಕೌಲು ನೀಡಬೇಕು.

ಚೌಬಿನಾ ಗಾಡಿ ಬದರಪೇಟೆಯಲ್ಲಿ ಮಾರಾಟಗೊಂಡರೆ ಅದಕ್ಕೆ ಕೌಲು ತೆರಬೇಕು. ಅಲ್ಲಿವರೆಗೆ ಜಕಾತಿಯಿಲ್ಲ. ನೇರಹಾದಿಯಿಂದ ಹೋದರೆ ಪ್ರತಿನಗಕ್ಕೆ ರುಕೆ –೩ ಬಿ ಬಿ ರ= ಚಿ ರ ೧

ದುಲಾಬಿ ಜನರು ಬಟ್ಟೆಯನ್ನು ಹೆಣೆದು ತಂದರೆ ಅವರಿಗೆ ಜಕಾತಿ ಮಾಫಿ. ನಿ। ಮೊ। ತುಂಬಬೇಕಾಗುವ ಕಾಲು ಮಾಫಿ. ಚಿನವಾಲರು ಒಯ್ದರೆ ಅವರಿಗೆ ಮುಕ್ತಿ ಇಲ್ಲ. ಕಿರಕೋಳ ಸಾಮಾನುಗಳಿಗೆ ಜಕಾತಿ ಮಾಫ.

ಪೇಟೆಯ ಸರಕು ನೇರ ಮಾರ್ಗದಿಂದ ಹೋದರೆ–ಬಂದರೆ ಪ್ರತಿನಗಕ್ಕೆ ಹೊನ್ನು ಜಕಾತಿಯಿದೆ. ಚಿ । ಬಿ । ಚಿ । ೧ ॥ .॥. ರ ೧೧ ರ॥= (ಫಾ.ಮು.)

ತಡಾ ಮಾರಿದರೆ ಪ್ರತಿಹೊನ್ನಿಗೆ ರಾ।"= ಚಿ ।"–

ಕುರಿಗಳ ಜಕಾತಿ. ಚಿ । ರ॥ ೩ ದಿವಾಣ '೧ ।.

ಖಾದಿ ಬರದಾ ಪ್ರತಿ ನವರಿಗೆ ದಿ\ರ. ೧೩. ಚಿ। ರರ=

ಸಿಗಸಗೋಟಿ ವರ ದನಕರುಗಳಿಗೆ ಎಮ್ಮೆ– ದಿ। ರ॥ ಚಿ। ರ%

ಎತ್ತು ದಿ। ಚಿ।

ಈ ರೀತಿಯಲ್ಲಿ ಜಕಾತಿಯ ಕೆಲಸ ಮಾಡಬೇಕು. ಸದರಿ ಗಟ್ಟಿ ಮತ್ತು ಭೂಸಾ ಜಿನಸುಗಳಿಗೆ ಪೇಟೆಯಲ್ಲಿ ಖರೀದಿಸಿ ಇಡಬೇಕು. ಪ್ರತಿ ಗೋಣಿಚೀಲಕ್ಕೆ ಜಕಾತಿ ಆಕರಿಸಬೇಕು. ನೇರ ಮಾರ್ಗದಿಂದ ಹೋದರೆ ಒಂದು ಜಕಾತಿಯನ್ನು ಪಡೆಯಬೇಕು. ಮಹಾನಾಡಿನವರನ್ನು ಗೌರವಿಸಿ ಅವರ ಅರ್ಜಿಯ ಕೋರಿಕೆಯಂತೆ ನಡೆದುಕೊಳ್ಳಬೇಕು. ವ್ಯಾಪಾರಿ–ವಾಣಿಗಳು ತಮ್ಮಲ್ಲಿ ಪರಸ್ಪರ ಜಗಳ ಮಾಡಿದರೆ ದಿವಾಣಗೆ ಕಳಿಸಬೇಕು. ಮಹಾನಾಡಿನವರು ಈ ಪ್ರಕರಣ ತಮಗೆ ಸಂಬಂಧಿಸಿದ್ದಲ್ಲ ಎಂದು ದಿವಾಣಗೆ ಕಳಿಸಬೇಕು. ಮಹಾನಾಡಿನವರು ಈ ಪ್ರಕರಣ ತಮಗೆ ಸಂಬಂಧಿಸಿದ್ದಲ್ಲ ಎಂದು ದಿವಾಣಗೆ ಕಳಿಸಿದರೆ ವಿಚಾರಣೆ ನಡೆಸಿ ನಿರ್ಣಯ ನೀಡಬೇಕು. ಲಂಪಟತನ

ಕಳ್ಳತನ ಮಾಡಿದರೆ ಮಹಾನಾಡಿಗೆ ಕಳಿಸಬೇಕು. ಅವಿರತವಾಗಿ ಮಾಲು ಬಾಹರ ಅಥವಾ ಮಹಿಳೆಯ ನಡುವೆ ಬಿಟ್ಟು ಸತ್ತರೆ ಗುನ್ಹೆ ದಾಖಲು ಮಾಡಿ ಸರಕಾರದ ಕಡೆಗೆ ಕಳಿಸದೇ ಮಹಾನಾಡಿಗೆ ಕಳಿಸಿ, ವಣಿಕರ ಸಾಮಾನು ಕಳ್ಳತನವಾದರೆ ದಿವಾಣಕ್ಕೆ ತಿಳಿಸಬೇಕು. ದಿವಾಣ ಅದರ ನಿರ್ಣಯ ನೀಡಬೇಕು. ಸಾಲ ಕೊಡುವ ಕೊಳ್ಳುವ ವ್ಯವಹಾರವು ಸರಕಾರದ ಬಳಿಗೆ ಬಂದರೆ ಮಹಾನಾಡಿಗೆ ಕಳಿಸಬೇಕು. ಏಳುವರ್ಷ ಕಡಿಮೆ ಅಸಲು ತುಂಬಿದರೆ ಅವರಿಂದ ಸಾಲಗಾರರು ಹಣ ಬೇಡಬಾರದು. ಕೌಲು ತುಂಬಿದ ಬಳಿಕ ಸಾಲಗಾರ ಬಂದು ವಸೂಲಿ ಮಾಡಲಿ. ಖರೀದಿ ಕಡವನ್ನು ಪೇಟೆಗೆ ತರಬಾರದು. (ಫಾ.ಮುದ್ರೆ. ಜೋಡು)ದಿನಗೂಲಿ ಮಾಫಿ, ಜಂಗಮರು ಹೊಟ್ಟೆಗಾಗಿ ವಂಚನೆ ಮಾಡಿದರೆ ಅವರನ್ನು ಶಿಕ್ಷಿಸಬೇಕು. ಶಿವಾಜಿ ರಾಜನ ಪ್ರದೇಶದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದ ಖಟ್ಲೆ ಮತ್ತು ಬಂಧನವಾಗಿದ್ದರೆ, ಸರಕಾರದ ಪರವಾಗಿ ಜಿಲ್ಲೆಯ ಅಧಿಕಾರಿಯನ್ನು ಕಳಿಸಿ ಆರೋಪದ ವಿಚಾರಣೆಯನ್ನು ನಡೆಸಬೇಕು. ಧಾನ್ಯಗಳನ್ನು ತೂಕ ಮಾಡಿಯಲ್ಲ. ಅಳತೆ ಮಾಡಿ ಹನ್ನೊಂದು ಕಾಲಿನ ಶೇರಿನಂತೆ ನೀಡಬೇಕು. ಉತ್ಪನ್ನಕ್ಕೆ ಸಂಬಂಧಿಸಿದ ಕಾಗದಪತ್ರವನ್ನು ಧಾರವಾಡರಿಂದ ಪಡೆಯಬೇಕು. ಪೇಟೆಯ ಜನರು ಹಳ್ಳಿಯಲ್ಲಿ ಕೃಷಿ ಮಾಡುತ್ತಿದ್ದು, ಕಾಳು ಕಡಿಯನ್ನು ಊಟಕ್ಕೆ ಒಯ್ಯುತ್ತಿದ್ದರೆ, ಅದಕ್ಕೆ ಜಕಾತಿ ಮಾಫ. ಮಿರಾಸದಾರರು ಮನೆ, ಮಳಿಗೆಯನ್ನು ಕಟ್ಟಿ ವಾಸ ಮಾಡುತ್ತಿದ್ದರೆ ಅವರಿಗದನ್ನು ಇನಾಮವಾಗಿ ನೀಡಬೇಕು. ಜಗಳ ತಂಟೆ ತಕರಾರು ನಡೆದರೆ ಮಹಾನಾಡು ಮಠದಲ್ಲಿ ಕೂತು ಬಗೆಹರಿಸಬೇಕು. ನಿಪುತ್ರಕರಿದ್ದರೆ ಅವನ ಆಸ್ತಿಯನ್ನು ವಾರಸುದಾರರಿಗೆ ನೀಡಬೇಕು. ಅವರು ಯಾರೂ ಇಲ್ಲದಿದ್ದರೆ ದಿವಾಣ ಹೇಳಿದಂತೆ ಕೇಳಬೇಕು. ಹಜರತ ಸಾಹೇಬರ್ ಕೌಲು ತರಿಸಿ, ಕಸಬಾದಿಂದ ಮತ್ತು ಇಬ್ರಾಹಿಂಪುರಕ್ಕೆ ಧಾನ್ಯಗಳ ಚೀಲ ಬಂದಲ್ಲಿ ಅಲ್ಲಿಯ ನಿಯಮದಂತೆ ಜಕಾತವನ್ನು ಆಕರಿಸುವುದು. ಪೇಟೆಯಲ್ಲಿ ಚಿನ್ನ, ಬೆಳ್ಳಿ, ದನಕರು ಮಾರಲು ಬಂದರೆ, ಕಳ್ಳತನ ಮಾಡಿದ್ದರೆ ಅದನ್ನು ಹಣನೀಡಿ ತಮ್ಮ ವಸ್ತುವನ್ನು ಬಿಡಿಸಿಕೊಳ್ಳಬೇಕು. ಕಸಬೆ ಪೇಟ ಇಬ್ರಾಹಿಂಪುರದ ನೇರಮಾರ್ಗದಿಂದ ಸರಕುಗಳು ಬಂದು, ಅದೇ ಮಾರ್ಗದಿಂದ ಹೋದರೆ ಇಬ್ರಹಿಂಪುರಕ್ಕೆ ಜಕಾತಿಯನ್ನು ನೀಡಬೇಕು. ಹೊಸಪೇಟೆಗೆ ಬಂದರೆ ಹೊಸಪೇಟೆಯ ಜಕಾತಿಯನ್ನು ನೀಡಬೇಕು. ಅದೂ ಅಲ್ಲದೆ ಧಾರವಾಡದಿಂದ ಬರುವ ಜನರು ನೇರಮಾರ್ಗದಿಂದ ಹೊಸಪೇಟೆಗೆ ಬರಬೇಕು. ಹೊಸ ಶ್ರೀಮಂತರು ಹೊಸಪೇಟೆಯಿಂದಲೇ ಹಾದು ಹೋಗಬೇಕು. ಸರಕಾರ ಜಹಾಗೀರದೊಳಗಿಂದ ಬಟ್ಟೆಯ ಸರಕು ಹೋಗುತ್ತಿದ್ದರೆ ಸುಂಕ ನೀಡಬೇಕು. ಕಸಬಾ, ಪೇಠ (ಫಾ.ಮ.) ಇಬ್ರಾಹಿಂಪುರದಲ್ಲಿ ಮನೆ, ಮಳಿಗೆಯನ್ನು ಕಟ್ಟಿಸಬೇಕು. ಪೇಟೆಯ ಕರಾರಿನಂತೆ ವರ್ತಿಸಬೇಕು. ಹರದೋಪೇಟೆಯಲ್ಲಿ ಮನೆಯಿದ್ದು ಹೊಸಪೇಟೆಯಲ್ಲಿ ನೆಲೆಸಬಾರದು.(ಫಾ.ಮು). ಇನಾಮ ಭೂಪಾಲಸೆಟ್ಟಿ ಗುರುಬಸೆಟ್ಟಿ ಗೋಣಿಚೀಲ–೨

ಮತ್ತು ರುದ್ರಾಕ್ಷಿ ಚೆನ್ನಬಸೆಟ್ಟಿ ಮಹಾಜನನಿಗೆ ಗೋನಿಚೀಲ-೨ ಹೀಗೆ ೪ ಚೀಲ ಸರಕು ಬಿಡಬೇಕು. ಸುಳೆಗಾವ, ಅಥಣಿ, ಸಿರಗೇರಿ, ಧಾರವಾಡ ಮತ್ತು ಬಿದರೂರು ಮತ್ತು ರಾಮಚಂದ್ರಾಪುರದಿಂದ ಕಿರಾಣಿ ಸಾಮಾನುಗಳು ಬರುತ್ತವೆ, ಹೋಗುತ್ತವೆ. ಇದರಿಂದ ಕಿರಾಣಿ ಸಾಹುಕಾರರು ಉದ್ದಿಮೆ ವ್ಯಾಪಾರ ಮಾಡಿ ಸುಖವಾಗಿ ಇರುತ್ತಾರೆ. ಉದ್ದಿಮೆ ಮಾಡಿ ಚಿನವಾಲನ ಬಾಗಿಲಿಗೆ ಒಂದುಕಾಲು ಹೊನ್ನು ಬಂದಿದೆ.

ಜಿಲ್ಲೆಯ ಹಕ್ಕುದಾರರು ಎಷ್ಟಿದ್ದಾರೋ   ಪೇಠೆಯ ಹಕ್ಕುದಾರರು ಎಷ್ಟಿದ್ದಾರೋ
ಅವರು ಹೊನ್ನು ಸರಿಯಾಗಿ ಹಂಚಿಕೊಳ್ಳಬೇಕು.   ಅಷ್ಟು ಹಂಚಿಕೊಳ್ಳಬೇಕು.

.॥.   .|||.

ದೇಸಾಯಿ, ಮಹಾನಾಡಿನ ಸಮ್ಮತಿಯಿಂದ ಸದರಿ ಸಿದ್ಧಪಡಿಸಲಾಗಿದೆ. ಸರಿಯಾಗಿ ಪಾಲು ಮಾಡಿಕೊಳ್ಳಲು ನಿಮಗೂ ಸದರಿಯಂತೆ ಕರಾರು ನೀಡಲಾಗಿದೆ. ಯಾವ ಶಂಕೆಗೂ ಒಳಗಾಗದೆ ಮನೆ ಮಳಿಗೆ ಕಟ್ಟಿಸಿ ವ್ಯಾಪಾರಪೇಟೆಯನ್ನು ಏಳ್ಗೆ ಮಾಡಿ ಸುಖವಾಗಿರಬೇಕು. ಹಿಂದೂ-ಮುಸಲ್ಮಾನ ವ್ಯಾಪಾರಿಗಳು ಬಂದು ಮನೆ ಮಾಡಿಕೊಂಡಿದ್ದಾರೆ. ಅವರಿಗೆ ಮನೆಯ ಕರವನ್ನು ಮಾಫಿ ಮಾಡಲಾಗಿದೆ. (ಫಾ.ಮು) ತಾಜಾ ಕಲಮು ಸಿದ್ದಣ್ಣ ಶಾಬಾದಿ ಎಂಬ ಸ್ಥಿತಿವಂತನಿಗೆ ಪ್ರತಿದಿನ ಇನಾಮ ಗೋಣಿಚೀಲ ೨ರಂತೆ ನೀಡಲಾಗುವುದು ಎಂದು ನೀಡಿದ ಕರಾರು. (ಫಾ.ಮು)

೩೩

ಶ್ರೀ

ಶ. ೧೬೦೭

ಸ. ೧೬೮೫

ಉತ್ಪನ್ನ

ಪೇಟೆ ಹೊಸ ತಾಲೂಕ ಬಂಕಾಪುರ ಸು । ಸೀತ ತಾ। ಸಮಾನೀನ ಅಲಫ ಹಿರಿಮಠ ೧ ಇವರ ಸ್ವಂತ ಹೊಲದ ಇನಾಮ ಫರ್ಮಾನು ೧, ಕರಾರು ವರ್ಷ ೭, ಸರಸೆಟಿ, ದೇಸಾಯಿ ಪಟಣಸೆಟ, ಸರದೇಸಾಯಿ, ಗುಣಾರಿಕಿ ೧ ನಾಡಗೌಡ ಮಹಾಜನ ಸೇಟ, ಪತಕಿ

ಪಟಣಸೆಟಿ ಕರಾರು ತುಂಬಿದ ಬಳಿಕ ಹತ್ತುಮನೆಗೆ ಒಂದು ಮನೆ ಖುಬೆಖುಬ್‌ನಿಗೆ ಕಸಾವಾನ ಹೊನ್ನುರ – ಮಹಾಜನ ಕುಲಕರ್ಣಿ ಪ್ರತಿಮನೆಗೆ ಮನೆಕಟ್ಟಿದವನಿಗೆ ಹತ್ತರಲ್ಲಿ ಒಂದು ಮನೆ ಒಪ್ಪಿಗೆ – ಅಂಗಡಿ ಕಟ್ಟಿದವರಿಗೆ ಒಂದು ಖುಬಾಕೆ ಒಂದು ಅಂಗಡಿ ಒಪ್ಪಿಗೆ

ಕಳ್ಳತನ ಲಂಪಟತನ ಮಾಡಿದವರನ್ನು ದೇವರ ಹೊರತು ಬಂಧಿಸದೆ ಬಿಟ್ಟು ಬಿಡಬೇಕು. ದೇವರು ಹೇಳಿದರೆ ಬಿಟ್ಟು ಬಿಡಬೇಕು. ರಕ್ತಸಿಕ್ತ ಕೈಯಿಂದ ಬಂದಾಗ ಅವನ ಹಾದಿಗೆ ಹೋಗಬಾರದು. ಪೊ।ವತಿಯ ಕಾರಖಾನೆ – ಹಕ್ಕಿನ ಧಾನ್ಯ ೧ ಹಿರೆಮಠ ೧ ವಿರಕ್ತಮಠ ೧ ಸರಸೆಟಿ ೧ ಪಟಣಸೆಟಿ ೧ ಮಹಾಜನಸೆಟಿ

ದೇವರಲ್ಲೂ ಕೊಡುಕೊಳ್ಳುವ ತಪ್ಪು ಜರುಗುತ್ತದೆ. ಪ್ರತಿಯೊಂದಕ್ಕೂ ಜಗಳ ಏರ್ಪಟ್ಟು ದಿವಾಣಕ್ಕೆ ಬಂದರೂ ಅವನನ್ನು ದೈವಕ್ಕೆ ಕಳಿಸಬೇಕು.

ಕರಾರು ತುಂಬಿದ ಬಳಿಕ ದೈವ ಮಠದಲ್ಲಿ ಸೇರಿ ಕುಲನೋಡಿ ಮನೆ ಕಂದಾಯ ಮಾಡಿಕೊಡುತ್ತಾರೆ. ಪೇಠೆಯಲ್ಲಿ ಕೂಲಿನಾಲಿ ಹಿಡಿಯಬಾರದು. ಕೌಲು ತುಂಬುವ ತನಕ ಕರಾರು ತೆಗೆದುಕೊಳ್ಳಬಾರದು. ಕೌಲು ತುಂಬಿದ ಬಳಿಕ ಹೇಗೆ ವ್ಯವಸ್ಥೆ ಮಾಡುತ್ತಾರೋ ಹಾಗೆ ಸ್ವೀಕರಿಸಬೆಕು.

ವಿರಕ್ತಮಠ ೧ ಇವನಿಗೆ ಸ್ವಸ್ಥಾ ಆಲಂಪನಾನದ್ದು ತಾ। ಬಿದರೂರು ಮತ್ತು ಮತ್ತು ಸೋದೆಯ ಬರುವ ಹರದ ಬಂದರಿನ ಕಾಳುಮೆಣಸು, ಅಡಕೆ ತಾಲೂಕಿಗೆ ಬರುವ ಜಕಾತಿ.

ಕಾಳುಮೆಣಸು, ಅಡಕೆ ಮತ್ತು ದುರ್ಡಿ(?), ಗಡಪ, ಹೀರೆ, ಲಾಲಾರೆ, ಪೋವಲೆ, ಜಡಿತ, ಜಡಾವಿ, ಜಸಾಕ್ಷಿ ಸೋಪ ಶಖ ಕಾತ ಲವಂಗ ಜಾಯಪತ್ರ ಫಲ ಬಟ್ಟೆ ಭೂಸ ಚಿನ್ನ ಬೆಳ್ಳಿ ಕತ್ತಲು.

ಗುಜರಿ, ತಂಬಾಕು, ಎಲೆ ಮತ್ತು ಕಿರುಕೋಳ ಜಿನಸು ಗೋಣಿ ಬಂದರು ಮತ್ತು ದಾರಿ ದಿವಾಣ ೬೪ ಚಿನವಾಲ= ೬೮ ಸಿಗೋಟಿ– ೨೧೧, ಕುದುರೆ ೧, ಪ್ರತಿ ಸದೇಸ ಹೊನ್ನು ರ ೧, ಎಮ್ಮೆಗೆ ೧ ೬೦. ಎತ್ತಿಗೆ ೧, – – ಬಾವಿ – ಬರವಾ ನೇರಮಾರ್ಗ

ಅತ್ತೆ ಮನೆಯ ಸೊಸೆ ಮತ್ತು ಹೆಂಗಸರು ಬಾವಿಗೆ ಬಿದ್ದರೂ ವಿಷ ಸೇವಿಸಿ ಸತ್ತರೂ ಕಾಲೆತ್ತಿ ಬೀಸಿ ಒದೆಯಬೇಕು. ದೋಷ ಹೊರಿಸಬಾರದು. ಹಾದಿಯಲ್ಲಿ ಪೇಟೆಯಲ್ಲಿ ಕಳ್ಳಕಾಕರ ಭೀತಿಯಿದ್ದರೆ ದಿವಾಣ ವ್ಯವಸ್ಥೆ ಮಾಡಬೇಕು. ಒಂದು ಹುಲ್ಲುಕಡ್ಡಿ ಹೋದಾಗ ಚಿನ್ನದ ಕಡ್ಡಿ ನೀಡಬೇಕು. ನಿಸ್ಸಂತಾನವಾಗಿದ್ದರೂ ಅವರ ಸಂಪತ್ತು ಕಸಿದುಕೊಳ್ಳಬಾರದು.

ಧಾರವಾಡ, ಅಥಣಿ, ಸುಳೆಗಾವಿಗೆ ಬಂದು ಹೋಗಬೇಕು. ಅದನ್ನು ಪೇಟೆ ಮಾಡಬೇಕು. ಧಾವಲಗೀರ ಐವರು ೫.

ತೂಕ ಮಾಪು ಮತ್ತು ಅಳತೆ ಖಾ। ಖೂ। ಖಾ।

ಧಾರವಾಡ ಪದ್ಧತಿಯಂತೆ ಕಳ್ಳರ ಪಹರೆ ಒಂದು ಸಾಲಿ ಹೊನ್ನು ಬುರ್ದಾ ಪೇಟೆಗೂ, ದೈವಕ್ಕೂ ಏನು ಬೇಕು ಅದು ಹವಾಲ್ದಾರನಿಗೆ ನೀಡಬೇಕು. ಫಲವಾದಿ। ಭಾವ, ಬಟ್ಟೆ, ದಾರ, ಮಹಲಗಾರ। ತೇಲೆ ಮೆಹತರ। ಖಾ। ಮತ್ತು ಲಾಡಾಮೆ ಪೇಟೆಯಲ್ಲಿ ಹಾಕಬಾರದು.

ಹನ್ನೆರಡು ಕೊಲೆ ಪೇಟೆಯಲ್ಲಿ ಮಾಡಿದರೂ ಮಾಫ ಪದ್ಧತಿಯಿಂದ ಇರಬೇಕು ಬಾ। ಧಾರವಾಡ

ಈ ರೀತಿಯಲ್ಲಿ ನಡೆಯಬೇಕಾದರೆ ಹಜರತ ಸಾಹೇಬರ ಅಭಯಹಸ್ತ ಕುರಾನಿನ ಭರವಸೆ ನೀಡಬೇಕು.

೩೪

ಶ್ರೀ   ದಿನಾಂಕವಿಲ್ಲ

ಶ್ರೀಮತು ಸಕಲಗುಣ ಸಂಪನ್ನ ಸೌಜನ್ಯ ಸಾಗರ ಪರ ಉಪಕಾರ ಮೂರ್ತಿ ರಾಜಾಧಿರಾಜೇಶ್ರೀ ಶಿವಪ್ಪ ಮುಚೆಡಿ ಅಥವಾ ಜಿವಾಜಿ ಸೊಮಾಜಿ ಅಥವಾ ಸಮಸ್ತ ಮಹಾನಾಡ ಪಾ। ತೇರದಾಳ ಗೋಸಾವಿ ಇವರಿಗೆ

ಪ್ರತಿ ಸ್ನೇಹಾಂಕಿತ ಆದಿ ಸೆಟಿ ಸೆಟಗಾರ ಪೇಠ ಜೋಹರಾಪುರ ಎರಡೂ ಕೈ ಜೋಡಿಸಿ ಶರಣು ಶರಣಾರ್ಥಿ ವಿನಂತಿ. ಬಹಳ ದಿನಗಳಿಂದ ಹಣಕ್ಕಾಗಿ ಬಹಳ ತಗಾದೆ ಮಾಡುತ್ತಿದ್ದಾರೆ. ಖಾನ ಸಾಹೇಬರು ಹಣಕ್ಕಾಗಿ ಸತತ ಬೆನ್ನು ಹತ್ತುತ್ತಿದ್ದಾರೆ. ಇನ್ನು ಮುಂದಾದರೂ ಹೀಗೆ ಆಗಬಾರದು. ಈಗ ಗೋಸಾವಿಯ ಹೊನ್ನು ೨೮೦೦ರೂ ರಲ್ಲಿ ಹೊನ್ನು ೩೫೪ರ ತ್ಯಾವಗಲದಲ್ಲಿ ರಾ। ರಂಗಪ್ಪ ಪಂತನ ಹೊನ್ನು ಒಂದು ನೂರರಲ್ಲಿ ಹೊನ್ನು ೫೦ ಯೆಮ ಹೂಡದಲ್ಲಿ ನೀಡಲಾಗಿದೆ. ಖೋಜಗಿರಿ ಮಾಹಲದಾರ ಬಾ। ಹೊನ್ನು ಖೋಜಗಿರಿ ಮಾಹಲದಾರ ಬಾ। ಹೊನ್ನು ೨೬ರ ಸರಕಾರದ ವಸೂಲಿಯನ್ನು ಹುಜೂರ ಪಾವತಿ ಮಾಡುವಾಗ ಕೊರತೆ ಹೊನ್ನು ೩೪ ಒಟ್ಟು ಬೇರಿಜು ೪೬೪ ಇಷ್ಟು ಹಣಕ್ಕಾಗಿ ಖಾನ ಸಾಹೇಬರು ತುಂಬ ತಗಾದೆ ಹಚ್ಚಿದ್ದಾರೆ. ಹೊರಗಿನ ವ್ಯಾಪಾರಿಗಳ ಬಡ್ಡಿ ಪ್ರತಿ ತಿಂಗಳು ಹೊನ್ನು ೫ರ ಪ್ರಮಾಣದಲ್ಲಿ ಮಾಡಿ ಛ ೧೫ ಮೋಹರಂ ತಾರೀಕನ್ನು ಸಾಲ ಕಳಿಸಲು ಮುದ್ದತ್ತು ನೀಡಿದ್ದಾರೆ. ಸದರಿ ಹಣಕ್ಕಾಗಿ ವ್ಯಾಪಾರಿಗಳು ಬೆನ್ನು ಹತ್ತಿದ್ದಾರೆ. ಆದ್ದರಿಂದ ನಿಮ್ಮ ಬಳಿಗೆ ಪಾವಾಡಸೆಟಿಯನ್ನು ಕಳಿಸಿದ್ದೇನೆ. ಅವನ ಬಳಿ ಸದರಿ ಹಣ ಮತ್ತು ಬಡ್ಡಿ ಸಹಿತ ಕಳಿಸಿಕೊಡಬೇಕು. ರಂಗೋಪಂತನ ಹೊನ್ನು ೧೦೦೦ ೫ ನಾವು ಹುಡಿಯಲ್ಲಿಯ ೫೦ ಹೊನ್ನು ನೀಡಿದ್ದೇವೆ. ಉಳಿದ ೫೦ ಹೊನ್ನಿಗಾಗಿ ತಗಾದೆ ಮಾಡುತ್ತಿದ್ದಾರೆ. ಅದನ್ನೂ ಸಹ ಪಾವಾಡಿಸೆಟಿಯ ಹತ್ತಿರ ನೀಡಿ ಚಂದ್ರ ಎರಡು ಇರುವಾಗಲೇ ಕಳಿಸಿಕೊಡಬೇಕು. ಮತ್ತೆ ವಿಳಂಬ ಮಾಡಬಾರದು. ತಿಳಿದವರಿಗೆ ಬಹಳ ಬರೆಯಬೇಕಿಲ್ಲ. ಈ ವಿನಂತಿ. ಬಳಸೆಟನ ಹತ್ತಿರ ಕಳಿಸಿದ ಹೊನ್ನು ೧೦ ೧೧ ರ ಹುಂಡಿಯು ನಮಗೆ ತಲುಪಲಿಲ್ಲ. ಹುಂಡಿಯನ್ನು ಮರಳಿ ಕಳಿಸಲಾಗಿದೆ. ಮಲ್ಲಿಕಭಾಯಿಯವರೂ ಕಳಿಸಲಾಗಿದೆ. ಹೀಗೆ ಬಹಳ ಮಾಡದೇ ಶೀಘ್ರ ಕಳಿಸಿ. ಸೌದಾಗರರಿಗೆ ನೀಡಿದ ತಾರೀಕನ್ನು ನಿಮಗೂ ಕಳಿಸಲಾಗಿದೆ. ಅದರ ಮೇಲಿಂದ ನಿಮಗೆ ಮನವರಿಕೆಯಾಗಬಹುದು ವಿನಂತಿ. ತಾಜಾ ಕಲಮು ಮಲ್ಲಿಕಭಾಯಿಯ ಮಾಸ ಹೊನ್ನು ೧ ॥. ನೀಡಲಾಗಿದ್ದು ಕೊಡರಿ. (ಕನ್ನಡ ಅಕ್ಷರಗಳು)

೩೫

ಶ್ರೀ ದಿನಾಂಕವಿಲ್ಲ (ಮೊಗಲ)

ಸಮಸ್ತ ಮಹಾನಾಡ ಲಿಂಗಾಯತರು ಕಾ। ಅಥಣಿ ಮತ್ತು ವಾಹಾಲ ಹಾಯೆರಾಯೆಲಾಮ ಕಳಿಸಿದ ಅರ್ಜಿಯು ರಸೀದಿಯಾಗಿ ಬಂದಿದೆ. ತಪಶೀಲು ಹಕೀಕತ್ತು ತಿಳಿದುಬಂತು. ಮಜಕೂರು ಏನೆಂದರೆ – ಜೈನ ಮತ್ತು ಲಿಂಗಾಯತರಲ್ಲಿ ಹಜಬಿಗಾಂ ಕಲಹವಾಯಿತು. ಜೈನರಿಗೆ ಕಳಸ ಎಲ್ಲೆಂದು ಸ್ಥಳದಲ್ಲಿ ನಿರ್ಣಯವಾಯಿತು. ಸದ್ಯ ದೇಮಾಸಾಮ ಎಂಬುವನು ತೇರಿನ ವ್ಯವಸ್ಥೆ ಮಾಡಿ ಕಳಸ ತಂದು ಮೆರವಣಿಗೆ ಮಾಡಬೇಕೆಂದುಕೊಂಡಿದ್ದಾನೆ. ಕಳಸವಿಲ್ಲದರಿಂದ ಮತ್ತೆ ಹೊಸದಾಗಿ ತಕರಾರು ಮಾಡಲು ಪ್ರಯತ್ನಿಸುತ್ತಿದ್ದಾನೆ. ಇದರಿಂದ ಜಗಳವಾಗಬಹುದು. ಆದ್ದರಿಂದ ಸಾಹೇಬರು ಇದಕ್ಕೆ ನಿಷೇಧ ಹಾಕಬೇಕು. ಆದ್ದರಿಂದ ನಾವು ಅವರಿಗೆ ತೇರಿನ ಮೆರವಣಿಗೆಯಲ್ಲಿ ಸಹಕಾರ ನೀಡುತ್ತಿಲ್ಲ. ಹುಜೂರ ಆಜ್ಞೆ ಮಾಡಿದಂತೆ ಅವರು ನಿರ್ವಹಣೆ ಮಾಡಬೇಕು. ನಾವು ಯಾವ ಸಹಾಯ ಮಾಡುವುದಿಲ್ಲ (ಷ.ಷಾ.ಮು)

೩೬

ಶ್ರೀ ದಿನಾಂಕವಿಲ್ಲ (ಮೊಗಲ)

ನವಾಬ ದಿಲೇರಖಾನ....

॥ಆಫ್ತಬ ದೌಲತ ಮತ್ತು ಎಕಬಾಲ ಮೆರಸಿದ ಹರ್ ಅಜಮತ ಮತ್ತು ಇಜಲಾಲ ನವಾಬವಾಲಾ ಜನಾಬ್ ಅಜ ಜ್ಯಾನಬ ಮುರಾರಜಿ ಶಿಂದೆ ಬಾದಜು ಇಬಲಾಗ ಮರಾತಿಬ ಇಸ್ತಿಯಾಕ ದರಿಯಾಫ್ತ ಮುಲಾಕತ ಬಹುಜೇತ ಆಯಾತ ಮಶೇಖುದ ಜಮೀರ ಮುನೀರ ಖುಲಲ್ ಪಿಂಜಿರ್ ಗದಗನಿದ ಮೆಬಾಯೆದ ದರಿವಿಲ ಐನಾತನಾಮಾ ವಸೂಲಿ ಮಾಡಿದ ಕಂದಾಯವನ್ನು ಸರಿಯಾಗಿ ತಲುಪಿಸಿದ್ದರಿಂದ ಸಂತೋಷವಾಯಿತು. ಸಿದೋಜಿ ಘೋರಪಡೆ ಇವರು ಫೋಜ ಮಾಡುತ್ತಿದ್ದಾರೆ. ಶಬೆ ದಿನದಂದು ಸೈನ್ಯ ಕೂಚ್ ಮಾಡಿ ಬರಲಿದೆ. ಅಂತಹವರನ್ನು ತನ್ನ ಸೈನ್ಯವನ್ನು ಕರೆಸಿ ಸಿದ್ಧವಾಗಿರಲಿ. ವಾಸರದಾರನಿಗೆ ಸೈನ್ಯ ಸಮೇತ ಹೋಗಿ ಬೆದರಿಕೆ ಹಾಕಲಾಗುವುದು ಎಂಬ ವಿಷಯ ಕೇಳಿ ಸಮಾಧಾನವಾಯಿತು. ಈ ಹಿಂದೆಯೂ ಮೂರ್‍ನಾಲ್ಕು ಸಲ ಮುನ್ನೆಚ್ಚರಿಕೆ ನೀಡಲಾಗಿತ್ತು. ಇಷ್ಟರಲ್ಲಿ ಸೈನ್ಯ ಬಂದು ತಲುಪಿದ್ದರೆ ಮುಫಸಿದಾನಿಗೂ ಮುನ್ನೆಚ್ಚರಿಕೆ ನೀಡಿ ಕಠೋರಕೋಟೆಯನ್ನು ಗೆದ್ದು ಬಿಡಬಹುದಾಗಿತ್ತು. ಕಾರಸ್ತಾನದ ಮಾತುಕತೆಯೂ ಜರುಗುತ್ತಿರಲಿಲ್ಲ. ಈ ಜಿಲ್ಲೆಯ ಕಾರಸ್ತಾನಿಗಳಾದ ಮಲ್ಲಪ್ಪ ಕಿತ್ತೂರ, ಮುರಗೋಡ, ಸತ್ತಿಗೇರೆ, ಯಾದವಾಡ, ಎಕ್ಕುಂಡಿ, ಲೋಕಾಪುರ, ಬಟಕುರ್ಕಿ ಮತ್ತು ಜಂಬಗಿಂಯ ಜಮೀನ್ದಾರ ನರಗುಂದವಾಲೆಯೊಂದಿಗೆ ಶಾಮೀಲ ಆಗಿದ್ದಾರೆ. ಮುರಗೋಡದಲ್ಲಿ ಕೋಟೆಯಿದೆ. ಕೋಟೆಯ ಜನರು ಜೀವನ ಪಣಕ್ಕಿಟ್ಟು ಹೋರಾಡುತ್ತಿದ್ದಾರೆ. ಹಿರಿಯ ನವಾಬರ ಕಾಲದಿಂದ ಅಸನಾಯಿಂಯನ್ನು ಇರಿಸಿಕೊಂಡಿದ್ದಾರೆ. ಮೂರು ಸೈನ್ಯದಳ ಸದಾಕಾಲ ಹೋರಾಟ ನಡೆಸುತ್ತಲೇ ಇದ್ದಿದ್ದರೆ ಅಂ ಆಫ್ತಬ ದೌಲತ ಸಹಾಯ ಮಾಡಲಿಲ್ಲ ಎಂಬ ಮಾತು ಒಪ್ಪುವಂತಹದಲ್ಲ. ಧೂರ್ತತನದಿಂದ ಅವನೊಂದಿಗೆ ಶಾಮೀಲಾಗಿದ್ದರೂ ಅಫ್ತಬ ದೌಲತನು ಅದರ ಬಗ್ಗೆ ಲಕ್ಷ್ಯನೀಡದೆ ಇರುವುದು ಅಚ್ಚರಿಯ ಸಂಗತಿವಾಗಿದೆ. ಸದ್ಯ ಕೂಚ್ ಮಾಡಿ ಬರುತ್ತಲಿದ್ದೇವೆ. ನಮ್ಮ ಸೈನ್ಯದಳ ಸಾಧ್ಯವಾಗದಿರಲಿ– ಎಂದು ಆಜ್ಞೆ ಮಾಡಿದರೂ ಇಜನಿಬ ದಂಡಿನೊಂದಿಗೆ ಸಿದ್ಧವಾಗಿದ್ದೇವೆ. ಬೇಗ ಆಜ್ಞೆಯಾದರೂ ಸಾಕು ಸೈನ್ಯ ಸಮೇತ ಸೇವೆಗೆ ಹಾಜರಾಗುತ್ತೇವೆ. ಸೈನ್ಯ ಶಾಮೀಲಿದ್ದರಿಂದ ಈ ಜಿಲ್ಲೆಯಿಂದಲೇ ನದಿಯನ್ನು ದಾಟಲಾಗುವುದು. ಕಾರಸ್ತಾನಿ ಜಮೀನ್ದಾರರು ಅವನೊಂದಿಗೆ ಶಾಮೀಲಾಗಿದ್ದರೂ. ಅವರನ್ನು ಸದೆಬಡೆದು ಹಣವನ್ನು ಕಸಿದುಕೊಳ್ಳಲಾಗುವುದು. ಕಟೋರಗಡವನ್ನು ಗೆಲ್ಲಬಹುದು. ಅಫ್ತಬ ದೌಲತನು ಯುದ್ಧ ಗೆಲ್ಲಬಹುದು. ರಾಜೇ

ಅಜಮ ಶಾಹೂರಾಜನು ಇಜಾನಿಬನಿಗೆ ಪತ್ರವನ್ನು ಖಾತ್ರಿ ಮಾಡಿಕೊಂಡೆ ಬರೆದಿದ್ದಾನೆ. ಅಫ್ತಬ ದೌಲತನು ಲಕೋಟೆ ಕಳಿಸಿದ್ದಾನೆ. ಅದು ತಲುಪಿರಲೂಬಹುದು. ಅವನಿಗೂ ಇಜಾನಿಬನ ಅಗತ್ಯವಿದೆ. ದೌಲತನೂ ಪ್ರಯತ್ನಿಸುತ್ತಲೇ ಇದ್ದಾನೆ. ಆದಷ್ಟು ಬೇಗ ಇನಶಾಹುತಾನನ್ನು ಗೆಲ್ಲಲೂಬಹುದು. ಮೇಲಾಗಿ ಅಫ್ತಾಬದೌಲತನು ಮುತ್ಸದಿಯಾಗಿದ್ದಾನೆ. ಹೆಚ್ಚಿಗೆ ಬರೆಯುವುದು ಉಚಿತವಲ್ಲ. ಕಿತಾಬತಿ

ರುದ್ರಪ್ಪ ನೂರಂದ್ಯೆಯಾ ಮುಚಡಿ

೩೭

ಶ್ರೀ ದಿನಾಂಕವಿಲ್ಲ

(ಮೊಗಲ ಖೊವಾಸಖಾನೆ--)

ಮಶರುಲೇ ಅನಾಮ ಮುತಮದ ನೇರನಾಮಾ ಶಿವಸೆಟಿ ಮಹಾಜನ ಮತ್ತು ಮಹಾಮೇರು ಕಸಬೆ ಅಥಣಿ ದಾಮ ಇಜತಹೂ ವ್ಯಾಪಾರ ಪ್ರೀತಿಯಿರಲಿ.

॥ ಅಜಿ ಮೋದಿಸಿ ದಿಲಹೇ ಯೆಖಲಾಸ ಶೇಖ ಅಹ್ಮದ ವಕೀಲ ಇಮಾಮ... ತಾ। ಛ। ೧೫ ಮಾಹೇ ರಬಿಲೋವಲ ತಿಳಿದುಕೊಂಡು ಮೊಹಿಬ ನಿಮ್ಮ ಖುಶಿಸುದ್ದಿ ಬರೆದು ತಿಳಿಸಬೇಕು ಅಲ್ಲದೆ ನಮ್ಮ ಪೈಕಿ ತಿರುಗಾಡಿ ದೇಶ... ಮುದ್ದೆ ಮತ್ತು ಮಾಹಲದಾರ ಖಾನೆ ಅಲಿಶಾನೆ ಹಜರತ ಬಂದಿರಬಹುದು ಮತ್ತು ಹಜರತ ದೊಡ್ಡ ಮಹಾನಾಡಿನವರು. ನಾವು ನಿಮ್ಮ ಮಹಾನಾಡಿನಲ್ಲಿದ್ದೇವೆ. ನಿಮ್ಮಂತೆ ನಮ್ಮಲ್ಲೂ ಸಂಪತ್ತು ಇದ್ದು ಹೀಗಾಯಿತು. ಈಗ ನೀವೆ ಆಗ್ರಹ ಮಾಡಿ ಪ್ರತಿಯೊಂದು ಸಂಗತಿಯನ್ನು □ ಜಿಲ್ಲೆಯ ಅಧಿಕಾರಿಗೆ ತಲುಪಿಸಿರಿ. ಇದರ ಬಗೆಗೆ ಆಲಸ್ಯ ಮಾಡಬಾರದು. ಈ ಕೆಲಸ ನಿಮ್ಮದೇ ಎಂದು ತಿಳಿಯಿರಿ. ಹೆಚ್ಚಿಗೆ ಏನು ಬರೆಯಲಿ. ನೀವು ಹಿರಿಯರು, ಎಲ್ಲ ಸನದನ್ನು ಸರಿಪಡಿಸಿ. ಪ್ರತಿದಿನ ಏನೇನು ನಡೆಯಿತು ಎಂಬುದನ್ನು ಬರೆದು ತಿಳಿಸಿ. ಯಾರಾದರೂ ಅಡಚಣೆ ಮಾಡಿದರೆ ಅದನ್ನೂ ಬರೆದು ತಿಳಿಸಿ. ಸತತ ಹುಜೂರರ ವಿಷಯ ತಿಳಿದುಕೊಂಡು ಸಾಮಾನು ಸರಂಜಾಮನ್ನು ತಾಕೀತ ಮಾಡಿ ಕಳಿಸಿ ಬರೆಯುವುದನ್ನು ಮರೆಯಬಾರದು. ನಮ್ಮ ಅಹವಾಲನ್ನು ಜಿಲ್ಲೆಯ ಅಧಿಕಾರಿಗೆ ಹೇಳಿದರೆ ಅವರು ಮನಸ್ಸು ಮಾಡಬಹುದು. ಮಹಾನಾಡಿನ ಹುಜೂರ, ಬಾದಶಹನ ಮಾಹಲದಾರ (ಜಿಲ್ಲೆ ಅಧಿಕಾರಿ) – ಸಾಹೇಬ ಮಾಹಲದಾರ ದೊಡ್ಡ ಸಾಹೇಬರ ಅಮಲ್ದಾರರ ಮೂಲಕ ಕಳಿಸುವರು. ಈ ಕೆಲಸ ಕಠಿಣ ಎಂದೆನಿಸಿದರೆ ಹುಂಡಿ ಮಾಡಿ ಕಳಿಸಿರಿ. ನಿಮ್ಮ ಖಾತ್ರಿಯಿಂದ ಯಾವುದು ಯೋಗ್ಯ ಎನಿಸುವರೋ ಅದನ್ನು –– ತರಬೇಕು.

೩೮

ಶ. ೧೫೮೯, ಆಷಾಢ ವ ೧೩

ಮಹಿಡಿ ಮಾಹುದ ಇ.ಸ. ೧೬೬೭ ಜುಲೈ ೯

(ಮುದ್ರೆ ಫಾರ್ಸಿ ಅಷ್ಟಕೋನ)

ಕರಾರುಪತ್ರ ಅಜ ರಖುಖಾನೆ ಖುದಾಯೆವಂದ ಖಾ। ಶರ್ಜಾಖಾನ ಬಲದ ಅಯಾಮ ದೌಲತಹೂ ತಾ। ಕೃಷ್ಣಗೊಂಡಾ ಜಖುಗೊಂಡ ದೇಸಾಯಿ ಪಾ। ತೇರದಾಳ ಬಿದಾನವದ ಸು। ಸಮಾನ ಸಿಲ್ಲೈನ್ ಅಲಫ ಖಾನಬೇ ಕರಾರುಪತ್ರ ಹೀಗಿದೆ. ನಿನಗೆ ತಿಳಿಸುವುದೇನೆಂದರೆ, ಮಾ। ಮುಕಾಸಾ ಹಜರತಿನೇ ಸಾಹೇಬರಿಗೆ ಸಂರಕ್ಷಣೆ ನೀಡಿದಾಗ ಪ್ರದೇಶದ ಜನರು ನಮ್ಮ ವಿರುದ್ಧ ಬಂಡೆದ್ದರು. ಅವರು ಬಂದು ಬಿಡಿ ದಿನದಂದು ಸಾಹೇಬರೊಂದಿಗೆ ವಿಚಾರಣೆ ನಡೆಸಿದರು. ಅದರ ಗೈರು ಲಾಭ ಪಡೆದು ನಮ್ಮನ್ನು ಮಾನಗೇಡಿಯನ್ನಾಗಿ ಮಾಡಬಹುದೆಂಬ ಭೀತಿಯಿಂದ ಭೇಟಿಗೆ ಬರದೆ, ಪಲಾಯನ ಮಾಡಿ ಹೊರ–ಹೊರಗೆ ಅಲೆದಾಡುತ್ತಿರುವಾಗ ನಮ್ಮ ದೇಶಮುಖಿ(ಜಿಲ್ಲೆಯ ಹಕ್ಕು) ಅಮಾನತುಗೊಳಿಸಿ ನಮ್ಮ ದಾವೇದಾರರೊಂದಿಗೆ ಚರ್ಚಿಸಿದರು. ಹಮಶಾಯಿ ದೇಸಾಯಿ ನಮ್ಮ ಪರವಾಗಿ ಹೇಳಿದ್ದೇನೆಂದರೆ ಕೃಷ್ಣಗೊಂಡಾ ಮಜಕೂರ ಸಾಹೇಬರ ಹಿಂದೂ ಗುಲಾಮನಾಗಿದ್ದಾನೆ. ಮಿರಾಸಿದಾರ ದೇಸಾಯಿಯಾಗಿದ್ದಾನೆ. ಈ ಕಾರಣದಿಂದಾ ತಪಾಸಣೆಯಾಗಲಿಲ್ಲ. ಆ ಅಪರಾಧವನ್ನು ಕ್ಷಮೆ ಮಾಡಿ ಊರಿಗೆ ಕರೆತಂದು ದೇಸಗತಿಯ ನೌಕರಿಯನ್ನು ಕೊಡಿಸಬೇಕೆಂದು ಅರ್ಜಿ ಮಾಡಿದನು. ಅರ್ಜಿಯನ್ನು ಖಾತ್ರಿ ಪಡಿಸಿಕೊಂಡು ನಿನ್ನ ವಿಷಯದ ಬಗ್ಗೆ ಹುಜೂರರು ಮಿಂಯಾ ಅಬ್ದುಲ್ ಕಾಸೀಮನನ್ನು ಕಳಿಸಿದರು. ನೀವು ನಿಮ್ಮ ಶಂಕೆಯನ್ನು ತೊರೆದು ದರಬಾರಿನಲ್ಲಿ ರುಜುವಾಗಿ ನೌಕರಿ ಸೇರಿ ೨೦೦೦ ಹೊನ್ನು ಕಾಣಿಕೆ ನೀಡಲು ಒಪ್ಪಿಗೆ ನೀಡದೆ ಇರುವುದರಿಂದ ಹುಜೂರರ ಅನುಮತಿ ಕರಾರಿಗೆ ವಿಳಂಬವಾಯಿತು. ಮಾ। ಶಿವರಾಮ ಬಾಳಾಜಿ ಇವನಿಗೆ ಮಕಫಿ ಬರೆದರು. ರಾವೂ ಅಜಮ ಗೋವಿಂದರಾವನಿಗೂ ಬರೆದರು. ಅದೇನೆಂದರೆ, ನೀವು ನ್ಯಾಯವನ್ನು ಒದಗಿಸಿ ಉಪಭೋಗ ಮತ್ತು ಕಾಣಿಕೆಯನ್ನು ಒಪ್ಪಿಸಬೇಕು. ಅದರಿಂದ ಶಿವರಾವನು ನಿಮಗೆ ನ್ಯಾಯ ಒದಗಿಸಲು ಉಪಭೋಗ ಮತ್ತು ಕಾಣಿಕೆಯೆಂದು ಎಂಟು ಸಾವಿರವನ್ನು ಒಪ್ಪಿಸಲಾಗಿದೆ. ಅದರ ವಸೂಲಿ ಪ್ರತಿ ಸುಂಕಕ್ಕೆ ಹೊನ್ನು ೮೫೦ರ ಪ್ರಮಾಣದಲ್ಲಿ ನೀಡಬೇಕು. ಈ ವಿಷಯವನ್ನು ಮಂಡಿಸಿದಾಗ ನೀವು ಆ ಗುನ್ಹೇಗಾರನ ಎಲ್ಲ ಅಪರಾಧವನ್ನು ಕ್ಷಮಿಸಿ, ಹಣವನ್ನು ಜಮೆ ಮಾಡಿ ನಿಮಗೆ ನಿಶಾನೆ ಮತ್ತು ಆಫತಾಗಿರ ನೀಡಲಾಗಿದೆ. ಅದನ್ನು ನಡೆಸಲು ಚಾವರ್ ಭೂಮಿ ನೀಡಲಾಗಿದೆ. ಈ ಬಡ್ತಿಯನ್ನು ಪಡೆದು, ಸಾಹೇಬರ ನೌಕರನಾಗಿ ದೇಸಗತಿ

ಸಾಹೇಬರ ಮತ್ತು ತಾನು ಹಿಂದೂ ಗುಲಾಮ ಸಾಹೇಬರ ಬಾಜೀ ದೇಸಾಯಿಯಂತೆ ತಾನು ದೇಸಾಯಿಯಲ್ಲ, ಗುಲಾಮಗಿರಿಯನ್ನು ಮಾಡಬಾರದೆಂದು ತಿಳಿದುಕೊಂಡರೂ, ನಿನ್ನ ಮೇಲೆ ಕೃಪೆತೋರಿ ನಿಮ್ಮ ದೇಶಮುಖತನವನ್ನು ನಿಮಗೆ ನೀಡಲಾಯಿತು. ಯಾವ ಹಕ್ಕು ನೀಡಲಾಗಿದೆಯೋ, ಹಾಗೆ ನಡೆದುಕೊಂಡು ಸುಖವಾಗಿ ಇರಬೇಕು, ನೀವು ಯಾವುದೇ ಅಪರಾಧ ಮಾಡಿದರೂ ಅದನ್ನು ಕ್ಷಮಿಸಲಾಗಿದೆ. ನಿನ್ನ ರಾಜನ ಸೇವೆಯ ಮೇಲಿಂದ ನಿನಗೆ ಬಡ್ತಿ ನೀಡಲಾಗುವುದು. ನಿಶಾನೆ ನಡೆಸಲು ಅರ್ಧ ಚಾವರ ಇನಾಮ ಮಾಡಿಕೊಡಲಾಗಿದೆ. ಅದನ್ನು ಉಪಭೋಗ ಮಾಡಿ ಪ್ರತಿದಿನ ನಿನ್ನ ಸೇವೆಯನ್ನು ಕೈಕೊಂಡು ವರ್ತವನ್ನು ಭೋಗಿಸಿ ಸುಖವಾಗಿರಬೇಕು. ನಿನ್ನ ಜೀವಕ್ಕೆ, ಮರ್ಯಾದೆಗೆ ಏನಾದರೂ ಧಕ್ಕೆಯಾದರೆ ದೇವರ ಆಣೆಯಿದೆ. ಈ ರೀತಿ ನಿನ್ನ ಕರ್ತವ್ಯ ಮಾಡಿ, ಪ್ರದೇಶದಲ್ಲಿದ್ದು ಸೇವೆಯಲ್ಲಿ ಚ್ಯುತಿ ಬರದಂತೆ ನೋಡಿಕೊಳ್ಳುವ ಕರಾರು ಮಾಡಲಾಗಿದೆ. ವಸೂಲಿಯ ದರ ಪ್ರತಿ ಸಾಲಿಗೆ ೮೫೦ ಹೊನ್ನು ಒಪ್ಪಿಕೊಳ್ಳಲಾಗಿದೆ. ಅದನ್ನು ಮುದ್ದತಿನ ಒಳಗೆ ವಸೂಲಿ ಮಾಡಿ ಸುಖವಾಗಿರಬೇಕು. ಯಾವುದಕ್ಕೂ ಶಂಕೆ ಪಡಬಾರದು– ಎಂದು ಕರಾರು ಮಾಡಲಾಗಿದೆ.

ಪೊ । ಹುಜೂರ ಮುದ್ರೆ ಸೂ ಫಾರಸಿ ಮುದ್ರೆ

ರುಜು ತಾರೀಕ ೨೬ ಮಾಹೇ ಮೋಹರಂ

ಮೋಹರಂ

ಪೊ। ಫ ೪ ಯಾಹೇ ರಬಿಲಾವಲ್

೩೯

ಶಕೆ ೧೫೮೧ ಅಶ್ವೀನ ಶು.೧
ಇ.ಸ. ೧೬೫೯ ಅಕ್ಟೋಬರ್. ೭

ಅಜ ರಕ್ತಖಾನೆ ಖೋದಾಯೆವಂದ ಖಾನ ಬಾ। ಅಫಜಲಖಾನ ಮಹಮ್ಮದ ಶಾಹಿ ಖುಲಿ ದಯಾಮ ದೌಲತಹು ಬಜಾನೇಬ ಕಾರಕೂನಾ ಪ್ರದೇಶ ತೇರದಾಳ ಸುರುಸನ ಸಿತೈನ ಅಲಫ ಪ್ರದೇಶ ಮಜಕೂರಿನ ರಿಯಾಯತಿಗಳಿಗೆ ಶಿವಾಜಿಯು ಉಪದ್ರವ ನೀಡುತ್ತಾನೆ. ಆಗ ಕೃಷ್ಣಗೌಡ ದೇಸಾಯಿಯು ಬಹಳ ಶ್ರಮವಹಿಸಿ ನುರಿತ ಕುದುರೆ ಸವಾರನನ್ನು ನೇಮಿಸಿ ಶತ್ರುಗಳನ್ನು ಬಂಧಿಸಿದನು. ಅದರಿಂದ ದೇಸಾಯಿ ಈ ಸುದ್ದಿಯನ್ನು ಕೇಳಿ ಕೃಪೆ ತೋರಿ ನೀಡಿದ್ದು ಹೀಗಿದೆ.

ಇನಾಮ ಗ್ರಾಮ ಮುಗಳಖೋಡ ಒಟ್ಟೂ ಬಾಬತ್ತು ಒಂದು ಗ್ರಾಮ. ಚಾವರ ಹಣ. ಪ್ರತಿ ಚಾವರಗೆ ೨ ಹೊನ್ನಿನಂತೆ ನೀಡಲಾಗಿದೆ. ನಾಯಿಕ ದೇಹ ೨ ಕಸಬಾ ತೇರದಾಳ ಗ್ರಾಮ ಸಪ್ತಸಾಗರ ಪ್ರತಿ ಗ್ರಾಮಕ್ಕೆ ಭೂಮಿ ಚಾವರ ೧, ಇದರ ಹೊರತು ಸೇವಕರು ಮತ್ತು ಪಸಗಿ ಪಳಗಿ ನೀಡಲಾಗುವುದು.

ಈ ರೀತಿ ಹಕ್ಕನ್ನು ಬರೆಯಿಸಿಕೊಂಡು ನೀಡಲಾಗಿದೆ. ಇದನ್ನು ಪೀಳಿಗೆ – ಪ್ರತಿ ಪೀಳಿಗೆ ಉಪಭೋಗಿಸುವರು. ನಕಲು ಬರೆದುಕೊಂಡು ಅಸಲಿಪ್ರತಿ ನೀಡಬೇಕು. ಸಾ ಹುಜೂರ ತಾ। ಶಾಮಲಿಕ ಗೋರಿ ಮುದ್ರೆ ತಾ। ೨೯ ಜಿಲ್ಹೇಜ

೪೦

ಶಕೆ ೧೫೮೧ ಮಾಘ ವ ೭
ಇ.ಸ. ೧೬೬೦ ಫೆಬ್ರುವರಿ ೧೧

(ಫಾರಸಿ ಗೋಲು ಮುದ್ರೆ)

ಅಜ ರಖ್ತಿಖಾನೆ ಖುದಾಯೆವಂದ ಖಾನ ಅಲಿಶಾನ ಖಾ। ಫಾಜಲ ಅಫಜಲಖಾನ (ಫಾ.ಗೋ.ಮು) ಮಹಮ್ಮದ ಶಾಹಿ ಖುಲಿ ದಯಾಮ ದೌಲತಹು ತಾ। ಕೃಷ್ಣಗೌಡ ದೇಸಾಯಿ ಪಾ। ತೇರದಾಳ ಸು। ಫಾಹಿದೆ ಸಿತ್ಯೈನ ಅಲಫ ಮಾ। ಅನಾಮ ದೌಲತರಾವ ಸಹದಲ್ಲಾದ ಮತ್ತು ಮುಗಿಗೌಡಯವರು ನಿಮ್ಮ ಮುದೆಬರ ಹುಕ್ಕುಂನಂತೆ ಸವಾಲು ಕಳಿಸಿದ್ದೇನೆಂದರೆ ಸು। ಶಿವಾಜಿಗೆ ಮೋಸವಾಗಿ ಕುದುರೆ ಸವಾರನು ರಾಯಬಾಗ ಮತ್ತು ಆಡಗಲವರೆಗೆ ಕಬ್ಜೆ ಮಾಡಿ ಹಾರೋಗಿರಿಯ ಗ್ರಾಂದವರೆಗೂ ಕುದುರೆ ಸವಾರನಾದ ಜಾಧವರಾವ ಬಂದನು. ನಿಮ್ಮ ಸವಾರನು ಅವನಿಗಾಗಿ ಹಣವನ್ನು ಖರ್ಚು ಮಾಡಿ ಸಾಲಗಾರನಾನು. ಪಾ।ಮಾ। ಕಬ್ಜೆಯಾಗಲು ಬಿಡದೆ ಕಾಳಗ ಮಾಡಿ ಏರಿ ಹೋದನು. ಸುತ್ತಮುತ್ತ ಮಹಾಲ ರಕ್ಷಿಸಿದನು. ಹಿಂಜರಿಯದೆ ದಿವಾಣದ ಹಣವನ್ನು ವಸೂಲಿ ಮಾಡಿದನು. ನನೆಕರನ ಕುದುರೆ ಸವಾರನು ಕಾರ್ಯವನ್ನು ಮೆರೆದನು. ಅದಕ್ಕಾಗಿ ಮನೆ, ದನಕರುಗಳ ಲೂಟಿಯಾಯಿತು. ಸಪ್ತಸಾಗರಿ ಹಾವಲಜಿ ಕೊಲ್ಲಲ್ಪಟ್ಟ. ಈ ಕಾರಣಕ್ಕಾಗಿ ಶಂಕೆಯಿಂದ ಪಲಾಯನ ಮಾಡಿದರೂ ನಿನ್ನ ಮುಗಿಗೌಡನನ್ನು ಕಳಿಸಲಾಯಿತು. ಅವನು ಮಹಲಿಗೆ ಬಂದು ನಿನ್ನ ಅಹವಾಲು ಪರಿಗಣಿಸಿ ನಿನ್ನ ಶ್ರಮ, ನಿಷ್ಠೆ ನೋಡಿ, ತಂತ್ರವನ್ನು ಮಾಡಿದನು. ದಿವಾನ ಕಾರ್ಯದಲ್ಲಿ ಅಡಚಣೆ ಮಾಡಲಿಲ್ಲೆಂದು ಬರೆದು ತಿಳಿಸಿದನು. ಹೀಗಾಗಿ ನಿನ್ನ ಮೇಲೆ ದಯೆತೋರಿ ತಿದ್ದುಪಡಿ ಮಾಡಿದನು.

ಸಾಲನು ಶಿವಾಜಿ ಹರಾಮಖೋರನ ಮೋಸಕ್ಕಾಗಿ ಮಹಲು ಕಬ್ಜೆಯಾಗದಂತೆ ಮಹಲನ್ನು ಸಂರಕ್ಷಿಸಲು ಕುದುರೆ ಸವಾರರನ್ನು ನೇಮಿಸಿದನು. ಸಾಕಷ್ಟು ಖರ್ಚು ಮಾಡಿ ಮಹಾಲ ಸಂರಕ್ಷಿಸಿದನು. ಇದಕ್ಕಾಗಿ ಮುಗಳಖೋಡ ಗ್ರಾಮವನ್ನು ಇನಾಮು ನೀಡಲಾಗಿದೆ. ಅದರ ವ್ಯವಸ್ಥೆ ಮಾಡಿಕೊಡಲಾಗಿದೆ.

ನಿನ್ನ ಮನೆ, ದನಕರು ಮತ್ತು ನಿಶಾಜನರ ಲೂಟಿಯಾಯಿತು. ಕಸಬೆ ಮಜಕೂರಿಯ ನಾಯಿಕತ್ವ ವ್ಯವಸ್ಥೆ ಮಾಡಲಾಯಿತು. ನಾಯಕಿಯ ಹಕ್ಕು ಉಳಿದು ವ್ಯವಸ್ಥೆ ಮಜಕೂರ ವಿಲಾಯಿತಿ ಪ್ರಮಾಣದಲ್ಲಿ.

ಸಪ್ತಸಾಗರಿ ಗ್ರಾಮದಲ್ಲಿ ನಿನ್ನ ಕಮತಿಯನ್ನು ಕೊಲ್ಲಲಾಯಿತು. ಹುಜೂರಿನ ಕುದುರೆ ಸವಾರ ಸತ್ತನು. ಅವನ ಹೆಂಡತಿ ಮಕ್ಕಳ ಆಕ್ರಂದನ ಕಂಡು ಅವನನ್ನು ಸಲಹಲು ಮಾರಗ್ರಾಮದ ನಾಯಕಿಯನ್ನು ನೀಡಲಾಯಿತು, ಹಕ್ಕು ನೀಡಿದೆ.

ದೇಶದಲ್ಲಿ ಫಸಲು ಇಲ್ಲದಿದ್ದಾಗ ಸೈನ್ಯವು ಸನಿಹದಲ್ಲಿ ತಳವೂರಿತು. ದೇಶದಲ್ಲಿ ಹಾದು ಹೋಯಿತು. ಅದರಿಂದ ಸೈನ್ಯದ ತುಳಿತಕ್ಕೆ ಒಳಗಾಗಬೇಕಾಯಿತು. ಶತ್ರುಗಳ ಉಪದ್ರವದಿಂದ ಪ್ರದೇಶ ಹಾಳಾಯಿತು. ಆಗ ಪ್ರಜೆಗಳನ್ನು ಸಮಾಧಾನಗೊಳಿಸಿ, ಖಂಡಣಿಯನ್ನು ಗೊತ್ತು ಮಾಡಿದರು. ನಿನ್ನ ಮೇಲೆ ದಯೆ ತೋರಿದರು. ಗ್ರಾಮದ ಕಸಬಾದರ ಚಾವರೆ ಹೊನ್ನು ೨೮ ಮತ್ತು ಗ್ರಾಮವನ್ನು ಸರಿಪಡಿಸಿದರು. ಪ್ರದೇಶದ ಕಿರ್ದಿಯನ್ನು ಸರಿಪಡಿಸುವುದು.

ಈ ರೀತಿಯಲ್ಲಿ ಮುಗಳಖೋಡ ಗ್ರಾಮ ಮತ್ತು ಪ್ರತಿ ಚಾವರಿಗೆ ೨೫ ಹೊನ್ನು, ಕಸಬೆಯ ನಾಯಕತ್ವ ಮತ್ತು ಸಪ್ತಸಾಗರ ನೀಡಿ ಬಡತಿಯನ್ನು ಕೊಟ್ಟಿರು. ನೀವೂ, ನಿಮ್ಮ ಮುಂದಿನ ಪೀಳಿಗೆಯವರು ತಿಂದುಂಡು ಸುಖವಾಗಿರಬೇಕು. ಯಾವುದೇ ಬಗೆಯ ಶಂಕೆ ಬೇಡ. ನೀವು ಮತ್ತು ಮುಗಿಗೌಡನು ಅರ್ಜಿ ಬರೆದು ಕಳಿಸಿದ್ದೇನೆಂದರೆ, ಶಿವಾಜಿಯ ಉಪದ್ರವದಿಂದ ನಾಡಿನ ಜನರು ಧೈರ್ಯ ತುಂಬಿದಿರಿ. ನೀವು ನಾವು ಸೇರಿ ಶತ್ರುಗಳನ್ನು ಹೊಡೆದು ಮುನ್ನುಗ್ಗೋಣ. ನಿಮ್ಮ ಬಾಬತ್ತಿನಲ್ಲಿ ಹುಜೂರು ಬರೆದು ನಿಮಗೆ ಆಶ್ರಯ, ಪ್ರತಿ ಊರಿನ ಇನಾಮು, ಚಾವರ ಕಾಲು ಪ್ರಮಾಣದಲ್ಲಿ ನೀಡಿದೆ. ಅದರಂತೆ ಹಕ್ಕುಪತ್ರ ಪಡೆಯಬೇಕು. ವಂಶಪಾರಂಪರ್ಯ ಮುನ್ನಡೆಸಿಕೊಂಡು ಹೋಗಬೇಕು. ನಕಲು ಬರೆದುಕೊಂಡು ಮರಳಿಕೊಡಬೇಕು. ಆಕ್ಷೇಪ ಎತ್ತಬಾರದು. ಹುಜೂರ ಮುದ್ರೆ.

(ಗೋಲು ಮುದ್ರೆ) ರುಜು ಸುರನಿನೀಸ

ದಫ್ತರ ರುಜು

ಪೇಶವೆ

ತಾರೀಕ ೨೧ ಜಮಾರಿಲಾಖರ ಮಾಹೇ ಜಮಾದಿಲಾಖರ

ಸುರು ಸೂದ

೪೧

ಶಕೆ ೧೫೮೪ ಭಾದ್ರಪದ ಪು ೧
ಇ.ಸ. ೧೬೬೨ ಅಗಸ್ಟ ೪

(ಮುದ್ರೆ ಫಾರ್ಸಿ ಅಷ್ಟಕೋನ) (ಅ.ಕೋನಿ ಮುದ್ರೆ+ ೪ಪ್ರ ಸನ್)
ಬೆ. ಕರಾರುಪತ್ರ ಮಿಯಾ ಅಜಮ ಆಕರಮ ಮಿಯಾ ಅಬ್ದುಲ ಕಾಸೀಮ
ರುಜು ಫೌಜದಾರ ಮಾಹಾಲಿನಿ ಮಹಾಯೆ ಮತ್ತು ಮಾ। ಸೋಮಾಜಿ ವಿಠ್ಠಲ
ಸುರನಿಸ್ ಹವಾಲ್ದಾರ ಮತ್ತು ಕಾರಕೂನ ಪಾ। ತೇರದಾಳ ತಾ। ಕೃಷ್ಣಗೌಡ

ಪರ್ಜಂದ ಜಖಗೌಡ ದೇಸಾಯಿ ಸಾ। ಮಜಕೂರ ಬಿದಾನದ ಸುರಸನ ಸಲಾಸ ಅಥಣಿ ಪೇಟೆಗೆ ಬಂದು ಶೇಖ ಅಜಮ ಶೇಖ ಸಿಬಗದುಲ್ಲಾ ಹವಾಲ್ದಾರ ಮತ್ತು ಮಾ। ವೆಂಕೋಜಿ ಪಂಡಿತ ಮಜಮುದಾರ ಪೇಠ ಇವರ ಸಲಹೆಯಂತೆ ನಿನ್ನ ಹಿತಕ್ಕಾಗಿ ನಮ್ಮ ವಿಷಯವನ್ನು ಹೇಳಿದ್ದೇನೆಂದರೆ– ಪ್ರತಿವರ್ಷ ಸಾಹೇಬರಿಗೆ ಮಜಕೂರು ಮನವರಿಕೆಯಾದ ಬಳಿಕ ಸಾಹೇಬರು ನಮ್ಮ ಮೇಲೆ ಕೃಪಾದೃಷ್ಟಿ ಬೀರಿ ಕೌಲು ನೀಡಿದರು. ಮಹಲಿನ ಒಟ್ಟೂ ಅಹವಾಲನ್ನು ಫೌಜದಾರ ಮತ್ತು ಹವಾಲ್ದಾರರು ದಾಖಲಿಸಬೇಕು. ಅದೇ ತನ್ನ ಹುದ್ದೆ ಎಂದು ಭಾವಿಸಿ, ಅವರು ನೀಡಿದ ಕೌಲು ತನ್ನದೆಂದು ಭಾವಿಸಿ, ಅದರಂತೆ ನಡೆದುಕೊಳ್ಳಬೇಕು ಎಂದು ಕೌಲುನೀಡಿದ ಬಳಿಕ ಸಾಹೇಬರು ನಮ್ಮ ಮೇಲೆ ಕೃಪಾದೃಷ್ಟಿ ಬೀರಿ ಕೌಲು ನೀಡಿದರು. ಮಹಲಿನ ಒಟ್ಟು ಅಹವಾಲನ್ನು ಫೌಜದಾರ ಮತ್ತು ಹವಾಲ್ದಾರರು ದಾಖಲಿಸಬೇಕು. ಅದೇ ತನ್ನ ಹುದ್ದೆ ಎಂದು ಭಾವಿಸಿ ಅವರು ನೀಡಿದ ಕೌಲು ತನ್ನದೆಂದು ಭಾವಿಸಿ, ಅದರಂತೆ ನಡೆದುಕೊಳ್ಳಬೇಕು ಎಂದು ಕೌಲು ನೀಡಿದ ಬಳಿಕ ಸಾಹೇಬರ ಕೌಲನ್ನು ಶಿರಸಾ ವಹಿಸಿ, ಬಡ್ತಿ ಪಡೆದು ಮೊದಲಿನ ಒಟ್ಟೂ ಅಧಿಕಾರ ಮತ್ತು ಸೇರಿಕಾರನ ಅಹವಾಲು ಒಂದೊಂದಾಗಿ ಅರ್ಜಿ ಮಾಡಿದ ನಂತರ ಸೇರಿಕಾರನ ಅರ್ಜಿಯನ್ನು ಸ್ವೀಕರಿಸಲಾಯಿತು. ಬಳಿಕ ಫರ್ಮಾನು ಹೊರಡಿಸಿದರು. ಪ್ರದೇಶದ ಖಂಡಣಿಯನ್ನು ವಸೂಲಿ ಮಾಡಿ ಹಣವನ್ನು ಜಮೆ ಮಾಡಿ ತಿಳಿಸಬೇಕು. ಒಂದೇ ಕಲಮಿನ ತನ್ನ ಅಹವಾಲು ನೀಡಿದನು. ಅಫಜಲಖಾನ ಸಾಹೇಬಮಾಜಿ ಸೇರಿಕಾರನ ಮೇಲೆ (ಸರಕಾರದ ಧಾನ್ಯ ವಸೂಲಿ ಮಾಡುವ ಅಧಿಕಾರಿ) ಕೃಪಾದೃಷ್ಟಿ ಬೀರಿದ್ದಾನೆ. ಅವನಿಗೆ ಈ ಕೆಳಗಿನಂತೆ ಹಕ್ಕು ನೀಡಿದ್ದಾನೆ.

ಮುಗಳಖೋಡ ಇನಾಮಗ್ರಾಮ ನಾಯಿಕತ್ವ ಕಸಬಾ ಮತ್ತು ಸಪ್ತಸಾಗರ ಇನಾಮ ಪಟೇಲನಿಗೆ ನೀಡುವುದು, ಸೈನ್ಯದ ಸಹಾಯ, ಪ್ರತಿ ಊರಿನ ಭೂಮಿ ಚಾವರ ಒಂದು ಕಾಲು %

ಚಾವರಾನಾ... ಪ್ರತಿ ಚಾವರೆಯ ಹೊನ್ನು ೭ರ ಲಗ

ಈ ರೀತಿ ವ್ಯವಸ್ಥೆ ಮಾಡಲಾಗಿದೆ. ಸದರಿ ಕೌಲನ್ನು ಊರ್ಜಿತಗೊಳಿಸಿ ಸೇರಿಕಾರನಿಗೆ ಬಡ್ತಿ ನೀಡಬೇಕೆಂದು ನಾವು ಹೇಳಿದ್ದರಿಂದ ಫೌಜದಾರ ಕಾರಕೂನರು ಒಪ್ಪಿ ಕೌಲು ಬರೆದುಕೊಟ್ಟರು. ಅದರಿಂದ ಸೇರಿಕಾರನಿಗೆ ಅಧಿಕಾರ ಪ್ರಾಪ್ತವಾಗಿ ಪಾ। ಮಜಕೂರಿನ ಜಮಾಬಂದಿ ಮಾಡಿಕೊಟ್ಟನು. ಅದರಂತೆ ಫೌಜದಾರ ಮತ್ತು ಹವಾಲ್ದಾರ ಸದರಿಯಂತೆ ಕರಾರು ತರುವುದಾಗಿ ಹೇಳಿ ಹುಜೂರ ಬಳಿಗೆ ಹೋಗಿ ಕರಾರು ತರದೇ ಮರಳಿ ಬಂದು ಬಂದೇ ಕಮಿನಾನಿಗೆ ಹೇಳಿದ್ದೇನೆಂದರೆ, ಸಾಹೇಬರ ಅನುಮತಿ ಇದೆ. ನೀವು ಹುಜೂರ ಸಾಹೇಬರ ಚಾಕರಿ ಸೇರಿಕೊಳ್ಳಬೇಕೆಂದು ಆಜ್ಞೆ ಹೊರಡಿಸಿದರು. ಹುಜೂರ ಸಾಹೇಬರ ಬಳಿಗೆ ಸೇರಿಕೊಳ್ಳು ಉಪಾಯ ಮಾಡುವುದಾಗಿ ಕಮಿನಾನಿಗೆ ಹೇಳಿ ಬಳಿಗೆ ಹೋಗಿ ಸೇವೆ ಮಾಡಲು ತಿಳಿಸುತ್ತಿದ್ದಾರೆ. ಸಾಹೇಬರ ಕೃಪಾದೃಷ್ಟಿ ದೊಡ್ಡದು ಅವರು ಮೆರಬಾನರಾಗಿ ಬಡ್ತಿಯನ್ನು ನೀಡಬಹುದು. ಆದರೆ ಆಕಸ್ಮಿಕವಾಗಿ ದರೆಗೌಡನು ಕುದುರೆ ಸವಾರನೊಂದಿಗೆ ಬಂದಿರುವುದು ಕಂಡು ನನಗೆ ಸಂಶಯ ಬಂತು. ನಾವು ಹುಜೂರರನ್ನು ಭೇಟಿಯಾಗದೆ ಮಹಾಲ ತೊರೆದು ಪಲಾಯನ ಮಾಡಿದೆವು. ಅದೂ ಅಲ್ಲದೆ ಸಮಯ ಕಡಿಮೆ ಇರುವುದರಿಂದ ಸೇರಿಕರನ ಅನುಮತಿಗಾಗಿ ನಮ್ಮ ಇನಾಮ ಊರಿನ ಹಣ, ಕಮತಿಯ ಹಣ, ಕಂದಾಯ, ಧಾನ್ಯದ ನೆಲಮಾಳಿಗೆ, ಜಾನಬಾವಿ ಜನರ ದನಕರು ಎಲ್ಲ ಕಡಿದುಕೊಂಡರು. ಕಮಿನನಂತೂ ಹೈರಾಣಾಗಿ ಪ್ರದೇಶದಲ್ಲಿ ಸುತ್ತಾಡುತ್ತಿದ್ದ. ಪ್ರತಿಸಲ ಶೇಖ ಅಜಮ ಸಿಬಗದಲಾ ಹವಾಲ್ದಾರ, ವೆಂಕಾಜಿ ಪಂಡಿತ ಮುಜುಮದಾರ, ಅಥಣಿ ಪೇಟೆಯ ಕಮಿನಾನ ತಪವಾಸಿ ಪಡೆದು ನಮ್ಮನ್ನು ಕರೆಸಿ ಹೇಳಿದ್ದೇನೆಂದರೆ– ಹಜರತ ಸಾಹೇಬರ ನಗರಕ್ಕೆ ಹೋಗುವಾಗ ಪೇಟೆಯಲ್ಲಿ ಇಳಿದು ಮೌಖಿಕವಾಗಿ ಹೇಳಿದ್ದಾರೆ. ಕೃಷ್ಣಗೌಡನು ವಸೂಲಿಯ ಅಧಿಕಾರಿಯಾಗಿದ್ದಾನೆ. ನಮ್ಮ ಕರಾರಿಗೆ ಯಾವ ಅಡಚಣೆಯಿಲ್ಲ. ಅದಕ್ಕೆ ಅನುಮತಿ ದೊರಕಿಸಿ ಧೈರ್ಯ ನೀಡಬೇಕು. ವಿಷಯ ತಿಳಿದುಕೊಂಡು ಬಡ್ತಿ ನೀಡಬೇಕು. ಹಾಗೆಯೇ ನಿನ್ನ ಸೇವೆಯ ಬಗೆಗೆ ಹಜರತ ಸಾಹೇಬರಿಗೆ ಹೇಳಲಾಗಿದೆ. ಫಾಜಿಲ ಅಫಜಲಖಾನನ ಮುದ್ದತಿಗೆ ಹಳೆಯ ಹಕ್ಕಿನ ಹೊರತು ಯೋಗ್ಯ ಇನಾಮ ಊರು ಎಂದರೆ ಮುಗಳಖೋಡ, ಚಾವರಾನ ದರ ಹೊನ್ನು ೨ರ ಮತ್ತು ಕಸಬಾ, ಸಪ್ತಸಗರದ ನಾಯಕತ್ವ, ಊರು ಊರಿನ ಗುತ್ತಿಗೆದಾರರಿಗೆ ಆಸರೆ, ಸೈನ್ಯದ ಪ್ರತಿ ಊರಿಗೆ ಭೂಮಿ ಚಾವರ ./. ಇಷ್ಟು ಹಕ್ಕು ನೀಡಲಾಗಿದೆ. ಇದಕ್ಕೆ ಸಾಹೇಬರು ಕೃಪೆ ತೋರಿ ಬಡ್ತಿ

ನೀಡಿದ್ದಾರೆ. ಸಾಹೇಬರ ಚಾಕರಿಗಾಗಿ ಅರ್ಜಿ ಮಾಡಿದಾಗ ಸಾಹೇಬರು ಆಜ್ಞೆ ಮಾಡಿದರು. ಮುಗಳಖೋಡಿಗೆ ಬದಲಾಗಿ ಮತ್ತೂ ಒಂದು ಊರು ಇನಾಮು ನೀಡಿ, ಚಾವರಿಯಂತೆ ವ್ಯವಸ್ಥೆ ಮಾಡಿ, ಅನುಮತಿ ನೀಡಿ ಕುದುರೆ ಏರಿ ಹೊರಟು ಹೋದರು. ಸಾಹೇಬರ ಕರಾರಿಗೆ ತಕರಾರು ಬರಬಾರದು. ನನಗೆ ನಂಬುಕೆಯಿದೆ. ಸದ್ಯ ಮಜಕೂರದಿಂದ ಮಿಯಾ ಅಬ್ದುಲ್ ಕಾಸಿಮ ಫೌಜದಾರ ಮತ್ತು ಸೋಮಾಜಿ ವಿಟಲ ಹವಾಲ್ದಾರ ಮತ್ತು ಕಾರಕೂನ ಕಳಿಸುತ್ತಿದ್ದೇವೆ. ಪಂಡಿತ ಮಾಮಲೆ ಸಾಹೇಬರ ಪಾದದ ಬಳಿಗೆ ಬಡತಿಯ ಹಂತದವರೆಗೆ ಹೋದಾಗ ಅಲ್ಲಿ ಸಾಹೇಬರು ಆಜ್ಞೆ ನೀಡಿದ್ದಾರೆ. ಅಥಣಿಯ ಹವಾಲ್ದಾರ ಶೇಖ ಅಜಮಾದ ದೇಸಾಯಿಯ ವಿಷಯವನ್ನು ಹೇಳಿದ್ದಾರೆ. ನೀವು ಹೋಗಿ ಶೇಖ ಮಾನುತಿಯ ಸಹಾಯದಿಂದ ದೇಸಾಯಿಯ ಮಫಿರಗ ಮಾಡಬೇಕೆಂದು ಆಜ್ಞೆ ಮಾಡಿದ್ದಾರೆ. ಅವನೊಂದಿಗೆ ಸಂಧಾನ ಮಾಡಿಕೊಳ್ಳಬೇಕೆಂದು ಬರೆದಿದ್ದರು. ಅದೂ ಇರಲಿಲ್ಲ ಎಂದು ಹುಜೂರರು ಫೌಜದಾರ ಮತ್ತು ಹವಾಲ್ದಾರರಿಗೆ ಹುಕುಂ ಮಾಡಿದನೆಂದು, ಅವರಿಬ್ಬರೂ ನಮ್ಮ ಹತ್ತಿರ ಬಂದು ಬೇಡಿಕೊಂಡಾಗ ಹಜರತ ಸಾಹೇಬರ ಅನುಮತಿ ಹೇಗಿದೆಯೋ ಹಾಗೆ- ಮುಗಳಖೋಡಿನ ಬದಲಿಗೆ ಒಂದು ಗ್ರಾಮ ಇನಾಮ, ಚಾವರಾನ ಹಕ್ಕು ತಿದ್ದುಪಡಿ ಮಾಡಿ, ನಿಮ್ಮ ಮಾತಿನ ಹೊರಗೆ ನಾವಿಲ್ಲ ಎಂದು ನಮಗೆ ಭರವಸೆ ನೀಡಿದ್ದನು. ಬೇರೆ ಬೇರೆ ತಂತ್ರದಿಂದ ದೇಸಾಯಿಯ ಮನವೊಲಿಸಿ ಭರ್ತಿ ಮಾಡಬೇಕೆಂದು ಫೌಜದಾರ ಒಪ್ಪಿದರು. ಸೋಮಾಜಿ ಪಂಡಿತ ಹವಾಲ್ದಾರ ಮತ್ತು ಕಾರಕೂನರು ಹೇಳಿದರು. ಏನೂ ಚಿಂತೆ ಮಾಡಬಾರದಾಗಿ ಹಜರತ ಸಾಹೇಬರು ಹೇಳಿದ್ದಾರೆ. ಶೇಖ ಅಜಮನು ಪಂದ ಮತ್ತು ಸಖೀತ ನೀಡಿ ಮನ ಒಲಿಸಿದಾಗ ಶೇಖ ಒಪ್ಪಿದರು. ಸದರಿ ಹಕೀಕತನ್ನು ಫೌಜದಾರ, ಹವಾಲ್ದರರು ಸಾಹೇಬರ ಚಾಕರಿಯ ಕುರಿತು ಬರೆದು ನೀಡಿ, ಸಾಹೇಬರು ಕರಾರು ತಂದು, ಇನಾಮ ಗ್ರಾಮ, ಹೊಲ, ಚಾಕರರು ಮುಂತಾದ ಹಕ್ಕನ್ನು ತಿದ್ದುಪಡಿ ಮಾಡಿಕೊಟ್ಟು ವ್ಯವಸ್ಥಿತವಾಗಿ ನೀಡಲಾಗಿದೆ.

ಇನಾಮ ಗ್ರಾಮ ಹಿಡಕಲ್ ಗ್ರಾಮ	ಚಾವರಾನ ಹಕ್ಕು ರಯೆತ
ಕುಲಬಾಬಾ ಕುಲಕಾನು ದೇಹ	ಪ್ರತಿ ಚಾವರಿಗೆ ಹೊನ್ನು ೧

ಈ ರೀತಿಯಲ್ಲಿ ಸಾಹೇಬರ ಕರಾರುಪತ್ರವನ್ನು ತಂದು ಕೊಡಲು ಮುಂದಾದರು. ಈ ಕೆಲಸಕ್ಕೆ ಶೇಖ ಅಜಮ, ಅಬ್ದುಲ್ ಕಾಸೀಮ ಫೌಜದಾರ ಮತ್ತು ಕಾರಕೂನ ಮತ್ತು ಸಿದ್ದಣ್ಣ ಭೂಪತಿ ದೇಸಾಯಿ ಪೇಠ ಅಥಣಿ- ಇವರೆಲ್ಲ ಸೇರಿ ಚಾಕರಿಸೇವೆಗೆ ಒಪ್ಪಿಸಿದರು. ಬೇರಿಜು ಹೊನ್ನು ೧೦,೦೦೦ರ ಕಾಣಿಕೆಗೆ ಸೇರಿಕಾರನ ಒಪ್ಪಿಗೆಯಿದೆ.

ಮುಜರಾ ದರಸಾಲ

ಸನ್ ಇಸನೆ ಸಿತ್ಯೆನ ಅಲಘದಲ್ಲಿ ಕಿಮಿನ ಪಲಾಯನ ಮಾಡಿ ಹೊರಗೆ ಬಂದಾಗ ಸಾಹೇಬರು ಸಂಪತ್ತು ಸಂಗ್ರಹಿಸಿ ತಮ್ಮ ಹಕ್ಕು, ಇನಾಮ, ಗ್ರಾಮ, ಗ್ರಾಮ ಸಂರಕ್ಷಣೆ ಕಿಮತದ ಹಣ, ಕಂದಾಯ, ಪಟಿಕಘೋಡಿ ಗ್ರಾಮಗಳು ಕಡಬಾ, ಹುಲ್ಲು ವಸೂಲಿ, ಬಾನಿಬಜನರ ಠೇವನ್ನು ಪಡೆಯಲಾಗಿದೆ. ಲೆಕ್ಕದಂತೆ ಮುಜರಾ ಹೊನ್ನು ೨೨೦೦ ರ

ಸಾಲಸುಪ್ತ

೧೫೬೦ ಸನ್ ಸಾಲ ಸಿತ್ಯೆನ

೧೫೬೦ ಅಬಾನ ಸಿತ್ಯೆನ

೧೫೬೦ ಖಿಸಮ ಸಿತ್ಯೆನ

೧೫೬೦ ಸೀತ ಸಿತ್ಯೆನ

೧೫೬೦ ಸನ್‌ಸಬಾ ಸಿತ್ಯೆನ

೭೮೦೦

ಈ ರೀತಿ ಹಕ್ಕಿನ ಮೇಲೆ ಗಮನವಿರಿಸಿ, ಪ್ರದೇಶದ ಕಿರ್ದಿಯನ್ನು ಅಚ್ಚುಕಟ್ಟಾಗಿರಿಸಿ, ಸಾಹೇಬರ ಸೇವೆಗೆ ಸದಾ ಸಿದ್ಧನಾಗಿದ್ದೇನೆ ಎಂದು ಒಪ್ಪಿಗೆಯ ಪತ್ರವನ್ನು ನೀಡಿ ಕರಾರನ್ನು ಸಂಭಾಳಿಸಬೇಕು ಎಂದು ಅಥಣಿಯ ಸ್ಥಳದ ವಿದ್ಯಮಾನದಿಂದ ತಮ್ಮ ಅಹವಾಲನ್ನು ದೃಢೀಕರಿಸಿಕೊಂಡು ಇಲತಮೇಶ ದೇಸಾಯಿಯ ಖಾತ್ರಿಗೆ ತಂದು ಶೇಖ ಅಜಮಶೇಖ ಸಿಬಗದುಲಾ ಹವಾಲ್ದಾರ ಮತ್ತು ಮಾ। ವೆಂಕೋಜಿ ಪಂಡಿತ ಮಜಮದಾರ ಮತ್ತು ಸಿದಗೌಡ ಭೂಪತಿ ದೇಸಾಯಿ ಪೀಠ ಅಥಣಿಯಿಂದ ಹುಜೂರರ ಅನುಮತಿ ಪಡೆದರು. ನಿಮಗೆ ಇನಾಮ ಊರು, ಕಮತ ಕಸಬು, ಗ್ರಾಮಪಟ್ಟಿ, ಸೈನ್ಯದ ಹಕ್ಕು ನೀಡಲಾಯಿತು. ನಿನಗೆ ಹಜರತ ಸಾಹೇಬರು ನೀಡಿದ ಕಾಣಿಕೆ ಹೀಗಿದೆ.

ಹಿಡಕಲ್ ಇನಾಮಗ್ರಾಮ	ಚಾಪರಾನ ದರ ಚಾವರೆ
ಕುಲಬಾಬ ಕುಲ್ ಕಾನೂ	ನಿ। ಪ್ರಜೆಗಳು ಒಂದು ಹೊನ್ನು ೧

ಈ ರೀತಿ ವ್ಯವಸ್ಥೆ ಮಾಡಲಾಗಿದೆ. ಇದನ್ನು ಖಾತ್ರಿಪಡಿಸಿಕೊಂಡು ಸದರಿ ಹಕ್ಕನ್ನು, ಇನಾಮ ಊರನ್ನು ಚಾವರಾಸಾವನ್ನು ಉಪಭೋಗಿಸಬೇಕು. ಲೆಕ್ಕಾವನ್ನು ಸರಿಯಾಗಿ ಒಪ್ಪಿಸಬೇಕು. ಸಾಹೇಬರ ಚಾಕರಿಯನ್ನು ಮಾಡಿ ಏಳ್ಗೆಯನ್ನು ಪಡೆಯಬೇಕು. ಹಾಜಿ ಸಾಹೇಬರು ಗುಪ್ಪಿ ನೀಡಿದ ಬಳಿಕ ರಕಮಿನ ಬೇರಿಜು ೧೦೦೦೦ ರಂ.ಹೊನ್ನು

ಮುಜರಾ ಪ್ರತಿವರ್ಷ ಸನ್ ಇಸನೇ ಸಿತ್ಯೆನ	ಸಾಲ ಸುಪ್ತ
ಅಲಫನಲ್ಲಿ ಅಮಾನತ ಮಾಡಿ	೧೫೬೦ ಸನ್ ಸಲಾಸ ಸಿತ್ಯೆನ
ಇನಾಮ ಗ್ರಾಮದ ಹಣ	೧೫೬೦ ಸನ್ ಅಬಾನ ಸಿತ್ಯೆನ
ಕಮತ, ಬಾಜೆ ಹಕ್ಕು ಮುತಾಲಿಕದಿಂದ	೧೫೬೦ ಸನ್ ಖಮಸ ಸಿತ್ಯೆನ
ಆಮೆಯಾಗಿದ್ದು ಬಾ ಲೆಕ್ಕದ ಮುಜರಾ	೧೫೬೦ ಸನ್ ಸೀತಾ ಸಿಬ್ಯೆನ
ಸೂದ ಹೊನ್ನು ೨೨೦೦ ರ	೧೫೬೦ ಸನ್ ಸಿತ್ಯೆನ
	--
	೭೮೦೦-೦೦

ಈ ರೀತಿ ತನ್ನ ಹಕ್ಕನ್ನು ಪಡೆದು, ಸದಯ ಸಂರಕ್ಷಣೆ ಮಾಡಿದರ ಬಗ್ಗೆ ನಿಗಾವಹಿಸಿ ಸುಖವಾಗಿರಬೇಕು. ಯಾವುದರ ಬಗೆಗೂ ಸಂಶಯ ಮಾಡಬಾರದು. ಖಾತ್ರಿಪಡಿಸಿಕೊಂಡು ನಿರ್ದಾಕ್ಷಿಣ್ಯವಾಗಿ ತನ್ನ ದೇಶಗತಿ ಆಡಳಿತವನ್ನು ನಿರ್ವಹಿಸುತ್ತ ಇರಬೇಕೆಂದು ನೀಡಿದ ಕರಾರು ರುಜು ಮುದ್ರೆ ತಾಜಾ ಕಲಮ ಸದ್ಯ ಸದರಿ ಇನಾಮ ಪಟ್ಟಿಯನ್ನು ನೀಡುವುದು ಈ ಮೂಲಕ ಸಾಧ್ಯವಿಲ್ಲ. ಸದರಿ ಮತ್ತು ಚಾವರಾನಾ ಮಿರಾನಿ ಮಾಡಿಕೊಡಲಾಗಿದೆ. ಇದನ್ನು ಪೀಳಿಗೆಯಿಂದ ಪೀಳಿಗೆಯವರೆಗೆ ಉಪಭೋಗಿಸಿ, ಸಾಹೇಬರ ಸೇವೆಯನ್ನು ಮಾಡಿ ಸುಖವಾಗಿರಬೆಕು. ಸದರಿಯಂತೆ ಸಾಹೇಬರಿಂದ ಹಕ್ಕುಪತ್ರವನ್ನು ತಂದು ಕೊಟ್ಟು, ನಿಸ್ಸಂದೇಹವಾಗಿ ಸಾಹೇಬರ ಕೆಲಸ ಮಾಡುತ್ತ ಸುಖವಾಗಿರಬೇಕು ಎಂದು ನೀಡಿದ ಕರಾರು ರುಜು (ಫಾರ್ಸಿ ಅಷ್ಟಕೋನ ಮುದ್ರೆ)

ತಾರೀಕ ೨೯	ಮಾಹೇ ಜಿಲ್ಹೇಜ
ಜಿಲ್ಹೇಜ	ರುಜು (ಫಾರ್ಸಿ)

೪೨

ಶಕೆ ೧೫೮೪ ಭಾದ್ರಪದ ಶು ೧
ಇ.ಸ. ೧೬೬೨ ಅಗಸ್ಟ ೪

(ಮುದ್ರೆ ಮರಾಠಿ ಅಷ್ಟಕೋನದ್ದು)

ರುಜುಸುರ ನೀಸ ಆಜ ದಿವಾಣ ಠಾಣೆ ಪಾ। ತೇರದಾಳ, ತಾ ಮೊಕಾದಮಾನಿ ವ ರೈಯಾನಿ ಹಿಡಕಲ್ ಗಾಮ ಪಾ। ಮಜಕೂರು ಬಿದಾನಂದ ಕೆ ಸುಹುರಸನ್ ಸಲಾಸ ಸಿತೈನ ವ ಅಲಫ ಇನಾಮ ಕೃಷ್ಣೇಗೌಡ ಮಗ ಜಖಗೊಂಡಾ ದೇಸಾಯಿ ಪಾ। ಮಜಕೂರ ಸಬಬ್ ದೇಸಾಯಿಯು ದುಃಖದಿಂದ ಹೈರಾಣ ಆಗಿದ್ದಾನೆ. ಅವನನ್ನು ಸಮಾಧಾನಪಡಿಸಲು ಅಥಣಿ ಪೇಟೆಯ ಲಯಾ ಅಜಮ ಮಿಯಾ ಅಬ್ದುಲ್ ಕಾಸೀಮ ಫೌಜದಾರ ಮತ್ತು ಗೋಸಾವಿ ವಿಠಲ ಹವಾಲ್ದಾರ ಮತ್ತು ಕಾರಕೂನ ಇವರ ಮೂಲಕ ಸಮಾಧಾನ ಮಾಡಿ ಸಾಹೇಬರ ಚಾಕರಿಗೆ ಒಪ್ಪಿಗೆಯನ್ನು ಪಡೆದು ಕರಾರನ್ನು ಮಾಡಿದರು. ಇನಾಮ ಗ್ರಾಮ ಹಿಡಕಲ್, ಚಾವರಾನಾ ದರ ಚಾವರೆ, ರೈತ ಹೊನ್ನು ಒಂದು ೧ ಈ ರೀತಿಯಲ್ಲಿ ದೇಸಾಯಿಗೆ ಕರಾರು ಮಾಡಿಕೊಡಲಾಯಿತು. ಇದರಲ್ಲಿ ಇನಾಮ ಗ್ರಾಮದ ನಗದು ಕಂದಾಯ ಮತ್ತು ಉಳಿದ ಕಿರುಕುಳ ಸಾಮಾನು ತಾತ್ಕಾಲಿಕವಾಗಿ ನೀಡಲಾಗಿದೆ. ಈ ಹಕ್ಕನ್ನು ಮುಂದಿನ ಪೀಳಿಗೆಯಿಂದ ಪೀಳಿಗೆಗೆ ಇನಾಮ ಊರ್ಜಿತಗೊಳಿಸಲಾಗಿದೆ. ಪ್ರತಿ ವರ್ಷ ಇದನ್ನು ಮತ್ತೆ ನವೀಕರಿಸಿ ಇನಾಮು ಮುನ್ನಡೆಸಿಕೊಂಡು ಹೋಗುವದು. ನಕಲನ್ನು ಬರೆದುಕೊಂಡು ಅಸಲು ಪ್ರತಿಯನ್ನು ಮರಳಿ ನೀಡಬೇಕು. ಮೊಹರು

ತಾರೀಕ ೨೯ ಷಟ್ಕೋನ ಮುದ್ರೆ ಸೂದ

ಜಿಲ್ಹೇಜ ಮಾಹೇ ಜಿಲ್ಹೇಜ

ಶಕೆ ೧೫೮೪ ಭಾದ್ರಪದ ಶು ೧
ಇ.ಸ. ೧೬೬೪ ಅಗಸ್ಟ ೪

(ಅಷ್ಟಕೋನ ದರ್ಗಾ ೪ ಪ್ರ ಸನ್)

೧ ರುಜುಪುರು ಅಜದಿವಾಣ ಠಾಣೆ ಪಾ। ತೇರದಾಳ ತಾ। ಮೊಕಾದಮಾನಿ ರೈಯಾನಿ ನೀಸ್ ಕಸಬಾ ಮತ್ತು ಗ್ರಾಮ ಪಾ। ಮಜಕೂರ ಕಸಬೆ ಗ್ರಾಮಗಳು– ತಾ। ತೋರಸಾಲ ೧. ಸೇಗುಣಸಿ ೧. ತಮಷಡಿ ೧. ಮಾದಲ ಮೋಟೆ ೧. ಕೋಳಿಗುಡ್ಡ ೧. ಕಾಟಗುಪ್ಪ ೧. ದರೂರು ೧. ಇಂಗಳಗಾವ ೧. ಖೇಮಲಾಪುರ ೧. ಸಂಕದಕಟ್ಟಿ ೧. ಸಪ್ತಸಾಗರ ೧. ಸಿದಾಪುರ ೧. ಗುಂಡಿಗವಾಡ ೧. ರಬಕವಾ ೧. ತೀರ್ಥ ತಾ> ಮೊರ್ಡಿ– ೧. ಹಾರೋಗೆರಾ ೧. ರಸೂಲಪುರ ೧. ಖಂಡಕಾಲ ೧. ಮುಗಳಖೋಡ ೧. ಮೂಡಲಗಿ ೧. ಮಂಡಿಗನ ಹಾಳ ೧. ಗೋಲನಭಾವಿ ೧. ಪಾಲನಬಾವಿ ೧. ಇಟಗಿನಹಾಳ ೧. ಹಂದಿಗುಂದ ೧. ಹಳ್ಳೂರ ೧. ಯೆರಗೋಟೆ ೧. ಕಲನಲೆಪಿ ೧. ಬೆಕೋಡ ೧. ಸುಲ್ತಾನಪುರ

ಬಿದಾನಂದ ಸುರಪನ್ ಸಲಾಸ ಸಿತ್ತೈನ ವ ಅಲಫ ಬಾ। ಹಕ್ಕು ಕೃಷ್ಣಗೌಡನ ಮಗ ಜಖಗೌಡ ದೇಸಾಯಿ ಸಾ। ಮಜಕೂರ ದುಃಖದಿಂದ ಹೈರಾಣಾಗಿ ಕಂಗಾಲಾಗಿ ಹೋದ. ಅವನನ್ನು ಸಮಾಧಾನಪಡಿಸಲು ಅಥಣಿಯ ಸ್ಥಳದ ಮಿಯಾ ಅಜಮ ಮಿಯಾ ಅಬ್ದುಲ್ ಕಾಸೀಮ ಫೌಜದಾರ ಮತ್ತು ಗೋಮಾಜಿ ವಿಠಲ ಹವಾಲ್ದಾರ ಮತ್ತು ಕಾರಕೂನ ಅವರು ಹೋಗಿ ಶೇಖ ಅಜಮ ಶೇಖ ಶೇಬಗದುಲ್ಲಾ ಹವಾಲ್ದಾರ ಮತ್ತು ಕಾರಕೂನ ಪೇಟೆಯ ಮೂಲಕ ಸಮಾಧಾನ ಹೇಳಿ ಸಾಹೇಬರ ಚಾಕರಿಗೆ ಒಪ್ಪಿಗೆ ಪಡೆದು ಕರಾರು ಮಾಡಿದ್ದಾರೆ. ಅದು ಹೀಗಿದೆ. ಚವರಾನಾ ಇನಾಮ ಗ್ರಾಮ ಹಿಡಕಲ್ ರೈಯತ ದರ ಚಾವರೆ ೧ ಹೊನ್ನು ಉಳಿದ ಸರಂಜಾಮು ಗ್ರಾಮ ೧

ಈ ರೀತಿ ದೇಸಾಯಿಗೆ ಮಾಡಿದ ಕರಾರು ನೀಡಲಾಯಿತು. ಈ ಪೈಕಿ ಚಾವರಾನಾ ಕಸಬಾ ಗ್ರಾಮಗಳು ಖಾಲಪಾತ ರಯೆತ ನಿ. ದರ ಚಾವರೆ ಹೊನ್ನು ೧ ಪ್ರಮಾಣದಂತೆ ವಂಶಪಾರಂಪರ್ಯ ಉಪಭೋಗಿಸಬೇಕು. ನಕಲು ಬರೆದುಕೊಂಡು, ಅಸಲು ದೇಸಾಯಿಗೆ ಮರಳಿಸಬೇಕು. (ಷಟ್ಕೋನ ಫಾರ್ಸಿ ಮುದ್ರೆ)

ತಾರೀಕ ೨೯ ಮಾಹೇ ಜಿಲ್ಹೇಜ

ಶ. ೧೫೮, ಅಶ್ವೀನ ಶು.೧
ಇ. ೧೬೫೯ ಸಪ್ಟೆ ೭

(ಗೋಲು ಮೊಹರು ಫಾರ್ಸಿ ಅಫಜಲಖಾನ)

(ಗೋಲು ಮೊಹರು ಫಾರ್ಸಿ) ಅಜ ರಕ್ತಖಾಣೆ ಖುದಾಯೆವಂದ ಖಾನ ಅಲಿಶಾನ

ಖಾನ ಅಫಜಲಖಾನ ಮುಹಮ್ಮದ ಶಾಹಿ ಖುಲಿ ದಯಾಮು

ದೌಲತಹು ಬಜಾನೆಬ ಕಾರಕೂನ ಪಾ। ತೀರದಳ ಸುರಫೈನ ಸಿತ್ಯೆನ ಅಲಫ ಪಾ।ಮಾ।ನ ಪ್ರದೇಶಗಳಿಗೆ ಶಿವಾಜಿ ಉಪದ್ರವ ನೀಡುತ್ತಿದ್ದಾನೆ. ಅವನಿಗೆ ಕೃಷ್ಣಗೌಡ ದೇಸಾಯಿ ಸಾಕಷ್ಟು ಶ್ರಮವಹಿಸಿ ಕುದುರೆ ಸವಾರರನ್ನು ಕಳಿಸಿ ವೈರಿಗಳನ್ನು ಸುತ್ತುಗಟ್ಟಿದನು. ಅವರಿಂದ ದೇಸಾಯಿ ಅನಗ್ರಹಗೊಂಡು ನೀಡಿದನು. ವಿವರ ಹೀಗಿದೆ.

ಇನಾಮಗ್ರಾಮ ಮುಗಳಖೋಡ, ಉಳಿದ ಊರು ೧, ಚಾವರಾನಾ, ತಾ। ಪ್ರತಿ ಪ್ರದೇಶಗಳಿಗೆ ಚಾವರಾನ ಹೊನ್ನು ೨ ಪ್ರಮಾಣದಲ್ಲಿ ಮಾಡಿಕೊಟ್ಟನು.

ನಾಯಕಿ ಗ್ರಾಮ ೨ ಕಸಬೇ ತೇರದಾಳ, ಮಾಜೆ(ಗ್ರಾಮ) ಸಪ್ತಸಾಗರ. ಪ್ರತಿ ಊರಿಗೆ ಭೂಮಿ ಚವರ ೧. ಅದರ ಹೊರತು ಚಾಕರರು, ಫಜಕಿ ಪಡೆದ ಬಲೂತ.

ಈ ರೀತಿಯಲ್ಲಿ ಹಕ್ಕನ್ನು ನ್ಯಾಯಯುತವಾಗಿ ನೀಡಲಾಗಿದೆ. ವಂಶಪಾರಂಪರ್ಯ ಉಪಭೋಗಿಸಬೇಕು. ನಕಲು ಬರೆದುಕೊಂಡು ಅಸಲು ಪ್ರತಿ ಮರಳಿ ನೀಡಬೇಕು. ಪಾ। ಹುಜೂರ ತಾ ಶಾಮಲಿಕ ಹೋರಿ ಬದಾಮು ಮೊಹರು

ತಾರೀಕ ೨೯ ಜಿಲ್ಹೇಜ

ಶ. ೧೫೮೧, ಅಶ್ವೀನ ಶು.೧
ಇ. ೧೬೫೯ ಸಪ್ಟೆಂಬರ ೭

ತಾಲಿಕ

ಅಜರಖ್ತುಖಾನ ಖುದಾಯೆವಂದ ಖಾನೆ ಆಜಮ ಅಬಜಲಖಾನ ಸಾಹೇಬ ಖಲಿ ದಯಾಮು ದೌಲತಹು ತಾ। ಖಜಾನೆಬ್ ಕಾರಕೂನ ಪಾ। ತೇರದಾಳ ಬಿದಾನದ ಕಿ ಹರ್ಚ್ ಸು। ಸಿತ್ಯೆನ ಅಲಫ ದರದಿಲ ಯಾದಗೌಡನ ಮಗ ಜಖಗೌಡ ಸರನಾಯಿಕ ಗ್ರಾಮ ೩೦ ಪಾ। ಮಜಕೂರ ಇವನಿಗೆ ಹೊಸ ಹಕ್ಕನ್ನು ನ್ಯಾಯಬದ್ಧವಾಗಿ ನೀಡಿದೆ. ಸೀಮೆಯಲ್ಲಿ ಗೊಂದಲವಿದೆ. ಪ್ರದೇಶದಲ್ಲಿ ಬಿತ್ತಿಬೆಳೆಯಲೆಂದು ಸರನಾಯಿಕನಿಗೆ ಹಕ್ಕು ನೀಡಲಾಗಿದೆ.

ಹಕ್ಕು ನಾಡಗೌಡ ಮೂಲಕ ನೀಡಿದೆ. ಅಧಿಕಾರ ಪತ್ರ ಬೇರಿಜು.

ಇನಾಮತಿ ಕಮತ ಜಮೀನು ಚಾವರ ೧ರ ಬ+ ಛೆತ್ರಿ ಕಮತ ಚಾವರ॥ ಆಪ್ರತಗಿರಿ ಕಮತ ಚಾವರ ॥–

ದಫತೆ ದರ ಪ್ರತಿಊರಿಗೆ – ೧ ರಾಬಿತೆ ಚಾಕರರ ನಫರ, ೧ ಪಡದ, ೧ಫಸಿಕಿ, ೧ ಬಯಾತೆ=೪

ಈ ರೀತಿ ಸರನಾಯಿಕ ಪಾ। ಮಾರ ಇವನಿಗೆ ನ್ಯಾಯಬದ್ಧ ಹಕ್ಕನ್ನು ನೀಡಲಾಗಿದೆ. ಈ ಮೂಲಕ ರಾಜ್ಯ ಕಾರಭಾರ ನಡೆಸುವುದು. ಪ್ರತಿ ಊರಿನ ಬಿತ್ತನೆ, ಬೆಳೆ, ಸಿಸ್ತಪಟ್ಟಿ, ಖಂಡಣಿ, ಸಾದಿಲ್ವಾರ, ಊರ ಆಡಳಿತ ಇದರ ಬಗೆಗೆ ಕಾಳಜಿ ತೆಗೆದು ಕೊಳ್ಳುತ್ತಿರಬೇಕು. ಸದರಿ ಹಕ್ಕನ್ನು ನ್ಯಾಯಬದ್ಧವಾಗಿ ಸರನಾಯಿಕ ಅವನಿಗೆ ಊರ್ಜಿತಗೊಳಿಸಿಕೊಡುವುದು. ವಂಶಪಾರಂಪರ್ಯ ಅದನ್ನು ಭೋಗಿಸುವುದು. ಪತ್ರದ ನಕಲು ಬರೆದುಕೊಂಡು ಅಸಲನ್ನು ಸರನಾಯಿಕನಿಗೆ ಮರಳಿ ನೀಡುವುದು. ಇದರ ಬಗೆಗೆ ಆಕ್ಷೇಪ ಎತ್ತಬಾರದು.

ತಾರೀಕ ೨೯ ಮಾಹೇ ಜಿಲ್ಹೇಜ

--

ಶ. ೧೫೮೧, ಅಶ್ವೀನ ಶು.೧
ಇ. ೧೬೫೯ ಸಪ್ಟೆ ೭

(ಸೋಲು ಮೊಹರು ಫಾರ್ಸಿ ಅಫಜಲಖಾನ)

(ಸೋಲ ಮೊಹರ ಫಾರ್ಸಿ) ಅಜರಖ್ತುಖಾನೆ ಖುದಾಯೆ।ವಂದ ಅಲಿಶಾನ ಖಾನ ಅಫಜಲಖಾನ ಮಾ।ಶಾಹಿ ತುಲಿದಯಾಮ. ದೌಲತಹು ಬಜಾನೆಬ ಕಾರಕೂನರು ಪಾ। ತೇರದಾಳ ಸುರಸನ್ ಸಿತೈನ ಅಲಫ ಪಾ। ಮಾರನ ಪ್ರದೇಶದ ಸೀಮೆಯಲ್ಲಿ ಗದ್ದಲ ಮತ್ತು ಬಿತ್ತನೆ ನೀರಾವರಿಯ ಬಗ್ಗೆ ಯಾದಗೌಡ ಬಿನ್ ಜಖಗೌಡ ಸರನಾಯಕ ಪಾ। ಮಾರನಿಗೆ ನ್ಯಾಯಯುತ ಹಕ್ಕು ಮಾಡಿಕೊಡಲಾಗಿದೆ.

ವತನದ ಹಕ್ಕು ಬರನಿಸಬತ ನಾಡಗೌಡ	ಇನಾಮಭೂಮಿ
ದಫತೆ ಪ್ರತಿ ಊರಿಗೆ ದುಡಿಯುವ	–೧೧ ಥೆತ್ರಿಬಾ
ಚಾರಕರು ಪಡದ ೧	–೧೧ ಅಶ್ವದಗೀರ ಬಾ

	ಚಾವರ ೧
	ಬಲೂತೆ ೧

ಈ ರೀತಿಯಲ್ಲಿ ಸರನಾಯಿಕನಿಗೆ ಗ್ರಾಮಗಳನ್ನು ನ್ಯಾಯಯುತವಾಗಿ ನೀಡಿದೆ. ಇದರಿಂದ ಉತ್ಪನ ಪಡೆ ಸದರಿ ಹಕ್ಕನ್ನು ಸರನಾಯಿಕನಿಗೆ ನ್ಯಾಯಬದ್ಧವಾಗಿ ನೀಡಬೇಕು. ನಕಲು ಬರೆದುಕೊಂಡು ಅಸಲು ಮರಳಿಸಬೇಕು.ಪಾ। ಹುಜೂರ ತಾ। ಶಾಮಲಿಕ ಗೋರಿ (ಬದಾಮಿ ಮೊಹರು) ತಾರೀಕ ೨೯ ಜಿಲ್ಹೇಜ

ಶ. ೧೫೮೧, ಅಶ್ವೀನ ಭಾದ್ರ೩೦
ಇ. ೧೬೫೯ ಸಪ್ಟೆ ೬

(ಗೋಲು ಮುದ್ರೆ ಫಾರ್ಸಿ)

(ಫಾರ್ಸಿ ನಾಲ್ಕು ಸಾಲಿನ ಮಜಕೂರ)

ಅಜ ರಕ್ತಖಾನೆ ಖುದಾಯೆವಂದ ಅಲಿಶಾನ ಖಾನ ಅಪಜಲಖಾನ ಮಹಮ್ಮದ ಶಾಹಿ ತುಲಿದಯಾಮ ದೌಲತಹು ಖಜಾನೆಬ ಕಾರಕೂನರು. ಇಸ್ತ ಕಬಾಲ ಮತ್ತು ದೇಶನು ಖಾನ ಪಾ। ತೇರದಾಳ ಬಿದಾನದ ಸು। ಸಿತ್ಶೈನ ಅಲಫ ದರವಿತೆ ಹರನ ಮುರ್ತುಜಾ ಹುಜೂರರು ಬಂದು ತಿಳಿದುಕೊಂಡಿದ್ದೇನೆಂದರೆ, ನಿಮಗೆ ಇನಾಮ ಭೂಮಿ ಒಂದು ಚಾವರ ಹಾರವನೇರಿ ಗ್ರಾಮವನ್ನು ಹುಮಾಯು ಸ್ವತಃ ಪತ್ರ ಕಳಿಸಿ ಅನುಮತಿ ನೀಡಿ ನಡೆಯುತ್ತ ಬಂದಿದೆ. ಈಗ ಇನಾಮ ಹಕ್ಕನ್ನು ವಜಾಗೊಳಿಸಲಾಗಿದೆ ಎಂದು ಆಜ್ಞೆ ಹೊರಡಿಸಲಾಗಿದೆ. ಸದರಿ ಇನಾಮನ್ನು ಖುರ್ದಪತ್ರದಂತೆ ಉಪಭೋಗ ಮಾಡಿಕೊಂಡು ಮುನ್ನಡೆಸಬೇಕು. ಪ್ರತಿವರ್ಷ ಖುರ್ದ ಪಟ್ಟದ ಬಗೆಗೆ ಆಕ್ಷೇಪ ಎತ್ತಬಾರದು. ನಕಲು ಬರೆದುಕೊಂಡು ಅಸಲನ್ನು ಮರಳಿ ಕೊಡುವುದು. ಪಾ। ಹುಜೂರ, ರಾ। ಮಾ। ದೌಲತ+++ ಸುರುಸೂದ

ರುಜು ರುಜು ಸುರುನಿವೀಸ (ಗೋಲು ಮೊಹರು)

ತಾರೀಕ ೨ರ ಜಿಲ್ಹೇಜ ಸುರುಸೂದ

೪೮

೧ ಜಾನೇವರಿ ೧೬೬೫
೨೩ ಜಮಾದಿಲಾಖರ, ಸು ೧೦೬೫

ರಾಜಶ್ರೀ ಶಿವಪ್ಪ ಮುಚಡಿ

ದಾ। ಬೆ। ಚಾಂದಭಾಯಿ ಬಿನ್ ಸಿಲೇಮಭಾಯಿ ಕೊರಬತೆ ಕಾ। ಅಥಣಿ ತಾ। (ಖಾಲಿ ಜಾಗ) ಗೋಸಾವಿಯವರಿಗೆ ಬರೆದುಕೊಟ್ಟ ಕ್ರಯಪತ್ರ ಹೀಗಿದೆ. ಸುಹುರ ಸನ್ ಖಸಮ ಸಿತ್ಯೆನ ಆಲಫ ಕಾರಣ ಮನೆಯ ಜಾಗದ ಪೂರ್ವಭಾಗದ ಮನೆ ಸಿವಪ ಮುಚೆಡಿ ಮತ್ತು ಪಶ್ಚಿಮಭಾಗ ಖಾಸಾ ಉತ್ತರ ಭಾಗ ಸೈದಭಾಯಿ ಕೊರಬತೆ ದಕ್ಷಿಣಭಾಗ ಮನೆ ತೋಟಪಟ್ಟಿ ಸದರಿ ಭಾಗವನ್ನು ನಮ್ಮ ಆತ್ಮ ಸಂತೋಷದಿಂದ ಹೊನ್ನು ೨ರ ಗೆ ನೀಡಲಾಗಿದೆ. ಮುಂದೆ ಆ ಜಾಗಕ್ಕೂ ನಮಗೂ ಯಾವ ಸಂಬಂಧವಿಲ್ಲ. ಸದರಿ ಜಾಗ ಖಂಡಿನಿ ನೀಡಿದೆ ಎಂಬ ಕಾಗದ ರುಜು ಥ ೨೩ ಜಮಾದಿಲಾಖರ

■

ಪೋರ್ತುಗೀಜ್‌ರು ಮತ್ತು ಆದಿಲ್‌ಶಹಾ ಪತ್ರವ್ಯವಹಾರ

೪೯

(ಪೋರ್ತುಗಾಲದ ರಾಜನಿಗೆ ಬರೆದ ಈ ಪತ್ರದಲ್ಲಿ ಗೋವೆಯ ಹಂಗಾಮಿ ಗವ್ಹರ್ನರ್ ಫ್ರಾನ್ಸಿಸ್ಕು ದ ಕಾಶ್ಯರು (ಡಿ ಕಾಸ್ಟ್) ಮತ್ತು ಅಂತೋನಿಯಂ ಡಿಸೌಜಾ ಕೌಲೆನ್ಯೂ ಇವರು ಹಿಂದುಸ್ತಾನದಲ್ಲಿಯ ರಾಜಕೀಯ ವಿದ್ಯಮಾನಗಳ ವಿವರವನ್ನು ಹಿಂದುಸ್ತಾನದಲ್ಲಿಯ ರಾಜಕೀಯ ವಿದ್ಯಮಾನಗಳ ವಿವರವನ್ನು ನೀಡಿದ್ದಾರೆ. ಪತ್ರದಲ್ಲಿ ಅವರು ಹೇಳಿರುವುದೇನೆಂದರೆ– ಶಿವಾಜಿ ಮಹಾರಾಜರು ಆದಿಲಶಾಹನ ವಿರುದ್ಧ ಬಂಡೆದ್ದು, ಅವನ ಪ್ರದೇಶವನ್ನು ಗೆಲ್ಲುವ ದಿಶೆಯಲ್ಲಿ ಮುನ್ನುಗ್ಗುತ್ತಿದ್ದಾನೆ. ಹಾಗೆಯೆ ನಮ್ಮ ವೈರಿಗಳಾದ ಡಚ್‌ರೂ ಸಹ ನಮ್ಮ ನೆರೆಯ ರಾಜ್ಯಗಳಿಗೆ ಸಹಾಯ ಮಾಡುತ್ತಿದ್ದಾರೆ.)

ಮಹಾರಾಜರೆ,

ಪ್ರಸ್ತುತ ಪತ್ರದ ಒಂದು ಪ್ರತಿಯನ್ನು ಮಹಾರಾಜರಿಗೆ 'ಕಾರ್ವೆಲ್' ಮೂಲಕ ಕಳಿಸಲಾಗಿದೆ. ಅದರಲ್ಲಿ ಇಲ್ಲಿಯ ರಾಜಕೀಯ ವಿದ್ಯಮಾನಗಳ ವೃತ್ತಾಂತವನ್ನು ನೀಡಲಾಗಿದೆ. ಆದಿಲಶಾಹನಿಗೆ ನಮ್ಮೊಂದಿಗೆ ಯುದ್ಧಮಾಡುವ ಮನಸ್ಸಿತ್ತು. ಈ ಕಾರ್ಯದಲ್ಲಿ ಅವನಿಗೆ ವೋಲಾಂದೇಜ (ಡಚ್‌ರು) ಜನರು ಸಹಾಯ ಮಾಡಲು ಸಿದ್ಧರಿದ್ದರು. ಕಳೆದ ಬೇಸಿಗೆಯಲ್ಲಿ ಆದಿಲಶಾಹನು ಯುದ್ಧದ ಸಕಲ ಸಿದ್ಧತೆಯನ್ನು ನಡೆಸಿದ್ದ. ಅವನು ಹಲ್ಲೆ ಮಾಡಲಿಕ್ಕಿಲ್ಲ ಎಂದು ನಾವು ಭಾವಿಸಿದ್ದೆವು. ಕಾರಣವೇನೆಂದರೆ, ಮೊಗಲ ಬಾದಶಹನ (ಶಹಜಹಾನ) ಮಗನಾದ ಔರಂಗಜೇಬನು ಅವನ ಮೇಲೆ ಹಲ್ಲೆ ಮಾಡಲಿಕ್ಕಿಲ್ಲ ಎಂದು ನಾವು ಭಾವಿಸಿದ್ದೆವು. ಕಾರಣವೇನೆಂದರೆ ಮೊಗಲ ಬಾದಶಹಾನ (ಶಹಾಜಹಾನ) ಮಗನಾದ ಔರಂಗಜೇಬನು ಅವನ ಮೇಲೆ ದಂಡೆತ್ತಿ ಹೋದನು. ಆದರೆ ಅವನು ಔರಂಗಜೇಬನೊಂದಿಗೆ ಒಪ್ಪಂದ ಮಾಡಿಕೊಂಡನು. ಅದೇ ಕಾಲಕ್ಕೆ ಮೊಗಲ ಬಾದಶಹಾನ ನಿಧನವಾಯಿತು(ಶಹಾಜಹಾನನು

ತೀರಿಕೊಂಡನೆಂಬ ವದಂತಿ ಹಬ್ಬಿತ್ತು. ಅವನು ೧೬೬೬ರಲ್ಲಿ ತೀರಿಕೊಂಡನು) ಅದರಿಂದಾಗಿ ಆದಿಲಶಹಾ ಮುಕ್ತಗೊಂಡಿದ್ದರಿಂದ ನಮ್ಮೊಂದಿಗೆ ಯುದ್ಧ ಮಾಡುವ ಅವನ ನಿರ್ಧಾರ ಖಚಿತವಾಯಿತು. ಈ ಕಾರ್ಯದಲ್ಲಿ ಅವನ ಸರದಾರರು ಅದೆಷ್ಟು ಸಹಾಯ ಮಾಡಬಹುದು ಎಂಬುದು ಬೇರೆ ವಿಷಯ. ಏಕೆಂದರೆ ಅವರು ಇವನಿಗೆ ಮಣಿಯುತ್ತಿರಲಿಲ್ಲ. ನಾವು ನಮ್ಮ ವಕೀಲನನ್ನು ಆದಿಲಶಹಾನ ಬಳಿಗೆ ಕಳಿಸಿ ತಿಳಿಸಿದ್ದೇನೆಂದರೆ, ಅವನ ತಂದೆ ತೀರಿಕೊಂಡಾಗ ಆದಿಲಶಹಾನ ಮೇಲಿನ ಅವನ ವಾರಸಾ ಹಕ್ಕನ್ನು ನಾವು ಕೂಡಲೇ ಒಪ್ಪಿಕೊಂಡಿದ್ದೇವೆ ಎನ್ನುವುದು ಅವನು ನೆನಪಿಸಿಕೊಳ್ಳಲಿ. ಅವನ ಈ ನಗರದಲ್ಲಿರುವ ವಕೀಲನ ಜೊತೆಗೂ ನಾವು ಶಿಷ್ಟಾಚಾರವನ್ನು ಪಾಲಿಸಿದೆವು. ಹೀಗೆ ಹಲವು ದಿನಗಳು ಗತಿಸಿದವು. ನಡುವೆ ಬೇಸಿಗೆಯಲ್ಲಿ ನಮ್ಮ ನೌಕಾದಳದವರು ಸೈನ್ಯದ ಕಾರ್ಯಾಚರಣೆ ಮಾಡಬೇಕಾಯಿತು. ಮಳೆಗಾಲದಲ್ಲೂ ಮತ್ತೆ ಬೇರೆ ಬೇರೆ ವಿದ್ಯಮಾನಗಳು ನಡೆದವು. ಅದರ ಸಮಗ್ರ ತಪಶೀಲನ್ನು ನಾವು ಈ ಮೊದಲೇ ಇಂಗ್ಲಂಡ್ ಮೂಲಕ ಮತ್ತು ಕಾರ್ವೆಲ್ ಮೂಲಕ ಪತ್ರ ಬರೆದು ಮಹಾರಾಜರಿಗೆ ರವಾನಿಸಿದ್ದೇವೆ. ಆ ಪತ್ರಗಳ ನಕಲನ್ನು ಈ ಪತ್ರದ ಜೊತೆಗೆ ಮಹಾರಾಜರಿಗೆ ಕಳಿಸುತ್ತಿದ್ದೇವೆ. ನಮ್ಮ ವಕೀಲ ಆದಿಲಶಹಾನ ಬಳಿಯಿಂದ ಕೈಚೆಲ್ಲಿ ಮರಳಿಬಂದ. ಆದಿಲಶಹಾ ಅವನನ್ನು ಲೆಕ್ಕಿಸಲಿಲ್ಲ. ಆದರೂ ಶಿಷ್ಟಾಚಾರವು ವಿಫಲಗೊಂಡಿದ್ದರೂ, ಅದರಿಂದಾಗಿ ನಾವು ಸುಮಾರು ಒಂದು ಲಕ್ಷ ಅಶ್ರಫಿಯ ದಂಡ ತೆರಬೇಕಾಯಿತು. ನಿಮ್ಮ ಶಿಷ್ಟಾಚಾರವು ಯಶಸ್ವಿಯಾಗದಿರಲು ಪರಿಸ್ಥಿತಿಯೂ ಕಾರಣವಾಗಿದೆ. ನಮ್ಮ ಪ್ರತಿಸ್ಪರ್ಧಿಗಳಾದ ಡಚರು ನಮ್ಮ ನೆರೆಯವರನ್ನು ನಮ್ಮ ವಿರುದ್ಧ ಉತ್ತೇಜನ ನೀಡುತ್ತಿದ್ದಾರೆ. ದೇಸಿ ಸತ್ತಾಧಾರಿಗಳು ಮಹಾತ್ವಾಕಾಂಕ್ಷಿಗಳು ಇದಕ್ಕೆ ಬಲಿ ಬೀಳುತ್ತಾರೆ. ಆದರೂ ನಾವು ಜಾಗರೂಕರಾಗಿದ್ದೇವೆ.

ಕೆಲವು ದಿನಗಳ ಹಿಂದೆ ಆದಿಲಶಹಾನ ಒಬ್ಬ ಸರದಾರನಾದ ರಣದುಲ್ಲಾಖಾನನ ಮಗನಾದ ರುಸ್ತುಮ ಝುಮ್ಮಾ ಎಂಬುವನು ಲಖಮ ಸಾವಂತನ ಸೊಕ್ಕು ಮುರಿಯಲು ಅಪಾರ ಸೈನ್ಯ ಸಮೇತ ಕೊಂಕಣಕ್ಕೆ ಬಂದು ಇಳಿದನು. ಹಾಗೆ ಆದಿಲಶಹಾನಿಗೆ ಹೋಲಿಸಿದರೆ ಲಖಮ ಸಾವಂತ ದೇಸಾಯಿಯು ಅಷ್ಟೇನೂ ಬಲಾಢ್ಯನಲ್ಲ. ಆದರೂ ರುಸ್ತುಂ ಝುಮಾನು ಅವನ ಒಂದು ಕೋಟೆಯನ್ನು ವಶಪಡಿಸುವಲ್ಲಿ ಯಶಸ್ವಿಯಾದನು. ಯುದ್ಧ ಮಾಡಿ ಅಲ್ಲ. ಕೋಟೆಯೊಳಗಿನ ಜನರೊಂದಿಗೆ ಫಿತೂರು ಮಾಡಿ ಬಳಿಕ ರುಸ್ತುಂ ಝುಮ್ಮಾನು ಡಚ್‌ರ ಆತಿಥ್ಯವನ್ನ ಸ್ವೀಕರಿಸಲು ವೆಂಗುರ್ಲಾಕ್ಕೆ ಹೋದನು. ರುಸ್ತುಂ ಝುಮ್ಮಾ ಮತ್ತು ಡಚ್ಚರ ನಡುವೆ ನಮ್ಮ ವಿರುದ್ಧ ಕಾರ್ಯಚರಣೆಯನ್ನು ಮಾಡುವ ಕುರಿತು ಮಾತುಕತೆ ನಡೆದಿದೆ

ಎಂಬ ಬಾತ್ಮೀ ಕಿವಿಗೆ ಬಿದ್ದಿದೆ. ಈ ನಡುವೆ ನಾಲ್ಕು ದಿನಗಳ ಹಿಂದೆ ಆದಿಲಶಹಾ ನಮಗೊಂದು ಪತ್ರವನ್ನು ಕಳಿಸಿದ್ದಾನೆ. ಇಲ್ಲಿಯ ಪದ್ಧತಿಗೆ ಅನುಸರಿಸಿ ನಮ್ಮ ಒಬ್ಬ ವ್ಯಕ್ತಿಯನ್ನು ರುಸ್ತುಂ ಝಮ್ಮಾನ ಬಳಿಗೆ ಕಳಿಸಬೇಕು. ತಿಳಿದು ಬಂದ ಮತ್ತೂ ಒಂದು ಸುದ್ದಿ ಏನೆಂದರೆ, ಆದಿಲಶಹಾನ ಶಹಾಸಾಹೇಬ ಎಂಬ ಒಬ್ಬ ಹಳೆಯ ಸರದಾರನು, ಯಾರು ಔರಂಗಜೇಬನೊಂದಿಗೆ ಒಪ್ಪಂದ ಮಾಡಲೆಂದು ಹೋಗಿದ್ದನೋ ಅವನು ಒಪ್ಪಂದದ ಪತ್ರವನ್ನು ತೆಗೆದುಕೊಂಡು ವಿಜಾಪುರಕ್ಕೆ ಮರಳಿದ್ದಾನೆ. ಈ ಒಪ್ಪಂದದ ಆದಿಲಶಹಾನಿಗೆ ಪುರಸೊತ್ತು ಸಿಕ್ಕಿದ್ದರಿಂದ ನಮ್ಮ ಬಾರ್ದೇಶ ಮತ್ತು ಸಾಷ್ಟಿ ಎಂಬೆರಡು ಪ್ರಾಂತಗಳಿಗೆ ಅವನ ಸೈನ್ಯದ ಉಪದ್ರವವಾಗುವ ಭೀತಿಯು ನಿರ್ಮಾಣವಾಗಿದೆ. ಅಂಥದರಲ್ಲಿ ಡಚ್‌ರು ಮತ್ತು ಮುಸಲ್ಮಾನರ ಯುತಿಯ ಗಂಡಾಂತರವೂ ಇದೆ. ಮೊದಲನೆಯದು ಕಡಲಿನ ಶಕ್ತಿಯಾದರೆ, ಎರಡನೆಯದು ಭೂಮಿಯ ಮೇಲಿನದು. ನಮ್ಮ ವಶದಲ್ಲಿರುವ ಪ್ರದೇಶವು ದೂರದಲ್ಲಿದ್ದು, ಅದು ಅಖಂಡವಾಗಿಲ್ಲ. ಹೀಗಾಗಿ ಅವುಗಳನ್ನು ಯಶಸ್ವಿಯಾಗಿ ಶತ್ರುಗಳ ಪ್ರತೀಕಾರ ಮಾಡಬಲ್ಲೆವು ಎಂಬ ನಂಬಿಕೆಯಿದೆ. ಭಯವಿರುವುದು ಡಚ್ಚರಿಂದ. ಅವರು ಒಂದುವೇಳೆ ನಮ್ಮ ವಿರುದ್ಧ ಯುದ್ಧದ ಘೋಷಣೆ ಮಾಡಿದರೆ, ಅವರ ನೌಕಾದಳವು ನಮ್ಮ ಬಂದರಿಗೆ ದಿಗ್ಬಂಧನ ಹಾಕಬಹುದು. ಅದರಿಂದಾಗಿ ನಮ್ಮ ವ್ಯಾಪಾರ ಸ್ಥಗಿತವಾಗಬಹುದು.

ಆದರೂ ಒಂದು ಸಮಾಧಾನದ ವಿಷಯವೆಂದರೆ, ಆದಿಲಶಹಾನ ಒಬ್ಬ ಹಳೆಯ ಸರದಾರನಾದ ಶಹಾಜಿಯ ಮಗನಾದ ಶಿವಾಜಿಯು ಆದಿಲಶಹಾನ ವಿರುದ್ಧ ಬಂಡೆದ್ದು, ಅವನ ಪ್ರದೇಶವನ್ನು ಹಸ್ತಗತ ಮಾಡಿಕೊಳ್ಳುವ ದಿಶೆಯಲ್ಲಿ ಮುನ್ನುಗ್ಗುತ್ತಿದ್ದಾನೆ.

ಮೊಗಲ ಬಾದಶಹಾನ ಮಗನಾದ ಔರಂಗಜೇಬನು ತನ್ನ ರಾಜ್ಯವನ್ನು ಎಲ್ಲ ಕಡೆಗಳಲ್ಲಿಯೂ ವಿಸ್ತರಿಸುತ್ತಿದ್ದಾನೆ. ಡಚ್‌ರು ಕರ್ನಾಟಕದ ರಾಜನಾದ ಶಿವಪ್ಪ ನಾಯಕನೊಂದಿಗೆ ಗೆಳೆತನ ಮಾಡಿ ಹೊನ್ನಾವರ ಮತ್ತು ಬಾರ್ಸಿಲೋಕದಲ್ಲಿ ವ್ಯಾಪಾರದ ಗುದಾಮನ್ನು ಆರಂಭಿಸಲೆಂದು ಅವರಿಂದ ಸನದನ್ನು ಪಡೆದಿರುವ ಸುದ್ದಿಯಿದೆ. ಡಚ್‌ರ ವ್ಯಾಪಾರಿ ಕೇಂದ್ರ ಮಂಗಳೂರಿನಲ್ಲಿಯೂ ಇದ್ದೇ ಇದೆ. ನಮಗೂ ಕರ್ನಾಟಕದ ರಾಜರಿಗೂ ಪೂರ್ವಾಪರ ಸಂಬಂಧವಿದೆ. ಏಕೆಂದರೆ ಅವರ ರಾಜರು ನಮ್ಮ ನಗರಗಳಿಗೆ ಧಾನ್ಯದ ಪೂರೈಕೆಯಾಗುತ್ತಿದೆ. ಅವನು ಮೊನ್ನೆ ನಮಗೊಂದು ಪತ್ರ ಕಳಿಸಿದ್ದಾನೆ. ಅದರದು ಹಳೆಯ ಪದ್ಧತಿಯದಾಗಿದ್ದು, ಇಂದಿನ ಶಿಷ್ಟಾಚಾರಕ್ಕೆ ಅನುಗುಣವಾಗಿ ಇಲ್ಲ.

ಕ್ಯಾಂಡಿಯ ರಾಜ ಮತ್ತು ಡಚ್ಚರ ನಡುವೆ ವೈಮನಸ್ಸು ಬೆಳೆದಿದೆ. ಕ್ಯಾಂಡಿಯ

ರಾಜನು ನಮಗೆ ಕಳಿಸಿದ ನಕಲನ್ನು ಮಹಾರಾಜರ ಅವಗಾಹನೆಗೆ ಈ ಪತ್ರದೊಂದಿಗೆ ಕಳಿಸುತ್ತಲಿದ್ದೇವೆ. ಆದರೆ ಡಚ್ಚರ ವಿಜಯ ಮತ್ತು ಕ್ಯಾಂಡಿರಾಜನ ಸೋಲನ್ನು ಕಂಡಾಗ, ಅವನಿಗೆ ಸಹಾಯ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲವೆಂದೆನಿಸುತ್ತಿದೆ.

ದೇವರು ಮಹಾರಾಜರ ರಕ್ಷಣೆ ಮಾಡಲಿ.

ಗೋವಾ, ದಿ. ೧೫ ಮೇ ೧೬೫೮
ಫ್ರಾನ್ಸಿಸ್ಕು ಡ ಕಾಸ್ತ್ರ
ಅಂತಿನಿಯು ದಿ ಸೌಝು ಕೌತಿನ್ಯು

೫೦

ಗೋವಾ, ದಿ ೬ ಜೂನ ೧೬೬೪

(ವಿಜಾಪುರದ ಸೈನ್ಯದಿಂದ ಗೋವೆಯ ಸರಹದ್ದಿನ ಮೇಲೆ ಆಕ್ರಮಣ ನಡೆಸುವ ಗಂಡಾಂತರ ನಿರ್ಮಾಣವಾಗಿರುವುದು ಕಂಡು, ಗೋವೆಯ ರಾಜ್ಯದ ಸಲಹಾ ಸಮಿತಿಯು ಗೋವೆಯ ವೈಸರಾಯನಿಗೆ ಕೆಳಗಿನ ಸಲಹೆಯನ್ನು ನೀಡಿತು.)

ದಿ. ೩ ಜೂನ ೧೬೬೪ರಂದು ಹಿಂದೂಸ್ತಾನದ ವ್ಹಿಸೆರೆಯು ಮತ್ತು ಕ್ಯಾಪ್ಟನ್ ಜನರಲ್ ಅಂತೋನಿಯು ಮೇಲು ದ ಕಾಸ್ತ್ರೊ ಅವರು ಜ್ಯೂಆಂವ್ ದ ಪ್ರಾಪು ಅವರ ನಿವಾಸದಲ್ಲಿ ರಾಜ್ಯ ಸಲಹಾ ಸಮಿತಿಯ ಸಭೆಯನ್ನು ಕರೆದರು. ಸಲಹಾ ಸಮಿತಿಯ ಎದುರು ವೈಸೇರಾಯನು ನಿವೇದನೆ ಮಾಡಿದ್ದೇನೆಂದರೆ – ಅಲಿ ಆದಿಲಶಹಾನ ಸರದಾರನಾದ ಆಜಿಜ್‌ಖಾನನು ಶಿವಾಜಿಯ ಕುಡಾಲದಲ್ಲಿಯ ಎರಡು ಠಾಣೆಗಳನ್ನು ಗೆದ್ದ ಪತ್ರ ನಮಗೆ ಬಂದಿದೆ. ಇದರಲ್ಲಿ ಒಂದು ಪತ್ರ ಢಿವಿಯ ಕ್ಯಾಪ್ಟನ್ನಿನದು. ಎರಡನೆಯದು ನಾಮದೋಡ, ರಿವೋಡೆ ಮತ್ತು ಪೀರ್ಣದ ಗೌಡನಾದ ಹಿರಬಾ ಠಾಣೆಯದು. ಈ ಇಬ್ಬರೂ ಪತ್ರಲೇಖಕರು ಹೇಳುವುದೇನೆಂದರೆ– ಅಜಿಜ್‌ಖಾನನು ನಮ್ಮ ಸೀಮೆಯ ಮೇಲೆ ಆಕ್ರಮಣ ಮಾಡಿದರೆ ಯಾವ ಉಪಾಯ ಯೋಜನೆಯನ್ನು ಮಾಡಬೇಕು. ಈ ಕುರಿತು ಸಲಹಾ ಸಮಿತಿಯು ಸಲಹೆ ನೀಡಬೇಕು.

ಸಲಹಾ ಸಮಿತಿಯು ಒಮ್ಮತದಿಂದ ನೀಡಿದ ಸಲಹೆ ಏನೆಂದರೆ– ವೈಸರಾಯ ಅವರು ಸರಹದ್ದಿನ ಸಂರಕ್ಷಣೆಯನ್ನು ಮಜಬೂತಗೊಳಿಸಲು ರೆಯಿಸ್ ಮಾಗೂಸ್ ಕೋಟೆಯ ಮಿಶ್ರವಣ ಸೈನಿಕರನ್ನು ಢಿವಿಗೆ ಮತ್ತು ಆಗ್ವಾದದ ಕೋಟೆಯ ಪೋರ್ತುಗೀಜ ಸೈನ್ಯದ ತುಕಡಿಯನ್ನು ಕೋಲ್ಯಾಳಕ್ಕೆ ತಕ್ಷಣ ಕಳಿಸುವ ವ್ಯವಸ್ಥೆಯನ್ನು ಮಾಡಬೇಕು.

೫೧

ಗೋವಾ, ದಿ ೨೮, ಜೂನ ೧೬೬೪

(ಆದಿಲಶಹಾನ ವಿರುದ್ಧ ಬಂಡೆದ್ದು ಗೋವೆಯ ಆಶ್ರಯಕ್ಕೆ ಬಂದ ಬಂಡುಕೋರ ದೇಸಾಯಿಗಳನ್ನು ತನಗೆ ಒಪ್ಪಿಸಬೇಕೆಂಬ ಬೇಡಿಕೆಯನ್ನು ಕೊಂಕಣದ ಆದಿಲಶಹಾನ ಸುಭೇದಾರನು ಗೋವೆಯ ವೈಸರಾಯಿ (ವೈಸರಾಯ) ಎದುರಿಗೆ ಇಟ್ಟನು. ಗೋವೆಯ ರಾಜ್ಯ ಸಲಹಾ ಸಮಿತಿಯು ಈ ಬೇಡಿಕೆಯನ್ನು ತಿರಸ್ಕರಿಸಿತು.)

ದಿ. ೨೮ ಜೂನ ೧೬೬೪ರಂದು ವೈಸರಾಯ ಅಂತೋನಿಯ ಮೇಲು ದ ಕಾಸ್ತ್ರೊ ಇವನು ಗೋವೆಯ ಕೋಟೆಯ ಅರಮನೆಯ ದಿವಾನಖಾನೆಯಲ್ಲಿ ರಾಜ್ಯಸಲಹಾ ಸಮಿತಿಯ ಸಭೆಯನ್ನು ಕರೆದನು. ಅವನು ಸಲಹಾಸಮಿತಿಗೆ ನಿವೇದನೆ ಮಾಡಿದ್ದೇನೆಂದರೆ ವಿಜಾಪುರ ರಾಜ್ಯದಲ್ಲಿ ಬಂಡೆದ್ದು ಆದಿಲಶಹಾನ ಅವಕೃಪೆಗೆ ಪಾತ್ರ ದೇಸಾಯಿಗಳು ನಮ್ಮ ರಾಜ್ಯದಲ್ಲಿ ಆಶ್ರಯವನ್ನು ಪಡೆದಿದ್ದಾರೆ. ಅವರನ್ನು ತಮಗೆ ಒಪ್ಪಿಸಬೇಕೆಂಬ ಬೇಡಿಕೆಯನ್ನು ಆದಿಲಶಹಾನ ಕೊಂಕಣದಲ್ಲಿಯ ಸೇನಾಪತಿ ಮತ್ತು ಸುಭೇದಾರನಾದ ಅಝೀಜ್‌ಖಾನನು ನಮ್ಮ ರಾಜ್ಯದ ವಿಜಾಪುರದ ವಕೀಲನಾದ ಖ್ವಾಜಾ ಅಹಮ್ಮದ ಸಹೀದನ ಮೂಲಕ ಸಲ್ಲಿಸಿದ್ದಾನೆ. ಅದೇ ರೀತಿ ನಮ್ಮ ನೌಕಾದಳವು ಕಾರವಾರದ ನದಿತೀರದಲ್ಲಿ ಸೆರೆಹಿಡಿದ ಆದಿಲಶಹಾನ ನೌಕೆಯನ್ನು ಮುಕ್ತ ಮಾಡಬೇಕೆಂಬ ಬೇಡಿಕೆಯೂ ಪ್ರಸ್ತುತ ಪತ್ರದಲ್ಲಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವ ಕಾರ್ಯಾಚರಣೆಯನ್ನು ಮಾಡಬೇಕು ಎನ್ನುವುದನ್ನು ಗೌರವಾನ್ವಿತ ಸದಸ್ಯರು ಹೇಳಬೇಕು. ಗೋವೆಯ ಆಸರೆಗೆ ಬಂದ ದೇಸಾಯಿಗಳನ್ನು ವಿಜಾಪುರಕ್ಕೆ ಒಪ್ಪಿಸಬೇಕೆ ಅಥವಾ ಬೇಡವೇ ಎಂಬುದರ ಕುರಿತು ಸಲಹೆ ನೀಡುವಾಗ ಎಲ್ಲ ಸದಸ್ಯರು ಹೇಳಿದ್ದೇನೆಂದರೆ, ಶರಣಾರ್ಥಿಗಳನ್ನು ಶತ್ರುವಿಗೆ ಒಪ್ಪಿಸುವ ಪದ್ಧತಿಯು ಈ ರಾಜ್ಯದಲ್ಲಿಲ್ಲ. ಆದ್ದರಿಂದ ಈ ರಾಜ್ಯದಲ್ಲಿ ಆಸರೆ ಪಡೆದ ದೇಸಾಯಿಗಳನ್ನು ಆದಿಲಶಹಾನ ವಕೀಲನಿಗೆ ಒಪ್ಪಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೂ ಈ ರಾಜ್ಯದ ಮತ್ತು ನಮ್ಮ ಸ್ವಾಮಿಯ ರೀತಿ, ಪರಂಪರೆ ಏನಿದೆಯೋ ಅದನ್ನು ಆದಿಲಶಹಾನ ಕೊಂಕಣನಾಡ ಸೇನಾಪತಿ ಮತ್ತು ಸುಭೇದಾರನಾದ ಅಝಿಜಖಾನನಿಗೆ ಯೋಗ್ಯವಾದ ಮಾತಿನಲ್ಲಿ ತಿಳಿಸಿ ಹೇಳಬೇಕು. ಸೆರೆ ಹಿಡಿದ ನೌಕೆಯ ಪ್ರಶ್ನೆಯನ್ನು ಚರ್ಚೆಯಿಂದ ಬಿಡಿಸಬೇಕೆಂಬ ಸಲಹೆಯನ್ನು ಸರ್ವಸದಸ್ಯರು ನೀಡಿದರು. ಈ ಗೊತ್ತುವಳಿ (ನಿಲುವಳಿಯ ಮೇಲೆ ರಾಜ್ಯ ಸಲಹಾ ಸಮಿತಿಯ ಸರ್ವಸದಸ್ಯರ ರುಜುವಿದೆ.)

೫೨

(ಕೊಂಕಣದ ದೇಸಾಯಿಗಳು ಮುಸ್ಲಿಂ ಸತ್ತೆಯ ವಿರುದ್ಧ ಆಗಾಗ ಬಂಡೇಳುತ್ತಿದ್ದರೆಂಬ ಪುರಾವೆಯು ಪೋರ್ತುಗೀಜ ಮತ್ತು ಉಳಿದ ಸಾಧನ ಸಾಮಗ್ರಿಗಳಲ್ಲೂ ಸಿಗುತ್ತದೆ. ಉದಾಹರಣೆಗಾಗಿ, ಗೋವೆಯ ಒಬ್ಬ ವೈಸರಾಯನು ತನ್ನ ರಾಜ್ಯಕ್ಕೆ ಹಿಂದೂಸ್ತಾನದ ರಾಜಕೀಯ ವಿದ್ಯಮಾನಗಳ ಅಹವಾಲನ್ನು ಸಿದ್ಧಪಡಿಸಿ ಸಲ್ಲಿಸುವಾಗ ದಿ. ೨೬ ಜನೇವರಿ ೧೬೬೧ರಂದು ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾನೆ.)

"-- ಇತ್ತ ಕೊಂಕಣದಲ್ಲಿ ಮೊಗಲ ಬಾದಶಹಾರ ನಿಯಂತ್ರಣ ಸಡಿಲಾಗಿದ್ದರಿಂದ ಮತ್ತು ಅವನು ದಿಲ್ಲಿಯಿಂದ ಕರೆಯಿಸಿದ ಸೈನ್ಯ ಬರದೇ ಇದ್ದುದರಿಂದ, ಇಲ್ಲಿಯ ದೇಸಾಯಿಗಳು ಬಾದಶಹಾನ ಸತ್ತೆಯನ್ನು ಧಿಕ್ಕರಿಸಿ ರಾಜಾರಾಮನೊಂದಿಗೆ ಸಂಧಾನ ಮಾಡಿಕೊಂಡಿದ್ದಾರೆ. ಮುಸಲ್ಮಾನರು ಹಿಂದೂ ಮಂದಿರ ಮತ್ತು ಹಿಂದೂ ಮಹಿಳೆಯರನ್ನು ಭ್ರಷ್ಟಗೊಳಿಸುವ ಕೆಲಸದಲ್ಲಿ ತೊಡಗಿದ್ದರಿಂದ ದೇಸಾಯಿಗಳು ಅವರ ವಿರುದ್ಧ ಬಂಡೆದ್ದಿದ್ದರಲ್ಲಿ ಅಚ್ಚರಿ ಏನಿಲ್ಲ.'

೫೩

ಪಾನೇಲಿ, ದಿ ೧೧ ನವಂಬರ್ ೧೬೬೪

(ಶಿವಾಜಿ ಮಹಾರಾಜ ಮತ್ತು ಖವಾಸಖಾನರ ನಡುವಿನ ಯುದ್ಧದ ಫಲಿತಾಂಶವನ್ನು ತಮಗೆ ತಿಳಿಸಬೇಕೆಂದು ಗೋವೆಯ ವ್ಹಿಸೇರೆಯಿಯ(ವೈಸರಾಯ) ಕೇಶವ ನಾಯಕ ಮತ್ತು ಕೇಶವ ಪ್ರಭುಗಳಿಗೆ ಪತ್ರ)

ಕೇಶವ ನಾಯಕ ಪ್ರಭು ಇವರಿಗೆ

ಕೇಶವ ನಾಯಿಕ ಮತ್ತು ಕೇಶವ ಪ್ರಭುಗಳು ನನಗೆ ಬರೆದ ಪತ್ರ ನನ್ನ ಅವಲೋಕನೆಗೆ ಬಂದಿದೆ. ಇದರ ಮೇಲಿಂದ ಶಿವಾಜಿ ಮತ್ತು ಖವಾಸಖಾನರ ನಡುವಿನ ಯುದ್ಧದ ವೃತ್ತಾಂತ ಗೊತ್ತಾಯಿತು. ಪ್ರಸ್ತುತ ಯುದ್ಧದ ನಿರ್ಣಯದ ಮುಂದಿನ ನಮ್ಮ ವೃತ್ತಾಂತವನ್ನು ನನಗೆ ಬರೆದು ತಿಳಿಸಬೇಕು.

ಪಾನೇಲಿ, ದಿ ೧೧ ನವಂಬರ್ ೧೬೬೪
ಅಂತೋನಿಯೋ ದ ಮೇಲು ದ ಕಾಸ್ತ್ರು
* Livro de Reis Vizinhos, No 2, fl 31

ಪಾನೇಲಿ, ಗೋವಾ, ದಿ-೮ ಡಿಸೆಂಬರ್ ೧೬೬೪

(ಶಿವಾಜಿ ಮಹಾರಾಜರ ಕಬ್ಜೆಯಿಂದ ವೆಂಗುರ್ಲಾ ಬಂದರು ಮುಕ್ತಗೊಂಡಿದ್ದರಿಂದ ಗೋವೆಯ ವ್ಹಿಸೆರೆಯು ವೆಂಗುರ್ಲಾದ ಮುಸಲ್ಮಾನ ಹವಾಲ್ದಾರನಿಗೆ ಅಭಿನಂದನೆಯ ಪತ್ರವನ್ನು ಕಳಿಸುತ್ತಾರೆ. ಹವಾಲ್ದಾರನಿಗೆ ಸಹಾಯ ಬೇಕಿದ್ದರೆ ಅದನ್ನು ತಾನು ಮಾಡಲು ಸಿದ್ಧವಿರುವುದಾಗಿ ಪತ್ರದಲ್ಲಿ ಬರೆದಿದ್ದಾನೆ.)

ವೆಂಗುರ್ಲೆಯ--

ಶಿವಾಜಿಯ ದೌರ್ಜನ್ಯದಿಂದ ನೀವು ಮುಕ್ತವಾಗಿದ್ದು ಕಂಡು ನನಗೆ ಸಂತೋಷವಾಯಿತು. ನನ್ನ ಸದಿಚ್ಛೆ ನಿಮಗಿದ್ದೇ ಇದೆ. ತಮಗೆ ನನ್ನಿಂದೇನಾದರೂ ಸಹಾಯಬೇಕಿದ್ದಲ್ಲಿ ನನ್ನ ಸದಿಚ್ಛೆಯ ಅನುಭವ ತಮಗೆ ಬರದೇ ಇರಲಾರದು ಎಂಬ ನಂಬಿಕೆ ನನಗಿದೆ. ಈ ಉಗ್ರಾಣದವನು ಅತ್ತ ಹೋಗುತ್ತಿದ್ದಾನೆ. ತಮಗೆ ನಮ್ಮಿಂದೇನಾದರೂ ಸಹಾಯ ಬೇಕಾದಲ್ಲಿ ನೀಡಲು ನಮಗೆ ಸಂತೋಷವಾಗುತ್ತದೆ. ನೀವು ನಿಸ್ಸಂಕೋಚದಿಂದ ಆಜ್ಞೆಮಾಡಿ. ನಿಮ್ಮಿಂದಲು ಇದೇ ಸದ್ಭಾವನೆಯನ್ನು ನಿರೀಕ್ಷಿಸುತ್ತೇವೆ. ನಮ್ಮ ರಾಜ್ಯದಿಂದ ನಿಮ್ಮಲ್ಲಿಗೆ ಹೋಗುವ ಜನರನ್ನು ಚೆನ್ನಾಗಿ ನೋಡಿಕೊಳ್ಳುತ್ತೀರಿ ಎಂಬ ನಂಬಿಕೆ ನಮಗಿದೆ.

ಪಾನೇಲಿ, ದಿ ೮ ಡಿಸೆಂಬರ ೧೬೬೪
ಆಂತೋನಿಯು ದಮೇಲು ವ ಶಾಸ್ತ್ರ

೫೫

ಗೋವಾ, ದಿ. ೧೩ ಡಿಸೆಂಬರ್ ೧೬೬೪

(ಗೋವೆಯ ಆಸರೆಗೆ ಬಂದು ನೆಲೆಸಿದ ವಿಜಾಪುರ ರಾಜ್ಯದ ಕೆಲವು ಬಂಡುಕೋರ ದೇಸಾಯಿಗಳನ್ನು ತಮಗೆ ಒಪ್ಪಿಸುವಂತೆ ವಿಜಾಪುರದ ಸರದಾರನಾದ ಖವಾಸಖಾನನು ಪೋರ್ತುಗೀಜರ ಎದುರಿಗೆ ಬೇಡಿಕೆಯನ್ನು ಇಟ್ಟನು. ಸದರಿ ದೇಸಾಯಿಯವರನ್ನು ಮರಳಿ ಕಳಿಸುವುದಿಲ್ಲೆಂದು ಗೋವೆಯ ವ್ಹಿಸೆರೆಯು ತಿಳಿಸುತ್ತಾನೆ. ದೇಸಾಯಿಗಳಿಗೂ ಶಿವಾಜಿ ಮಹಾರಾಜರಿಗೂ ಸ್ನೇಹವಿದೆ ಎಂಬ ಸಂಶಯವು ವಿಜಾಪುರದ ಸರದಾರರಲ್ಲಿತ್ತು.)

ಆದಿಲಶಹಾನ ಕೊಂಕಣದ ಸರದಾರನಾದ ಖವಾಸಖಾನ ಇವರಿಗೆ,

ನಿಮ್ಮ ಪತ್ರದಲ್ಲಿರುವ ಮಜಕೂರಿನ ಬಗ್ಗೆ ನಾನು ಹಲವು ಸಲ ಉತ್ತರಿಸಿದ್ದೇನೆ. ನಾವು ಆದಿಲಶಹಾನೊಂದಿಗೆ ಮಾಡಿಕೊಂಡ ಸಂಧಾನದ ಕಲಮಿನ ವಿರುದ್ಧ ನೀವು ನಮ್ಮ ರಾಜ್ಯದಲ್ಲಿ ಆಶ್ರಯ ಪಡೆದು ಜನರನ್ನು ಒಪ್ಪಿಸಬೇಕೆಂಬ ಬೇಡಿಕೆಯನ್ನು ಇಡುವುದು ಕಂಡು ನನಗೆ ಅಚ್ಚರಿಯಾಗುತ್ತಿದೆ. ಕೇಶವ ನಾಯಕನು ಅಪರಾಧವನ್ನು ಮಾಡಲಿಲ್ಲ. ಶಿವಾಜಿಯೊಂದಿಗೂ ಸ್ನೇಹ ಬೆಳೆಸಲಿಲ್ಲ. ಬದಲಿಗೆ ಶಿವಾಜಿಗೇ ಕೇಶವ ನಾಯಕನ ಬಗೆಗೆ ಸಂಶಯ ಮೂಡಿದೆ. ಇತರ ದೇಸಾಯಿಗಳ ವಿಷಯವೂ ಹೀಗೆ ಇದೆ. ನಿಮ್ಮಲ್ಲಿಂದ ಅವರು ಹೊರಬಿದ್ದ ಬಳಿಕ ಅವರಿಲ್ಲಿ ಸುರಕ್ಷಿತವಾಗಿದ್ದಾರೆ. ಅದೇ ಅವರ ಇಚ್ಛೆಯೂ ಆಗಿತ್ತು. ನಿಮಗೆ ನಾನು ಸೂಚಿಸುವುದೇನೆಂದರೆ – ನಿಮಗೆ ಈ ವಿಷಯವನ್ನು ಹೇಳಿದವರಾರು, ಅದು ಯೋಗ್ಯವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ನಾವು ಪೋರ್ತುಗೀಜರು ಪ್ರತಿಸಲ ಯೋಗ್ಯವಾಗಿ ವರ್ತಿಸಿದ್ದೇವೆ. ಲಖಮ ಸಾವಂತ ನಮಗಾಗಿ ಕಾಯಕ ಮಾಡುತ್ತಿದ್ದಾನೆ. ಕೃಷ್ಣಾ ಸಾವಂತನು ಕುಡಾಲದಲ್ಲಿದ್ದು ಶಿವಾಜಿಯ ಪ್ರತೀಕ್ಷಾ ಮಾಡುತ್ತಿದ್ದಾನೆ ಎಂಬ ಬಾತ್ಮಿಯು ನಮಗೆ ಲಭಿಸಿದೆ...

ಗೋವಾ ದಿ. ೧೩ ಡಿಸೆಂಬರ್ ೧೬೬೪
ಅಂತೋನಿಯು ದ ಮೇಲು ದ ಕಾಸ್ತ್ರು

೫೬

ಕ್ರಿಶ. ೧೬೬೫(?)

(ವಿಜಾಪುರ ಬಾದಶಹಾನ ತಾಯಿಯು ಕೊಂಕಣದ ಪ್ರವಾಸವನ್ನು ಕೈಕೊಂಡಿದ್ದಳು. ಅವಳಿಗೆ ಗೋವೆಯ ವ್ಹಿಸೆರೆಯಿಯು ಒಂದು ಅಮೂಲ್ಯ ವಜ್ರವನ್ನು ಉಡುಗೊರೆಯಾಗಿ ನೀಡಿದನು.)

ರಾಜಮಾತೆಯಾದ ವಿಜಾಯಪುರದ ರಾಣಿ ಸಾಹೇಬರಿಗೆ

ತಾವು ಶಹಾ ಬಂದರಿಗೆ ಆಗಮಿಸಿದ ಸುದ್ದಿ ತಲುಪಿದ ಕೂಡಲೇ ತಮ್ಮ ಶುಭ ಸ್ವಾಗತವನ್ನು ಬಯಸಿ ತಮಗೊಂದು ಸಂದೇಶವನ್ನು ಕಳಿಸಿದ್ದೆ. ಹಾಗೆಯೇ ತಮ್ಮ ಆರೋಗ್ಯವು ಹೇಗಿದೆ? ತಮ್ಮ ಪ್ರಯಾಣ ಹೇಗಾಯಿತು? ನಮ್ಮಿಂದ ನಿಮಗೇನಾದರೂ ಸಹಾಯ ಬೇಕಿದ್ದಲ್ಲಿ ತಿಳಿಸುವಂತೆ ಕೋರಿಕೊಂಡಿದ್ದೆ. ಈವರೆಗೆ ತಮ್ಮಿಂದ ಯಾವುದೇ ಉತ್ತರ ಬರಲಿಲ್ಲ. ಆದಾಗ್ಯೂ ತಮ್ಮ ಪುತ್ರ ಬಾದಶಹಾ ಅಲಿ ಆದಿಲಶಹಾ ಅವರ ಬಗೆಗೆ ಹಾಗೂ ತಮ್ಮ ಬಗೆಗೆ ಇರುವ ಪ್ರೇಮ ಮತ್ತು ಗೌರವದ ಪ್ರತೀಕವೆಂದು ನಾನು ನಮ್ಮ ವಕೀಲರಾದ ರಾಮಜಿ ಶೆಣವಿ ಕೋಠಾರಿಯವರ ಮೂಲಕ ತಮಗೊಂದು ವಜ್ರವನ್ನು ಕಳಿಸುತ್ತಲಿದ್ದೇನೆ. ಈ ಉಡುಗೊರೆಯು ನನ್ನ ಸ್ವಾಮಿಭಕ್ತಿಯಿಂದಾಗಿ ಬಂದಿದೆ ಎಂದು ತಾವು ಭಾವಿಸಬೇಕು. ಈ ಭೇಟಿಯಿಂದಾಗಿ ನಮ್ಮ ಎರಡು ದೇಶಗಳ ಮೈತ್ರಿಯು ಮತ್ತಷ್ಟು ದೃಢಗೊಳ್ಳುತ್ತದೆ ಎಂಬ ನಂಬುಗೆ ನನ್ನದು. ತಾವು ನಾನು ಕಳಿಸಿದ ಈ ಉಡುಗೊರೆಯನ್ನು ಸ್ವೀಕರಿಸಬೇಕಾಗಿ ವಿನಂತಿ.

ದೇವರು ನಿಮ್ಮ ಮೇಲೆ ಅನುಗ್ರಹದ ಬೆಳಕು ಬೀರಲಿ.

ಕಾಟ ವ್ಹಿಸೇರೆಯ

ಪಾನೆಲಿ, ದಿ. ೨೧ ಎಪ್ರಿಲ ೧೬೬೬

(ಇರಾನಿನ ವಕೀಲನು ವೆಂಗುರ್ಲಾದ ಮಾರ್ಗದ ಮೂಲಕ ಆದಿಲಶಹಾನ ದರಬಾರಿಗೆ ಹೊರಟಿದ್ದ. ಆದರೆ ಶಿವಾಜಿ ಮಹಾರಾಜ ಮತ್ತು ಆದಿಲಶಹಾನ ನಡುವೆ ಯುದ್ಧ ಆರಂಭಗೊಂಡಿದ್ದರಿಂದ ಅವನು ಗೋವೆಯ ಬಂದರಿನಲ್ಲೇ ಇಳಿಯಬೇಕಾಯಿತು. ಅವನು ಆದಿಲಶಹಾನಿಗಾಗಿ ತಂದ ಉಡುಗೊರೆಯ ಮೇಲಿನ ಸುಂಕವನ್ನು ಗೋವೆಯ ವ್ಹಿಸೇರೆಯು ರಾಜ್ಯ ಸಲಹಾಸಮಿತಿಯ ಸಲಹೆಯಂತೆ ಮನ್ನಾ ಮಾಡಿದನು.)

ಅಂತೋನಿಯು ದಿ ಮೇಲು ದ ಕಾಸ್ತ್ರು ವ್ಹಿಸೇರೆಯ ಮತ್ತು ಪೋರ್ತುಗೀಜ ಹಿಂದೂಸ್ತಾನದ ಜನರಲ್ ಇವರು ಪಾನೇಲಿಗೆ ಬಂದಾಗ ರಾಜ್ಯ ಸಲಹಾ ಸಮಿತಿಯ ಸಭೆ ಕರೆದರು. ಅವರು ಸಭೆಗೆ ತಿಳಿಸಿದ್ದೇನೆಂದರೆ, ಇರಾನಿನ ಬಾದಶಹಾನ ಒಬ್ಬ ವಕೀಲನು ವಿಜಾಪುರ ಅಲಿ ಬಾದಶಹಾನ ದರಬಾರಿಗೆ ಹೋಗಲು ಗೋವೆಯ ಬಂದರಿಗೆ ಬಂದು ಇಳಿದಿದ್ದಾನೆ. ಅವನು ವಾಸ್ತವಿಕವಾಗಿ ವೆಂಗುರ್ಲೆಯ ಮಾರ್ಗದ ಮೂಲಕ ವಿಜಾಪುರಕ್ಕೆ ಹೋಗಲೆಂದು ಆಗಮಿಸಿದ್ದನು. ಆದರೆ ವಿಜಾಪುರದ ಸುಲ್ತಾನ ಮತ್ತು ಶಿವಾಜಿಯರ ನಡುವೆ ಯುದ್ಧ ಆರಂಭವಾಗಿದ್ದರಿಂದ ಇರಾನಿನ ವಕೀಲನಿಗೆ ವೆಂಗುರ್ಲೆಯ ಮಾರ್ಗದ ಮೂಲಕ ಹೋಗುವುದು ಗಂಡಾಂತರ ಎನಿಸಿದ್ದರಿಂದ ಅವನು ಗೋವೆಯ ಬಂದರ್‌ನಲ್ಲಿ ಇಳಿದನು. ವಿಜಾಪುರದ ಸುಲ್ತಾನನು ವ್ಹಿಸೇರೆಯಗೆ ಪತ್ರವನ್ನು ಕಳಿಸಿ, ಇರಾನಿನ ವಕೀಲನು ತಂದ ಉಡುಗೊರೆಯ(ನಜರಾಣಾ) ಮೇಲೆ ಸುಂಕ ವಿಧಿಸಬಾರದು ವಿನಂತಿಸಿಕೊಂಡನು. ನನ್ನ ಮತವೇನೆಂದರೆ ವಿಜಾಪುರದ ಸುಲ್ತಾನನು ನಮ್ಮ ನೆರೆಯಲ್ಲಿದ್ದಾನೆ. ಅವನಿಗಾಗಿ ನಜರಾಣೆಯನ್ನು ಕಳಿಸಲಾಗಿದೆ. ಅದರ ಸುಂಕವನ್ನು ನಾವು ವಸೂಲಿ ಮಾಡಬಾರದು. ಆದರೂ ಈ ವಿಷಯದ ಕುರಿತು ಗೌರವಾನ್ವಿತ ಸದಸ್ಯರು ತಮ್ಮ ಅಭಿಪ್ರಾಯವನ್ನು ನೀಡಬೇಕು. ಸಮಿತಿಯ ಸಲಹೆಗಾರರು ಒಮ್ಮತದಿಂದ ವ್ಹಿಸೇರೆಯಿಂಯ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಮಾಡಿದರು. ಪ್ರಸ್ತುತ ಗೊತ್ತುವಳಿಯ ಮೇಲೆ ರಾಜ್ಯ ಸಲಹೆಗಾರರ ಸದಸ್ಯರು ರುಜು ಹಾಕಲಾಗಿದೆ.

೫೮

ಗೋವಾ, ದಿ ೧೨ ನವಂಬರ್ ೧೬೬೬

(ಅಲಿ ಆದಿಲಶಹಾನ ತಾಯಿ ಕೊಂಕಣ ಪ್ರವಾಸವನ್ನು ಕೈಕೊಳ್ಳಲಿದ್ದಳು. ಅವಳ ಯೋಗಕ್ಷೇಮ ಮತ್ತು ಉಸ್ತುವಾರಿಯನ್ನು ಸರಿಯಾಗಿ ಕೈಕೊಳ್ಳುವಂತೆ ಆದಿಲಶಹಾನು ಗೋವೆಯ ವ್ಹಿಸೆರೆಯನಿಗೆ ಪತ್ರವನ್ನು ಕಳಿಸಿದ್ದನು. ತಾನು ರಾಜಮಾತೆಯ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳುವುದಾಗಿ ವ್ಹಿಸಿರೆಯು ಅಲಿ ಆದಿಲಶಹಾನಿಗೆ ನೀಡಿದ ಪ್ರತ್ಯುತ್ತರ ಹೀಗಿದೆ.)–

ಬಾದಶಹಾ ಅಲಿ ಆದಿಲಶಹಾ ಅವರಿಗೆ,

ತಾವು ನನ್ನ ಈ ಮೊದಲಿನ ವ್ಹಿಸಿರೆಯಿಗೆ ಬರೆದ ಪತ್ರ ನನಗೆ ಸಚಿವಾಲಯದಲ್ಲಿ ಕಾಣಸಿಕ್ಕಿತು. ತಮ್ಮ ಮಾತೋಶ್ರೀಯವರು ಈ ಪ್ರದೇಶಕ್ಕೆ ಬರಲಿದ್ದಾರೆಂದು ಅವರ ಕುಂದುಕೊರತೆ, ಅಡಚಣೆಯನ್ನು ನಿವಾರಣೆ ಮಾಡುವತ್ತ ಗಮನ ನೀಡುವುದು ನನ್ನ ಕರ್ತವ್ಯವೇ ಆಗಿದೆ. ಆದರೂ ಪ್ರಸ್ತುತ ಪತ್ರವನ್ನು ತೆಗೆದುಕೊಂಡು ಹೋಗುವ ದೂತನ ಬಳಿ, ನಿಮ್ಮ ಮಾತೋಶ್ರಿಯವರ ಬಳಿಗೂ ಬೇರೊಬ್ಬ ದೂತನನ್ನು ಕಳಿಸಿದ್ದು, ಅವರ ಸೂಚನೆಗಳನ್ನು ಕೇಳಿಕೊಂಡು ಬರಲು ತಿಳಿಸಲಾಗಿದೆ. ನಮ್ಮ ಎರಡೂ ರಾಜ್ಯಗಳಲ್ಲಿ ಪೂರ್ವಾಪರದಿಂದಲೂ ನೆಲೆಸಿದ ಗೆಳೆತನಕ್ಕೆ ಅನುಗುಣವಾಗಿ ತಮ್ಮ ಉಪಯೋಗಕ್ಕೆ ಬರುವುದು ನಮ್ಮ ಕರ್ತವ್ಯವೇ ಆಗಿದೆ. ನಮ್ಮ ಸ್ವಾಮಿಯು ಸಹ ಹಾಗೇ ಆದೇಶ ನೀಡಿದ್ದಾರೆ. ಯಾರು ಈ ರಾಜ್ಯವನ್ನು ಜತನ ಮಾಡಿದರೋ, ಆ ನನ್ನ ಮೊದಲಿನ ವ್ಹಿಸಿರೆಯು ಹಾಕಿಕೊಟ್ಟ ರೀತಿ–ರಿವಾಜು ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಲು ನಾನು ಬದ್ಧನಾಗಿರುತ್ತೇನೆ. ತಮ್ಮ ದೈವೀ ಅನುಗ್ರಹದಂತೆ ದೇವರು ನಿಮಗೆ ಬೆಳಕು ತೋರಲಿ.

ಗೋವಾ, ದಿ. ೧೨ ನವಂಬರ ೧೬೬೬

ಗೋವಾ, ದಿ. ೨೨ ನವಂಬರ್ ೧೬೬೬

(ಆದಿಲಶಹಾನ ವಕೀಲನು ಗೋವೆಯ ದರಬಾರಿಗೆ ಹೊರಟಿದ್ದ. ನಾನು ನಿಮಗಾಗಿ ಮನೆಯನ್ನು ಹುಡುಕಿದ್ದೇನೆ. ನಿಮ್ಮನ್ನು ಸ್ವಾಗತಿಸಲು ನಾನು ಕಾತುರನಾಗಿದ್ದೇನೆ- ಎಂದು ಗೋವೆಯ ವ್ಹಿಸಿರೆಯು ಅವನಿಗೆ ಪತ್ರ ಬರೆಯುತ್ತಾನೆ.)

ಬಾದಶಹಾ ಅಲಿ ಅದಿಲಶಹಾನ ವಕೀಲರಿಗೆ,

ನೀವು ಡಿಚೋಲಿಗೆ ಆಗಮಿಸಿದ ಸಂಗತಿ ತಿಳಿದುಬಂತು. ಬಾದಶಹಾ ಅಲಿ ಆದಿಲಶಹಾ ಅವರು ತಮ್ಮನ್ನು ಈ ವಕಾಲತ್ತು ವೃತ್ತಿಗಾಗಿ ಆಯ್ಕೆ ಮಾಡಿ ಗುಣಗ್ರಾಹ್ಯವನ್ನು ಎತ್ತಿ ಹಿಡಿದಿದ್ದಾರೆ ಎನ್ನುವುದರಲ್ಲಿ ಶಂಕೆಯೇ ಇಲ್ಲ. ನಾನು ನಿಮ್ಮ ವಾಸಕ್ಕೆ ಮನೆಯನ್ನು ಹುಡುಕಿದ್ದೇನೆ. ಆದರೂ ನೀವು ಈ ನಗರಕ್ಕೆ ಬರುವ ಒಂದುದಿನ ಮೊದಲು ತಿಳಿಸಬೇಕು. ನಾನು ತಮ್ಮನ್ನು ಸ್ವಾಗತಿಸಲು ತುಂಬ ಕಾತುರನಾಗಿದ್ದೇನೆ. ತಮ್ಮ ಅರೋಗ್ಯ ಚೆನ್ನಾಗಿದೆ ಎಂದುಕೊಳ್ಳುತ್ತೇನೆ. ನೀವು ನನಗೆ ತಮ್ಮ ಸ್ವಾಮಿಯ ಬಂಧು ಮತ್ತು ಗೆಳೆಯನ ಸಮಾನರಾಗಿದ್ದೀರಿ. ದೇವರು ನಿಮಗೆ ಒಳ್ಳೆಯದು ಮಾಡಲಿ.

ಗೋವಾ, ೨೨ ನವಂಬರ ೧೬೬೬

ಕೌಂಟ್ ವ್ಹಿಸಿರೆಯ

೬೦

ಗೋವಾ, ದಿ. ೨೭ ನವಂಬರ್ ೧೬೬೬

(ಗೋವಾ ದರಬಾರಿನ ಆದಿಲಶಹಾನ ವಕೀಲನನ್ನು ನೌಕೆಯನ್ನು ಕಳುಹಿಸಿ ಗೋವಾ ನಗರಕ್ಕೆ ಹೋಗಿ ಬರಮಾಡಿಕೊಳ್ಳಲಾಯಿತು. ಎನ್ನುವುದು ಪ್ರಸ್ತುತ ಪತ್ರದಿಂದ ತಿಳಿದುಬರುತ್ತದೆ.)

ರಾಜ್ಯ ಸಚಿವರಿಂದ ಆದಿಲಶಹಾನ ವಕೀಲರಿಗೆ,

ಪ್ರಸ್ತುತ ಪತ್ರದ ಮೂಲಕ ತಮಗೆ ತಿಳಿಯ ಪಡಿಸುವುದೇನೆಂದರೆ ನಿಮ್ಮ ಸ್ವಾಗತದ ಸಿದ್ಧತೆಯನ್ನು ಇಲ್ಲಿ ಮಾಡಲಾಗಿದೆ. ನಾಳೆ ಭಾನುವಾರ ಮಧ್ಯಾಹ್ನ ತಮ್ಮನ್ನು ಕರೆದೊಯ್ಯಲು ಸರಕಾರಿ ನೌಕೆಯು ಪಿಳಗಾವಿಗೆ ಬರಲಿದೆ. ಈ ನೌಕೆಯು ಧಾವಜಿವರೆಗೆ ಬರಲಿದೆ. ಅಲ್ಲಿಂದ ಬೇರೊಂದು ಸರಕಾರಿ ನೌಕೆಯು ನಿಮ್ಮನ್ನು ಇಲ್ಲಿಗೆ ಕರೆತರುತ್ತದೆ. ಇದು ಹಳೆಯ ಪದ್ಧತಿ ಎನ್ನುವುದು ತಮಗೆ ತಿಳಿದಿರಲಿ.

ದೇವರು ತಮ್ಮನ್ನು ರಕ್ಷಿಸಲಿ.

ಆಯೋಜಿಯೋ ಪಾಯಿಶ್ ದ ಸಾಂದ, ಕೌಂಟ್ ವ್ಹಿಸಿರೆಯಿ,

೬೧

ಗೋವಾ, ದಿ. ೨೩ ನವಂಬರ್ ೧೬೬೬

(ಗೋವೆಯ ರಾಜ್ಯಸಚಿವರು ಆದಿಲಶಹಾನ ಗೋವೆ ದರಬಾರದ ವಕೀಲನಿಗೆ- ನೀವು ಗೋವಾ ನಗರಕ್ಕೆ ಬರುವ ನಿಗದಿಪಡಿಸಲಾಗಿದೆ ಎಂದು ಬರೆಯುತ್ತಾನೆ.)

ಬಾದಶಹಾ ಅಲಿ ಆದಿಲಶಹಾ ಅವರ ವಕೀಲರಿಗೆ ಸಚಿವರಿಂದ ಕೌಂಟ್ ವ್ಹಿಸಿರೆಯ ಅವರು ತಮಗೆ ತಿಳಿಸಿರುವುದೇನೆಂದರೆ, ತಾವು ಭಾನುವಾರ ದಿ. ೨೮ರಂದು ಈ ನಗರವನ್ನು ಪ್ರವೇಶಿಸಬೇಕು. ಏಕೆಂದರೆ ತಾವು ಭಾನುವಾರ ಬರಲಿರುವುದಾಗಿ ಡಂಗುರ ಹೊಡೆಯಲಾಗಿದೆ. ತಮ್ಮ ಆಗಮನ ಮತ್ತಷ್ಟು ವಿಳಂಬವಾಗಬಾರದೆಂದು ವ್ಹಿಸೆರಾಯಿಗೆ ಅನಿಸುತ್ತದೆ. ತಮ್ಮನ್ನು ಸ್ವಾಗತಿಸಲು, ತಮ್ಮ ಕ್ಷೇಮ ದೈವೀ ಅನುಗ್ರಹದಿಂದ ದೇವರು ನಿಮಗೆ ಬೆಳಕು ತೋರಲಿ.

ಗೋವಾ, ೨೩ ನವಂಬರ್ ೧೬೬೬
ಸಚಿವರು

ಆದಿಲಶಾಹಿ ಸಾಹಿತ್ಯ ಸಂಪುಟ : ೧೫ / ೯೮

೬೨

ಗೋವಾ, ದಿ ೨೬ ನವಂಬರ ೧೬೬೬

(ಆದಿಲಶಹಾನ ಸರದಾರನಾದ ಮೀಂಯಾ ಮಹಮ್ಮದಖಾನನ ಸೈನ್ಯವು ಕೊಂಕಣಕ್ಕೆ ಆಗಮಿಸಿದಾಗ ಗೋವೆಯ ವ್ಹಿಸಿರೆಯಿಯು ತನ್ನ ಖಾಸಾ ವಕೀಲನನ್ನು ಪತ್ರ ಕೊಟ್ಟು ಕಳಿಸಿ, ಆದಿಲಶಹಾನ ಕ್ಷೇಮ ಸಮಾಚಾರವನ್ನು ಕೇಳುತ್ತಾನೆ.)

ಅಲಿ ಆದಿಲಶಹಾನ ಸರದಾರನಾದ ಮೀಂಯಾ ಮಹಮ್ಮದಖಾನ ಅವರಿಗೆ, ನಿಮ್ಮ ಆಗಮನವು ಸೈನ್ಯದ ಪ್ರದೇಶಕ್ಕೆ ಬಂದಿರುವುದು ತಿಳಿದ ಕೂಡಲೇ ನಾವು ಉಭಯರಾಜ್ಯಗಳ ಸ್ನೇಹಕ್ಕೆ ಅನುಸರಿಸಿ, ತಮ್ಮ ಸ್ವಾಮಿ ಬಾದಶಹಾ ಅಲಿ ಆದಿಲಶಹಾನ ಕ್ಷೇಮ ಸಮಾಚಾರವನ್ನು ಕೇಳಿ ತಿಳಿದುಕೊಳ್ಳಬೇಕೆಂದು ಅನಿಸಿತು. ಆದರೂ ತಾವು ಪ್ರಸ್ತುತ ವಿಷಯವನ್ನು ತಿಳಿಸಿದರೆ ನನಗೆ ತುಂಬ ಆನಂದವಾಗುತ್ತದೆ. ಹಾಗೆಯೇ ನನ್ನಿಂದೇನಾದರೂ ಸಹಾಯ ಬೇಕಾದಲ್ಲಿ ತಿಳಿಸಿದರೆ, ನಾನು ಸಂತೋಷದಿಂದ ಮಾಡುತ್ತೇನೆ. ಪ್ರಸ್ತುತ ಪತ್ರವನ್ನು ತಮ್ಮ ಬಳಿಗೆ ತೆಗೆದುಕೊಂಡು ಹೋಗುತ್ತಿರುವ ನಮ್ಮ ವಕೀಲನಾದ ರಾಯಜಿ ಶೆಣವಿ ಕೋಠಾರಿ ಅವರಿಂದ ತಿಳಿದುಬಂದಿದ್ದೇನೆಂದರೆ, ತಮ್ಮ ತಂದೆಯವರು ನಮ್ಮ ರಾಜ್ಯದ ಪರಮಮಿತ್ರರಾಗಿದ್ದರು. ಹೀಗಾಗಿ ನೀವೂ ಸಹ ಈ ರಾಜ್ಯದ ಮಿತ್ರರಾಗುತ್ತೀರೆಂದು ಭಾವಿಸುತ್ತೇನೆ.

ದೇವರು ನಿಮಗೆ ಶುಭ ಮಾಡಲಿ.

ಗೋವಾ, ದಿ. ೨೬ ನವಂಬರ ೧೬೬೬
ಕೌಂಟ್ ವ್ಹಿಸಿರೆಯ

ಗೋವಾ, ದಿ ೨೦ ಮಾರ್ಚ್ ೧೬೬೮

(ಗೋವೆಯ ವ್ಹಿಸಿರೆಯು ಕಡಲು ಮೂಲಕ ಪೋರ್ತುಗಲ್‌ಗೆ ಹೊರಟಾಗ ಇತ್ತ ಶಿವಾಜಿ ಮಹಾರಾಜನು ಗೋವೆಯ ಮೇಲೆ ದಂಡೆತ್ತಿ ಹೋಗುವ ಸಿದ್ಧತೆ ನಡೆಸಿದ್ದಾನೆ ಎಂಬ ವಾರ್ತೆಯು ಗೋವೆಯ ನಗರಕ್ಕೆ ಬಂದು ತಲುಪಿತು. ತುರ್ತು ಪರಿಸ್ಥಿತಿಯ ಸಮಯವಾಗಿದ್ದರಿಂದ ಆ ಕಾರ್ಯಾಚರಣೆಯನ್ನು ಕೈಕೊಳ್ಳಲು ವ್ಹಿಸಿರೆಯು ಗೋವೆಯಲ್ಲಿ ಇರಲೇಬೇಕಾದ ಪರಿಸ್ಥಿತಿ ಬಂತು. ಆದ್ದರಿಂದ ಗೋವೆಯ ರಾಜ್ಯದ ಸಲಹಾಸಮಿತಿಯ ವ್ಹಿಸಿರೆಯನ್ನು ಮರಳಿ ಕರೆಸುವ ಗೊತ್ತುವಳಿಯನ್ನು ಸ್ವೀಕರಿಸಿತು.)

ದಿ. ೨೦ ಮಾರ್ಚ್ ೧೬೬೮ರಂದು ಗೋವೆ ನಗರದಲ್ಲಿ ರಾಜ್ಯ ಸಲಹಾ ಸಮಿತಿಯ ಸಭೆ ಸೇರಿತು. ವ್ಹಿಸಿರೆಯು ತಾಯ್ನಾಡಿನ ಹಾದಿಯಲ್ಲಿರುವುದರಿಂದ, ಅವನ ಗೈರು ಹಾಜರಿಯಲ್ಲಿ ರಾಜ್ಯದ ಸಚಿವರು ವ್ಹಿಸಿರೆಯಿಗೆ ಬಂದ ಎರಡು ಪತ್ರವನ್ನು ಸಭೆಯ ಎದುರಿಗೆ ಓದಿದನು. ಈ ಎರಡೂ ಪತ್ರಗಳ ವಿಷಯವು ಶಿವಾಜಿಯು ಗೋವೆಯ ಮೇಲೆ ದಂಡೆತ್ತಿ ಬರುವ ಸಂಭಾವ್ಯ ಸಾಧ್ಯತೆಗೆ ಸಂಬಂಧಿಸಿತ್ತು. ಆದಿಲಶಹಾ ಮತ್ತು ಅವನ ಸರದಾರನು ಗೋವೆಯ ಮೇಲೆ ಆಕ್ರಮಣ ಮಾಡುವಂತೆ ಶಿವಾಜಿಯನ್ನು ಹುರಿದುಂಬಿಸಿದ ನಂಬಲರ್ಹನಾದ ಸಂಗತಿಯು ಆ ಎರಡೂ ಪತ್ರದಲ್ಲಿತ್ತು. ರಾಜ್ಯ ಸಚಿವನು ಸಲಹಾಸಮಿತಿಗೆ ಉದ್ದೇಶಿಸಿ ಹೇಳಿದ್ದೇನೆಂದರೆ 'ಪರಿಸ್ಥಿತಿಯು ತೀರ ಗಂಭೀರವಾಗಿದೆ. ಸಮಿತಿಯವರು ಯೋಗ್ಯ ನಿರ್ಣಯವನ್ನು' ತೆಗೆದುಕೊಳ್ಳಬೇಕು. ಸಮಿತಿಯು ಒಮ್ಮತದಿಂದ ಕೈಕೊಂಡ ನಿರ್ಣಯವೇನೆಂದರೆ 'ಶಿವಾಜಿಯ ಸಂಭಾವ್ಯ ಪರಿಸ್ಥಿತಿಯು ಚಿಂತಾಜನಕವಾಗಿದೆ. ಇಂಥ ಪರಿಸ್ಥಿತಿಯಲ್ಲಿ ವ್ಹಿಸಿರೆಯು ಪ್ರಯಾಣ ರಾಜ್ಯದ ಹಿತ ಮತ್ತು ಸುರಕ್ಷೆಯ ದೃಷ್ಟಿಯಿಂದ ತಮ್ಮ ಪ್ರಯಾಣವನ್ನು ರದ್ದುಪಡಿಸಬೇಕು, ಗೋವೆಗೆ ಮರಳಬೇಕು ಎಂದು ರಾಜ್ಯ ಸಚಿವರು ಅವರಿಗೆ ಪತ್ರವನ್ನು ಕಳಿಸಬೇಕು. ಈ ಪತ್ರವನ್ನು ಅವರಿಗೆ ತಲುಪಿಸಲು ನೌಕಾದಳದೊಂದಿಗೆ ಕಳಿಸಬೇಕು. ಪ್ರಸ್ತುತ ಗೊತ್ತುವಳಿ (ನಿಲುವಳಿ)ಯ ಮೇಲೆ ಸಲಹಾಸಮಿತಿಯ ಸದಸ್ಯರು ರುಜು ಮಾಡಿದರು.

೬೪

ಗೋವಾ, ದಿ ೨೭ ಮಾರ್ಚ್ ೧೬೬೮

(ಗೋವೆಯ ವ್ಹಿಸಿರೆಯಿಯು ಶಿವಾಜಿ ಮಹಾರಾಜರಿಗೆ ಏನು ತಿಳಿಸುತ್ತಾನೆಂದರೆ, ಪೋರ್ತುಗೀಜ ನೌಕಾದಳವು ಸೆರೆಹಿಡಿದ ಅವನ ನೌಕೆಯನ್ನು ಬಿಟ್ಟು ಬಿಡುವಂತೆ ಆಜ್ಞೆ ಮಾಡಲಾಗಿದೆ. ಅವನು ಶಿವಾಜಿ ಮಹಾರಾಜರ ಸ್ನೇಹವನ್ನು ಬಯಸುತ್ತಾನೆ. ಅದೇ ಕಾಲಕ್ಕೆ ಕರ್ನಾಟಕದ ಸೈನ್ಯದ ಕಾರ್ಯಾಚರಣೆಯ ನೆನಪನ್ನೂ ಅವನಿಗೆ ಮಾಡಿಕೊಡುತ್ತಾನೆ. ಸೈನ್ಯದ ಕಾರ್ಯಾಚರಣೆಯಲ್ಲಿ ಪೋರ್ತುಗೀಜರಿಂದ ಶಿವಾಜಿಗೆ ಸಹಾಯ ಲಭಿಸಿತೆ ಇಲ್ಲವೇ ಎನ್ನುವುದು ಮಾತ್ರ ತಿಳಿಯಲು ಯಾವ ಮಾರ್ಗವೂ ಇಲ್ಲ.)

ಶಿವಾಜಿ ರಾಜೇ ಇವರಿಗೆ,

ನನ್ನ ಗೆಳೆತನವನ್ನು ನೀವು ಇಷ್ಟು ಬೇಗ ಬಯಸುತ್ತೀರಿ ಎಂಬ ನಂಬಿಕೆ ನನಗಿರಲಿಲ್ಲ. ನಾನು ಇದನ್ನು ಅಪೇಕ್ಷೆಯೂ ಪಟ್ಟಿರಲಿಲ್ಲ. ನನ್ನ ನೌಕಾದಳವು ನಿಮ್ಮ ನೌಕೆಯನ್ನು ಹಿಡಿದದ್ದು ನನಗೆ ಗೊತ್ತಿರಲಿಲ್ಲ. ಆದರೆ ಮೊಗಲ ಬಾದಶಹಾ ಮತ್ತು ಆದಿಲಶಹಾ ಅವರಂತೆ ನಿಮ್ಮ ಪತ್ರ ಸಹ ಬಂದ ಕೂಡಲೇ ನಾನು ನಿಮ್ಮ ನೌಕೆಯನ್ನು ಬಿಡುಗಡೆ ಮಾಡುವಂತೆ ಆಜ್ಞೆಯನ್ನು ಹೊರಡಿಸಿದೆ...

ಏಕೆಂದರೆ, ಹೀಗೆ ಮಾಡುವುದರಿಂದ ಗೆಳೆತನದ ಸಂಬಂಧವು ಸುರಕ್ಷಿತವಾಗಿರುತ್ತದೆ. ನಿಮ್ಮ ಗೆಳೆತನದ ಬಗ್ಗೆ ನಾನು ತುಂಬ ಕಾತುರನಾಗಿದ್ದೇನೆ. ಆದರೂ ನನಗನಿಸುವುದೇನೆಂದರೆ, ಕರ್ನಾಟಕದ ಸೈನ್ಯ ಕಾರ್ಯಾಚರಣೆಯ ವಿಷಯ ನಿಮಗೆ ನೆನಪೂ ಇರಲಿಕ್ಕಿಲ್ಲ ಮತ್ತು ಭಾವೀ ಕಾರ್ಯಾಚರಣೆಗೆ ಉಪಯುಕ್ತವಾಗಿಸುವ ಈ ವಿಷಯದ ಕುರಿತು... ನಾನು ಈ ವಿಷಯದ ಕುರಿತು ನೇರವಾಗಿ ಬರೆದದ್ದರಿಂದ ಮತ್ತೆ ತಪಶೀಲಾಗಿ ಬರೆಯಬೇಕಾದ ಅಗತ್ಯವಿಲ್ಲ ಎಂದೆನಿಸುತ್ತದೆ. ದೇವರ ಅನುಗ್ರಹದಿಂದ ತಮಗೆ ದೇವರು ಹಾದಿ ತೋರಿಸಲಿ.

ಗೋವಾ, ೨೭ ಮೇ ೧೬೬೮
ಕೌಂಟ್ ವ್ಹಿಸಿರೆಯಿ

ಗೋವಾ, ದಿ ೮ ಮಾರ್ಚ್ ೧೬೬೮

(ಶಿವಾಜಿ ಮಹಾರಾಜ ಮತ್ತು ಪೋರ್ತುಗೀಜರ ಸಂಬಂಧ ಹದಗೆಟ್ಟು ಬಳಿಕ ಶಿವಾಜಿಯ ಪ್ರದೇಶದಲ್ಲಿ ಕೊಲೆ-ಸುಲಿಗೆ-ಬಂಡಾಯದಂತಹ ಕೃತಿಗಳನ್ನು ಮಾಡಿಸಲು ಗೆರಿಲ್ಲಾಗಳನ್ನು ಕಳಿಸುವ ಮತ್ತು ಕಡಲುನೌಕೆಗಳನ್ನು ಆದಿಲಶಹಾನಿಗೆ ಮಾರುವ ಉದ್ದೇಶದಿಂದ ಗೋವೆಯ ವೈಸರಾಯನು ರಾಜ್ಯ ಸಲಹಾ ಸಮಿತಿಯ ಸಲಹೆಯನ್ನು ಕೇಳುತ್ತಾನೆ. ಸಮಿತಿಯು ಅವನ ಯೋಜನೆಗೆ ಒಪ್ಪಿಗೆಯನ್ನು ನೀಡುತ್ತದೆ. ಒಂದು ಸಂಧಾನದ ಮೇರೆಗೆ ದಾಂಡಾ ಸಿದ್ಧಿಯು ಪೋರ್ತುಗಾಲ ರಾಜನ ಮಾಂಡಲೀಕನಾದ ಉಲ್ಲೇಖ ಈ ಪತ್ರದಲ್ಲಿದೆ.)

ವೈಸರಾಯನೂ ಮತ್ತು ಪೋರ್ತುಗೀಜ ಹಿಂದೂಸ್ತಾನದ ಕ್ಯಾಪ್ಟನ್ ಜನರಲ್‌ನಾದ ಕೌಂಟ್ ದ ಸಾ ವ್ಹಿಸೆಂಟನು ದಿ. ೮ ಮಾರ್ಚ್‌ರಂದು ರಾಜ್ಯ ಸಲಹಾ ಸಮಿತಿಯ ಸಭೆಯನ್ನು ಕರೆದನು. ಸಭೆಯೆದುರಿಗೆ ಇಟ್ಟ ವಿಷಯಗಳಲ್ಲಿ ಶಿವಾಜಿರಾಜನಿಗೂ ಸಂಬಂಧಿಸಿದ ವಿಷಯವೂ ಇತ್ತು. ಅವರು ಹೇಳಿದರು- ಶಿವಾಜಿ ರಾಜನು ಕೊಂಕಣದಲ್ಲಿ ತುಂಬ ಉಪಟಳವನ್ನು ನೀಡುತ್ತಿದ್ದಾನೆ. ಅದರಿಂದಾಗಿ ಆ ಪ್ರದೇಶದ ನೆಮ್ಮದಿಯಂತೂ ಹಾಳಾಗಿದೆ. ಅಲ್ಲದೆ ಗೋವೆಯ ವ್ಯಾಪಾರದ ಅನಿಷ್ಟ ಪರಿಣಾಮವೂ ಬೀರಿದೆ. ಈ ಸುಪರಿಚಿತ ದರೋಡೆಕೋರನು ನಮ್ಮ ಸಾಷ್ಟಿ ಮತ್ತು ಬಾರ್ದೇಶಪ್ರಾಂತದ ಮೇಲೆ ಆಕ್ರಮಣ ಮಾಡಿದ್ದು ಸಭೆಗೆ ಗೊತ್ತೆಯಿದೆ. ಹೀಗಾಗಿ ಅವನಿಗೆ ಶಹ ನೀಡಿ ಓಡಿಸುವ ಯೋಜನೆಯನ್ನು ನಾನು ರೂಪಿಸಿದ್ದೇನೆ. ನಮ್ಮ ಆಶ್ರಯ ಪಡೆದ ಕೇಶವ ನಾಯಿಕ ಮತ್ತು ಲಖಮ ಸಾವಂತ ಎಂಬ ಇಬ್ಬರು ದೇಸಾಯಿಗಳಿಗೆ ರಹಸ್ಯವಾಗಿ ಶಸ್ತ್ರ, ಮದ್ದುಗುಂಡು, ನಾಲ್ಕು ತೋಪಗಳನ್ನು ನೀಡಿ ಶಿವಾಜಿಯ ರಾಜ್ಯದಲ್ಲಿ ಪುಂಡತನವನ್ನು ಮಾಡಿಸುವ ಉಪಾಯ ನನ್ನದಾಗಿದೆ. ಎರಡನೇ ಗೊತ್ತುವಳಿ ಏನೆಂದರೆ, ಆದಿಶಹಾನ ವಕೀಲನಾದ ಮಿರ್ಜಾ ಯುಸುಫಖಾನ್‌ನು ನಮ್ಮ ಬಳಿಗೆ ಬಂದು ಕೆಲವು ಯುದ್ಧನೌಕೆಗಳನ್ನು ಕೊಡುವಂತೆ ಬೇಡುತ್ತಿದ್ದಾನೆ. ನಮ್ಮ ಮದ್ದುಗುಂಡಿನ ಕೊಠಾರಿಯಲ್ಲಿ ನಿಷ್ಕ್ರಿಯವಾದ ನಾಲ್ಕು ಕಿರು ತೋಪುಗಳಿವೆ. ಅದನ್ನು ಆದಿಲಶಹಾನಿಗೆ ನೀಡಬೇಕೆಂಬ ಯೋಚನೆ ನನ್ನದು. ಹೀಗೆ ಎಲ್ಲ ಬಗೆಯಿಂದ ಶಿವಾಜಿಯ ವೈರಿಗಳಿಗೆ ನಾವು ಸಹಾಯ ಮಾಡಿದ್ದೇ ಆದರೆ, ಅವನಿಂದಾಗುವ ಉಪಟಳಕ್ಕೆ ನಿಯಂತ್ರಣ ಹಾಕಿದಂತಾಗುತ್ತದೆ.

ಆಗ ಸರ್ವ ಸಲಹೆಗಾರರು ಒಮ್ಮತದಿಂದ ನೀಡಿದ ಅಭಿಪ್ರಾಯವೇನೆಂದರೆ, ಶಿವಾಜಿಗೆ ಉಪದ್ರವ ನೀಡಲು ನಮ್ಮ ಆಶ್ರಯಕ್ಕೆ ಬಂದ ದೇಸಾಯಿಗಳಿಗೆ ತೋಫು,

ಶಸ್ತ್ರ ಮತ್ತು ಮದ್ದುಗುಂಡುಗಳನ್ನು ನೀಡಿ ಶಿವಾಜಿಯ ರಾಜ್ಯದಲ್ಲಿ ಪುಂಡಾಟ ಮಾಡಲು ಕಳಿಸಿಕೊಡುವುದು ಮತ್ತು ಆದಿಲಶಹಾನ ವಕೀಲನಾದ ಮಿರ್ಜಾ ಯೂಸುಫಖಾನನಿಗೆ ಕಡಲುತೋಫುಗಳನ್ನು ಮಾರಾಟ ಮಾಡುವುದು.

ಸಲಹಾ ಸಮಿತಿಯು ಇದೇ ಸಭೆಯಲ್ಲಿ ವೈಸರಾಯನು ಜಾಹೀರ ಮಾಡಿದ್ದೇನೆಂದರೆ– ದಂಡಾ ರಾಜಾಪುರದ ಸಿದ್ದಿಯ ಮತ್ತು ತಮ್ಮ ನಡುವೆ ಸಂಧಾನವಾಗಿದ್ದು, ಅದರ ಪ್ರಕಾರ ಅವನು ನಮ್ಮ ಸ್ವಾಮಿಯ ಮಾಂಡಲಿಕತ್ವವನ್ನು ಸ್ವೀಕರಿಸಿದ್ದಾನೆ. ಅವನ ಒಂದು ನೌಕೆ ಮತ್ತು ಐದು ಕುದುರೆಗಳನ್ನು ಈ ಹಿಂದೆ ಸೆರೆಹಿಡಿಯಲಾಗಿತ್ತು. ಈಗ ಸಂಧಾನವಾಗಿದ್ದರಿಂದ ಅವುಗಳನ್ನು ಮುಕ್ತಗೊಳಿಸುವ ವಿಚಾರ ನನ್ನದಾಗಿದೆ.

ಸಲಹೆಗಾರರು ವೈಸರಾಯನ ಪ್ರಸ್ತುತ ಗೊತ್ತುವಳಿಯನ್ನು ಒಮ್ಮತದಿಂದ ಮಂಜೂರು ನೀಡಿದರು.

೬೬

ಗೋವಾ ದಿ. ೧೬೬೮

(ಶಿವಾಜಿ ಮಹಾರಾಜರ ವಿರುದ್ಧ ಪುಂಡಾಟಿಕೆ ಮಾಡುವ ದೇಸಾಯಿ ಕೇಶವ ನಾಯಕನು 'ಖೋಲ' ಎಂಬ ಗ್ರಾಮದಲ್ಲಿ ಬಂದು ನೆಲೆಸಿದ್ದನು. ಈ ಗ್ರಾಮವು ಪೋರ್ತುಗೀಜರ ಸೀಮೆಯೊಳಗಿದೆಯೋ, ಆದಿಲಶಹಾನ ಸೀಮೆಯೊಳಗೆ ಎಂಬ ಬಗೆಗೆ ತಂಟೆಯಿತ್ತು. ಈ ವಿಷಯದ ಬಗ್ಗೆ ಗೋವೆಯ ವೈಸರಾಯನು ವಿಜಾಪುರದ ಅಧಿಕಾರಿಯಾದ ಸಿದ್ದಿ ತುರುಪನಿಗೆ ಪತ್ರ ಬರೆಯುತ್ತಾನೆ.) [ಶಿವಾಜಿಯು ಆದಿಲಶಹಾನ ಪ್ರದೇಶವನ್ನು ಗೆದ್ದ ಬಳಿಕ ಖೋಲ ಅವನ ಅಧಿಪತ್ತೆಯಲ್ಲಿ ಬಂದಿತು.]

ಸಿದ್ಧಿ ತುರುಸು ಇವನಿಗೆ,

ನಿಮ್ಮ ಪತ್ರದಿಂದ ತಿಳಿದು ಬಂದಿರುವುದೇನೆಂದರೆ, ನಮ್ಮ ರಾಜ್ಯದಿಂದ ಗಡಿಪಾರು ಮಾಡಲಾದ ದೇಸಾಯಿ ಕೇಶವ ನಾಯಿಕನು ಸದ್ಯ 'ಖೋಲ' ಎಂಬಲ್ಲಿ ಇದ್ದಾನೆ. ಒಂದು ವೇಳೆ ಖೋಲ ಎಂಬ ಊರು ನಮ್ಮ ರಾಜ್ಯದೊಳಗೆ ಇದ್ದಲ್ಲಿ, ತಮ್ಮ ಸೂಚನೆಯಂತೆ ನಡೆದುಕೊಳ್ಳುತ್ತೇನೆ. ಆದರೆ ಈ ಹಳ್ಳಿ ನಮ್ಮದಲ್ಲವೆಂದು ಬಾದಶಹಾ ಅಲಿ ಆದಿಲಶಹಾನು ಲಿಖಿತವಾಗಿ ತಿಳಿಸಿದ್ದಾನೆ.

ಗೋವಾ ದಿ.೮ ಮಾರ್ಚ್ ೧೬೭೭

(ಪೋರ್ತುಗೀಜ ಮತ್ತು ಕರ್ನಾಟಕದ ರಾಜರ ನಡುವೆ ಯುದ್ಧವಾರಂಭ ಗೊಂಡಿದ್ದರಿಂದ ಕರ್ನಾಟಕದ ಕೆಲವು ಬಂದರಿನಲ್ಲಿ ಅಕ್ಕಿಯಿಂದ ತುಂಬಿದ ಶಿವಾಜಿಯ ನೌಕೆಗಳು ಸಿಕ್ಕಿಬಿದ್ದಿವೆ. ಈ ನೌಕೆಗಳಿಗೆ ಹಾದಿ ಮಾಡಿಕೊಡುವಂತೆ ಕೊಂಕಣದ ಸುಬೇದಾರನಾದ ಮಹಾದಜಿ ಪಂಡಿತನು ಗೋವೆಯ ವೈಸರಾಯನಿಗೆ ಪತ್ರ ಬರೆದಾಗ, ಅವನು ನೀಡಿದ ಪ್ರತ್ಯುತ್ತರ ಹೀಗಿದೆ– ಯುದ್ಧದ ನಿರ್ಣಯವಾಗದ ಹೊರತು ಬಂದರಿನ ದಿಗ್ಬಂಧನವನ್ನು ರದ್ದು ಪಡಿಸುವಂತಿಲ್ಲ. ಕೊಂಕಣದ ಸರ್ ಸುಭೇದಾರ ಮಹಾಜದಿ ಪಂಡಿತರಿಗೆ,)

ನೀವು ಬರೆದಂತೆ, ಕರ್ನಾಟಕದ ಬಂದರಿನಲ್ಲಿ ಶಿವಾಜಿಯ ಅಕ್ಕಿ ತುಂಬಿದ ನೌಕೆಗಳು ಸಿಕ್ಕಿಬಿದ್ದಿದ್ದು, ಅವುಗಳಿಗೆ ಬಂದರಿನಿಂದ ಹೊರಗೆ ಹೋಗಲು ಅನುಮತಿ ನೀಡಬೇಕು. ಈ ವಿಷಯದ ಬಗೆಗೆ ಶಿವಾಜಿ ರಾಜನಿಗೆ ವಿವರವಾಗಿ ಬರೆದು ತಿಳಿಸಿದ್ದೇವೆ. ಎಲ್ಲಿವರೆಗೆ ಕರ್ನಾಟಕ ರಾಜ್ಯದೊಂದಿಗೆ ನಮ್ಮ ಯುದ್ಧ ಶುರುವಿರುವುದೋ ಅಲ್ಲಿವರೆಗೆ ಆ ರಾಜ್ಯದ ಬಂದರಿನ ದಿಗ್ಬಂಧನವನ್ನು ರದ್ದುಪಡಿಸುವಂತಿಲ್ಲ. ಸಿಕ್ಕಿಬಿದ್ದ ನೌಕೆಗಳನ್ನು ಹೊರಬಿಡಲು ನಮ್ಮ ಅನುಮತಿ ಸಿಗಲಾರದು. ಕರ್ನಾಟಕ ರಾಜ್ಯದ ಒಬ್ಬ ವಕೀಲನು ಸಂಧಾನ ಮಾಡಿಕೊಳ್ಳಲು ಇಲ್ಲಿಗೆ ಆಗಮಿಸಿದ್ದಾನೆ. ಸಂಧಾನ ಯಶಸ್ವಿಯಾದರೆ, ಸಿಕ್ಕಿಬಿದ್ದ ನೌಕೆಗಳಿಗೆ ಹೊರಗೆ ಹೋಗಲು ಅವಕಾಶ ಸಿಗಬಹುದು. ಅದೂ ಅಲ್ಲದೆ ಈ ರಾಜ್ಯದೊಂದಿಗೆ ಶಿವಾಜಿರಾಜನ ಗೆಳೆತನವಿರುವುದರಿಂದ ಅವರ ನೌಕೆಗಳಿಗೆ ಹಾದಿ ಮಾಡಿಕೊಡುವ ಎಲ್ಲ ಸಹಾಯ ನೀಡಲು ನಾವು ಸಿದ್ಧರಿದ್ದೇವೆ.

ಗೋವಾ, ದಿ ೨೮ ಜನವರಿ ೧೬೭೭
ಅಂತೋನಿಕ ಪಾಯಿಶ ದ ಸಾಂದ

■

II. ಸನದು ಪತ್ರಗಳು

೧

ವಿಜಾಪುರ ಬಾದಶಹಾನ ಸನದು :

ಸನದು ಪತ್ರ ಬೇಶಮಿ ತಾರೀಖ ಛ ೧೧ ಮಾಹೇ ರಮಜಾನ. ಸೋಮವಾರ, ಕಾರ್ತಿಕಮಾಸ, ಮೃಗಶಿರಾ ನಕ್ಷತ್ರ, ಸುರಸನ್ ೯೩೦ ಇಬ್ರಾಮ ಜಗದ್ಗುರು ಬಾದಶಹಾ ಮತ್ತು ಕಾಜಿ, ಕೋತವಾಲ ತ್ರಿವರ್ಗ ಜಮಿದಾರ ಶಾಹೀ ಕಿಲ್ಲೆ, ಸೋ ಸರಕಾರ, ೩೨ ಜಿಲ್ಲೆ, ೧೮ ಪ್ರದೇಶ, ೯ ಠಾಣೆ ದೇಶಮುಖ ಮತ್ತು ದೇಶಪಾಂಡೆ, ನಾಡಗೌಡ, ಭೋರಗಾಂವ, ದಾರೂಲಜಫರ ವಿಜಾಪುರ ಮಾಮಲೇದಾರ ನೂರತಾ. ಹಣಮ ನಾಯಿಕ ವಲ್ಲದ ಮಸಿಗಿ ನಾಯಿಕ. ನಾಯಿಕವಾಡಿ, ಪರಗಣಾ–ತಾಳಿಕೋಟೆ ಇವರ ಆಡಳಿತದಲ್ಲಿ ಸೈನ್ಯವನ್ನು ಕಟ್ಟಿ, ವಿಜಾಪುರ ಬಾದಶಹಾರ ಹತ್ತಿರ ನೆಲೆಸಿ ಚಾಕರಿಯನ್ನು ಕೈಕೊಂಡರು. ಅವರವರ ನಡುವೆ ಜಗಳತಂಟೆ ನಡೆದು, ನಿಮ್ಮ ಬೇಡಿಕೆ ಏನು? ಎಂದು ಕೇಳಿದಾಗ ಅವರು ಉತ್ತರಿಸಿದ್ದು ಹೀಗೆ–ಒಂದು ಕೋಣದ ಶಿರಕ್ಕೆ ಒಂದರ ಮೇಲೊಂದರಂತೆ ಏಳು ಹೂಮಾಲೆಗಳನ್ನು ಕಟ್ಟಿ ತಡಿಕೆಯ ಆಚೆಗೊಯ್ದು ನಿಲ್ಲಿಸಬೇಕು. ಸಕಲ ನಾಯಿಕರು, ಸಾಹೇಬರು ಕಚೇರಿಯಲ್ಲಿ ಕೂತು ನೋಡುವದು. ನಾವು ಎರಡು ಬಾಣಗಳನ್ನು ಬಿಡುತ್ತೇವೆ. ಅದು ಎಲ್ಲವನ್ನು ಕತ್ತರಿಸಿ ಹಾಕಿ ಕೋಣವನ್ನು ಕೊಲ್ಲುವದು ನಮ್ಮ ಉದ್ದೇಶ. ಸಾಹೇಬರು ಅವರಿಗೆ ಇಷ್ಟವಾದ ಉಡುಗೊರೆ, ಕಾಣಿಕೆ ನೀಡಬಹುದು. ಈ ರೀತಿ ನಿರ್ಣಯ ಮಾಡಿ ಮರುದಿನ ನಾಯಿಕರ ಸರಕಾರದ ಸೂಚನೆಯಂತೆ ಕೋಣವನ್ನು ತಂದು ಅವರಿಂದ ಬಾಣ ಪ್ರಯೋಗ ಮಾಡಿಸಿದರು. ಬಾಣ ಎಲ್ಲವನ್ನೂ ಸೀಳಿ ಹಾಕಿ ಕೋಣ ಸತ್ತು ಬಿದ್ದಿತು. ಮೇಲೆ ಹೇಳಿದಂತೆ ಯಜಮಾನನಿಗೆ ಕಾಣಿಕೆ ನೀಡಿದರು. ಕಾಣೂರಿನ ಒಟ್ಟೂ ಭೂಮಿಯು ೬೬ ಚಾವರ(ಒಂದು ಚಾವರ=೧೨೦ ಚೌ.ಬೀಘಾ) ಅದರಲ್ಲಿ ೨೦ ಚಾವರ ನಾಯಿಕನಿಗೆ, ೧೦ ಚಾವರ ಮೊಡಿನ, ೧೦ಚಾವರ ರೇಗಡ, ಒಟ್ಟೂ ೨೦ ಚಾವರ ಇನಾಮ ನೀಡಲಾಯಿತು. ಅದೂ ಅಲ್ಲದೆ ಧೋತರ, ಬಟ್ಟೆ, ಆಹಾರಧಾನ್ಯ, ಮೊದಲ

ಕಂತಿನಲ್ಲಿ ೧೦ ರೂಪಾಯಿ. ಹಾಗೂ ಕಸಬುದಾರರು, ಊರಲ್ಲಿ ಲಗ್ನ ನಡೆದರೆ ಗುಗ್ಗಳಕ್ಕಾಗಿ ಎಮ್ಮೆ ಒಂದು, ಅಳತೆ ರಹಿತ ಪಳಗಿ, ನೌಟಾಕ ಎಣ್ಣೆ, ವಸ್ತ್ರ, ಹಬ್ಬ ಹುಣ್ಣಿವೆಗೆ ಊರ ಅಂಗಡಿಗೆ ನೀಡಬೇಕು. ನೇಕಾರ ಮತ್ತು ಕುರುಬರನ್ನು ರಿವಾಜಿನಂತೆ ನಡೆಸಿಕೊಳ್ಳಬೇಕು. ವರ್ಷಕ್ಕೊಂದು ಚಪ್ಪಲಿ ಜೋಡು, ತಾಳಿಕೋಟಿ ಪ್ರದೇಶದ ಹಳ್ಳಿಗಳಲ್ಲಿ ನಾಯಿಕನಿಗೆ ಕುರಿ ನೀಡಬೇಕು. ಈ ರೀತಿಯಲ್ಲಿ ರೀತಿ ರಿವಾಜಿನಂತೆ ನಡೆಸಿಕೊಂಡು ಬರಬೇಕೆಂದು ನೀಡಿದ ಸನದು.–

ಸಾಕ್ಷಿ	ಮೋಹರು
೧. ರಾಣಿ ದೇವಜಿ ದೇಶಮುಖ	ಸುರಪಾ ಪಟ್ಟಣಶೆಟ್ಟಿ
೧. ಗುಂಡೊ ಶಾಮಜಿ ನಾಡಗೌಡ	ಕಮಾಲಖಾನ ಉಮರಾವ
೧. ಶೇಷದೇವಜಿ ದೇಶಪಾಂಡೆ ತರ್ಫ್ ಹವೇಲಿ	ಉದಾಡಪಾ ಪಾಟೀಲ
೧. ರಾಜೀಖಾನ ಉಮರಾವ	ಸಿಲೇಮಾನ ಉಮರಾವ
೧. ಪೀರ ಮಹಮದ ಉಮರಾವ	ಲಾಡಖಾನ ಉಮರಾವ
೧. ಅಲ್ಲಿ ಸಾಹೇಬ ಉಮರಾವ	ಹುಸೇನ ಸಾಹೇಬ ಉಮರಾವ
೧. ಗುಜರತ ಸಾಹೇಬ ಉಮರಾವ	ಮೊಮದಖಾ ಉಮರಾವ
೧. ಪರವತಗೌಡ ಪಾಟೀಲ	ಲಿಂಗನಗೌಡ ಪಾಟೀಲ, ಕಸಬೆ
ಬಸವನಗೌಡ ಪಾಟೀಲ, ಕಸಬೆ	ಹವೇಲಿ ಪ್ರಾಂತ ಚಾನಕೇಟ ಬಾಗೇವಾಡಿ.

ಮೊಹರು

ನರಸೋ ಶ್ರೀನಿವಾಸ ದೇಶಪಾಂಡೆ, ದೇಶಕುಲಕರ್ಣಿ, ಕಸಬೆ ಮಜಕೂರ ಮರಿನಾಯಕ ಪಾಡಾವರ ಪ್ರದೇಶ ಮಜಕೂರು.

೨

ಕೋಬಜಿ ರಾಜೇಸಾಹೇಬರು ನೀಡಿದ ಸನದು.

ಅಜರಟಖಾನ ಮಶರೂಲ್ ಹಜರತಿ ರಾಜಾಧಿರಾಜ ಶ್ರೀ ಕೋಬಜಿ ರಾಜೇಸಾಹೇಬ ಖರಾಡೆ. ದಾಮ ದೌಲತ ಹು ತಹಾ ಕಾರಕುನಾನಿ ಹಾಲ ಮತ್ತು ಇಸ್ತಕಬಲ್ ಮತ್ತು ದೇಸಾಯಿಯವರಿಗೆ ಸಮ್ಮತಿಯಿದೆ. ಮಾಮಲೇ ಬಾಗಲಕೋಟ ಮಾಲುಮ ದಾನದ ಸುರುಸನ್ ತಿಸಾ ಸಲಾಸೀನ ಅಲಫ. ಫಮಣಭಟ ಬಿನ್ ವಿಠ್ಠಲ ಭಟ್ಟ ಪುರೋಹಿತ. ಮಾಮಲೇ ಮಜಕೂರ, ಮುಕ್ಕಾಂ ಮೌಜೇ ಕಿರಸುರ, ಸಮ್ಮತ ಹವೇಲಿ ಹುಜೂರರಿಗೆ ತಿಳಿದು ಬಂದಿರುವದೇನೆಂದರೆ, ನೀವು ಸುಖರೂಪದಲ್ಲಿ ಕಿರಸುರಿನಲ್ಲಿರುತ್ತೀರಿ. ಗ್ರಾಮದಲ್ಲಿದ್ದುಕೊಂಡೇ ಅಧ್ಯಯನ ಮತ್ತು ಪುರಾಣ ಹೇಳುತ್ತೀರಿ. ತಮ್ಮ ಆರೋಗ್ಯ ಸರಿಯಿಲ್ಲ. ತಮಗೆ ಕಾಣಿಕೆ ನೀಡಿ ಆರೋಗ್ಯ ಸುಧಾರಿಸಿದರೆ ನೀವು ಅಲ್ಲಿದ್ದು ಪಾಠ-ಪ್ರವಚನ ಮಾಡಬಲ್ಲಿರಿ ಎನ್ನುವದು ತಿಳಿದುಬಂತು. ಆದರೂ ಭಟ ಮಜಕೂರಗೆ ಈ ಕುರಿತು ಹೇಳಲಾಗಿದೆ. ತಪಶೀಲು-

ಇನಾಮ ಜಮೀನು ದುಖಮ ರೆಗಡಿ	ಪ್ರತಿವರ್ಷದ ಜಕಾತಿ ಮತ್ತು ಖಳ
ದರಸವಾದ ಮನಾಜೇ ಕಿರಸುರ	ಬೆಂಡಸುರು ಪ್ರತಿದಿನ ರೂ ಹನ್ನೆರಡು
ದೇಖಾಲ ಸಖ್ತಿ ಮತ್ತು ಕಂದಾಯ ಮತ್ತು	
ಜಿನಸು, ರಿವಾಜಿನಂತೆ ***	

....

ಈ ಬಗೆಯಲ್ಲಿ ಯೋಜನೆ ಹಾಕಲಾಗಿದೆ. ಭಟ ಮಜಕೂರನಿಗೆ ಇಲ್ಲಿಯ ಇನಾಮ ಭೂಮಿಯ ಸೀಮೆಯನ್ನು ನಿಶ್ಚಿತಗೊಳಿಸಿಕೊಡಬೇಕು. ಪ್ರತಿದಿನ ಸದರಿ ಪ್ರಮಾಣದಲ್ಲಿ ತಲೆಪಟ್ಟಿ ನೀಡಬೇಕು. ಇದಕ್ಕೆ ಹಿಂದೂವಾಗಲಿ, ಮುಸಲ್ಮಾನರಾಗಲಿ ಅಡ್ಡಿಯುಂಟು ಮಾಡಿದಲ್ಲಿ ಆಣೆಯಿದೆ. ಸಂತಾನದವರು. ದತ್ತಕ ಸಂತತಿ ಮತ್ತು ಇನಾಮ ಮತ್ತು ತಲೆಪಟ್ಟಿ ಮುಂದುವರಿಸಬೇಕು. ಪ್ರತಿವರ್ಷ ಹೊಸ ಗ್ರಾಮ ಪತ್ರದ ಬಗ್ಗೆ ಆಕ್ಷೇಪವೆತ್ತಬಾರದು. ತಾರೀಕ ಬರೆದು ಅಸಲೀ ಗ್ರಾಮಪತ್ರವನ್ನು ಭಟ ಮಜಕೂರನಿಗೆ ಮರಳಿ ನೀಡಬೇಕು. ತಾರೀಖ ೧೦ ಮಾಹೇ ಜಮಾದಿಲಾಖರ.

ಸುಲ್ತಾನ ಮಹಮ್ಮದ ಸಾಹೇಬರು ನೀಡಿದ ಸನದು :

ಸ್ವಸ್ತಿಶ್ರೀಯಾಭ್ಯುದಯ ಶಾಲಿವಾಹನ ಶಕೆ ೧೫೮೯ ಸರ್ವಜೀತ ನಾಮ ಸಂವತ್ಸರೇ, ಭಾದ್ರಪದ ಶುದ್ಧ ಪಂಚಮಿ, ಸೋಮವಾರ ಪುಣ್ಯಕಾಲ, ಹಜರತ್ ಸುಲ್ತಾನ ಮಹಮ್ಮದ ಸಾಹೇಬರು ಭೂಮಿಯ ರಾಜ್ಯಕಾರಭಾರ ಮಾಡುತ್ತಿರುವ ಕಾಲದಲ್ಲಿ ಹಲವು ಬಿರುದಾಂಕಿತ ಮಹಾಮಹಂತ ಅಮೀನ ಭಾವೀ ಮಠ ಸಿಂಹಾಸನಾಧೀಶ್ವರ ಚಿಕ್ಕ ಶಾಂತದೇವರು ಇವರಿಗೆ ಅಮೀನ ಭಾವೀ ಪೊ. ದೇಸಾಯಿ ಹೋಜವದಿ ಆಕಾವ್ವ ಚಿಕ್ಕದೇವ ವಡೇರ ಮತ್ತು ದೇಶಪಾಂಡೆ ಕೊನೆಯ ಮಗ ಕೃಷ್ಣಪ್ಪನು ಬರೆದು ಕೊಟ್ಟ ಇನಾಮ ಪತ್ರ ಹೀಗಿದೆ–ಸುರುಸನ್ ಸಮಾನ ಅರ್ಬೈನ್ ಅಲಫ. ಸಾಲಗುದಸ್ತ ವ್ಯಯನಾಮ ಸಂವತ್ಸರದಲ್ಲಿ ನಮ್ಮ ಪ್ರಾಂತ ದಂಡಾರಾಜಪುರ, ಸಿದ್ಧಿ ಅಂಬರನಿಗೆ ನೀಡಿದಾಗ, ಅವನಿಂದ ಸಿದ್ದಿರಾಜೇ ಎನ್ನುವವನು ಪ್ರದೇಶದ ಹವಾಲ್ದಾರಿಗೆ ಬಂದು ನಿಮ್ಮ ಗುರುಸ್ವಾಮಿ ರಾಜಶ್ರೀ ಹಿರೇಶಾಂತ ದೇವರು ಇವನಿಗೆ ಭಾಷೆ ನೀಡಿ, ಕಪಟತನದಿಂದ ಹಿಡಿದು ಮಠದ ಆಸ್ತಿಪಾಸ್ತಿಗಳನ್ನೆಲ್ಲ ವಶಪಡಿಸಿಕೊಂಡು, ಸಂಪೂರ್ಣ ವತನವನ್ನು ಅಮಾನತ್ತುಗೊಳಿಸಿ, ಅಯ್ಯರಿಗೆ ಹೊಡೆದು ಬಡಿದು ಮಾಡಿದಾಗ ಅವರು ತೀರಿಕೊಂಡರು. ಬಳಿಕ ಸಿದ್ಧಿರಾಜೇಯು ನಿಮಗೆ ಉಡುಗೊರೆ ವಗೈರೆ ನೀಡಿ ಮಠವನ್ನು ನಿಮ್ಮ ಸ್ವಾಧೀನಕ್ಕೆ ನೀಡಿದಾಗ, ಫೇತಿ ಅಯ್ಯರ ಶಿಷ್ಯ ಮುಂತಾದವರು ಹೊರಬಿದ್ದು, ಅಲ್ಲಲ್ಲಿ ವಾಸಮಾಡುತ್ತ ಇರುವಾಗ ಸದರಿ ಪ್ರಾಂತವನ್ನು ರಾಜಪುರಿಯಿಂದ ಕಿತ್ತುಕೊಂಡು ರಾಜಶ್ರೀ ಅದಮ ಸಾಹೇಬನಿಗೆ ನೀಡಲಾಯಿತು. ಗ್ರಾಮಗಳ ಕಂದಾಯಕ್ಕೆ ಅಡ್ಡಿಯಾದದ್ದರಿಂದ ಹಿರಿಯ ಗುಮಾಸ್ತ ಮತ್ತು ನಾನು ಪಿರಬ ಉರ್ಫ್ ದೇಸಾಯಿ ಗೌಡರನ್ನು ಕಂಡು ಹಿರಿಯರಾಗಿ ನಿರ್ಣಯ ಬೇಕೆಂದು ಹೇಳಿಕಳಿಸಿದೆವು. ಆಗವರು ಮಧ್ಯಸ್ಥರಾಗಿ ರಾಜಶ್ರೀ ಅಮರಗೋಳ ಮಠದ ಸಂಗಪ್ಪದೇವರು ಮತ್ತು ಮಂತ್ರಿ ವಡಿಯೆ ಬಸವಲಿಂಗ ದೇವರು. ನವಲಗುಂದ ಮಠದ ಬಸವಲಿಂಗ ದೇವರು, ನರೇಂದ್ರಮಠದ ವಿರೂಪಾಕ್ಷಿ ದೇವರು, ಕುಸೇಗಲ್ ಮಠದ ಗುರುಪಾದ ದೇವರು, ಧಾರವಾಡ ಮಠದ ದೇವರು, ಸಾರಂಗ ಮಠದ ಭಂಡಾರಿ ಚೆನ್ನವರ ದೇವರು, ಹೆಬಳಿ ಮಠದ ಬಸವಲಿಂಗ ದೇವರು, ಗೈರೆಮೋರೆ ಮಹಂತ, ನರೇಂದ್ರ ಪ್ರದೇಶದ ದೇಸಾಯಿ ಕಾರಗೌಡ, ಸುಮಗೋಲ ಭರಮನಗೌಡ, ಸಿವನಗೌಡ, ಮಂಟೂರ ಪರ್ವತಗೌಡ, ಕಾವಳವಾಡ ಬಸನಗೌಡ, ಬೆಟನೂರ ಮಾದನಗೌಡ, ಕುಮಿ ಕೈಚನಗೌಡ, ಯೆಳಾರಾಮು ಜೇಟಿಗೌಡ, ಚನ್ನಯಗೌಡ, ಬೆಲಹಾಲ ಭರಮನಗೌಡ, ಧಾರವಾಡ ಮಡಿನರಾ ಯಮಾಜಿ ನಾಯಿಕ, ಜಂಗಮ ಗೌಡಚೌ, ಪಟ್ಟಣಶೆಟ್ಟಿ ಚೆನ್ನಿಶೆಟ್ಟಿ,

ಕೋಮಟಿ ಸಿದ್ದಲಿಂಗಶೆಟ್ಟಿ, ಮನಿಗಟಿ ಮಲ್ಲಪ್ಪ ಮತ್ತು ಎಲ್ಲೆಡೆಯ ಜಮಿನ್ದಾರರು ಮತ್ತು ನಿಮ್ಮ ಶಿಷ್ಯಗಣದವರೊಂದಿಗೆ ಈ ಸ್ಥಳಕ್ಕೆ ಆಗಮಿಸಿ, ಇಲ್ಲಿಯ ಗುಮಾಸ್ತ, ನಮ್ಮ ಊರಗೌಡ, ಪ್ರಜೆಗಳು-೧೨, ಬಲುತೇದಾರ (ಕಸಬುದಾರರು) ಮತ್ತು ಶೆಟ್ಟಿ ಮಹಾನಾಡಿನ ಜನರನ್ನು ಕರೆ ತಂದು ಗುರುಶಿಷ್ಯರ ವಾದವನ್ನು ಬಗೆಹರಿಸಿ, ಮಠದ ವತನವನ್ನು ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟು, ಮುಂದೆ ಪರಂಪರಾಗತವಾಗಿ ಕಡೆಯ ಇರಾದೆಯಿಂದ ಪ್ರಾಚೀನ ವತನವನ್ನು ಮಂಜೂರು ಮಾಡಿ ನೀಡಿದರು.

ಶ್ರೀ ಶಂಕರ ಭಾರತೀ ಜಗದ್ಗುರುಗಳಿಗೆ ಲಭಿಸಿದ ಸನದು :

(ಮರಾಠಿಗೆ ಮಾಡಲಾದ ಫಾರ್ಶಿಯ ಭಾಷಾಂತರ)

ಫರ್ಮಾನು ಹುಮಾಯನ ಶರೀಫ ಸುದರಿಯಾಲ್ಫ ಬಜ್ಜಾನ ಮಶಾಜರತ ಹವಾಲ್ದಾರ ಮತ್ತು ಕಾರಕೂನ ಹಾಲ ಮತ್ತು ಇಸ್ತಕಬಾಲ ದಾರೂಲ ಸಲತನತ ಮಾಮಲೇ ಪುರನೂರ ಮಹಮ್ಮದಪುರ ಸುರುಸನ್, ಇಹಿದೇ ಸಿತೈನ್ ನ ಅಲಫ. ಇದರಲ್ಲಿ ಸರಕಾರಕ್ಕೆ ನೀಡಿದ ಅರ್ಜಿ ಏನೆಂದರೆ– ಮೌಜೇ (ಗ್ರಾಮ) ಯತನಗಾಳವನ್ನು (ಯತ್ನಾಳ)ಫರ್ಮಾನಿನ ಆಜ್ಞೆಯಂತೆ ಶ್ರಂಗೇರಿ ಮತ್ತು ಕುಡಲಿ ಈ ಮಠದ ಖರ್ಚಿಗಾಗಿ ಬನಾಮ ಶ್ರೀ ಶಂಕರ ಭಾರತಿ ಬ್ರಾಹ್ಮಣರ–ಹಿಂದೂಗಳ ಮತ್ತು ಪ್ರದೇಶದ ಜಗದ್ಗುರುಗಳಿಗೆ ನೀಡಿದ್ದು, ಅದರಂತೆ ಉಪಭೋಗ ನಡೆಯುತ್ತಿದೆ. ದಯಮಾಡಿ ಮಜಭೂತಿಗಾಗಿ ಹೊಸ ಸನದು ನೀಡಬೇಕು. ಈ ಕಾರಣದಿಂದಾಗಿ ಅವರ ಅರ್ಜಿಯನ್ನು ಮನ್ನಿಸಿ ಎಂದಿನಂತೆ ಇನಾಮು ಖರ್ಚಿಗಾಗಿ ವೇತನ ಯತ್ನಾಳಗ್ರಾಮವನ್ನು ಜಗದ್ಗುರು ಶ್ರೀ ಶಂಕರ ಭಾರತಿಯವರ ಮಠಕ್ಕೆ ನೀಡಲಾಗಿದೆ. ಆದರೂ ಸದರಿ ಗ್ರಾಮದ ನಗದು ಕಂದಾಯ. ಎಲ್ಲ ಸರಂಜಾಮು, ದಿನಗೂಲಿ, ಬೇಡಿಕೆ, ದುಡ್ಡು ಸೌಲತ್ತು, ಮೇಜವಾಜಿ, ಮುಸುಲಬಲ, ಹಾಲಕಷ ಮತ್ತು ಪಟ್ಟಿ, ರಾಜಮುದ್ರೆ ಮತ್ತು ಕೆಲಸ, ಇಮಾರತು, ಸರಕಾರಿ ಕೆಲಸ, ಸುಂಕ, ಹಳೆ ಹೊಸ ಖಜಾನೆ, ತೋರನ ಭೇಟಿ ಸಾದಿಲ್ವಾರ್ ಮತ್ತು ಬಾಜಿ ಪಟ್ಟಿ, ಒಟ್ಟೂ ಪ್ರಾಚೀನ ರೀತಿಯಾತು. ಕಾನೂನಿನಂತೆ ಸರಕಾರಕ್ಕೆ ಜಮಾ ಆಗಬೇಕಾದ ನಗದು, ಜಿನಸು ಎಲ್ಲ ಈ ಸರಕಾರದ ದಪ್ತರಿನಲ್ಲಿ ಸುರಕ್ಷಿತವಾಗಿದೆ. ಅವನ ನಂತರ ಗದ್ದುಗೆ ಏರಿದವನಾಗಲಿ ಮುನ್ನಡೆಸಿಕೊಂಡು ಹೋಗಬೇಕು. ಹೊಸ ಫರ್ಮಾನನ್ನು ನಿರ್ಲಕ್ಷಿಸದೆ ಪ್ರತಿವರ್ಷ ಇದನ್ನು ನಡೆಸಿಕೊಂಡು ಹೋಗಬೇಕು. ವತನ ದೇಶಾಯಿ, ದೇಶಕುಲಕರ್ಣಿ ಮತ್ತು ನಾಡಗೌಡ–ಇವರು ಕ್ಷಮೆಗೆ ಅರ್ಹರು. ಇದರ ಬಗೆಗೆ ಯಾರೇ ಮುಸಲ್ಮಾನರು ತಡೆ, ಅಡ್ಡಿ ಉಂಟು ಮಾಡಿದರೆ ಅವರಿಗೆ ಖುದಾ ರಸೂಲನ ಮತ್ತು ಕುರಾನವ ಮತ್ತು ಮಕ್ಕಾದ ಮೇಲೆ ಆಣೆಯಿದೆ. ಕೊನೆಗೆ ಅವನಿಗೆ ಒಳಿತಾಗುವುದಿಲ್ಲ. ಅದೇ ರೀತಿ ಹಿಂದೂಗಳೇನಾದರೂ ತಡೆ, ಅಡ್ಡಿ ಉಂಟು ಮಾಡಿದರೆ ಅವರಿಗೆ ಹರಿಹರ, ವೇದಶಾಸ್ತ್ರ ಮತ್ತು ಮಾತಾಪಿತರ ಆಣೆಯಿದೆ. ಕಾಶಿಯಲ್ಲಿ ಗೋಹತ್ಯೆ ಮಾಡಿದಂತಾಗುವದು. ನಕಲು ಬರೆದುಕೊಂಡು ಅಸಲಿ ಫರ್ಮಾನನ್ನು ಮರಳಿ ನೀಡುವದು. ಫರ್ಮಾನಿನ ಆಜ್ಞೆ ಪರಿಪಾಲಿಸುವದು. ತಾರೀಖ ೨೧ ಜಿಲ್ಹೇಜ ಸನ್ ೧೦೭೧ ಪರವಾನಗಿ ಹುಜೂರ.

೫

ಶೇಖ ಅಬ್ದುಲ ಮಜೀದರಿಗೆ ಸಿಕ್ಕ ಸನದು :

ಫರ್ಮಾನ ಹುಮಾಯನ್ ಶರಫ ಸದುರ್ಯಾಫ್ತ ಬಜಾನಿಬ್ ಮಾಮಲೇದಾರರು ಹಾಲ್ ಮತ್ತು ಇಸ್ತಕಬಾಲ ದೇಸಾಯಿ ಮಾಮಲೇ ಬಂಕಾಪುರ ಇವನಿಗೆ, ಸುರಸನ್ ಸಬೈನ ಮತ್ತು ಅಲಫ. ಸದ್ಯ ಶೇಖ ಅಬ್ದುಲ ಮಜೀರನು ಹುಜೂರರ ಬಳಿಗೆ ಬಂದು ನಿವೇದಿಸಿಕೊಂಡಿದ್ದೇನೆಂದರೆ–'ಹಜರತ್ ನವಾಬ ಹುಮಾಯುನ್ ಅವರು ಸವಾರಿಯು ಈ ಗ್ರಾಮದ ಮೂಲಕ ಹೊರಟಿತ್ತು. ಆ ಸಮಯದಲ್ಲಿ ಪೇಠಶಹಾಪುರ ಮಾಮಲೇ ಗ್ರಾಮದಲ್ಲಿ ದೇಗುಲವಿತ್ತು. ಅದನ್ನು ಕೆಡವಿ ಮಸೀದಿಯನ್ನು ನಿರ್ಮಿಸಲಾಗಿದೆ. ಪೂರ್ವದಿಂದಲೂ ಅದರ ನೌಕರಿ ನಮ್ಮ ಬಳಿಯಲ್ಲಿದೆ. ಮಸೀದಿಯ ಉಸ್ತುವಾರಿ ಶೇಖ ಅಬ್ದುಲ ಸಮದ ಬಿನ್ ಶೇಖ ಅಬ್ದುಲ ಮಜೀದ ಇವರ ಬಳಿಯಲ್ಲಿದೆ. ಇದನ್ನು ನಾವು ನಡೆಸುತ್ತ ಬಂದಿದ್ದೇವೆ.

ಅಂತಂಭಟ್ಟ ಬಿನ್ ನರಸಿಂಹಭಟನಿಗೆ ಲಭಿಸಿದ ಸನದು :

ಅಜ ಸರಕಾರ ಸಾಹೇಬ–ಅಲ್ಲಿ ದೇಶಕಾನಿ, ಪ್ರದೇಶ ಪಾದಶಾಪುರ, ಮಾಲುಮಬಾದ, ಸುರಸನ್ ಸಮಾನ ಸಬೈನ ಅಲಫ. ದರವಿಲಾ ಬೆಶಮಿ ಅಂತಂಭಟ ಬಿನ್ ನರಸಿಂಹಭಟ ಸಾಕೀನ. ಪ್ರದೇಶ ಗೋಕಾಕ–ಇವನಿಗೆ ಇನಾಮ ಭೂಮಿ ಆರು ಹೊಸೂನ ಗ್ರಾಮ ಪ್ರದೇಶವನ್ನು ನೀಡಲಾಗಿದೆ. ಇಜಿತ ಮಾಬದುಗೆ ದಖಮಪಣಿ ಹವಾಲ್ದಾರನು ಭಟ ಮಜಕೂರನಿಗೆ ಶಕುನವನ್ನು ಹೇಳಿದನು. ಎಷ್ಟು ದಿನ ಗ್ರಾಮವನ್ನು ಹಸ್ತಗತ ಮಾಡಿಕೊಳ್ಳಬಹುದು. ಶತ್ರು ಎಷ್ಟು ದಿನಗಳಲ್ಲಿ ಕೈವಶನಾಗುತ್ತಾನೆ–ಎಂದು ಕೇಳಿದನು. ಆಗ ಭಟ ಮಜಕೂರನು ಹೇಳಿದ್ದೇನೆಂದರೆ–ಗ್ರಾಮೀಣ ಪ್ರದೇಶ ವಶಪಡಿಸಿಕೊಳ್ಳಲು ಒಂದು ತಿಂಗಳು ಬೇಕು. ದೀಪಾವಳಿಯ ಬಳಿಕ ಶತ್ರು ಕೈವಶನಾಗುತ್ತಾನೆ. ಆ ಮಾತು ದಿಟವಾಗಿದ್ದರೂ, ಅದನ್ನು ಖಾತ್ರಿ ಪಡಿಸಿಕೊಂಡು, ಭಟ ಮಜಕೂರನಿಗೆ ಅಜರಾಮರ ಭೂಮಿಯನ್ನು ಇನಾಮ ಆರು ಹೊನ್ನಿನ ಗ್ರಾಮ ನೀಡಿದನು. ಅದರ ತಪಶೀಲು ಹೀಗಿದೆ–

ಮುಸಲಿ ಮೋದಿ ಗ್ರಾಮ ಹೊನ್ನುನಾಣ್ಯ ೧"	ಗುಮಚಿ ಮೊರಡಿ ೧"
ಪಂಜಗನ ಹಟ್ಟಿ ೧"	ರಗದ ಹೊಳಿ ೧"

ಈ ರೀತಿ ನೀಡಲಾಗಿದೆ. ಸಂತತಿ, ದತ್ತಕ ಸಂತತಿ ನಡೆಸಿಕೊಂಡು ಹೋಗುವದು. ಪ್ರತಿವರ್ಷದ ಹೊಸ ಪತ್ರವನ್ನು ನಿರೀಕ್ಷಿಸಬಾರದು. ಇದಕ್ಕೆ ಹಿಂದೂವಾಗಲಿ, ಮುಸಲ್ಮಾನನಾಗಲಿ ಅಡ್ಡಿ ಮಾಡಿದರೆ ಅವರಿಗೆ ಅವರವರ ವಂಶದ ಆಣೆಯಿದೆ. ನಕಲು ಬರೆದುಕೊಂಡು ಅಸಲಿ ಪತ್ರವನ್ನು ಭಟನಿಗೆ ನೀಡುವದು.

ರಸವಾನಗಿ ಹುಜೂರ ತಾರೀಖ ೧೫ ಮಾಹೇ ರಮಜಾನ
ರಮಜಾನ ಸನ್ ೧೦೦೮, ಪೈವಸ್ತಿ ಛ ೧೭ ರಮಜಾನ

೭

ಖಿತ್ರೋನಿಜಿ ಬಿನ್ ಬ್ರಹ್ಮಾಜೀ ಪಾಟೀಲರಿಗೆ ನೀಡಿದ ಸನದು :

(ಬಿಸ್ಮಿಲ್ಲಾ ಹಿರಹಮಾನ ರಹೀಮ ಸಕಲ ಭೂಪ್ರದೇಶ ದೇವರದ್ದು)

ಅಮಲದಾರ, ವರ್ತಮಾನ ಭಾವಿ ಮತ್ತು ದೇಸಾಯಿ, ಮಾಣ ಪ್ರದೇಶ ಇವರಿಗೆ ಈ ಫರ್ಮಾನು ಸಾದರ ಪಡಿಸಲಾಗುತ್ತದೆ. ಸುರುಸನ್ ಸಮಾನಿನ್ ಮತ್ತು ಅಲಫ–ಸಾಂಪ್ರತ ಹುಜೂರು ಜಾಹೀರಾಗಿದ್ದೇನೆಂದರೆ–ಬ್ರಹ್ಮಾಜಿ ಬಿನ್ ನಾಂಗಸಾ ಮೊಕಾದಮ್ ಪಾಟೀಲ, ಉಪರಿಗ್ರಾಮ, ಕರ್ಯಾತ ಭಾಳವಣಿ, ಗ್ರಾಮಪ್ರದೇಶ– ಇವರು ಶತ್ರುವಿನ ಕುತಂತ್ರದಿಂದ ಯುದ್ಧದಲ್ಲಿ ಮರಣಹೊಂದಿದರು. ಬಾದಶಹಾ ದಂಪಿ ಮತ್ತು ಕೃಪಾಳುವಾಗಿ ಬಂದು ಚಾಹೂರ ಭೂಮಿ–ಉತ್ತಮ ದರ್ಜೆಯದು– ಯನ್ನು ಬಗ್ಮಾಜಿಯ ಮಗನಾದ ಖಾತ್ರೋಜಿಗೆ ಇನಾಮ ನೀಡಿದನು. ಸದರಿ ಭೂಮಿಯ ಸಕಲ ಸಂಪತ್ತು ಸನ್ಮಾನ, ಕೂಲಿ, ದಿವಾನಿಯ ಬಾಬತ್ತಿನ ಸಾಮಾನು, ಮುದ್ರೆ, ಮನೆಕರ, ಪೇಟೆ ಸಾಮಾನು ಮುಂತಾದ ಹಕ್ಕನ್ನು ರೀತಿರಿವಾಜಿನಂತೆ ಕಾನೂನಿನಂತೆ ಅವರ ಮಾಲೀಕತ್ವಕ್ಕೆ ನೀಡಲಾಗಿದೆ. ಅವರ ಬಳಿಕ ಅವರ ವಂಶಜರು, ದತ್ತಕ ಪುತ್ರರು ಮುಂದುವರಿಸಿಕೊಂಡು ಹೋಗಬೇಕು. ಈ ಸನದನ್ನು ಬರೆದುಕೊಂಡಾದ ಬಳಿಕ ಅಸಲಿ ಸನದನ್ನು ಉಪಭೋಗ ಮಾಡುವವರಿಗೆ ನೀಡಬೇಕು ಅಂದರೆ ಅವರು ಅದರಲ್ಲಿಯ ಸರಕಾರದ ಆಜ್ಞೆಯನ್ನು ಅರಿತುಕೊಂಡು ವಹಿವಾಟು ಮಾಡುತ್ತಾರೆ.

೮

ದೇಶಪಾಂಡೆತನಕ್ಕಾಗಿ ಬಾದಶಹಾ ನೀಡಿದ ಸನದು :

ಮುತ್ಸದಿಯಾನ ಮೋಹಿಮೋತ ಹಾಲ್ ಮತ್ತು ಇಸ್ತಕಬಾಲ ಮತ್ತು ದೇಶಪಾಂಡೆ ಮತ್ತು ದೇಶಮುಖರು, ಮುಕಾದಮರು, ಗೌರವದಿಂದ ವಂದಿಸುವ ಬೆಳೂರು ಮತ್ತು ಕಸಬೆ ಗುಂಜಿ ಮತ್ತು ಘೋಟಗಾಳಿ ಉಫ್ ಮಟಕಿ ಖಾನಾಪುರ, ಸುರಸನ್ ಅರ್ಬಾ ತಿಸೈನ್ ಅಲಫ. ಬದಾನಂದ ಚು ದಂವಿಲಾ ವಿರೋಜಿರಾವ ವಲ್ಲದ ಭಿಕಸೇನ ದೇಶ ಕುಲಕರ್ಣಿ ಮತ್ತು ನಾಡಗೌಡ. ಸರ್ ನಾಡಗೌಡ ಇವರ ಮೂಲಕ ಹುಜೂರರು ಅರಿಕೆ ಮಾಡಿದ್ದೇನೆಂದರೆ, ಅಜಮ ನಗರದ ಕೋಟೆ ವಶಪಡಿಸಿಕೊಳ್ಳಲು ಮೇಲುಘಟ್ಟ, ಕಾಲುಘಟ್ಟ ವಶಪಡಿಸಿಕೊಳ್ಳಲು ಬಾದಶಹಾ ಸೈನ್ಯ ಸಿದ್ದಗೊಂಡಿತ್ತು. ನವಾಬ ಬಹಾದೂರಖಾನರಿಗೆ ಜಿಲ್ಲೆಯ ಸೈನ್ಯದ ಅಧಿಕಾರ ನೀಡಲಾಗಿತ್ತು. ಆಗ ಪ್ರಾಂತದ ಗ್ರಾಮಗಳು ಕಾಫಿರರ ವಶದಲ್ಲಿತ್ತು. ನೀವು ಬಾದಶಹಾರ ನೇಮಕಾತಿಯಂತೆ ಉಮೇದವಾರರಾಗಿ ನವಾಬ ಬಹಾದೂರಖಾನನ ಸೇವಕರಾಗಿ ಪ್ರದೇಶವನ್ನು ವಶಪಡಿಸಿಕೊಳ್ಳಲು ಸಾಹೇಬರನ್ನು ರವಾನೆ ಮಾಡಿದಾಗ ನೀವು ಸಕಾಲಕ್ಕೆ ಬಂದು ಪರಿಶ್ರಮ ಪಟ್ಟೀರಿ. ಅದೂ ಅಲ್ಲದೆ ಸಾಹೇಬರು ಪರಾರಿಯಾಗಿ ಮರಳಿ ವತನಗೆ ಬಂದ ಬಳಿಕ ಮರಣಹೊಂದಿದರು. ನಿಮ್ಮ ತಂದೆಯೂ ಕೆಲದಿನಗಳ ಬಳಿಕ ಸಾವನ್ನಪ್ಪಿದರು. ಆಗ ನೀವು ಅಪ್ರಾಪ್ತ ವಯಸ್ಸಿನವರಾಗಿದ್ದೀರಿ. ಕಾಗದ ಪತ್ರಗಳೂ ನಿಮ್ಮ ತಂದೆ ಹತ್ತಿರವಿತ್ತು. ಆ ಮನೆ ಸುಟ್ಟು ಹೋಯಿತು. ಅದೂ ಸುಟ್ಟು ಹೋಯಿತು. ಈ ಮೊದಲು ನೀವು ಗ್ರಾಮಕ್ಕೆ ಬಂದು ಭೂಮಿಯನ್ನು ಪರಿಶೀಲಿಸಿ ನಿಮ್ಮದನ್ನು ವಶಪಡಿಸಿಕೊಳ್ಳಬೇಕಿತ್ತು. ನೀವದನ್ನು ಮಾಡಲಿಲ್ಲ. ಆದರೆ ನಿಮ್ಮ ಒಂದು ಚಾವರ ಭೂಮಿಯ ಇನಾಮ ಎನ್ನುವದು ನಿಜ. ನಾವಿದನ್ನು ತಂದೆಯ ಕಾಲದಿಂದಲೂ ಕೇಳುತ್ತ ಬಂದಿದ್ದೇವೆ. ಅದರಲ್ಲಿ ಕೆಲ ಭಾಗವು ಬೇರೆ ಇನಾಮದಾರರ ಬಳಿಯಲ್ಲಿ ಸಿಕ್ಕಿಬಿತ್ತು. ಕೆಲ ಭಾಗ ಊರ ಅಧಿಕಾರದಲ್ಲಿದೆ. ಆದರೂ ನೀವು ಹುಜೂರರ ಬಳಿಗೆ ಬಂದು ಕಳೆದುಕೊಂಡ ಈ ಭೂಮಿಯನ್ನು ಗ್ರಾಮ ಭೂಮಿಯಿಂದ ಕೊಡೋಣ ಎಂದೀರಿ. ಸದರಿ ಜಮೀನಿನ ಹೊಸ ಸನದು ಆಗಿದೆ. ಆದರೂ ಮಹಾರಾಜರು ದಯೆ ತೋರಿ ನಿಮ್ಮಜ್ಜ ಗೋವಿಂದ ಭಟನಿಗೆ ಗ್ರಾಮ ಭೂಮಿಯಲ್ಲಿಯ ಒಂದು ಚಾವರ ಭೂಮಿಯನ್ನು ಉಪಭೋಗದ ದಾಖಲೆ ಇರುವದರಿಂದ ಪತ್ರವನ್ನು ಮಾಡಿಕೊಟ್ಟು ವಂಶಪರಂಪರೆಯಿಂದ ಇನಾಮ ನಡೆಯಲೆಂದು ಆಜ್ಞೆ ಮಾಡಿದ್ದಾರೆ. ಇದನ್ನು ಮನಗಂಡ ವಿಜಾಪುರದ ಬಾದಶಹಾನೂ ಸಹ ಸದರಿ ಒಂದು ಚಾವರ ಭೂಮಿಯನ್ನು ಇನಾಮ ನೀಡಿ ಅನುಮತಿ ಕೊಟ್ಟಿರುತ್ತಾರೆ. ಕೈಲಾಸವಾಸಿ ಹಿರಿಯ ಮಹಾರಾಜರೂ ಸಹ ಪತ್ರವನ್ನು ಮಾಡಿಕೊಟ್ಟು ಭೂಮಿಯನ್ನು ನೀಡಿದರು. ಅದರಂತೆ

ಅವರು ಈ ಗ್ರಾಮದಲ್ಲಿ ಮನೆ ಮಾರು ಕಟ್ಟಿ ಭೂಮಿಯನ್ನು ಉಪಭೋಗಿಸಿದರು. ಅನಂತರ ರಾಜಕ್ರಾಂತಿಯಿಂದ ಪಲಾಯನ ಮಾಡಿದರು. ಮನೆಗೆ ಬೆಂಕಿ ಹತ್ತಿದ್ದರಿಂದ ಕಾಗದ ಪತ್ರಗಳೂ ಸುಟ್ಟು ಹೋದವು. ಈ ಇನಾಮ ಭೂಮಿಯು ಪುರಾತನವಾದುದು ಎಂದು ಅವರ ಪರವಾಗಿ ದೇಶಮುಖರು, ದೇಶಪಾಂಡೆಯವರು, ಗ್ರಾಮದ ಮುಕಾದಮರು ಸಾಕ್ಷಿ ನೀಡಿದರು. ಈ ಸಾಕ್ಷಿಯನ್ನು ಒಪ್ಪಿ, ಒಂದು ಚಾವರ ಭೂಮಿಯ ಪುರಾತನವೆಂದು ಖಚಿತಗೊಂಡು ಅವರ ಮೇಲೆ ದಯೆ ತೋರಿ, ಅವರಿಗೂ ಅವರ ಪುತ್ರ ಪೌತ್ರಾದಿಗಳಿಗೂ ವಂಶಪರಂಪರಾಗತವಾಗಿ ಉಪಭೋಗಿಸಲು ಒಂದು ಚಾವರ-ಒಟ್ಟು ೧೨೦ ಬೀಷಾ ಭೂಮಿಯನ್ನು ಇನಾಮ ಮಾಡಿಕೊಡಲಾಗಿದೆ. ಸದ್ಯ ಹೊಸ ಸದರಿ ಭೂಮಿಗೆ ಸ್ವರಾಜ್ಯ ಮತ್ತು ಮೊಗಲರಿಂದ ಎರಡೂ ಕಡೆಯಿಂದಲೂ ಇನಾಮ ಮೂರುಪಾಲು, ಹಕ್ಕು ನಾಲ್ಕು ಪಾಲು, ನಾಡಗೌಡಿ ರೀತಿರಿವಾಜು, ಸದ್ಯದ ಪಟ್ಟಿ, ಪೆಸ್ತರಪಟ್ಟಿ, ಜಲ, ತರು, ತೃಣ, ಷಿಷ್ಠ, ಪಾಷಣ, ನಿಧಿ ನಿಕ್ಷೇಪ ಸಹಿತ ಹಕ್ಕುದಾರ. ಐದು ಮೊಳ, ಐದು ಮುಪ್ಪಿ ಕೋಲಿನಿಂದ ಇನಾಮ ಮಾಡಿಕೊಡಲಾಗಿದೆ. ಆದರೂ ನೀವು ಸದರಿಯಂತೆ ಒಂದು ಚಾವರ ಭೂಮಿಯನ್ನು ನಾಲ್ಕೂ ಸೀಮೆ ಸಹಿತ ಸರಕಾರಿ ಹಕ್ಕುಪತ್ರ ನೀಡಿ, ಅವರೂ ಅವರ ವಂಶಪರಂಪರೆಯವರೂ ಇನಾಮ ಭೂಮಿಯನ್ನು ಉಪಭೋಗಿಸಲು ಅವಕಾಶ ಮಾಡಿ ಕೊಡಬೇಕು. ಪ್ರತಿವರ್ಷ ಹೊಸ ಅಧಿಕಾರ ಪತ್ರಕ್ಕಾಗಿ ಆಕ್ಷೇಪ ಮಾಡಬಾರದು. ಈ ಪತ್ರದ ನಕಲನ್ನು ಬರೆದುಕೊಂಡು ಈ ಪತ್ರವನ್ನು ಉಪಭೋಗಕ್ಕಾಗಿ ಅವರಿಗೆ ಮರಳಿ ನೀಡಬೇಕು.

೧ ದೇಶಮುಖ ಮತ್ತು ದೇಶಪಾಂಡೆ,

೧ ರಾಜಶ್ರೀ ದೇಶಾಧಿಕಾರಿ ಮತ್ತು ಲೇಖಕ ವರ್ತಮಾನ ಮತ್ತು ಭಾವಿ ಗ್ರಾಮಭಾಗ.

೧ ರಾಜಶ್ರೀ ಸದಾಶಿವ ಪಂಡಿತ ಸಚಿವ.

೧ ರಾಜಶ್ರೀ ಮಾಧವರಾವ ಪಂಡಿತ ಪ್ರಧಾನಿ

೪ ಒಟ್ಟೂ ನಾಲ್ಕು ಪತ್ರಗಳನ್ನು ಬರೆದು ಕೊಡಬೇಕು.

ಪತ್ರಗಳು ರಾಜ್ಯಾಭಿಷೇಕ ಶಕೆ ೯೦ ಸುಭಾನುನಾಮ ಸಂವತ್ಸರೆ, ಕಾರ್ತಿಕ ವದ್ಯ ಸಪ್ತಮಿ, ರವಿವಾಸರ, ಸುರುಸನ್ ಲಬಾನ ಸಿತೈನ ಮಯಾ ಅಲಫ.

೯

ಗೌಡಕಿ ವತನದ ಸನದು :

ಪ್ರದೇಶದ ಗೌಡರು ವಸೂಲಿ ಮಾಡಿದ ಕರದ ಜೊತೆಗೆ ದೇಶಮುಖ, ದೇಶಪಾಂಡೆಯವರೂ ವಿಜಾಪುರಕ್ಕೆ ಹೋಗಲಾರಂಭಿಸಿದರು. ಆ ಸಮಯಕ್ಕೆ ಹರಜಿಗೌಡರ ಮತ್ತು ಶಿರಡೋಣದ ಸರಹದ್ದಿನ ತಂಟೆಗಾಗಿ ಕಾಳಗ ನಡೆಯಿತು. ಹರಜಿ ಗೌಡರ ಅರ್ಧ ಪಾಲುಗಾರರಾದ ದಾಮಾಜಿ ಪಾಟೀಲರ ತಂದೆಗೆ ವಿಜಾಪುರಗೆ ಹೋಗಬೇಕಾಗಿ ಬಂತು. ಅವರು ನಾವೂ ನೀವೂ ಹೋಗೋಣ ಎಂದರು. ಆಗ ಹರಜಿ ಗೌಡನು 'ನನ್ನ ಮೊಣಕೈ ಮುರಿದಿದೆ. ನಾನು ಬರಲಾರೆ, ನನ್ನ ಮಗನನ್ನು ಕರೆದುಕೊಂಡು ಹೋಗಿ' ಎಂದನು. ಆದರೂ ಹರಜಿ ಗೌಡನು ಐವರೂ ಮಕ್ಕಳ ಸಲಹೆ ಪಡೆದರು. ಐವರಲ್ಲೂ ಯಾವ ಮಗನೂ ಹೋಗಲು ಒಪ್ಪಲಿಲ್ಲ. ಆಗ ನಮ್ಮ ತಂದೆ ಮಂಗೋಜಿ ಪಾಟೀಲರು ವಿಜಾಪುರಕ್ಕೆ ಹೋಗಲು ಒಪ್ಪಿದರು. ಹೀಗಾಗಿ ಅರ್ಧ ಪಾಲಿನ ವಿದ್ಯಮಾನಕ್ಕಾಗಿ ಮೊಮೀನನ ಮನೆಯ ಒಂದು ಶಲ್ಲೆಯನ್ನು ತರಿಸಿ ಮಂಗೋಜಿ ಪಾಟೀಲರಿಗೆ ನೀಡಿ ವಿಜಾಪುರಕ್ಕೆ ರವಾನೆ ಮಾಡಿದನು. ಅಲ್ಲೂ ದಿವಾನರೂ ಗೌರವದ ಬಟ್ಟೆ ನೀಡಿದರು.

ಶಂಕರಭಟ್ಟ ಬಿನ್ ತೋರಣಭಟ್ಟ ಜೋಶಿಗೆ ನೀಡಿದ ದಾನಪತ್ರ :

ವಿಷ್ಣುಶಕ್ತಿ ಸಮುತ್ಪನ್ನೆ ಶಂಖವರ್ಣೀ ಮಹೀತಲೇ॥
ಅನೇಕ ರತ್ನ ಸಂಭೂತೇ ಶ್ರೀ ಭೂಮಿದೇವಿ ನಮೋಸ್ತುತೇ ॥೧॥

ನಮಸ್ತುಂಗಿ ಸಿರಃಶ್ಚುಂಬಿ ಚಂದ್ರ ಚಾಮರ ಚಾರವೇ ॥
ತ್ರೈಲೋಕ್ಯೆ ನಗರಾರಂಭೇ ಮೂಲಸ್ತಂಭಾಯ ಶಾಂಭವೇ ॥೨॥

ಸ್ವಸ್ತಿಶ್ರೀ ನೃಪಶಾಲಿವಾಹನ ಶಕೆ ೧೬೦೭ ಪ್ರವತನ ಮಾನೆ' ಕ್ರೋಧನನಾಮ ಸಂವತ್ಸರೆ, ಆಷಾಢ ವದ್ಯ ಅಮವಾಸ್ಯಾ, ಭೌಮವಾಸರೆ, ಸೂರ್ಯಗ್ರಹಣಿ, ಪುಣ್ಯ ದಿವಸೇ, ತದ್ದಿನೇ ಶ್ರೀಮತ್ ಯಜನ ಯಾಜನ, ಅಧ್ಯಾಯನ, ಅಧ್ಯಾಪಕದಾನ, ದಾನಪ್ರತಿಗ್ರಹ, ಷಟ್‌ಕರ್ಮ, ಆಚರತ ವೇದ ಮೂರ್ತಿ ರಾಜಶ್ರೀ ತೋರಣಭಟ ಪುತ್ರ ಶಂಕರ ಭಟ ಜೋಶಿ, ಅಶ್ವಲಾಯನಶಾಖೆ, ಮೌದ್ಗಲ್ಯ ಗೋತ್ರ, ಗೋಸಾವಿ ಇವನಿಗೆ–ಶಿವಾಜಿ ವಿಠ್ಠಲ ಮುಜಮುದಾರ, ಕಿಲ್ಲೆ ಶಿಕಂದರಗಡ ಉರ್ಫ್ ಬದಾಮಿ. ಸುಹುರಸನ್ ಸೀತ ಫಮಾನಿನ ವ ವಲಫ ಕಾರಣವೇನೆಂದರೆ, ಸೂರ್ಯಗ್ರಹಣ ಮಹಾಪರ್ವದ ಪುಣ್ಯದಿನದಂದು ಕಿಲ್ಲೆ ಮಜಕೂರಿ ಅಗಸ್ತಿ ತೀರ್ಥ ಶ್ರೀ ಭೂತೇಶ್ವರ ಸನ್ನಿಧಾನ ನೀವು ಮಹಾ ಸಂಕಲ್ಪ ವಿಧಾನ ಪೂರ್ವಕ ಹೇಳಿದಂತೆ ಸತ್ಪಾತ್ರಿ ಸಾಧು ವೃತ್ತಿನಿಷ್ಠ ಬ್ರಾಹ್ಮಣನನ್ನು ಕಂಡು ಪುಣ್ಯ ಪಡೆಯಬೇಕು ಮತ್ತು ಪುಣ್ಯ ಸಾಮಗ್ರಿ ಸಂಗ್ರಹವಾಗಲೆಂದು ನಮ್ಮ ಇನಾಮ ಉಮಲಿಗ್ರಾಮ ಮಾಜೇತೋರೆ ಭಾಸ್ಕರಾಪುರಿ ಸರಕಾರದ ಆಧೀನ ಭೂಮಿಯಲ್ಲಿ ಒಂದು ಗ್ರಾಮದ ಕೋಟೆಯ ಸೀಮೆಗೆ ಅಂಟಿಕೊಂಡಿದೆ. ಜಗಳದಿಂದಾಗಿ ಗಣೇಶ ಬಳಿಯ ಅರ್ಧವನ್ನು ನಿಮಗೆ ಸೀಮೆಯನ್ನು ಹಾಕಿ ರೀತಿ ರಿವಾಜಿನಂತೆ ವೆಂಕಟಗಾರ. ರುಗಿ ಹಂಚವಲಿ ಬಲುತೇ ಸಹಿತ ಕ್ರಮಬದ್ಧವಾಗಿ ಮಾಡಿಕೊಡಲಾಗಿದೆ.

ಕಲಪ್ರಾಪ್ತೆ ದಾನೇ ಧನಂ ಭೂದಾನಂಚ ವಿಶೇಷತ: ॥
ಸತ್ಪುತ್ರ ವಂಶಜೋ ಧಾರಾವೃತ್ತಿ ಪಾರಾ ಪರಂಪರಾ॥೧॥

ಶ್ರೀಶೈಲೇ ಸಪ್ತಮಿ ನಯಶಿ ಸಪ್ತಭಿಃ ಭವನಪ್ರದಕ್ಷಿಣಂ ಏಕವಿಶತೆ ॥
ಕಾಸಿನಾಂ ಭೂದಾನಮಧಿಕಂ ಫಲಂ ॥೨॥

ಪ್ರಯಾಗೇ ಮಾಘಮಾಸೇತು ಕಾಸಿವಾಸ ತ್ರಿಭರ್ದಿಸ್ಯೈಃ ॥
ಕುರುಕ್ಷೇತ್ರಂ ತು ಯಃ ದಾಸಂ ಭೂದಾಸಂ ಅಧಿಕ ಫಲಂ ॥೩॥

ನಿತ್ಯ ಭಾಗೀರಥಿ ಸ್ನಾನಂ ನಿತ್ಯಂ ಅಂಗಾರ್ಚನ ಫಲಂ ॥
ಅನ್ನದಾನ ಸಮಂ ತುಲಂ ಭೂಧಾನಂ ಅಧಿಕಫಲಂ ॥೪॥

ಸರ್ವೇಷಾಂ ವೇರ್ದಿತಾ ಭೂರಿಯೋ ಭುಕ್ತೆ ವರ್ಧಿತೇ ಯದಿ ॥
ತತಃ ಕಷ್ಟಾಂತರೋನಿಬಾ ಸ್ವಯಂ ದತ್ತಾಪಹಾರಕಾ ॥೫॥

ಸ್ವದತ್ತಂ ದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ ॥
ಪರಸತ್ತಾನು ಹಾರೋಣ ಸ್ವದತ್ತಾ ನಿಷ್ಪಲಾ ಭವೇತ ॥೬॥

ಭೂಧಾನದ ಶ್ರೇಯಸ್ಸಿನ ವಿಶೇಷತೆಯನ್ನು ಕಂಡು ನಾವು ಸರ್ವಮಾನ್ಯ ಇನಾಮ ಮಾಡಿ ಧಾರಾದತ್ತ ನೀಡಿದ್ದೇವೆ. ನಿಮ್ಮ ಪರಮಪರ ಸ್ನಾನ ಸಂಧ್ಯಾ, ದೇವತಾರ್ಚನೆ, ವೈಶ್ವದೇವ, ಉಪಾಸನೆ ಮಾಡಿ ನಮಗೆ ಹಗಲು ರಾತ್ರಿ ವೇದೋಕ್ತವಾಗಿ ಆಶೀರ್ವಾದ ನೀಡಿ, ಕಲ್ಯಾಣವನ್ನು ಬಯಸಿ, ನಿಮ್ಮ ವೃತ್ತಿಯನ್ನು ಮತ್ತು ಯೋಗಕ್ಷೇಮವನ್ನು ಉರ್ಜಿತಗೊಳಿಸಿ ಸುಖವಾಗಿರಬೇಕು. ಈ ಧರ್ಮಕಾರ್ಯದ ವೃತ್ತಿಗೆ ಯಾರೇ ಚಾತುರ್ವರ್ಣದವರು ತಡೆ ಉಂಟು ಮಾಡಿ, ನಾಶಗೊಳಿಸಿ, ಹೊಸದನ್ನು ನಿರ್ಮಾಣ ಮಾಡಿದ್ದಾದರೆ ಅವರಿಗೆ ವರ್ಣಾಶ್ರಮದ ಮಾತಾಪಿತರ ಆಣೆಯಿದೆ. ಇದು ಬರೆದು ಕೊಟ್ಟ ದಾನಪತ್ರ ರುಜು,

ತಾರೀಖ ೨೮ ಮಾಹೇ ಸಾವಾನ.

ಅಲಿ ಆದಿಲ್‌ಶಹಾ ಬಾದಶಹಾ ವಿಜಾಪುರಕರ ಇವರು ನೀಡಿದ ಸನದು

(ದೇವರು ಶ್ರೇಷ್ಠ, ಈ ಜಗತ್ತು ದೇವರದ್ದು)

ಶ್ರೀ ದೇವರು ಹಜರತ್ ಮಹಮ್ಮದ ರಸುಲಿಲ್ಲಾಹ ಪೈಗಂಬರ ಇವನಿಗೆ ಹೇಳುವದೇನೆಂದರೆ–ನಾನು ಅಲ್ಲಿ ಪೈಗಂಬರನ ಹೆಸರು ಬಳಸಲು ಕಾರಣವೇನೆಂದರೆ, ಆ ಹೆಸರಿನಿಂದ ಹಲವು ಪವಾಡಗಳು ಜರಗುವುದು ಸಾಧ್ಯ. ಆ ಹೆಸರು ಇಂಥ ಪವಾಡಗಳ ಖಜಾನೆಯೇ ಆಗಿದೆ. ನಿಮ್ಮ ಸಂಕಟದ ಕಾಲಕ್ಕೆ ನಿಮ್ಮ ಸಹಾಯಕನಾದ ಅಲ್ಲಿ ಪೈಗಂಬರ ಇವನ ಪ್ರಾಪ್ತಿ ಮಾಡಿಕೊಳ್ಳಬಹುದು. ಆದರೂ ಅಲ್ಲಿ ಪೈಗಂಬರನ ಸಿದ್ಧಿಯ ಸಾಮರ್ಥ್ಯದಿಂದಾಗಿ ನಿಮ್ಮ ಪ್ರತಿಯೊಂದು ಸಂಕಟ, ಚಿಂತೆಯು ತ್ವರಿತಗತಿಯಲ್ಲಿ ಸುಲಭವಾಗಿ ನಿವಾರಣೆಯಾಗಬಹುದು. ಯಾ ಅಲ್ಲಿ! ಯಾ ಅಲ್ಲಿ! ಯಾ ಅಲ್ಲಿ! ಇದರ ತಾತ್ಪರ್ಯವೇನೆಂದರೆ, ದೇವರ ವಾಕ್ಯ ಕುರಾನ ಶರೀಫ್ ಗ್ರಂಥದಲ್ಲಿರುತ್ತದೆ. ಅದರಲ್ಲಿ ಯತ ಇರುತ್ತದೆ ಮತ್ತು ಪೈಗಂಬರನ ವಾಕ್ಯಗಳಿಗೆ ಹದೀಸ್ ಎನ್ನುತ್ತಾರೆ. ಬಾದಶಹಾನ ನಡಿಗೆ ಹೇಗಿದೆ ಎಂದರೆ, ಗದ್ದುಗೆಯ ಮೇಲೆ ರಾಜ್ಯವನ್ನು ಆಳುವಾಗ ತನ್ನ ಹೆಸರಿನ ಮುದ್ರೆ ಚಾಲ್ತಿಯಲ್ಲಿರಬೇಕು. ಆ ಮುದ್ರೆಯಲ್ಲಿ ಕೆತ್ತಲಾಗುವ ಹೆಸರಿನಲ್ಲಿ ತನ್ನ ಹೆಸರಿನ ಅಕ್ಷರಗಳಿರಬೇಕು. ಜೊತೆಗೆ ಅದು ಆಯತದ ಮತ್ತು ಹದೀಸ್‌ದ ಅಕ್ಷರವೂ ಆಗಿರಬೇಕು. ಅಂಥ ಹದೀಸ್ ಅಥವಾ ಆಯತವು ಆ ಮುದ್ರೆಯಲ್ಲಿರಬೇಕು. ಅದರಿಂದ ಆ ಮುದ್ರೆಯು ತನ್ನ ಹೆಸರಿನದಾಗುತ್ತದೆ. ಈ ರೀತಿಯಲ್ಲಿ ಹದೀಸನ ಎರಡು ಬೈತದಲ್ಲಿ ಅಲ್ಲಿ ಪೈಗಂಬರನ ಹೆಸರಿನ ವಿಸ್ತಾರವಿದೆ. ಈ ಕಾರಣಕ್ಕಾಗಿ ಈ ಎರಡು ಬೈತರ ನಾಲ್ಕು ಚರಣವನ್ನು ವಿಜಾಪುರದಲ್ಲಿ ಅಲ್ಲಿ ಆದಿಲ್‌ಶಹಾ ಬಾದಶಹಾ ಅವರು ಮುದ್ರೆಯಲ್ಲಿ ಕೆತ್ತಿಸಿ ಆ ಮುದ್ರೆಯನ್ನು ನಿಶ್ಚಿತಗೊಳಿಸಿ ಸನದಿನಲ್ಲಿ ಬಳಸಿದ್ದಾರೆ.

ಸನದದಲ್ಲಿಯ ಮಜಕೂರಿನ ತರ್ಜುಮೆ

"ಯೋಗ್ಯವೂ, ಶ್ರೇಷ್ಠವೂ ಆದ ಕಲ್ಯಾಣಕಾರಕ ಫರ್ಮಾನು ಸಾದರ ಪಡಿಸಲಾಗುತ್ತದೆ. ಯಾವುದಕ್ಕೆ ಶೂರತ್ವದ, ಪರಾಕ್ರಮದ ಆಧಾರವಿದೆಯೋ, ಶ್ರೇಷ್ಠ ಸರಕಾರದಲ್ಲಿಯ ಪ್ರಸಿದ್ಧ ಮತ್ತು ಶ್ರೇಷ್ಠ ಪದವಿಯದೂ ಆಗಿರುತ್ತದೆಯೋ, ಯಾರ ಅಧಿಕಾರವು ಸಂಪೂರ್ಣ ನಂಬಿಕೆಯದು–ಕಲ್ಯಾಣಕಾರಕವೂ ಆಗಿರುವದೋ, ಯಾರ ಲಕ್ಷಣ ಉತ್ತಮ ಪ್ರಕಾರದಲ್ಲಿ ಆಗಿದೆಯೋ, ಯಾರ ಜೀವನವು ಶುಭದಾಯಕವಾಗಿದೆಯೋ ಮತ್ತು ರಾಜಧಾನಿಯ ಸನ್ನಿಧಿಯಲ್ಲಿರುವ ರಾಘೋ ಪಂಡಿತನು ಬಾದಶಹಾನ ಕೃಪೆ, ಗೌರವಾದರದಿಂದ ಯೋಗ್ಯತೆ ಮತ್ತು ಶ್ರೇಷ್ಠತೆಯನ್ನು ಕಂಡ

ಅರಿಯಬೇಕಾಗಿರುವದೇನೆಂದರೆ, ಯಾರಿಗೆ ಬಾದಶಹಾನ ಅಂತಃಪುರದವರೆಗೆ ಪ್ರವೇಶವಿದೆಯೋ ಮತ್ತು ಉಪಮೆ ನೀಡುವಂತಹ ಪುರುಷರಲ್ಲಿ ಬಾದಶಹಾನ ಸನ್ನಿಧಿಯಲ್ಲಿರುವ ಅಧಿಕಾರಿ ವರ್ಗದವರಲ್ಲಿ ಮುಖ್ಯಸ್ಥನಾದ ಝೂಂಜಾರರಾವನು ವಿನಂತಿ ಮಾಡಿಕೊಂಡಿರುವ ವಿಷಯ ಹೀಗಿದೆ- ವಾಣ ಪ್ರದೇಶದಲ್ಲಿಯ ಸರದೇಶಮುಖಿ (ಆದಾಯದ ಹಕ್ಕುದಾರ) ಮತ್ತು ಕಸಬೆ ಮಲವಡಿಯಲ್ಲಿಯ ದೇಶಮುಖಿಯು ಬಾದಶಹಾನ ಕಾಲದಿಂದಲೂ ವಂಶಪರಂಪರೆಯಿಂದ ಮೇಲೆ ಹೇಳಿದಂತೆ ಇವರ ಬಳಿ ಅಂದರೆ ನಮ್ಮ ಹತ್ತಿರವೇ ಇದೆ. ಇಂದಿನವರೆಗೆ ಮಲವಡಿಯು ಯಾರ ಅಡಿಯಲ್ಲಿತ್ತೋ ಅದರ ದೇಶಮುಖಿತನದ ಪತನದ ಬಗೆಗೆ ಯಾರೂ ಅಡ್ಡಿಯನ್ನುಂಟು ಮಾಡಲಿಲ್ಲ. ಈಗಲೂ ಸಹ ಮಲವಡಿಯನ್ನು ಆ ದೊರೆಯ ಕಲ್ಯಾಣ ಬಯಸುವ ಅಂದರೆ ಮೇಲೆ ಹೇಳಿದ ರಾವನಿಗೆ ದೊರೆಯು ಕೃಪೆ ತೋರಿ ನೀಡಿದ್ದಾನೆ. ಮೇಲೆ ಹೇಳಿದ ರಾವನಿಗೆ ದೇಶಮುಖಿಯ ಪತನಕ್ಕೆ ಉಪದ್ರವವಾಗುತ್ತಲಿದೆ. ರಾವ ಅವರು ಸ್ವತಃ ದೇಶಮುಖಿಯ ಕಾರ್ಯವನ್ನು ಮುನ್ನಡೆಸುತ್ತಿಲ್ಲ. ಅವರು ತನ್ನ ಪರವಾಗಿರುವ ಮನುಷ್ಯನನ್ನು ಪತನದ ಕಾರ್ಯಕ್ಕೆ ನೇಮಿಸಿ, ಅವರು ಸ್ವತಃ ಬಾದಶಹಾನ ಸಲಹೆ ಮೇರೆಗೆ ಕಾರ್ಯವನ್ನು ಪೂರ್ಣಗೊಳಿಸುತ್ತಿದ್ದಾರೆ. ಹೀಗಾಗಿ ಝೂಂಜಾರರಾವನ ವಿನಂತಿ ಏನೆಂದರೆ, ಶ್ರೇಷ್ಠ ಮತ್ತು ಕಲ್ಯಾಣಕಾರಕವಾದ ಸರಕಾರಕ್ಕಾಗಿ ಈ ವಿನಂತಿಯನ್ನು ಒಪ್ಪಿಕೊಂಡು, ಜಗತ್ತಿಗೆ ಒಪ್ಪಿಗೆಯಾಗುವಂತಹ ಆಜ್ಞೆಯನ್ನು ಮಾಡುವದೇನೆಂದರೆ- ಈ ಬಾದಶಹಾನ ಪರವಾನಗಿ ಲಭಿಸಿದ ಕೂಡಲೇ ಬೋಧೆ, ಶಿಂದಿ, ಕಳಕಿಜಾಯಿ ಗ್ರಾಮಗಳು ಚಾಹುರದಲ್ಲಿರುವ (೧೨೦ ಚೌರಸ ಖೀಫ಼ೆ) ಗೋಮಾಳ ವಗೈರೆಯ ಹಕ್ಕು, ಕರ ಮತ್ತು ಉಸ್ತುವಾರಿ ಪರಿವಾರದ ಹಕ್ಕು, ನಾಲ್ಕೂ ಸೀಮೆ, ವಿಶ್ವ, ಜಕಾತ ಮತ್ತು ಉಳಿದ ಎಷ್ಟೋ ಮಾನ-ಸನ್ಮಾನವು ಪ್ರತಿವರ್ಷದ ವಹಿವಾಟಿನಂತೆ ದೇಶಮುಖಿಯವರೊಂದಿಗೆ ನಡೆಯುವ ತೆರದಲ್ಲಿ ಮುನ್ನಡೆಸಿಕೊಂಡು ಹೋಗಬೇಕು. ಯಾವುದೇ ಕಾರಣದಿಂದ ಯಾರೇ ಆಗಲಿ ಸದರಿ ದೇಶಮುಖಿಯ ಪತನಕ್ಕೆ ಅಡ್ಡಿಯನ್ನುಂಟು ಮಾಡಬಾರದು. ಉಪದ್ರವ ನೀಡಬಾರದು. ಶ್ರೇಷ್ಠತ್ವದ ಆಧಾರದಿಂದ ಝೂಂಜಾರರಾವ ಅವರು ಸರಕಾರದ ಸೇವಕರು, ತಲೆ ತಲಾಂತರಗಳಿಂದಲೂ ಸರಕಾರದ ನೌಕರರು. ಹೀಗಾಗಿ ಅವರ ಆಡಳಿತದಲ್ಲಿ ಯಾವುದೇ ಅಮಲ್ದಾರರು ಉಪದ್ರವ ನೀಡುವದು ಯೋಗ್ಯವಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಬೊಬ್ಬಾಟವಾಗದಂತೆ ನೋಡಿಕೊಳ್ಳಬೇಕು. ಈ ಸನದಿನ ನಕಲು ಮಾಡಿಕೊಂಡು ಅಸಲಿ ಸನದನ್ನು ಝುಂಜಾರರಾವನಿಗೆ ಮರಳಿ ನೀಡಬೇಕು. ಅಂದರೆ ಅವರು ಅದರಂತೆ ನಡೆದುಕೊಳ್ಳುತ್ತಾರೆ. ಛ ೨೦ ಮಾಹೇ ಜಮಾದಿಲಾಖರ ಸನ್ ೧೦೪೪ ಹಿಜರಿ" ಹುಜೂರ ಪರಮಾನಗಿಯು ಶ್ರೇಷ್ಠ, ಪವಿತ್ರ, ಕಲ್ಯಾಣಕಾರಕ ಅತಿಶ್ರೇಷ್ಠವಾಗಿದೆ.

೧೨

ಬಾದಶಹಾ ಅಲ್ಲಿ ಆದಿಲ್‌ಶಹಾ ಇವರು ನೀಡಿದ ಸನದು

ಬಾದಶಹಾ ಅಲ್ಲಿ ಆದಿಲಶಹಾ ಇವರು ನೀಡಿದ ಫರ್ಮಾನಿನ ನಕಲು ವರ್ತಮಾನ, ಭಾವಿ ಮಾಮಲೇದಾರ್ ಮತ್ತು ದೇಶಮುಖ, ಪುಣೆ ಪ್ರದೇಶ ಇವನಿಗೆ ನೀಡಲಾದ ಶ್ರೇಷ್ಠ ಫರ್ಮಾನು ಹೀಗಿದೆ- ಸುರೂಸನ್ ಖಮಸ್ ಖಮಿಸೇನ್ ವ ಅಲಫ್ ಇದರಲ್ಲಿ ದರವಿಲಾ ಶೇಖ ಅಬ್ದುಲ್ಲಾ ಬಿನ್ ಶೇಖಮಿಯಾ ಚಾಕರಿ ಮಾಡುವ ದರ್ಗಾ ಹಜರತ್ ಶೇಖಸಲಾ ಹೋದಿನಸಾಹೇಬ ದೇಶ ವಾಸ್ತವು ಕಸಬೆ ಪ್ರದೇಶದ ಹುಜೂರ ಬಂದು ಹೇಳಿದ ಮಜಕೂರು, ನಿಮಗೆ ದರ್ಗಾದ ಚಾಕರಿಗಾಗಿ ಸಂಸ್ಥಾನದ ಸುಹದಲ್ಲಿರುವ, ಸಂಗಪುರ ದಡದ ಬಳಿಯಿರುವ ಭೂಮಿಯನ್ನು ದರ್ಗಾಮೇರೆಗೆ ಸಂಬಂಧಿಸಿದ ಒಂದು ಚಾಹೂರ ಭೂಮಿ (೧೨೦ಚೌರಸ್ ಭೀಘಾ)ಯನ್ನು ಇನಾಮ ಭೂಮಿಯೆಂದು ನಿಜಾಮಶಹಾರ ಫರ್ಮಾನಿನಂತೆ, ಮತ್ತು ಮಲ್ಲಿಕ ಅಂಬರ ಅವರ ಆದೇಶದಂತೆ ಮತ್ತು ಬಾದಶಹಾನ ಫರ್ಮಾನಿನ ಆಜ್ಞೆಯಂತೆ ಜಾರಿಗೊಳಿಸಲಾಗಿದೆ. ಶಹಾಜಿ ಭೋಸಲೆ ಮಹಾರಾಜರ ಕಾಲದಲ್ಲಿ ಪ್ರಾಂತದಲ್ಲಿ ಭೂಮಿಯ ಅಳತೆಯನ್ನು ಮಾಡುವಾಗ ಶರಾಯಿ ಚಾಹುರಿನ ಪ್ರಕಾರ ಹೆಚ್ಚು ಭೂಮಿಯು ಸೇರ್ಪಡೆಯಾಯಿತು. ಆದರೂ ಮಹಾರಾಜರು ಹೆಚ್ಚಿನ ಭೂಮಿಯನ್ನು ದರ್ಗಾದ ಅಡಿಯಲ್ಲಿ ನಿಶ್ಚಿತಗೊಳಿಸಿ ರುಜು ಮಾಡಿದರು. ಹೀಗಾಗಿ ಆ ಸಾಹೇಬರು ದಯೆತೋರಿ ಫರ್ಮಾನು ನೀಡಬೇಕು. ಅದರಿಂದ ಉಪಭೋಗ ಖಚಿತವಾಗುವದು. ಇದನ್ನು ಗಮನಿಸಿ ಸದರಿ ಹೆಚ್ಚಿನ ಇನಾಮ ಭೂಮಿಯನ್ನು ದರ್ಗಾಕ್ಕೆ ನಿಶ್ಚಿತಗೊಳಿಸಿ ನೀಡಲಾಗಿದೆ. ಈ ಕಾರಣದಿಂದ ಹೆಚ್ಚಿನ ಭೂಮಿಯ ಕಂದಾಯ, ನಗದು, ಎಲ್ಲ ಉಸ್ತುವಾರಿ ಪರಿವಾರ, ದಿನಗೂಲಿ, ಬೇಡಿಕೆ, ಸರ್ವಕರ, ದಿವಾಣಕರ ಮುಂತಾದವು ಮತ್ತು ಸಾದಿಲ್ವಾರ್ ವಗೈರೆ ಸೂಟ್ ಮಾಡಿ (ರಿಯಾಯತಿ) ಉಪಭೋಗಿಸಲು ಬೆಂಬಲ ನೀಡಬೇಕು. ಒಂದು ಚಾಪರ್ ಭೂಮಿಯ ಮಜಕೂರ ಎಂದರೆ ನಿಜಾಮಶಹಾನ ಫರ್ಮಾನು, ಮಲ್ಲಿಕ್ ಅಂಬರನ ಅನುಮತಿ, ಬಾದಶಹಾನ ಫರ್ಮಾನಿನಂತೆ ನಡೆಯುವದಾದರೆ, ಅದರಂತೆ ಕರಸಹಿತ ಶೇಖ ಮಜಕೂರಗೆ ಬೆಂಬಲ ನೀಡಬೇಕು. ಅದು ಮುಂದೆ ಅವರ ಮಕ್ಕಳು-ಮೊಮ್ಮಕ್ಕಳೂ ಸಹ ವಂಶಪಾರಂಪರ್ಯದವರೆಗೆ ಮುಂದುವರೆಸಿಕೊಂಡು ಹೋಗಬೇಕು. ಪ್ರತಿವರ್ಷ ಫರ್ಮಾನಗಾಗಿ ಆಕ್ಷೇಪ ಮಾಡದೆ ಪ್ರತಿವರುಷ ಫರ್ಮಾನಿನಂತೆ ನಡೆದುಕೊಳ್ಳಬೇಕು. ನಕಲು ಬರೆದುಕೊಂಡು ಅಸಲಿ-ಮೂಲ-ಫರ್ಮಾನು ಮರಳಿ ನೀಡಬೇಕು. ತಿಳಿದಿರಲಿ. ಆಜ್ಞೆಯಂತೆ ನಡೆದುಕೊಳ್ಳಬೇಕು. ತಾರೀಖ ೩, ಮಾಹೇ ಜಿಲ್ಕಾದ್ ಸನ್ ೧೦೬೫ ಫಸಲಿ.

ಮಸಾಲುದಖಾನ ವಜೀರನು ನೀಡಿದ ಸನದು

(ಅತ್ಯಂತ ಶ್ರೇಷ್ಠ, ಪರಮಪವಿತ್ರ, ಸೂರ್ಯನಂತೆ ತೇಜಸ್ವಿ ಹುಜೂರ ಸರಕಾರದ ಪರವಾನಗಿ (ಅನುಮತಿ) ನೀಡಲಾಗಿದೆ.)

ಈ ಫಾರಸಿ ಸನದಿನ ಬೆನ್ನಪುಟದಲ್ಲಿ ವಜೀರನ ಶರಾ (ಟಿಪ್ಪಣಿ) ಇದೆ. ಅದರ ತುರ್ಜುಮೆ:-

ಸಂಪತ್ತ ಮತ್ತು ವಜೀರಿಯ ಆಶ್ರಯ (ಪ್ರಧಾನಿ). ಐಶ್ವರ್ಯ- ಸದ್ಗುಣದ ಆಧಾರ, ಸತ್ತಾಧಾರಿ, ಶ್ರೇಷ್ಠ ಪದಾಧಿಕಾರಿ, ಬಾದಶಹಾನ ಮತ್ತು ರಾಜಧಾನಿಯ ಬಾಹುಬಲ, ಬಾದಶಹಾನ ಮತ್ತು ರಾಜಧಾನಿಯ ವಿಶ್ವಾಸಿಕ, ಕಾರ್ಯ ವೈಖರಿಯ ಮತ್ತು ಬುದ್ಧಿವಂತಿಕೆಯ ಗ್ರಂಥದ ಮಂಗಲಾಚರಣ, ದೂರದೃಷ್ಟಿಯುಳ್ಳವ, ಮಿತ್ರತ್ವದ ಕವಿತೆಯಲ್ಲಿಯ ಉತ್ತಮ ಶ್ಲೋಕ, ಕೆಲಸದ ತಿಳುವಳಿಕೆಯ ಪ್ರಮುಖ, ಶ್ರೇಷ್ಠ ಯೋಗ್ಯತೆಯವನು. ಕಲ್ಯಾಣಬಯಸುವ ಆಯ್ಕೆ, ಮಹಾ ಸಾಮರ್ಥ್ಯವುಳ್ಳವನು, ರಾಜಧಾನಿಯ ಕೆಲಸಕಾರ್ಯದಲ್ಲಿ ಪರಿಣಿತನಾದವನು. ಬಾದಶಹಾನ ಕಾರ್ಯ ಕಲಾಪದ ಬಂದೋಬಸ್ತ ಮಾಡುವವನು. ಐಶ್ವರ್ಯದ ಹಣೆಯ ತೇಜ, ಸಂಭಾವಿತನದ ಸಭಾದೀಪ, ನಂಭಿಕೆಯ ಲಕ್ಷಣವಿರುವ ಸೇವಕ, ಸಂಪತ್ತಿನ ಅಭಿಷ್ಟ ಚಿಂತಕ, ಕಲ್ಯಾಣ ಇಚ್ಛಕ, ನಂಬಿಗೆಯ ಕಡಲಿನ ಮುತ್ತು, ಸೇವಕ ವೃತ್ತಿಯ ಉಂಗುರಿನ ಕುಂದಣ, ಸಂಪತ್ತ ನಿರಂತರವಾಗಿರುವ ಲಕ್ಷಣೋತ್ಪಾದಕ, ಶಾಶ್ವತ ರಾಜಧಾನಿಯ ಮೋಬ್ಯಾದ, ಶ್ರೇಷ್ಠ ವೈಭವದ ಸ್ತಂಭ, ಅತಿ ಉತ್ತಮ ಸಂಪತ್ತಿನ ಭುಜಬಲವಾಗಿರುವ ಖಾನನು ಸಂಭಾವಿತನೂ, ಯೋಗ್ಯತೆಯುಳ್ಳವನೂ, ಉಚ್ಚಪದಾಧಿಕಾರಿಯೂ ಆದ ಮಸಾಲುದಖಾನ ಅವರ ಆಶ್ರಯದಲ್ಲಿ ಈ ಸನದು ಮಾಡಲಾಗಿದೆ.

ಮಾಲೋಜಿರಾವ ಘೋರ್ಪಡೆಯವರ ಸನದು

ಅಜರಷ್ಟಖಾನೆ ಮಳುರುಲ್ ಅನಾಮ ರಾಜಶ್ರೀ ಮಾಲೋಜಿರಾಯ ಘೋರ್ಪಡೆ ಸಾಹೇಬ, ಸಂಪತ್ತಿನ ಖಜಾನೆಬೂ ಕಾರಕೂನರು, ಕೇಳೂರ ಮಮದಾಬಾದ ಪ್ರದೇಶ ದೇಸಾಯಿಯ, ಸುರುಸನ್ ಇಹಿದೆ ಸಮಾನೀನ ಅಲಿಫ ದರಿನಿಲಾ ಶ್ರೀನಿವಾಸ ಭಟ್ ಖಿನ್ ವೆಂಕಟ ಭಟ ದುನಾರದಾರ ಸಾಕಿನ್ ಮುದ್ಗಲ್ ಹುಜೂರರು ಬಂದು ಅರಿತುಕೊಂಡಿರುವದು. ತಮಗೆ ಇನಾಮ ಭೂಮಿ ಮತ್ತು ದಿನಗೂಲಿ ದರಸ್ತವಾದ.

ಪ್ರದೇಶದ ಮುಖ್ಯಕೇಂದ್ರ ವಗೈರೆ

ಭೂಮಿ ರೆಗಡಿ ದಿನಗೂಲಿ ಜಕಾತಿಯಲ್ಲಿ ದಿನಕ್ಕೆ ರೂಪಾಯಿ ಹನ್ನೆರಡು ./.

ರ ೧ ಕಸಬೆ (ಕೇಂದ್ರ) ಹೊಸಗುಂದೆ

ರ ೧ ತಿಮಾಪೂರ

ರ ೧ ಕುಲದೇವನಹಾಲ

ರ ೧ ಬೇವಿನ ಪೋರಿ

ರ ೪

ಇದಕ್ಕೆ ಎರಡು ಕಡೆ ಬಾಗಿಲು ಕಸಬೆ ಮಜಕೂರ

ಕಾರ್ತಿಕ ಮಾಸ ಮಾಘಮಾಸ

ವೈಶಾಖ ಮಾಸ

ಪ್ರತಿ ತಿಂಗಳು ಶೇಲಾ ೧ ಒಟ್ಟು

೧= ಒಟ್ಟು –ಪ * * * ೬= ಸಾದಿಲ್ವಾರ– ಮಿ * * * ಉಪಭೋಗ
ದರಸವಾದ ಗ್ರಾಮ ರಾಮವಾಡಿಗಿ ಭೂಮಿ ಕುಡೋರ =

ಈ ರೀತಿ ಆಜ್ಞೆಯಂತೆ ಮಾ॥ ಮುಕಾಸಾ ಈಖಾನಿ ಆಡಳಿತದಲ್ಲಿ ಜಿಲ್ಲೆಯ ನಗದು, ಇತರೇ, ಪಾಯದೊ (ಸೌ–ಮೇಜವಾನಿ ಪಟ್ಟಿ, ಬೆಲೆದಟಿ, ಕರಾರುನಾಮಾ, ಯುದ್ಧದ ಖರ್ಚು, ಕರ, ವಹೀವಾಟಿನ ಹಕ್ಕು, ಪ್ರತಿವರ್ಷ ತಪ್ಪದೇ ಉಪಭೋಗಿಸುತ್ತ ಬಂದಿರುವಂತೆ ಮುಂದೆಯೂ ಮುಂದುವರಿಯಬೇಕು. ನಕಲು ಬರೆದುಕೊಂಡು ಮೂಲವನ್ನು ವಿರಳಿಸಬೇಕು. ತಾರೀಖ ೨೮, ಮಾಹೇ ರಮಜಾನ ರುಜು ಸುರನೀಸ್.

೧೫

ಖಂಡೋಜಿ ಘೋರ್ಪಡೆ ಇವನಿಗೆ ನೀಡಿದ ಸನದು

(ಬಿಸ್ಮಿಲ್ಲಾಹ ಅರ್ ರಹಮಾನ ನೀರ್ ರಹೀಮ್, ಎಲ್ಲ ಭೂಮಿ ದೇವರದ್ದು).

ಯಾರ ಅಧಿಕ ಸಮರ್ಥ ಮತ್ತು ಶ್ರೇಷ್ಠತೆಗೆ ಇದೆಯೋ, ಯಾರ ಆಶ್ರಯ ಶೌರ್ಯಕ್ಕೆ ಪರಾಕ್ರಮಕ್ಕೆ ಇದೆಯೋ, ಸಂಭಾವಿತ ಪ್ರಧಾನಿಗಳ ಪ್ರಮುಖವಾಗಿರುವನೋ ಯಶಸ್ಸಿನ ಚಿಹ್ನೆಯನ್ನು ಬೆಳೆಸುವನೋ, ಪರಾಕ್ರಮದ ಅರಣ್ಯದಲ್ಲಿಯ ಪಂಚಾನನ, ಬುದ್ಧಿವಂತಿಕೆಯ ಕಡಲಿನ ಮೊಸಳೆ, ಯಾರ ಬದುಕು ಶ್ರೇಷ್ಠವಾಗಿದೆಯೋ, ಸಾಂಪ್ರತ ಕಾಲದಲ್ಲಿಯ ಎಲ್ಲ ಸೈನಿಕರ ಸರದಾರ, ಉತ್ತಮ ಮಿತ್ರತ್ವದ ಮಿತ್ರ, ಸ್ವಾಮಿ ಕಾಯಕದಲ್ಲಿ ಪ್ರಾಣಾರ್ಪಣೆ ಮಾಡುವಂತಹ ನವಾಬ ಬಹಲುಲ್‌ಖಾನ್ ಸರ್ ಹವಾಲ್ದಾರ ಮತ್ತು ಯಾರ ಆಧಾರ ಶ್ರೇಷ್ಠತೆ ಮತ್ತು ಸಾಮರ್ಥ್ಯಕ್ಕಿದೆಯೋ ಅಂಥ ಮಖದುಮಖಾನ ಮಿರಾನಖಾನ ಹವಾಲ್ದಾರ, ಮುರ್ತಜಾಬಾದ ಪ್ರಾಂತದ ಗುಮಾಸ್ತ ಉರ್ಫ್ ಮಿರಜ್ ಇವನಿಗೆ ಕಲ್ಯಾಣಕರರ ಫರ್ಮಾನು ನೀಡಲಾಗಿದೆ. ಅದು ಹೀಗಿದೆ– ಸುರಸನ್ ಸಮಾನಿನ್ ಮತ್ತು ಆಲಫ್‌ದಿಂದ ಬಾದಶಾಹನ ಕೃಪೆಯಿಂದ, ಬಾದಶಹಾನ ಅತಿಕೃಪೆಯ ರೀತಿಯಿಂದ ತಾಂಡುಳವಾಡಿ ಗ್ರಾಮ, ಕುಂಡಲವಾಡಿ ಗ್ರಾಮ, ಢವಳಿ ಗ್ರಾಮ ಉರ್ಫ್ ಟಾಕಳಿ, ಮಾಲೇನಾಡಿ ಗ್ರಾಮ, ಇಟಕರೆ ಗ್ರಾಮ, ಅಷ್ಟೇ ಕಸಬೇ, ಪ್ರಾಂತಗಳೆಲ್ಲವೂ ಮಲ್ಲಿಕ ಚಾಂದ ಮಹಮ್ಮದ ಇವನ ಬಳಿಯಲ್ಲಿತ್ತು. ಆ ಗ್ರಾಮಗಳನ್ನು .... ಖಂಡೋಜಿ ಘೋರ್ಪಡೆಗೆ ಕರ, ಸುಂಕ, ತಂಬಾಕು, ದಿನಗೂಲಿ, ಜಕಾತ ಸಹಿತ ಸ್ವಾಮಿಯು ಕೃಪೆದೋರಿ ಇನಾಮು ನೀಡಿದ್ದಾರೆ. ಈ ಗ್ರಾಮಗಳನ್ನು ಘೋರ್ಪಡೆಯವರಿಗೆ ನೀಡಿ ಬೆಂಬಲಿಸಬೇಕು. ಹಾಗೂ ಅವರ ಕುಟುಂಬದ ಸರ್ವ ಖರ್ಚನ್ನು ನೀಡಬೇಕು. ಇದನ್ನು ಅರಿತು ಅವರು ವಹೀವಾಟು ವ್ಯವಹಾರ ಮಾಡುತ್ತಾರೆ. ತಾರಿ, ೧ ಸನ್ ೧೧೯೧.

ಮಸಾಉದಖಾನ ವಜೀರ್ ಅವರು ನೀಡಿದ ಸನದು

(ಸೂರ್ಯನಂತೆ ಪ್ರಸಿದ್ಧವೂ, ಅತಿ ಪವಿತ್ರವೂ, ಶ್ರೇಷ್ಠವೂ ಆದ ಸರಕಾರದ ಅನುಮತಿ).

ಯಾರ ಆಶ್ರಯವು ವಜೀರನಿಗೂ, ಐಶ್ವರ್ಯಕ್ಕೂ ಇದೆಯೋ, ಸದ್ಗುಣ ಮತ್ತು ಸಂಪತ್ತಿಗೂ ಯಾರ ಆಧಾರವಿದೆಯೋ, ಆಜ್ಞೆ ನೀಡುವ ಶ್ರೇಷ್ಠ ಪದಾಧಿಕಾರಿ ಯಾರೋ, ಬಾದಶಹಾಜಿಗೆ-ರಾಜಧಾನಿಗೆ ಯಾರು ಬಾಹುಬಲರಾಗಿರುವರೋ, ಸಂಪೂರ್ಣ ನಂಬಿಕೆಗೆ, ಪಾತ್ರರೋ, ಆಡಳಿತ ಮತ್ತು ಬುದ್ಧಿವಂತಿಕೆಯು ಲೇಖನದ ಮಂಗಲಾಚರಣವೋ, ಕೀರ್ತಿ ಪಡೆದ ಕವಿತೆಯ ಉತ್ತಮ ಶ್ಲೋಕವೋ, ಒಟ್ಟು ಕಾರಖಾನೆಯ ಪ್ರಮುಖಸೇ, ಯೋಗ್ಯತೆಯಲ್ಲಿ ಶ್ರೇಷ್ಠನೋ, ಕಲ್ಯಾಣ ಬಯಸುವವರಲ್ಲಿ ಪ್ರಮುಖನೋ, ಸಾಮರ್ಥವಾದ ಮತ್ತು ರಾಜಧಾನಿಯ ಕೆಲಸದ ಬಂದೋಬಸ್ತ ಮಾಡುತ್ತಾನೋ, ಬಾದಶಾಹನ ಕಾರ್ಯ ನಿರ್ವಹಿಸುತ್ತಾನೋ, ಸಂಪತ್ತಿನ ಮುಖಶ್ರೀ ಮತ್ತು ಸಂಪೂರ್ಣ ಶ್ರೇಷ್ಠರಲ್ಲೇ ಪ್ರಮುಖನೋ, ನಂಬಿಕೆಯ ಲಕ್ಷಣ ಉಳ್ಳವನೋ, ಸಂಪತ್ತಿನ ಕಲ್ಯಾಣ ಬಯಸುವವನೋ, ವಿಶ್ವಾಸನಿದಾಯ ರಾಜಮಾನ್ಯ ಮುಕ್ತಾಫಲವೋ, ಚಾಕರವೃತ್ತಿಯ ಉಂಗುರದ ಕುಂದಣ, ರಾಜಧಾನಿ-ಸಂಪತ್ತಿನ ಮೋಖ್ತಾರ, ಶ್ರೇಷ್ಠ ರಾಜಧಾನಿಯ ಸ್ತಂಭ, ತೋಳುಬಲ, ಶ್ರೇಷ್ಠ ಜೀವನ ಶೈಲಿ ಯಾರದಿದೆಯೋ ಅಂಥ ಸಮರ್ಥ-ಶ್ರೇಷ್ಠ ಅಧಿಕಾರ ಇರುವ ಮಸಾಉದಖಾನ.

ಮುರಾದ ಜಗದೇವರಾವ ಅವರು ನೀಡಿದ ಸನದು

ವೇದಮೂರ್ತಿ ಸಮಸ್ತ ಬ್ರಾಹ್ಮಣರು, ವಾಸ್ತವ್ಯ ಸಾಗರಗಾಂವ ಊರು ಉರ್ಫ್ ತಳಾಪುರ, ತರ್ಫ್ (ಮೂಲಕ) ಸಾಡಸ, ಪುಣೆ ಪ್ರಾಂತ, ಅವರಿಗೆ ನೀಡಿದ ಅಗ್ರಹಾರ ಪತ್ರ ಹೀಗಿದೆ–

ವೇದಮೂರ್ತಿಖಿಡಭಟ್ ಬಿನ್ ಬಾಪದೇವಭಟ್ ತುಳಾಪುರಕರ ಮತ್ತು ದೇವಭಟ ಬಿನ್ ಕಬೇಶ್ವರ ಭಟ ಬ್ರಹ್ಮೆ ಇವರು ಶಾಹುನಗರ ಸಮೀಪ, ಸಾತಾರಾ ಕೋಟೆ ಇಲ್ಲಿಯ ಮುಕ್ಕಾಂದಲ್ಲಿರುವ ಸ್ವಾಲು ಸನ್ನಿಧಿಗೆ ಬಂದು ವಿನಂತಿ ಮಾಡಿದ್ದೇನೆಂದರೆ– ಸಮಸ್ತ ಬ್ರಾಹ್ಮಣರು ವಾಸ್ತವ ಕ್ಷೇತ್ರ ಮಜಕೂರ, ಇವನಿಗೆ ಈ ಹಿಂದೆ ರಾಜಶ್ರೀ ಮುರಾರ ಜಗದೇವರಾವ ಅವರು ಮಜಕೂರ ಗ್ರಾಮದ ನಾಲ್ಕು ಸೀಮೆ, ಹಿಂದಿನ ಮರ್ಯಾದೆಯಂತೆ ಕರ, ಸುಂಕ, ಸದ್ಯದ ಪಟ್ಟಿ, ಪೆಸ್ತರ ಹಟ್ಟಿ ಸಹಿತ ಜಲ, ತರು, ತೃಣ, ಕಾಷ್ಟ, ಪಾಷಣ, ನಿಧಿ ನಿಕ್ಷೇಪ್ತ ಸಹಿತ ಧಾರಾದತ್ತ ಅಗ್ರಹಾರವನ್ನು ಇನಾಮ ಮಾಡಿ, ವಿಜಾಪುರದ ಬಾದಶಹಾರಿಂದ ಅನುಮತಿ ಪತ್ರ ನೀಡಲಾಗಿದೆ. ಅದರಂತೆ ಗ್ರಾಮ ಮಜಕೂರ ಇನಾಮನ್ನು ಉಪಭೋಗಿಸುತ್ತಿದ್ದೇವೆ. ಅದೇ ರೀತಿಯಲ್ಲಿ ರಾಜಶ್ರೀ ಶಹಾಜಿ ರಾಜೇ ಮತ್ತು ಹಿರಿಯ ಕೈ. ಮಹಾರಾಜರು ಅನುಮತಿ ಪತ್ರವನ್ನು ನೀಡಿ ಈ ಮೊದಲಿನಂತೆ ಇನಾಮ ಅಗ್ರಹಾರವನ್ನು ಸಮಸ್ತ ಬ್ರಾಹ್ಮಣರು ಮುನ್ನಡೆಸಿಕೊಂಡು ಹೋದರು. ಅನಂತರ ಆಲಮಗೀರ ಬಾದಶಹಾ ತಳಾಪುರದೆ ಟಿಕಾಣೆ ಹೂಡಿದ್ದರು. ಆ ಸಮಯದಲ್ಲಿ ಸಮಸ್ತ ಬ್ರಾಹ್ಮಣರು ಈ ಮೊದಲಿನ ಪತ್ರವನ್ನು ಬಾದಶಹಾನಿಗೆ ತೋರಿಸಿ ಅರ್ಜಿ ಮಾಡಿದರು. ಅದರಂತೆ ಆಲಮಗಿರಿ ಬಾದಶಹಾನು ದಿವಾನ ಅನುಮತಿ ನೀಡಿ. ಮಜಕೂರ ಗ್ರಾಮವನ್ನು ಸಮಸ್ತ ಬ್ರಾಹ್ಮಣರಿಗೆ ಇನಾಮ ನೀಡಿದರು. ಮಹಾರಾಜ ರಾಜಶ್ರೀ ಸಾಹೇಬರೂ ಇನಾಮನ್ನು ಮುನ್ನಡೆಸಿದರು. ಕರಸುಂಕಿ, ದೇಶಮುಖಿ, ೧/೩ ಸದ್ಯದ ಪಟ್ಟಿ, ಪೆಸ್ತರ ಪಟ್ಟಿ ಹೊರತುಪಡಿಸಿ ಹಕ್ಕುದಾರರನ್ನಾಗಿ ಮಾಡಿ, ಇನಾಮ ಮಾಡಿಕೊಟ್ಟರು. ಆ ಬಳಿಕ ಮಹಾರಾಜ ರಾಜಶ್ರೀ ಸ್ವಾಮಿಯೂ ಸಹ ತಮ್ಮ ಅನುಮತಿ ಪತ್ರವನ್ನು ರಾಜ್ಯಾಭಿಷೇಕ ಶಕೆ ೪೫ ವಿಲಂಬಿನಾಮ ಸಂವತ್ಸರೆ, ಅಶ್ವಿನ ಬಹುಳ ದಶಮಿ, ಮಂದವಾರಿರಂದು ನೀಡಿದರು. ಈ ಗ್ರಾಮವು ಸರ್ವಮಾನ್ಯವಾದ ಮೊದಲಿನಂತೆ ಅಗ್ರಹಾರ ಇನಾಮವಾಗಿದೆ. ಅದರಂತೆ ಕರಾರು ಇದೆ ಎಂದು ಬರೆದು ಮಹಾರಾಜರು ಪತ್ರ ನೀಡಿದ್ದಾರೆ. ಅದರಂತೆ ಸಮಸ್ತ ಬ್ರಾಹ್ಮಣರು ಮಜಕೂರ ವಾಸ್ತವಕ್ಷೇತ್ರದ ಇನಾಮನ್ನು ಮುನ್ನಡೆಸುತ್ತಿದ್ದಾರೆ. ಈ ಹಿಂದಿನ ಪತ್ರವು ಜೀರ್ಣಗೊಂಡಿದೆ. ಉಪಭೋಗಕ್ಕಾಗಿ ಮಹಾರಾಜರು ಪತ್ರವನ್ನು ನೀಡಿ ಮಜಕೂರ ಗ್ರಾಮವನ್ನು ಸಮಸ್ತ ಬ್ರಾಹ್ಮಣ ಕ್ಷೇತ್ರ ಮಜಕೂರ ಇವರು ವಿರಳ ಪಾರಂಪರ್ಯವಾಗಿ

ಅಗ್ರಹಾರದ ಇನಾಮು ಮುನ್ನಡೆಸಿಕೊಂಡು ಹೋಗುವಂತೆ ವಿನಂತಿ ಮಾಡಿದರು. ಈ ಹಿಂದಿನ ಪತ್ರವನ್ನು ತಂದು ತೋರಿಸಿದೆವು. ಅದರಿಂದ ಸ್ವಾಮಿಗಳು ಮನಸ್ಸು ಮಾಡಿ, ಕೃಪೆ ತೋರಿ, ಈ ಮಜಕೂರ ಗ್ರಾಮವು ನಿಮ್ಮ ಅಗ್ರಹಾರಕ್ಕೆ ಇನಾಮ ನೀಡಲಾಗಿದೆ ಎಂದು ತಿಳಿಸಿ ಅದರಂತೆ ಸ್ವರಾಜ್ಯ ಮೊಗಲರ ಆಡಳಿತದಲ್ಲೂ ಕರಸುಂಕ, ಸದ್ಯದ ಪಟ್ಟಿ, ಪೆಸ್ತರ ಪಟ್ಟಿ ಸಹಿತ ಸರ್‌ದೇಶಮುಖಿ, ಗೌಡಕಿ, ಜಲ-ತರು-ತೃಣ-ಕಾಷ್ಠ-ಪಾಷಣ, ತಿಧಿ ನಿಕ್ಷೇಪ ಸಹಿತ, ಹೊರತುಪಡಿಸಿ ಹಕ್ಕುದಾರರನ್ನಾಗಿ ಮಾಡಿ, ನೀವು ಸಮಸ್ತ ಬ್ರಾಹ್ಮಣರಿಗೆ ಕ್ಷೇತ್ರ ಮಜಕೂರ, ಪುತ್ರ ಪೌತ್ರಾದಿ ವಂಶ ಪರಂಪರೆಯಂತೆ ಇನಾಮ ಮಾಡಲಾಗಿದೆ. ಆದರೂ ನೀವು ನಿಮ್ಮ ವಂಶ ಪರಂಪರೆಯಂತೆ ಮಜಕೂರ ಗ್ರಾಮವನ್ನು, ಮೂರನಂತೆ ನಾಲ್ಕು ಸೀಮೆಯನ್ನು ಸಮಸ್ತ ಬ್ರಾಹ್ಮಣ ಅಗ್ರಹಾರದವರು ಉಪಭೋಗಿಸಿ ಸುಖರೂಪದಿಂದ ಕಾಲಕಳೆಯಬೇಕು. ಅದಕ್ಕೆ ಸಂಬಂಧಿಸಿದ ಪತ್ರ, ಚೈತ್ರವದ್ಯನವಮಿ, ಇಂದೂದಾಸರೆ, ರಕ್ಷಾಕಿನಾಮ ಸಂವತ್ಸರೆ, ಛ ೨೪ ರಬಿಲಾವಲ, ಕಾರ್ಯದರ್ಶಿ ಪತ್ರಗಳು-

೧ ಸಮಸ್ತ ಬ್ರಾಹ್ಮಣರ ಹೆಸರು

೧ ಮೊಕಾದಮ್ ಗ್ರಾಮ ಮಜಕೂರ

೧ ದೇಶಮುಖ ಮತ್ತು ದೇಶಪಾಂಡೆ

೧ ದೇಶಾಧಿಕಾರಿ

೧ ರಾಜಶ್ರೀ ಪ್ರಧಾನಮಂತ್ರಿ

೫

■

III. ಕೈಫಿಯತ್ತುಗಳು

ಮರಾಠಾ ಸರದಾರರು

೧

ಘೋರಪಡೆ ಅಮೀರುಲ್ ಉಮರಾವ

ಯಾದಿ ಘೋರಪಡೆ ಅಮಿರುಲ್ ಉಮರಾವ ಮತ್ತು ಅವನ ಚರಿತ್ರೆಯನ್ನು ಹಿರಿಯ ವೃದ್ಧರು ಹೇಳಿದ ಮಾಹಿತಿಗನುಗುಣವಾಗಿ ವರ್ಣಿಸಲಾಗಿದೆ. ಅದು ಹೀಗಿದೆ–

ಘೋರಪಡೆ ಎಂಬ ಉಪನಾಮಕ್ಕಿಂತ ಹಿಂದಿನ ಉಪನಾಮವು ಸಿಸೋದೆ ಭೋಸಲೆ ಎಂದಿತ್ತು. ಅನಂತರ ಔರಂಗಜೇಬ ಬಾದಶಾಹನು ಹಾಪಶಿ ಜನರ ರಾಜ್ಯದ ಮೇಲೆ ದಂಡೆತ್ತಿ ಬಂದು ಕೋಟೆಯ ಮೇಲೆ ಹಲ್ಲೆ ಮಾಡಿದನು. ಕೋಟೆಯ ಗೋಡೆಯ ಮೇಲೆ ಉಡವೆಂಬ ಪ್ರಾಣಿ ಕೂತಿತ್ತು. ಪೂರ್ವಜರು ಅದರ ಸಹಾಯದಿಂದ ಕೋಟೆ ಏರಿ ಹಸ್ತಗತ ಮಾಡಿಕೊಂಡರು. ಅಂದಿನಿಂದ ಘೋರಪಡೆ ಎಂಬ ಉಪನಾಮ ಮತ್ತು ನಿಶಾನೆ ಬಂಡಿಯು ಬಾದಶಾಹನ ಆಜ್ಞೆಯಾಗಿ, ಅದರಂತೆ ಇಂದಿನವರೆಗೆ ವಹಿವಾಟು ಮುಂದುವರೆದಿದೆ. ಯಾವ ಬಾದಶಾಹನ ಕಾಲದಲ್ಲಿ ಯಾವ ವರ್ಷ ಆ ಮೂಲ ಪುರುಷನ ಹೆಸರಿನೊಂದಿಗೆ ಸೇರ್ಪಡೆಯಾಗಿದೆ ಎನ್ನುವದು ಈಗ ಗೊತ್ತಾಗುವ ಹಾಗಿಲ್ಲ. ಆದರೆ ಆ ಮಜಕೂರು ಮಾತ್ರ ಜನಪ್ರಸಿದ್ಧವಾಗಿದೆ. ಮುಂದೆ ಹೆಸರಿನ ಮಾಹಿತಿಯು ಲಭಿಸಿ, ಅದನ್ನು ತಪಶೀಲಾಗಿ ನೀಡಲಾಗಿದೆ.

೧) ಮೂಲ ಪುರುಷ ಮಾಹಾಳೋಜಿಬಾವಾ ಘೋರಪಡೆಯು ಹಿಂದೂಸ್ಥಾನದಿಂದ ಈ ದಕ್ಷಿಣ ಪ್ರಾಂತಕ್ಕೆ ಬಂದು ಗೌಡಕಿ ವಗೈರೆ ವತನ ಸಂಪಾದನೆ ಮಾಡಿ ವಾಸಿಸುತ್ತಿದ್ದನು. ಅವನಿಗೆ ಇಬ್ಬರು ಪುತ್ರರು. ಒಬ್ಬನ ಹೆಸರು ಭವಾನಬಾವಾ, ಎರಡನೆಯವನು ಸಂತಾಜಿಬಾವಾ.

೨) ಭವಾನಬಾವಾ ಸದರಿ ಗೌಡಕಿ ವಗೈರೆ ಸಂಪಾದನೆ ಮಾಡಿ, ಪುಣೆ ಪ್ರಾಂತದ ಜಾಂಬ ಮುಂತಾದ ಕಡೆಗಳಲ್ಲಿ ವೃತ್ತಿಯನ್ನು ಮಾಡಿಕೊಂಡಿದ್ದಾನೆ. ಅದರ ವಿವರವಿಲ್ಲ.

೩) ಸಂಬಾಜಿರಾವ ಶೂರ ಮತ್ತು ಪರಾಕ್ರಮಿ. ಇವರು ದಿಲ್ಲಿ ಬಾದಶಾಹನ ಗೌರವಕ್ಕೆ ಪಾತ್ರರಾಗಿದ್ದರು. ಅವರ ಮಗ ಮಹಾಳೇಜಿಬಾವಾ.

೪) ಮಾಹೆಳೋಜಿಬಾವಾ ಸಹ ಸದರಿ ಬಾದಶಾಹಾನ ಗೌರವಕ್ಕೆ ಪಾತ್ರರಾಗಿದ್ದರು. ಬಾದಶಾಹನ ಆಶ್ರಯದಲ್ಲಿದ್ದಾಗ ಅವನಿಗೆ ಮೂವರು ಮಕ್ಕಳು-ಸಂತಾಜಿರಾವ, ಬಹಿರಜಿಬಾವಾ, ಮಹಾಳೋಜಿಬುವಾ ಒಟ್ಟು ಮೂವರು.

೫) ಈ ಮೂವರೂ ಶೂರರೂ, ಬುದ್ಧಿವಂತರೂ ಆಗಿದ್ದು, ಈ ಪುರುಷರ ಬಲದಿಂದಲೇ ಕರವೀರ ಮತ್ತು ಸಾತಾರೆಕರ ಮಹಾರಾಜರ ಉತ್ಕರ್ಷನವಾಯಿತು. ಇದು ಬಾದಶಾಹರಿಗೆ ಒಪ್ಪಿಗೆಯಾಗಿ, ಕರವೀರ ಸಾತಾರಕರ ಮಹಾರಾಜರ ಪಟ್ಟಾಭಿಷೇಕ ಮಾಡಲಾಯಿತು. ಆಗ ಸದರಿ ಈ ನಮ್ಮ ಮೂವರೂ ಪುರುಷರಿಗೆ ಬಡತಿ ಸಿಕ್ಕಿತು. ಅದು ಹೀಗಿದೆ-

ಸಂತಾಜಿ ಬಾವಾನಿಗೆ ಸೇನಾಪತಿ ಎಂಬ ಕಿತಾಬ್ ನೀಡಲಾಯಿತು. ಮತ್ತು ಐದು ಊರು ಇನಾಮು, ಗಜೇಂದ್ರಗಡ ಪ್ರದೇಶ, ಪನಾಳ ಪ್ರಾಂತದ ದೇಶಮುಖಿ ನೀಡಲಾಯಿತು. ಅವನ ವಂಶದ ವಿವರ ಇದರಲಿಲ್ಲ.

ಮಾಹೆಳೋಜಿಬಾವಾ ಇವರು ನಮ್ಮ ಮೂಲ ಪುರುಷ. ಇವರು ನಮ್ಮ ಮುತ್ತಜ್ಜನ ಅಪ್ಪನ ಅಜ್ಜನಾಗಿದ್ದರು. ಅವರಿಗೆ ಅಮೀರುಲ್ ಉಮರಾವ ಎಂಬ ಕಿತಾಬ್, ಐದು ಊರು ಇನಾಮು, ಆಜರಾ ಪ್ರದೇಶ ಮತ್ತು ಬೆಳಗಾವ ಪ್ರಾಂತದ ದೇಶಮುಖಿಯನ್ನು ನೀಡಲಾಯಿತು. ಇದು ನಮ್ಮ ಶ್ರೇಷ್ಠ ಸಂಪಾದಕರ ವಂಶದ ವರ್ಣನೆ.

ಈ ರೀತಿ ಬಾದಶಾಹನ ಆಜ್ಞೆಯಂತೆ ಕರವೀರ ಮತ್ತು ಸಾತಾರಕರ ಮಹಾರಾಜರು ನಮ್ಮ ವಂಶಕ್ಕೆ ಉತ್ತೇಜನ ನೀಡಿ ತಮ್ಮ ಬಳಿ ಆಶ್ರಯ ನೀಡಿದರು. ಅನಂತರ ಸದರಿ ಪುರುಷರು ತಮ್ಮ ತಮ್ಮ ಸಂಸ್ಥಾನದಲ್ಲಿದ್ದುಕೊಂಡು, ಮಹಾರಾಜರೊಂದಿಗೆ ದಂಡಯಾತ್ರೆ ಆಕ್ರಮಣ ಪಗೈರೆ ಮಾಡಿ ಪ್ರದೇಶಗಳನ್ನು ಗೆದ್ದು, ಮಹಾರಾಜರಿಂದ ಬಡತಿಯನ್ನು ಪಡೆದರು. ಇವರಲ್ಲಿ ನಮ್ಮ ಪೂರ್ವಜರಾದ ಮಾಹಾಳೋಜಿಬಾವಾ ಇದೇ ಪ್ರಾಂತದಲ್ಲಿ ಸಾವನ್ನಪಿದರು. ಅವನ ಮಗ ಶಿವಾಜಿಬಾವಾ.

೬) ಶಿವಾಜಿಬಾವಾ ನುರಿತ ರಾಜಕಾರಣಿ ಪುರುಷ. ನಮ್ಮ ಮುತ್ತಜ್ಜನ ಅಜ್ಜನ ಅಪ್ಪ. ಅವನ ಮಕ್ಕಳಾದ ಯಶವಂತರಾವ೧, ಮಾಧ್ಯಾಳಕರ ರಾಮಚಂದ್ರರಾವ ೧, ಮಾಲೋಜಿರಾವ ೧-ಹೀಗೆ ಮೂವರು ನಮ್ಮ ಮುತ್ತಜ್ಜಂದಿರು. ಇವರಲ್ಲಿ ಸಂಸ್ಥಾನದ ಮೇಲೆ ದೊಡ್ಡಪ್ಪನಾದ ಯಶವಂತರಾವ ಅವರನ್ನು ಕುಳ್ಳಿರಿಸಿದರು. ಮಾಧ್ಯಾಳಕರ ಅವರ ವಂಶದ ವರ್ಣನೆ ಮಾಡಲಿಲ್ಲ. ಅವನನ್ನು ಮಹಾರಾಜರ ಸೈನ್ಯದ ಜೊತೆಗಿರಿಸಿ, ಶಿವಾಜಿಬಾವಾನು ತನ್ನ ಮಗ ಮಾಲೋಜಿರಾವನನ್ನು

ತನ್ನ ಜೊತೆಗೆ ಕರೆದುಕೊಂಡು ಕರ್ನಾಟಕ ಪ್ರಾಂತದ ದಂಡಯಾತ್ರೆಯನ್ನು ಕೈಕೊಂಡನು. ಕಲಮಿನಲ್ಲಿ ಹೇಳಿದ ಪ್ರಕಾರ ಬೇರೆ ಮನೆತನ ಮತ್ತು ಅವರ ನಡುವೆ ಸಂಸ್ಥಾನಿ ರಾಜಕಾರಣದಿಂದಾಗಿ ಸಂಪತ್ತು ಲೂಟಿ ಮಾಡಿದ ವಾರ್ತೆಯನ್ನು ಕೇಳಿ. ಆ ಪ್ರಾಂತ್ಯಕ್ಕೆ ಶಿವಾಜಿರಾವ ಬರುವಷ್ಟರಲ್ಲಿ ಅದೇ ಪ್ರಾಂತದಲ್ಲಿ ಸಾವನ್ನಪ್ಪಿದರು. ಅವರ ಪುತ್ರ ನಮ್ಮ ಮುತ್ತಜ್ಜ ಮಾಲೋಜಿರಾವ ಜೊತೆಗಿದ್ದರು.

೭) ಮುತ್ತಜ್ಜನಾದ ಮಾಲೋಜಿರಾವನು ಬೇರೆ ಮನೆತನವನ್ನು ಮತ್ತು ಶಿದೋಜಿ ಹಿಂದೂರಾವ ಅವರನ್ನು ಜೊತೆಗೆ ಕರೆದೊಯ್ದಿದ್ದ. ಅವನನ್ನು ಗುತ್ತಿ ಸಂಸ್ಥಾನದಲ್ಲಿರಿಸಿ ಅಲ್ಲಿಯ ಕೆಲಸ ಕಾರ್ಯಗಳ ವ್ಯವಸ್ಥೆಯ ಬಗೆಗೆ ತಿಳಿಸಿ, ಮಾಲೋಜಿರಾವನು ಈ ಪ್ರಾಂತಕ್ಕೆ ಇಲ್ಲಿಯ ವ್ಯವಸ್ಥೆಗಾಗಿ ಬಂದನು. ಈ ಸಂಸ್ಥಾನವನ್ನು ಯಶವಂತರಾವನು ನೋಡಿಕೊಳ್ಳುತ್ತಿದ್ದನು. ಅವನನ್ನು ಗುತ್ತಿ ಸಂಸ್ಥಾನಕ್ಕೆ ಕಳಿಸಲಾಯಿತು. ಅವನು ಅಲ್ಲಿಗೆ ತಲುಪಿದ ಬಳಿಕ ಎರಡನೇ ಮನೆತನದ ಪುರುಷನಾದ ಹಿಂದೂರಾವನು ಅಲ್ಲಿಯ ಕೋಟೆಯನ್ನು ದುರಸ್ತಿ ಮಾಡಿದನು. ಸಮೃದ್ಧಿಯೂ ಆಯಿತು. ಅವನ ಗುರಿಯೂ ದೊಡ್ಡದಾಗಿತ್ತು. ಅಷ್ಟರಲ್ಲಿ ಅವನು ಮರಣವನ್ನಪ್ಪಿದ. ಅವನ ಪುತ್ರ ಮುರಾದರಾವ ಮತ್ತು ನಮ್ಮ ಅಜ್ಜನ ತಮ್ಮನಾದ ಯಶವಂತರಾವನು ಸೇರಿಕೊಂಡು ಗುತ್ತಿ ಸಂಸ್ಥಾನದ ಕಾರಭಾರವನ್ನು ಮುನ್ನಡೆಸಿ, ಆ ಪ್ರಾಂತದಲ್ಲಿ ದೇವಾಲಯ, ಕೆರೆ, ಧರ್ಮಶಾಲೆ ಮುಂತಾದ ಹಲವು ಧಾರ್ಮಿಕ ಕಾರ್ಯವನ್ನು ಕೈಕೊಂಡರು. ಶ್ರೀಮಂತ ಪ್ರಧಾನಿಯ ಜೊತೆಗೆ ಗೆಳೆತನವನ್ನು ಮಾಡಿ ಅಲ್ಲಿ ಪಾಳೆಗಾರರನ್ನು ನೇಮಿಸಿದನು. ಹೈದರನ ಜೊತೆ ಕಾಳಗ ಮಾಡಿದನು. ಕೊನೆಗೆ ಹೈದರನು ಗುತ್ತಿ ಕೋಟೆಯನ್ನು ಗೆದ್ದು ಕಪಾಳಗಡದಲ್ಲಿ ಒಯ್ದಿಟ್ಟನು. ಅಲ್ಲಿ ಸಾವನ್ನಪ್ಪಿದರು. ಮುರಾದರಾವನಿಗೆ ಮಕ್ಕಳಿರಲಿಲ್ಲ. ಯಶವಂತರಾವನಿಗೆ ಇಬ್ಬರು ಮಕ್ಕಳು. ಒಬ್ಬ ಶಿವರಾವ, ಮತ್ತೊಬ್ಬ ವೆಂಕಟರಾವ. ಮುರಾದರಾವನಿಗೆ ಶಿವರಾವನನ್ನು ದತ್ತಕ ನೀಡಿ, ವೆಂಕಟರಾವನು ಸಂಸ್ಥಾನವನ್ನು ಸಂಪಾದನೆ ಮಾಡಿದನು. ಗುತ್ತಿ ಸಂಸ್ಥಾನದ ಉಸ್ತುವಾರಿ ಮಾಡುತ್ತಿದ್ದನು. ಅನಂತರ ಯಶವಂತರಾವ ಮರಣ ಹೊಂದಿದನು. ವೆಂಕಟರಾವ ಈ ಪ್ರಾಂತಕ್ಕೆ ಬಂದಾಗ ಕರ್ನಾಟಕ ಪ್ರಾಂತದಲ್ಲಿ ಟೀಪೂ ದಂಗೆ ನಡೆದು ಗುತ್ತಿ ಸಂಸ್ಥಾನವನ್ನು ಟೀಪೂ ಹಸ್ತಗತ ಮಾಡಿಕೊಂಡನು. ಅಲ್ಲಿಯ ಪುರುಷನನ್ನು ಬಂಧಿಸಿದನು. ಆ ಪುರುಷರೆಂದರೆ ಮುರಾದರಾವ ಹಿಂದೂರಾವ ಅಜ್ಜನ ಅಣ್ಣನಾದ ಶಿವರಾವ ಮತ್ತು ಮುತ್ತಜ್ಜ ಮಾಲೋಜಿರಾವ ಅವರ ಕುಟುಂಬವೂ ಅಲ್ಲಿತ್ತು. ಅವರ ಪುತ್ರ ಯಶವಂತರಾವ ನಮ್ಮ ಖಾಸಾ ಅಜ್ಜ. ಎರಡನೆಯವನಾದ ಬಂಡೇರಾವ ಇವನು ನಮ್ಮ ಅಜ್ಜನ ತಮ್ಮ. ಇವರೂ ಟೀಪೂವಿಗೆ ಸೋತರು.

ಬೇರೆ ಕಡೆ ಹೋಗಲು ಟೀಪೂ ತಡೆ ಬಂದಿದ್ದರಿಂದ ನಾಲ್ವರೂ ರಾಜರು ಟೀಪೂವಿನ ಸ್ವಾಧೀನರಾದರು. ಅವರಲ್ಲಿ ಶತ್ರುತ್ವದಿಂದ ಅಜ್ಜನ ತಮ್ಮನ ಮಗನಾದ ಶಿದೋಜಿರಾವ ದೊಡ್ಡಪ್ಪನ ದೊಡ್ಡಪ್ಪ–ಇವರು ಟೀಪೂವಿಗೆ ಹಸ್ತಗತರಾಗದೇ ಈ ಪ್ರಾಂತಕ್ಕೆ ಬಂದು ವೆಂಕಟರಾವನ ಎರಡೂ ಸಂಸ್ಥಾನದ ಮೇಲೆ ಕಣ್ಣಿಟ್ಟಿದ್ದನು. ಅವನಿಗೂ ಮುತ್ತಜ್ಜರಾವನಿಗೂ ಗುತ್ತಿಯ ವಿಷಯವನ್ನೆಲ್ಲ ಅರುಹಿ ರಾಜರು ಟೀಪೂವಿಗೆ ಹಸ್ತಗತರಾದ ವಿಷಯವನ್ನೆಲ್ಲ ತಿಳಿಸಿದನು. ಬಳಿಕ ಚರ್ಚೆ ನಡೆದು, ಖಾಸಾ ಅಜ್ಜ ಯಶವಂತರಾವ ಮತ್ತು ಅಜ್ಜನ ತಮ್ಮನಾದ ಖಂಡೇರಾವ ಇವರಿಬ್ಬರೂ ಕಿರು ವಯಸ್ಸಿನವರಾಗಿದ್ದರಿಂದ ಮೊದಲು ಅವರು ಪ್ರಧಾನಿಯ ಕಿವಿಗೆ ಹಾಕಿ, ಅಜ್ಜನ ಸೋದರ ವೆಂಕಟರಾವನ್ನು ಮುಕ್ತಗೊಂಡು, ಈ ಪ್ರಾಂತದ ಶ್ರೀಮಂತನ ಭೇಟಿಗಾಗಿ ಕರೆತಂದರು. ಈ ದಂಗೆಯಲ್ಲಿ ಮುತ್ತಜ್ಜ ಮಾಲೋಜಿರಾವನ ಕಾಲವಾಯಿತು.

೮) ಖಾಸಾ ಅಜ್ಜ ಯಶವಂತರಾವ ಅಜ್ಜನ ಸೋದರ ವೆಂಕಟರಾವ ಮತ್ತು ಅಜ್ಜನ ಸೋದರನ ತಮ್ಮನಾದ ಶಿದೋಜಿರಾವ–ಒಟ್ಟು ನಾಲ್ವರು ರಾಜರು ಶ್ರೀಮಂತನ ಬಳಿಗೆ ಬಂದು ಮುರಾದರಾವ ಮತ್ತು ಶಿವರಾವನ ಬಿಡುಗಡೆಗಾಗಿ ಚರ್ಚೆ ನಡೆದಾಗ, ಟೀಪೂವಿನ ಬಂದುಬಸ್ತಿಗಾಗಿ ಸೈನ್ಯ ಸಹಿತ ಪರಶರಾಮ ಭಾವೂ ಪಟವರ್ಧನರನ್ನು ಕಳಿಸುವ ವಿಚಾರ ವಿನಿಮಯ ನಡೆದು, ಪಟವರ್ಧನರು ಕರ್ನಾಟಕ ಯಾತ್ರೆಯನ್ನು ಕೈಕೊಂಡರು. ಆ ಕಾಲಕ್ಕೆ ಶ್ರೀಮಂತನು ನಮ್ಮ ಸದರಿ ರಾಜನಿಗೆ ತಿಳಿಹೇಳಿ ಭಾವೂನ ಜೊತೆಗೆ ಅವನನ್ನು ಕಳಿಸಿದನು. ಅದೇ ರೀತಿ ಭಾವೂವಿನ ಜೊತೆಗೆ ಕರ್ನಾಟಕಕ್ಕೆ ತೆರಳಿ ಮುರಾದರಾವ ಮತ್ತು ಶಿವರಾವನನ್ನು ಮುಕ್ತಗೊಳಿಸಿ, ಗುತ್ತಿಸಂಸ್ಥಾನದ ಬಗ್ಗೆ ಪ್ರಯತ್ನ ನಡೆದಾಗ, ಶ್ರೀಮಂತನ ಟೀಪೂವಿನ ಸಂಧಾನವಾಯಿತು. ಮುರಾದರಾವ ಸಾಹೇಬ ಟೀಪೂವಿನ ಬಂಧನದಲ್ಲೇ ತೀರಿಕೊಂಡನು. ಗುತ್ತಿ ಸಂಸ್ಥಾನ ಸಂಧಾನದಲ್ಲಿ ಸಿಲುಕಿಕೊಂಡಿತು. ಸದ್ಯಕ್ಕೆ ಸೊಂಡುರ ಸಂಸ್ಥಾನವನ್ನು ಸದರಿ ರಾಜರಿಗೆ ನೀಡಿ, ಅವರಿಗೆ ತಿಳಿಹೇಳಿ ಹರಿಪಂತರಾವ ಫಡಕೆಯವರ ಜೊತೆಗೆ ಪುಣೆಗೆ ಬಂದು ಶ್ರೀಮಂತ ಪ್ರಧಾನಿಯವರನ್ನು ಕಂಡು ಮತ್ತಷ್ಟು ಬೆಳವಟಿ, ರೋಳಿ, ಕಂಕಣವಾಡಿ ಮುಂತಾದ ತಾಲೂಕುಗಳನ್ನು ನೀಡಿ, ಸಧ್ಯಕ್ಕೆ ತಿಳಿ ಹೇಳಿ ಶ್ರೀಮಂತನು ಒಳಗಿರಿಸಿಕೊಂಡನು. ಇಷ್ಟರಲ್ಲಿ ಶಿವರಾಜ ಮತ್ತು ಶಿದೋಜಿರಾವ ಅವರನ್ನು ಸೊಂಡೂರ ಸಂಸ್ಥಾನಕ್ಕೆ ಕಳಿಸಿ, ಖಾಸಾ ಅಜ್ಜ ಯಶವಂತರಾವ ಮತ್ತು ಅಜ್ಜನ ಸೋದರನಾದ ಖಂಡೇರಾವ ಮತ್ತು ಅಜ್ಜನ ಸೋದರನಾದ ವೆಂಕಟರಾವನು ಶ್ರೀಮಂತನ ಸನ್ನಿಧಿಯಲ್ಲಿ ಉಳಿದುಕೊಂಡರು. ಅನಂತರ ಸದರಿ

ವೆಂಕಟರಾವನನ್ನು ದೇಶಕ್ಕೆ ಕಳಿಸಿ, ಅವನೂ ಸವಣೂರ ಕಾಳಗದಲ್ಲಿ ನಿರತನಾದನು. ಅವನಿಗೆ ದತ್ತಕವಿಲ್ಲ. ಖರ್ಡೆಯ ದಂಡು ಬಂದು ಶ್ರೀಮಂತ ಪ್ರಧಾನಿ ಸವಾಯಿ ಮಾಧವರಾವ ಸಾಹೇಬನು ಸೈನ್ಯ ಬಂದಿ ಮಾಡಿ ನಿಜಾಮ ಪ್ರದೇಶಕ್ಕೆ ಹೊರಟನು. ಆ ಕಾಲದಲ್ಲಿ ಮಾಧವರಾವ ಸಾಹೇಬರ ಕೃಪೆ ಲಭಿಸಿ, ಆ ಯುದ್ಧದಲ್ಲಿ ನಮ್ಮ ಸರದಾರ ರಾಜರು ಪರಾಕ್ರಮ ಮತ್ತು ಶೌರ್ಯವನ್ನು ಮೆರೆದರು. ಹೀಗಾಗಿ ಶ್ರೀಮಂತನು ಸಂತಸಗೊಂಡು ಉಡುಗೊರೆಯನ್ನು ನೀಡಿದನು. ಖರ್ಡೆಯ ಸೈನ್ಯವನ್ನು ಸೋಲಿಸಿ ಶ್ರೀಮಂತನ ಸೈನ್ಯ ಸಮಾಗಮಗೊಳಿಸಲು ಅಜ್ಜ ಯಶವಂತರಾವ ಖಂಡೇರಾವ ಪುಣೆಗೆ ಬಂದರು. ಆಗ ಶ್ರೀಮಂತನ ಮನದಿಚ್ಛೆಯಂತೆ ತಾಲೂಕಿನ ಸಂಸ್ಥಾನಗಳನ್ನು ನೀಡಿ ಗುತ್ತಿಯ ಬಗೆಗೆ ತಿಳುವಳಿಕೆ ನೀಡಬೇಕೆಂಬ ಮಾತು ಕೇಳಿಬಂತು. ಆಗ ಇಬ್ಬರು ಅಜ್ಜಂದಿರ ಹೇಳಿಕೆಯೇನೆಂದರೆ, ಗುತ್ತಿ ಸಂಸ್ಥಾನವು ಪ್ರಾಚೀನ ಕಾಲದಿಂದಲೂ ಪಿರ್ತಾರ್ಜಿತವಾಗಿ ಬಂದ ಪ್ರದೇಶ. ಸಂಧಾನಕ್ಕಾಗಿ ಅದನ್ನು ಟೀಪೂವಿಗೆ ನೀಡಲಾಗಿತ್ತು. ಅದು ಮರಳಿ ನಮಗೆ ಸಿಗಬೇಕು. ಅದರ ಬದಲು ಬೇರೆ ಯಾವುದೂ ಬೇಡ–ಎಂದು ಹಠಹಿಡಿದಿದ್ದರಿಂದ ನಾನಾ ಫಡ್ನಿಸ ಮತ್ತು ಹರಿಪಂತತಾತ್ಯಾ ಮುಂತಾದವರು ಅದನ್ನು ಸಂಸ್ಥಾನಕ್ಕೆ ಮರಳಿ ಕೊಡುವದಾಗಿ ಭರವಸೆ ನೀಡಿ ಬಳಿಗೆಯಿರಿಸಿಕೊಂಡರು. ಮುಂದೆ ಕೆಲದಿನಗಳ ಬಳಿಕ ಶ್ರೀಮಂತ ಸವಾಯಿ ಮಾಧವರಾವ ಅವರು ಕಾಲವಶರಾದರು. ಶ್ರೀಮಂತ ಬಾಜೀರಾವ ಸಾಹೇಬರು ಗದ್ದುಗೆಯನ್ನು ಏರಿದರು. ದೊಡ್ಡ ರಾಜ್ಯ ಕಾರಭಾರ ನಡೆಯಿತು. ಈಗ ಅಲ್ಲಿ ನಾನಾ ಫಡ್ನಿಸನಂತಹ ಚತುರ ರಾಜಕಾರಣಿಗಳಿರಲಿಲ್ಲ. ಬಾಜೀರಾವ ಸಾಹೇಬನು ನಾನಾ ಫಡ್ನಿಸನನ್ನು ಮುತ್ತಿಗೆ ಹಾಕಿ, ಮಹಾಡದಲ್ಲಿ ತಡೆಗಟ್ಟಿದನು. ಖಾಸಾ ಅಜ್ಜನಾದ ಯಶವಂತರಾವನು ಶತಪ್ರಯತ್ನ ಮಾಡಿ ಅಲ್ಲಿಂದ ಬಿಡುಗಡೆಗೊಳಿಸಿ, ಶಿಂದೆ ಅಲಿಜಾಬಹಾದರ ಮತ್ತು ನಾನಾನ ನಡುವೆ ಗೆಳೆತನ ಮಾಡಿಸಿ ರಾಜ್ಯ ಕಾರಭಾರ ನಡೆಸಲು ಹೇಳಿದರು. ಈ ವಿಚಾರವಿನಿಮಯದಲ್ಲಿ ಯಶವಂತರಾವನಿದ್ದು. ಅವನು ಸದಾ ಫಡ್ನಿಸ ಮತ್ತು ಶಿಂದೆಯ ಭೇಟಿ ಮಾಡಿಸಿದನು. ಶಿಂದೆಯು ಬಾಜೀರಾವ ಸಾಹೇಬನ ಸೂಚನೆಯ ಮೇರೆಗೆ ಯಶವಂತರಾವನನ್ನು ಬಂಧಿಸಿ ಅಲಿಜಾ ಬಹಾದರನ ಬಳಿಯಲ್ಲಿರಿಸಿದನು. ಅನಂತರ ಶ್ರೀಮಂತ ಬಾಜೀರಾವ ಸಾಹೇಬನು ಪ್ರಧಾನಿ ಮತ್ತು ಶಿಂದೆ ಈ ಎರಡೂ ಕಡೆಯ ಧೋರಣೆಯನ್ನು ಸಂಭಾಳಿಸಿಕೊಂಡು ಇದ್ದಾಗ, ಶಿಂದೆ ಸರಕಾರ ಮತ್ತು ಇಂಗ್ಲಿಷ ಸರಕಾರದೊಂದಿಗೆ ಸಂಬಂಧ ಹದಗೆಟ್ಟು ಅಜಂತಾದ ಘಟ್ಟದ ಮೇಲೆ ಕಾಳಗ ಏರ್ಪಟ್ಟಿತು. ಆಗ ಯಶವಂತರಾವನು ಶಿಂದೆ ಅಲಿಜಾ ಬಹಾದರನಿಗೆ ಬುದ್ಧಿಹೇಳಿ, ಎರಡೂ ಸರಕಾರದೊಂದಿಗೆ ಚರ್ಚೆ ಮಾಡುವದು ಯೋಗ್ಯವೆಂದು ತಿಳಿಸಿ, ಎರಡೂ

ಕಡೆಯವರ ಮನಸ್ಸನ್ನು ಸಂಭಾಳಿಸಿ ಆಂಗ್ಲ ಸರಕಾರದ ಚಿತ್ತದಂತೆ ಸಂಧಾನ ಮಾಡಿಸಿದನು. ಆ ಸಂಧಾನ ಕರಾರು ಆದಾಗ ಯಶವಂತರಾವನ ಜೊತೆಗೆ ಆಂಗ್ಲಸರಕಾರದ ಪರವಾಗಿ ವಸಲಿ ಸಾಹೇಬ ಬಹಾದೂರ ಇದ್ದನು. ಅವನು ಅಜ್ಜ ಯಶವಂತರಾವನಿಗೆ ಪ್ರತಿತಿಂಗಳು ಒಂದು ಸಾವಿರ ರೂಪಾಯಿಯ ಜರನೆಲಿ ಪೆನ್ಶನ್ ಮಾಡಿಕೊಟ್ಟನು. ಯಶವಂತರಾವನು ಯೋಗ್ಯ ಸಲಹೆಗಾರನಾಗಿರುವದನ್ನು ಗಮನಿಸಿದ ಆಂಗ್ಲರು ಪೇಶ್ವೆಯವರ ಜೊತೆಗೆ ಸಮಾಲೋಚನೆ ಮಾಡಲು ಶಿಂದೆಯ ಮೂಲಕ ಯಶವಂತರಾವನನ್ನು ಕರೆಯಿಸಿಕೊಂಡರು. ಈ ವೈಷಮ್ಯದಿಂದ ಬಾಜೀರಾವ ಸಾಹೇಬರು ತಾನು ಉಡುಗೊರೆಯಾಗಿ ನೀಡಿದ ಬೆಳವತಿ, ರೋಳಿ, ಕಂಕಣವಾಡಿ ವಗೈರೆಯನ್ನು ಜಪ್ತ ಮಾಡಿದನು. ಅಂದಿನಿಂದ ಯಶವಂತರಾವನು ಆಂಗ್ಲ ಸರಕಾರದೊಂದಿಗೆ ಗೆಳೆತನವನ್ನು ಉಳಿಸಿಕೊಂಡು, ಪೇಶ್ವೆಯನ್ನು ಗೆಲ್ಲಲು ಯೋಗ್ಯ ಸಲಹೆಯನ್ನು ನೀಡಿ, ಸಿದ್ಧಿಯನ್ನು ಪ್ರಾಪ್ತ ಮಾಡಿಕೊಂಡನು. ಪೇಶ್ವೆ ರಾಜ್ಯ ಆಂಗ್ಲರ ಕೈವಶವಾಯಿತು. ಈ ಯೋಗ್ಯತೆಗೆ ಅನುಗುಣವಾಗಿ ಯಶವಂತರಾವನು ಸರಕಾರದ ಕಲ್ಯಾಣ ಮಾಡುವವನು ಎಂದುಕೊಂಡು ವಂಶಪರಂಪರೆಯಾಗಿ ಭೋಗಿಸಲು ೨೦,೦೦೦ ರೂಪಾಯಿಯ ಇನಾಮ ಗ್ರಾಮವನ್ನು ನೀಡಿದರು. ೫೦,೦೦೦ ರೂಪಾಯಿಯ ಇನಾಮು ಕೊಡುವ ಮಾತಾಗಿತ್ತು. ಆದರೆ ೨೫೦೦೦ ಮತ್ತು ನಿವೃತ್ತಿಯ ಹಣವೆಂದು ನೀಡಿದ ೧೨,೦೦೦ ರೂಪಾಯಿ, ಹೀಗೆ ಒಟ್ಟೂ ೩೭,೦೦೦ ರೂಪಾಯಿಯಾಯಿತು. ಉಳಿದ ೧೩,೦೦೦ ರೂಪಾಯಿ ನೀಡುವ ಆಶ್ವಾಸನೆಯನ್ನು ನೀಡಿದರು. ಸರಕಾರದ ಕಾರ್ಯಕಲಾಪದಲ್ಲಿ ಹೀಗೆ ಯಶವಂತರಾವನು ಭಾಗವಹಿಸುತ್ತಿದ್ದನು. ಯಶವಂತರಾವನು ಪೇಶ್ವೆ, ಶಿಂದೆ ಅಲಿಜಾಬಹಾದರ ಮತ್ತು ಆಂಗ್ಲ ಸರಕಾರಕ್ಕಾಗಿ ಸುಮಾರು ನಾಲ್ವತ್ತು ವರ್ಷಗಳ ಕಾಲ ದುಡಿದನು. ಸನ್ ೧೮೨೧ ಇಸವಿ ಶಕೆ ೧೭೪೩ ಚೈತ್ರ ಶುದ್ಧ ೧೫ ಹುಣ್ಣಿಮೆಯಂದು ಪುಣೆಯಲ್ಲಿ ಮರಣ ಹೊಂದಿದನು. ಅಜ್ಜನ ತಮ್ಮ ಖಂಡೇರಾವನಿಗೆ ಶಿವರಾವ ಮತ್ತು ಭುಜಂಗರಾವ ಎಂಬಿಬ್ಬರು ಮಕ್ಕಳಿದ್ದರು. ಇವರು ನಮ್ಮ ದೊಡ್ಡಪ್ಪ. ಅಜ್ಜ ಯಶವಂತರಾವನಿಗೆ ನನ್ನ ತಂದೆ ಮಾಲೋಜಿರಾವ ಮತ್ತು ನರಸಿಂಗರಾವ್ ಎಂಬ ಚಿಕ್ಕಪ್ಪ–ಹೀಗೆ ಇಬ್ಬರು ಮಕ್ಕಳು.

೯) ಅಜ್ಜನ ದೊಡ್ಡಪ್ಪನಿಗೆ ಶಿವರಾವ ಮತ್ತು ಭುಜಂಗರಾವ ಎಂಬ ಇಬ್ಬರು ಮಕ್ಕಳೆಂದು ಎಂಟನೇ ಕಾಲಮಿನಲ್ಲಿ ಹೇಳಲಾಗಿದೆ. ಇವರು ನಮ್ಮ ದೊಡ್ಡಪ್ಪ. ಅವರಲ್ಲಿ ಶಿವರಾಯನನ್ನು ಸೊಂಡೂರ ಸಂಸ್ಥಾನದ ದೊಡ್ಡಪ್ಪನಾದ ಶಿದೋಜಿರಾವ ಮಡಿದ ಬಳಿಕ ಅಜ್ಜ ಕಳಿಸಿದ್ದ. ಅವನು ಆ ಸಂಸ್ಥಾನದ ಗದ್ದುಗೆ ಏರಿ, ಮೂವತ್ತು

ವರ್ಷ ಆಡಳಿತ ಮಾಡಿ ಸನ್ ೧೨೪೯ ಫಸಲಿ ವೈಶಾಖ ಶುದ್ಧ ೧ ಪ್ರತಿಪದೆ ಶನಿವಾರದಂದು ಮಡಿದನು. ಅವನ ಸೋದರನಾದ ಭುಜಂಗರಾವನು ಅವನ ಸನ್ನಿಧಿಯಲ್ಲಿದ್ದನು. ಅವನು ಶಿವರಾಯನಿಗಿಂತ ಮೊದಲೇ ಸನ್ ೧೨೪೧ ಪಸಲಿ ವರ್ಷ ವದ್ಯ ತೃತೀಯ ಶನಿವಾರದಂದು ಸಾವನ್ನಪ್ಪಿದನು. ಶಿವರಾಯನಿಗೆ ಪುತ್ರಸಂತಾನವಿರಲಿಲ್ಲ. ಭುಜಂಗರಾವನಿಗೆ ವೆಂಕಟರಾವನೆಂಬ ಪುತ್ರನಿದ್ದನು. ಅವನು ನಮ್ಮ ದೊಡ್ಡಪ್ಪನ ಮಗ.

೧೦) ವೆಂಕಟರಾವನು ಶಿವರಾವ ಕೈಲಾಸವಾಸಿಯಾದ ಬಳಿಕ ಸೊಂಡೂರ ಸಂಸ್ಥಾನದ ಗದ್ದುಗೆಯ ಮೇಲೆ ಕೂತು, ಈಗ ಸಧ್ಯ ಆಡಳಿತ ನಡೆಸುತ್ತಿದ್ದಾನೆ.

೧೧) ಸ್ವಂತ ಅಜ್ಜ ಯಶವಂತರಾವ ಅವರ ಮಗನೇ ನಮ್ಮ ತೀರ್ಥರೂಪರಾದ ಮಾಲೋಜಿರಾವ ಮತ್ತು ಚಿಕ್ಕಪ್ಪ ನರಸಿಂಗರಾವ ಎಂದು ಎಂಟನೇ ಕಲಮಿನಲ್ಲಿ ಹೇಳಲಾಗಿದೆ. ತೀರ್ಥರೂಪ ಮಾಲೋಜಿರಾವ ಅವರು ಐದನೇ ಕಲಮಿನಲ್ಲಿಯ ಮುಖ್ಯ ಕರವೀರ ಮತ್ತು ಸಾತಾರಾ ಮಹಾರಾಜರ ಕಡೆಯವರು. ಸಂಪಾದನ ಮೌಜೇ ದತ್ತವಾಡ ಇನಾಮಗಾಂವ ಮತ್ತು ಎಂಟನೇ ಕಲಮಿನಲ್ಲಿ ಹೇಳಿದ ಜರನೆಲಿ ಪೆನ್ಶನ್ ೧೨೦೦೦ ಮತ್ತು ೨೫೦೦೦ ರೂಪಾಯಿಯ ಇನಾಮಿನ ವಹಿವಾಟು ಮಾಡಿ ತೀರ್ಥರೂಪರು ಸತ್ತ ಬಳಿಕ ೨೩ ವರ್ಷಗಳ ಕಾಲ ಆಡಳಿತ ಮಾಡಿ ಶಕೆ ೧೭೬೫ ಸನ್ ೧೨೫೪ ಫಸಲಿ ಫಾಲ್ಗುಣ ಶುದ್ಧ ಪಂಚಮಿಯಂದು ಕೈಲಾಸವಾಸಿಗಳಾದರು. ಈ ವ್ಯಕ್ತಿಯು ಹೆಸರುವಾಸಿಯಾಗಿದ್ದು, ಈ ಪ್ರಾಂತದ ಗವರ್ನರ್ ಸಾಹೇಬರು ಸರಕಾರದ ಭೇಟಿಗೆ ಬಂದಾಗ ಇವನಿಂದಲೂ ಸಲಹೆ ಪಡೆದು, ಅವರವರ ಹುದ್ದೆಗೆ ತಕ್ಕಂತೆ ಸರಕಾರದ ಸಂದರ್ಶನ ಪಡೆಯುವ ಪದ್ಧತಿಯನ್ನು ಆಂಗ್ಲಸರಕಾರವು ಆರಂಭಿಸಿತ್ತು. ಅವನ ಮಕ್ಕಳು ಸಾವು ಹಿರಿಯ ನಾರಾಯಣರಾವ ಮತ್ತು ಸ್ವಂತ ಬಂಧು ಯಶವಂತರಾವ ಮತ್ತು ಸವಿತಿ ಬಂಧುವಾದ ಖಂಡೇರಾವ ಹೀಗೆ ಮೂವರು.


ಚಿಕ್ಕಪ್ಪನಾದ ನರಸಿಂಗರಾವನ ಬಗ್ಗೆ ಎಂಟನೇ ಕಲಮಿನಲ್ಲಿ ಹೇಳಲಾಗಿದೆ. ಅವನಿಗೆ ನಮ್ಮ ತೀರ್ಥರೂಪರು ಆಂಗ್ಲರಿಂದ ಸಂಪಾದಿಸಿದ ಇನಾಮಿನಲ್ಲಿ ಮೂರು ಊರು ನೀಡಲಾಯಿತು. ಅದನ್ನು ಉಪಭೋಗ ಮಾಡಿಕೊಂಡು ಇದ್ದರು. ಅವರು ೪ನೇ ಸಪ್ಟೆಂಬರ ಸನ್ ೧೮೬೭ ರಂದು ಜೇಜೂರಿಯ ಶ್ರೀದೇವರ ಭೇಟಿ ಹೋಗಿ ಪುಣೆಯಲ್ಲಿ ಮುಕ್ಕಾಂ ಮಾಡಿದಾಗ ಮರಣವನ್ನಪ್ಪಿದರು. ಅವನ ಮಗನಾದ ವೆಂಕಟರಾವನೇ ನನ್ನ ಚಿಕ್ಕಪ್ಪನ ಮಗ.

೧೨)ಈ ವೆಂಕಟರಾವನಿಗೆ ಬರೋಡೆಕರ ಗಾಯಕವಾಡ ಸೇನಾ ಖಾಸಖೇಲ ಸಮಶೇರ ಬಹಾದೂರನು ತನ್ನ ಮಗಳನ್ನು ಕೊಟ್ಟು ವಿಜೃಂಭಣೆಯಿಂದ ಲಗ್ನ ಮಾಡಿದನು. ೫೦,೦೦೦ ಕಾಣಿಕೆಯನ್ನು ನೀಡಿ ತನ್ನ ಸನ್ನಿಧಿಯಲ್ಲಿರಿಸಿಕೊಂಡನು. ಅವನು ಸಧ್ಯ ಬರೋಡೆಯಲ್ಲಿ ಗೌರವದಿಂದ ಜೀವನ ಸಾಗಿಸುತ್ತಿದ್ದಾನೆ.

೧೩)ನಾನು ನಾರಾಯಣರಾವ ೧೦ನೇ ಕಲಮಿನಲ್ಲಿ ಹೇಳಿದಂತೆ ಮೂವರೂ ಬಂಧುಗಳು ಕರವೀರ ಮತ್ತು ಸಾತಾರಾ ಮಹಾರಾಜರ ಉತ್ಕರ್ಷದ ಕಾಲಕ್ಕೆ ಲಭಿಸಿದ ೫ನೇ ಕಲಮಿನಲ್ಲಿ ಹೇಳಿದಂತೆ ಇನಾಮಗಾವ ದತ್ತವಾಡದಲ್ಲಿ ವಾಸ ಮಾಡಿ, ಆಂಗ್ಲಸರಕಾರ ನೀಡಿದ ಇನಾಮಿನ ಉಪಭೋಗ ಮಾಡುತ್ತ ಸ್ವಂತ ಸೋದರ ಮತ್ತು ಸವತಿ ಬಂಧುಗಳನ್ನು ಸನ್ನಿಧಿಯಲ್ಲಿರಿಸಿಕೊಂಡು, ಆಂಗ್ಲ ಸರದಾರರ ಜೊತೆ ಗೆಳೆತನ ಬೆಳೆಸಿಕೊಂಡು ಇದ್ದಾನೆ.

ಈ ರೀತಿ ಇತಿಹಾಸದಲ್ಲಿಯ ಅಭಿಪ್ರಾಯವನ್ನು ೫ನೇ ಕಲಮಿನಲ್ಲಿ ಹೇಳಲಾಗಿದೆ. ಬಾದಶಾಹನ ಆಜ್ಞೆಯಂತೆ ಕರವೀರ ಸಾತಾರಾ ಮಹಾರಾಜನಿಂದ ಮೂಲಪುರುಷನು ಅಮಿರುಲ್ ಉಮರಾವ ಪದವಿಯನ್ನು ಪಡೆದನು. ಅದೇ ರೀತಿ ಶ್ರೀಮಂತ ಪ್ರಧಾನಿಯು ಗೌರವ ನೀಡಿ ನಮ್ಮ ಪುರುಷನಿಗೆ ಬಡತಿ ನೀಡಿ ಸರಕಾರದ ಕಾರ್ಯದಲ್ಲಿ ತೊಡಗಿಸಿ ಅವರ ಖ್ಯಾತಿಯನ್ನು ಬೆಳೆಸಿದನು. ಅವನು ಕರ್ನಾಟಕದ ಪ್ರಾಂತದಲ್ಲಿ ಗಳಿಸಿದ ಕೀರ್ತಿಯು ಈಗಲೂ ಪ್ರಸಿದ್ಧವಾಗಿದೆ. ಹಾಗೆಯೇ ೮ನೇ ಕಲಮಿನಲ್ಲಿ ಹೇಳಿದ ನನ್ನ ಸ್ವಂತ ಅಜ್ಜನು ಮಹಾನ್ ಪ್ರತಾಪಿಯು ಆಗಿದ್ದು, ಅವರ ಖ್ಯಾತಿಯು ಹಿಂದೂಸ್ಥಾನ ಮತ್ತು ದಕ್ಷಿಣದಲ್ಲೆಲ್ಲ ಪಸರಿಸಿದೆ. ಪೇಶ್ವೆಯವರನ್ನು ಗೆದ್ದಾಗ ಕರ್ನಲ್ ಕುಲೂಸ ಸಾಹೇಬನು ಪುಣೆಯಲ್ಲಿ ತಂಗಿದ್ದ. ಮತ್ತು ಅಲ್‌ಫಿಸ್ಟನ್ ಸಾಹೇಬನೂ ಇದ್ದನು. ಅವನಿಗೆ ನಮ್ಮ ಜಾಣ್ಮೆಯ ಅರಿವಾಗಿ ಅದರ ಬಗೆಗೆ ಇತ್ತೀಚಿನ ಸರದಾರ ಗೌರನರ ಏಜಂಟ್ ಮುಂತಾದವರು ನಮ್ಮ ಮನೆತನದ ಖ್ಯಾತಿಯನ್ನು ತಿಳಿದುಕೊಂಡು ಗೌರವವನ್ನು ತೋರಿಸಿ ಗೆಳೆತನ ಬೆಳೆಸಿದ್ದಾರೆ. ಅದೂ ಅಲ್ಲದೆ ನಮ್ಮ ಇಚ್ಚೆಯನ್ನು ಅರ್ಥ ಮಾಡಿಕೊಂಡ ಶಿಂದೆ ಅಲಿಜಾಬಹಾದರ, ಹೋಳ್ಕರ್, ಭೋಸಲೆ, ಗಾಯಕ್ಕವಾಡ, ಸರ್‌ಲಷ್ಕರ್, ನಿಪಾಣಿಕರ, ಪಟವರ್ಧನ, ರಾಸ್ತೆ ಮುಂತಾದವರಲ್ಲೂ ನಮ್ಮ ಖ್ಯಾತಿ 'ಕಿತಾಬ್' ಹರಡಿ, ಪಿತ್ರಾರ್ಜಿತ್‌ವಾಗಿ ಆ ಹುದ್ದೆಯನ್ನು ಬರೆಯುವ ಪದ್ಧತಿ ಇಂದಿನವರೆಗೂ ಮುಂದುವರೆದಿದೆ.

ಈ ರೀತಿಯಲ್ಲಿ ಘೋರಪಡೆ ಅಮಿರುಲ್ ಉಮರಾವ ಇವರ ಇತಿಹಾಸದ ವರ್ಣನೆಯಿದೆ. ತಾರೀಕ ೨೦ ಮಾಹೇನವಂಬರ ಸನ್ ೧೮೫೧ ಇಸವಿ ಥ ಮೋಹರಂ ಶಕೆ ೧೭೭೩ ವಿರೋಧಿ ಕೃತ ನಾಮ ಸಂವತ್ಸರೆ ಸನ್ ೧೨೬೧ ಫಸಲಿ ಕಾರ್ತಿಕವದ್ಯ ೧೨ ಗುರುವಾರ ಸುರುಸನ್ ಇಸನ್ನೆ ಖಮಸೇನ ಮಯಾತ್ಯೈನ ಮತ್ತು ಆಲಫ.


ಮಹಾಳೋಜಿ
ಸಂತಾಜಿ
ಮಾತೋಜಿ
ಸೇನಾಪತಿ ಕಾಪಶಿಕರ್
ಉಮರಾವ ತಿಳಿದು ಬಂದಿಲ್ಲ
ಶಿವರಾವ
ಬಹಿರಜಿ
ಹಿಂದೂರಾವ ಮಮಲಕತಮದಾರ
ಶಿದೋಜಿ–ಹಿಂದೂರಾವ ಮಮಲಕತಮದಾರ
ಸೇನಾಪತಿ ಜಪ್ಪನ ಮುಲ್ಕ್
ಫತೇಜಂಗ ಸಮಶೇರ ಬಹಾದೂರ
ಲಕ್ಷ್ಮೀಬಾಯಿ
ಖಯ್ಯಾಸಾಹೇಬ
ಮಾನೂಬಾಯಿ
ಸುಬಾನರಾವ
ದೌಲತರಾವ
ಸಬಾನರಾವ
* ನರಸಿಂಗರಾವ
* ವೆಂಕಟರಾವ
ಶಿದೋಜಿರಾವ
ಖಂಡೇರಾವ
ಖಂಡೇರಾವ
ಸದ್ಯಚಿಟಸ್
ಪಾಳೆಗಾರಿಕೆಯಿಲ್ಲ
ನಿಪಾಣಿಕರರ
ಬಳಿಯಲ್ಲಿ
ಮುಳುಗಿದರು.
ಆನಂದರಾವ
ಹೊಳೆಯಲ್ಲಿ
ವಹಿರಜಿರಾವ
ಮಾಲೋಜಿರಾವ
ಅಮಿರುಲ್
ಯಶವಂತರಾವ
ಮಾಲೋಜಿರಾ
ಶಿವರಾವಬಾವಾ
ವೆಂಕಟರಾವ
ಸಂತತಿ ಇಲ್ಲ
ಯಶವಂತರಾವ
ಭುಜಂಗರಾವ
ಶಿವರಾ
ನರಸಿಂಗರಾವ
ದೌಲತರಾವ

ಸದ್ಯಚಿಟಸ್
ಪಾಳೆಗಾರಿಕೆಯಿಲ್ಲ

ಬಳಿಯಲ್ಲಿ ಹೊಳೆಯಲ್ಲಿ
ಮುಳುಗಿದರು.

ಮಾಲೋಜಿರಾವ ನರಸಿಂಗರಾವ ದೌಲತರಾವ

ಭುಜಂಗರಾವ ಸುಬರಾವ ಆನಂದರಾವ

ದೌಲತರಾವ

ನವಸಾಹೇಬ
ಸಯಾಜಿ ಬಡೋಕರರ ಅಳಿಯ

(ಸೊಂಡುರಕರ)

ಮುರಾರರಾವ
ಪೇಶ್ವ ಸೇನಾಪತಿ

ಭುಜಂಗರಾವ
ನಷ್ಟ ಸಂತಾನ

ಲಕ್ಷ್ಮಣರಾವ
ಸಂತಿತಿ ಇಲ್ಲ

ಪಾಲಕ
ಶಿವರಾವ ಬಾವಾ

ಶಿದೋಜಿರಾವ
ಸಂತತಿ ಇಲ್ಲ
ಪಾಲಕ ಶಿವರಾವ

* ಇವರಿಬ್ಬರು ಹೈದರನ ಬಂಧನದಿಂದ ಪಾರಾಗಿ ಬಂದು ಹೋರಾಡುತ್ತಲೇ ಸತ್ತರು. ಇಬ್ಬರಿಗೂ ಸಂತಾನವಿಲ್ಲ.

ಟಿಪ್ಪಣಿ – ಮಾಹಾಳೋಜಿಯ ಮೊದಲಿನ ಅಡ್ಡ ಹೆಸರು ಭೋಸಲೆ ಎಂದಿತ್ತು. ದಿಲ್ಲಿಯ ಬಾದಶಹಾನ ಬಳಿಯಲ್ಲಿ ಸರದಾರನಾಗಿದ್ದ ಬಾದಶಹಾ ಯಾವುದೋ ಕೋಟೆಗೆ ಮುತ್ತಿಗೆ ಹಾಕಿದ. ಫಲಕಾರಿಯಾಗಲಿಲ್ಲ. ಆಗ ಇವನು ಉಡವನ್ನು ಬಳಸಿ ಕೋಟೆಯನ್ನು ಗೆದ್ದುಕೊಟ್ಟ. ಅಂದಿನಿಂದ ಘೋರಪಡೆ ಎಂಬ ಹೆಸರು ಬಂತು.

ಎಜಂಟ ದಪ್ತರಿನ ರುಮಾಲ ನಂಬರ ೨೫ರಲ್ಲಿ ಘೋರಪಡೆಯ ವಂಶಾವಳಿ ಹೇಳಲಾಗಿದ್ದು ಅದರ ಅಡಿಯಲ್ಲಿ ಕೈಫಿಯತ್ ಸಹಿತ ಟಿಪ್ಪಣಿ ನೀಡಲಾಗಿದೆ. ಅದರಲ್ಲಿಯ ಒಂದು ಪರಿಚ್ಛೇದ–

೧) ವಿಜಾಪುರದ ಬಾದಶಹಾನು ಸಂಭಾಜಿರಾಜೇ ಮತ್ತು ದಿಲ್ಲಿ ಬಾದಶಹಾನು ರಾಮರಾಜೇಯವರನ್ನು ಬಂಧಿಸಿದ. ಆಗ ಸಂತಾಜಿ ಘೋರಪಡೆಯು ಬಂಡೆದ್ದ. ಬಹಿರಜಿ ಘೋರಪಡೆಯು ವಿಜಾಪುರದಲ್ಲಿ ಚಾಣಾಕ್ಯತನದಿಂದ ಮಾಲೋಜಿ ಘೋರಪಡೆಯನ್ನು ರಾಮರಾಜೆಯ ಶಂಪ್ಸಿಯಲ್ಲಿ ಮಲಗಿಸಿ ರಾಜೆಯನ್ನು ಕರೆದುಕೊಂಡು ಕರ್ನಾಟಕದ ಚಂದಿಚಂದಾವರವನ್ನು ಪ್ರವೇಶಿಸಿದನು. ಮುಂದೆ ಶಾಹರಾಜನಿಗೆ ದಿಲ್ಲಿ ಬಾದಶಾಹನು ನಾಲ್ಕಾಂಶ ಪಾಲು ಮತ್ತು ಸರ್‌ದೇಶಮುಖಿ ವಚನ ನೀಡಿ ಕಳಿಸಿದ್ದರಿಂದ ಸ್ಥಳಕ್ಕೆ ಬಂದು ತಲುಪಿದನು. ಈ ವಾರ್ತೆ ಕೇಳಿ ಚಂದಿಯಿಂದ ರಾಮರಾಜೇ ಮತ್ತು ಬಹಿರಜೀ ಘೋರಪಡೆ ಬಂದು ತಲುಪಿದರು. ಮಾಲೋಜಿ ಸಹ ಬಂದನು.

೨) ಉಭಯ ಮಹಾರಾಜರು ಸ್ಥಳಕ್ಕೆ ಬಂದು ತಲುಪಿದಾಗ ಬಹಳ ಸಂತೋಷಪಟ್ಟು, ಮಾಹಲಾಜಿಯ ಮಕ್ಕಳಾದ ಸಂತಾಜಿ. ಬಹಿರಜಿ ಮತ್ತು ಮಾಲೋಜಿಯ ಶ್ರಮವನ್ನು ಗಮನಿಸಿ ಸಂತಾಜಿಗೆ ಐದು ಊರು ಭಾಮ ಮತ್ತು ಕರವೀರ ಹವೇಲಿಯ, ಪರದೇಶಮುಖಿ ವತನ ಮತ್ತು ದತ್ತುಗ್ರಾಮ ಮತ್ತು ಮಲಪ್ರಭೆಯಿಂದ ತುಂಗಭದ್ರೆಯವರೆಗಿನ ಪ್ರದೇಶವನ್ನು ನೀಡಿ ಸೇನಾಪತಿ ಎಂಬ ಕಿತಾಬ್ ನೀಡಿದರು.

ಬಹಿರಜಿಗೆ ಐದು ಗ್ರಾಮ ಇನಾಮ ಕರವೀರ ಅರಮನೆಯ ಸರದೇಶಮುಖಿ ಮತ್ತು ದತ್ತಗ್ರಾಮ ಮತ್ತು ತುಂಗಭದ್ರೆಯಿಂದ ರಾಮೇಶ್ವರವರೆಗಿನ ಪ್ರದೇಶವನ್ನು ನೀಡಿ ಹಿಂದೂರಾವ ಮಮಲಕತಮದಾರ ಕಿತಾಬ ನೀಡಿದರು.

ಮಾಲೋಜಿಗೆ ಐದು ಇನಾಮ ಗ್ರಾಮ. ಅಜರಾ ಮತ್ತು ಬೆಳಗಾವ ಪ್ರಾಂತದ ಸರದೇಶಮುಖಿ ಮತ್ತು ದತ್ತುಗ್ರಾಮ ನೀಡಿ, ಕೃಷ್ಣೆಯಿಂದ ಮಲಪ್ರಭೆಯವರೆಗಿನ ಪ್ರದೇಶ ನೀಡಿ ಅಮಿರುಲ್ ಉಮರಾವ ಕಿತಾಬ್ ನೀಡಿದರು.

ಸದರಿ ಮೂವರಿಗೂ ಪ್ರದೇಶ ನೀಡಿರುವದಾಗಿ ಬರೆಯಲಾಗಿದೆ. ಆದರೆ ದಾಖಲೆಯನ್ನು ಗಮನಿಸಿದಾಗ ಸದರಿ ಪ್ರದೇಶದ ಒಂದು ನಾಲ್ಕಾಂಶ ಭಾಗ ನೀಡಿದ್ದು ಕಂಡುಬರುತ್ತದೆ.

೨

ಘೋರಪಡೆ ಗಜೇಂದ್ರಗಡಕರ್

ಯಾದಿ ಘೋರಪಡೆ ಹಿಂದೂರಾವ ಗಜೇಂದ್ರಗಡಕರ್ ಇವರ ಕೈಫಿಯತ್ ಘೋರಪಡೆಯು ಬಾದಶಾಹನ ವಸತಿಯಲ್ಲಿ ವಜೀರ ಮೂಲಪುರುಷ ಮಾಲೋಜಿರಾವ ಘೋರಪಡೆ ಬಾದಶಹಾನ ಬಳಿಯಲ್ಲಿದ್ದನು. ಅವನ ಪುತ್ರ ಮಹಾಳೋಜಿರಾ ಘೋರಪಡೆ ಸಹ ಬಾದಶಹಾನ ಆಸರೆಯಲ್ಲೇ ಇದ್ದನು. ಅನಂತರ ಅವನ ಪುತ್ರ ಬಹಿರಜಿರಾವ ಘೋರಪಡೆ ಹಿಂದೂರಾವ ಮಮಲಕತಮದಾರ ಸೇನಾಪತಿಯಾಗಿ ಶ್ರೀಮಂತ ಶಿವಾಜಿ ಮಹಾರಾಜ ಛತ್ರಪತಿ ಶರಕರ್ತೆಯ ಹತ್ತಿರ ತುಂಬ ಶ್ರಮ ಮಾಡಿ ಗಜೇಂದ್ರಗಡ ಮತ್ತು ಗುತ್ತಿಯನ್ನು ಪಡೆದನು. ಅವನಿಗೆ ವರ್ಷ ಸುಮಾರು ೨೫೦ ಶ್ರೀ ಸುಬ್ರಹ್ಮಣ್ಯ ಪ್ರಸನ್‌ನಾದ. ಅವನ ಮಗನಾದ ಮುರಾದರಾವ ಹಿಂದೂರಾವ ಮಮಲಕತಮದಾರ ಸೇನಾಪತಿಯು ವಿಜಾಪುರದ ಸೈನ್ಯದ ಜೊತೆಗೆ ಕಾಳಗ ಮಾಡಿ ೨೨ನೇ ವರ್ಷಕ್ಕೆ ತೀರಿಕೊಂಡನು. ಅವನ ವಂಶವಿಲ್ಲ. ಅವನ ಕಿರಿಯ ಬಂಧು ಶಿಧೋಜಿರಾವ ಹಿಂದೂರಾವ ಘೋರಪಡೆ ಮಮಲಕತದಾರ ಸೇನಾಪತಿ ಗುತ್ತಿಕರ. ಅವನ ಕಿರಿಯ ಬಂಧು ದೌಲತರಾವ ಹಿಂದೂರಾವ, ಅವನ ಚಿಕ್ಕ ತಮ್ಮ ಭುಜಂಗರಾವ ಘೋರಪಡೆ ಕಾಳಗದಲ್ಲಿ ಮಡಿದ. ಇವನಿಗೆ ವಂಶವಿಲ್ಲ. ಅವನ ವಯಸ್ಸು ೧೦. ದೌಲತರಾವ ಘೋರಪಡೆ ಹಿಂದೂರಾವ ಇವನ ಮಗ ಹಿರಿಯ ಬಹೀರಜಿರಾವ, ಕಿರಿಯ ಮಗ ಸಂಬಾಜಿರಾವ, ನಾನಾ ಸಾಹೇಬನು ಹಿರಿಯ ಬಹಿರಜಿರಾವ ಸಾಹೇಬನ ಪುತ್ರ. ಸದ್ಯಕ್ಕೆ ರಾಜಶ್ರೀ ಭುಜಂಗರಾವ ಅಪ್ಪಾಸಾಹೇಬ ಘೋರಪಡೆ ಹಿಂದೂರಾವ ಗಜೇಂದ್ರಗಡದಲ್ಲಿದ್ದಾನೆ. ಮೂಲ ಪುರುಷನಾದ ಮಾಲೋಜಿರಾವ ಮತ್ತು ಮಾಹಳೋಜಿರಾವ ಇಬ್ಬರೂ ಬಾದಶಾಹನ ಸೇವೆಯಲ್ಲಿದ್ದರು. ಆಗ ಅಪಾರ ಸಂಪತ್ತು ಇತ್ತು. ಆ ಕಾಲದ ಕಾಗದಪತ್ರಗಳೆಲ್ಲ ಪ್ರತಿ ಕೋಲಾಹಲದಲ್ಲಿ ನಾಶವಾದವು. ದಾಖಲೆ ಉಳಿಯಲಿಲ್ಲ. ಬಹಿರಜಿರಾವ ಇವನು ಮೂಲ ಪುರುಷನ ಮೊಮ್ಮಗ. ಅವನು ಛತ್ರಪತಿ ಸರಕಾರದಲ್ಲಿ ಸೇವೆ ಮಾಡಿ, ನಾಲ್ವತ್ತು ಲಕ್ಷದ ಗಜೇಂದ್ರಗಡ, ಗುತ್ತಿ ಮುಂತಾದ ತಾಲೂಕುಗಳನ್ನು ಅನುಭವಿಸುತ್ತ ಬಂದರು. ಅದಕ್ಕೆ ೨೫೦ ವರ್ಷಗಳಾದವು. ಮುಂದೆ ಗುತ್ತಿಯಲ್ಲಿ ಅವನ ಮತ್ತು ಹೈದರನ ವೈಮನಸ್ಸು ಬೆಳೆದು ಮುರಾದರಾಯನ ಬಳಿಯ ಎಲ್ಲ ತಾಲೂಕುಗಳನ್ನು ಟೀಪೂ ಹಸ್ತಗತ ಮಾಡಿಕೊಂಡ. ಇದರ ಹೊರತು ಮುರಾದರಾಯನ ಬಂಧು ದೌಲತರಾವನ ಬಳಿಯಲ್ಲಿದ್ದ ಗಜೇಂದ್ರಗಡ ಮತ್ತು ಎಷ್ಟೋ ತಾಲೂಕುಗಳಲ್ಲಿ ಟೀಪೂ ಹತ್ತು ವರ್ಷ ಆಡಳಿತ ನಡೆಸಿದ. ಪೇಶ್ವೆಯವರ ಬಲದಿಂದ ದೌಲತರಾವ ಸಾಹೇಬನು ಅದನ್ನು ಮರಳಿ ಪಡೆದು., ತಮ್ಮ ತಾಲೂಕನ್ನು

ತಾವೇ ಅನುಭವಿಸುತ್ತಲಿದ್ದ ಅದರ ತಪಶೀಲು ವಗೈರೆ-**** ಒಟ್ಟು ಅಹವಾಲು ಹೀಗಿದೆ- ಸದರಿ ಗಜೇಂದ್ರಗಡ ಕೋಟೆಯ ಅಡಿಯಲ್ಲಿ ಇನಾಮ ಬೇರಿಜಿನ ಪ್ರಕಾರ ಬರೆದಂತೆ ಬಹಳ ವರ್ಷ ನಡೆಯಿತು. ಅಷ್ಟರಲ್ಲಿ ಹರಿಪಂತ ಫಡಕೆಯು ಆದಾವತಿಯ ನವಾಬ ನಿಜಾಮ ಅಲ್ಲಿಖಿರ ಬಹಾದ್ದೂರನು, ಟೀಪೂವಿನ ಮತ್ತು ಪೇಶ್ವೆ ಪ್ರಧಾನಿಯ ಜೊತೆ ಸಂಧಾನ ಮಾಡಿಕೊಂಡು, ನಮ್ಮ ಸ್ವತಃ ಖರ್ಚಿಗಾಗಿ ತಾಲೂಕು ಮಾಮುಲ ಜಹಗೀರು ಎಂದು ಭಾವಿಸಿ, ಸದರಿ ಸ್ವಂತಕ್ಕಾಗಿ ಬಳಸಿಕೊಂಡು ಇದರ ಬದಲಿಗೆ ಪೇಶ್ವೆಯ ಮತ್ತಷ್ಟು ತಾಲೂಕುಗಳನ್ನು ನವಾಬನಿಗೆ ನೀಡಿ, ನಮ್ಮ ತಾಲೂಕನ್ನು ನಮ್ಮ ಬಳಿಯೇ ಉಳಿಸಿದರು. ಹಾಲಿ ಚಾಲತಿಯಲ್ಲಿರುವ ಬೇರಿಜು ಸುಮಾರು ಹೀಗಿದೆ-ಭುಜಂಗರಾವ ಅಪ್ಪಾಸಾಹೇಬ ಮತ್ತು ಬಂಧುಬಳದವರಿಗೆಲ್ಲ ಸೇರಿ ೧೩೦೦೦ ರೂಪಾಯಿ. ಗಜೇಂದ್ರಗಡದಲ್ಲಿ ಸದ್ಯ ವಹಿವಾಟು ಶುರುವಿದೆ. ಮಾಮುಲು ಸಂಪತ್ತಿನ ದಾಖಲೆಯ ಪೇಶ್ವೆಯ ನಾನಾ ಪಡ್ನಿಸರ ದಪ್ತರಿನಲ್ಲಿದೆ. ಸದ್ಯ ಗಜೇಂದ್ರಗಡ ತಾಲೂಕಿನಲ್ಲಿ ಬ್ರಾಹ್ಮಣರಿಗೆ ಧರ್ಮಾದಾಯಿ ಮಾಡಿದ ಸನದು ಮತ್ತು ಶೇಟೆ ಮಹಾ ಜನರಿಗೆ ಪೇಟೆಯಲ್ಲಿ ವಸಾಹತು ಮಾಡಲು ದೌಲತರಾವ ಘೋರಪಡೆಯವರು ಸನದು ಹೊರಡಿಸಿದರು. ಅದು ಸುಮಾರು ನೂರು ವರುಷದ ಸನದು ಹಾಜರಿದೆ. ಪೂರ್ವದ ಕಾಗದ ಪತ್ರ ಟೀಪೂವಿನ ಹಲ್ಲೆಯ ಕಾಲಕ್ಕೆ ನಾಶವಾದವು. ಪರಂಪರೆಯಂತೆ ನಡೆದ ಮಜಕೂರು ಹೀಗಿದೆ. ಘೋರಪಡೆಯು ಬಾದಶಹಾನ ಸರದಾರನಾಗಿ, ಅಂದಿನಿಂದ ದೌಲತದಾರ, ಮುಂದೆ ಛತ್ರಪತಿ ಸರಕಾರದ ಕೈಗೆ ರಾಜ್ಯ ಬಂದಾಗ, ಅವರ ಬಳಿಯಲ್ಲಿ ಸೇವೆ ಸಲ್ಲಿಸಿದರು. ಅನಂತರ ಪೇಶ್ವೆಯವರ ಕೃಪೆ ಲಭಿಸಿತು. ಅವನ ಮೇಲೆ ಕಂಪನಿ ಸರಕಾರದ ದಯೆ ಲಭಿಸಿ ಪರಾಮರ್ಶೆ ಮಾಡುತ್ತಿದೆ. ತಾರೀಖ ಫೆ. ೨೧ ಮಾಹೇ ಜಮಾದಿಲಾವಲ ಉರ್ಫ್ ಭಾದ್ರಪದ ವದ್ಯ ೮ ಮನ್ಮಥ ಸಂವತ್ಸರ ಶಕೆ ೧೭೫೧ ಸನ್ ೧೮೩೫ ಇಸವಿ.

(ಬ)

ಯಾದಿ ಘೋರಪಡೆ ಹಿಂದೂರಾವ ಗಜೇಂದ್ರಗಡಕರ ಇವರ ಕೈಫಿಯತ್ ತಪಶೀಲು ಸುರೂಸನ್ ಸಲಾಸೀನ್ ಮಯಾತೈನ ಮತ್ತು ಅಲಫ್.

ಹಿಂದೆ ದಕ್ಷಿಣದಲ್ಲಿ ಮೂವರು ಬಾದಶಹಾಗಳಿದ್ದರು. ನಿಜಾಮಶಹಾ, ಆದಿಲಶಹಾ ಮತ್ತು ಕುತುಬ್‌ಶಹಾ. ಇವರಲ್ಲಿ ನಿಜಾಮಶಹಾನ ಬಾದಶಹಾತನ ಮುಳುಗಿತು. ಘೋರಪಡೆ ಎರಡು ಪೀಳಿಗೆಯ ವಜೀರ. ವಿಜಾಪುರದಲ್ಲಿ ಮೂರು ಪೀಳಿಗೆಯವರೆಗೆ ಆದಿಲಶಹಾನ ಆಡಳಿತ ನಡೆಯಿತು. ಘೋರಪಡೆಯ ಪೀಳಿಗೆಯು ಇಬ್ಬರು ಬಾದಶಹಾರ ಕೈಕೆಳಗೆ ಕಳೆದ ಬಳಿಕ ಕಿರಿಯ ಆದಿಲಶಹಾ ಬಾದಶಾಹನನ್ನು ಲಾಲಖಾನ ಪಠಾಣನು ಬಂಧಿಸಿ, ಆ ಹುಡುಗನ ಹೆಸರಿನಲ್ಲಿ ತಾನೇ ಪ್ರತಿನಿಧಿಯಾಗಿ ಸೈನ್ಯ ಸಮೇತ ದಂಡೆತ್ತಿ

ಹೋಗಿ ಮರಾಠಾ ಸರದಾರರನ್ನು ಮುಳುಗಿಸಬೇಕೆಂಬ ಇರಾದೆಯನ್ನು ಹೊಂದಿದ. ಆ ಸಮಯದಲ್ಲಿ ಶಿವಾಜಿ ಮಹಾರಾಜರ ತಂದೆ, ಇಬ್ರಾಹಿಮ ಆದಿಲಶಹಾ ಬಾದಶಹಾನ ಕಾಲದಲ್ಲಿ ಮಹಾರಾಜರ ತಂದೆ ನಿಜಾಮಶಾಹಿಯಿಂದ ಭಾಗಾನಗರಕ್ಕೆ ಬಂದರು. ಶಿವಾಜಿ ಮಹಾರಾಜರು ವಜೀರ ಘೋರಪಡೆಗೆ ಭಾಗನಗರದ ಮುಕ್ಕಾಮಿನಲ್ಲಿ ಕುತುಬಶಹಾ ಬಾದಶಹಾನ ಒಡ್ಡೋಲಗಕ್ಕೆ ಆಗಮಿಸಬೇಕೆಂದು ಫರ್ಮಾನನ್ನು ಕಳುಹಿಸಿದನು. ಗದ್ದುಗೆ ಮತ್ತು ಛತ್ರ ವಿಜಾಪುರ ಕೋಟ ಪಠಾಣರು ಹಸ್ತಗತ ಮಾಡಿಕೊಂಡಿದ್ದಾರೆ. ಪಠಾಣ ಬಾದಶಹಾನಾಗಿರುವದು ಯೋಗ್ಯವಲ್ಲ. ದಕ್ಷಿಣ ಕುಲದವರ ಮನೆ-ಮಾರು ಮುಳುಗಬಹುದು. ಆದ್ದರಿಂದ ನೀವು ಕುತುಬಶಹಾನ ಆಶ್ರಯಕ್ಕೆ ಬಂದರೆ, ನಿಮಗೆ ಎರಡು ಪಟ್ಟು ಸಂಪತ್ತು ಸಿಗಲಿದೆ. ಪಠಾಣರಿಗೆ ಶಾಮೀಲಾಗದೆ ಇತ್ತ ದಯಮಾಡಿಸಿ ಎಂದು ಬರೆದು ತಿಳಿಸಿದನು. ಮಾಲೋಜಿ ಘೋರಪಡೆಯ ಅಜ್ಜ ಮಾಲೋಜಿ. ನಮ್ಮ ಮುರಾದರಾವ ಅವರ ಮುತ್ತಜ್ಜ ಬಹಿರಜಿ-ಈ ಇಬ್ಬರು ಬಂಧುಗಳು ಹಾಗೂ ಮತ್ತು ಒಬ್ಬ ಬಂಧು ದತವಾಡಕರ, ಕಾಪಶಿಕರ-ಒಂದೇ ಗೋತ್ರದ ಪುರುಷ ಮನೆತನವು ಬಾದಶಾಹನ ಆಶ್ರಯದಲ್ಲಿ ಎರಡು ಪೀಳಿಗೆಯವರೆಗೆ ವಜೀರತನವನ್ನು ಈ ಮೂರು ವರ್ಗದ ಅಜ್ಜ ಅನುಭವಿಸುತ್ತ ಬಂದನು. ಮುಂದೆ ಕುತುಬಶಾಹನ ಆಜ್ಞೆಯಂತೆ, ಶಿವಾಜಿ ಮಹಾರಾಜರು ಬರೆದಂತೆ ಲಾಲಖಾನ ಪಠಾಣರ ಸಹವಾಸವನ್ನು ತೊರೆದು ಸದರಿ ಮಾಲೋಜಿ ಘೋರಪಡೆ ತ್ರಿವರ್ಗ ಬಂಧು ಸಹಿತ ಕೂಚು ಮಾಡಿ ಭಾಗ್ಯ ನಗರಕ್ಕೆ ತೆರಳಿ. ರಾಜೇಯ ಅಭಿಲಾಷೆಯಂತೆ ಕುತುಬಶಾಹನನ್ನು ಭೇಟಿಯಾಗಿ ಹಂತಹಂತವಾಗಿ ವಿಜಾಪುರವನ್ನು ಆಕ್ರಮಿಸಿ ಪಠಾಣರ ಪಾರಿಪತ್ಯ ಮಾಡಿದರು. ತ್ರಿವರ್ಗ ಘೋರಪಡೆ ವಜೀರರು ಅಂದೂ ಹುದ್ದೆಯ ಗೌರವವನ್ನು ಉಳಿಸಿದರು. ಹೀಗಾಗಿ ಮಾಲೋಜಿ ಘೋರಪಡೆಗೆ ರಾಜೇ ಎಂಬ ಕಿತಾಬ್ ಬಹಿರಜಿ ಘೋರಪಡೆಗೆ ಹಿಂದೂರಾವ ಎಂಬ ಕಿತಾಬ ಲಭಿಸಿತು. ಬಾದಶಾಹನ ಕಾಲದಲ್ಲೂ ಸಾಕಷ್ಟು ಸಂಪತ್ತು ಲಭಿಸಿತು. ಮುಂದೆ ಬಾದಶಹಾ ಮತ್ತು ಮಹಾರಾಜರ ನಡುವೆ ಯಾವುದೋ ಕಾರಣದಿಂದ ವೈರತ್ವ ತಲೆದೋರಿ ಬಾದಶಹಾನು ಮಹಾರಾಜನನ್ನು ವಿಜಾಪುರದಲ್ಲಿ ಸೆರೆ ಹಿಡಿದನು. ಕರವೀರ ಪ್ರಾಂತ, ಪನ್ಹಾಳಗಡ ಮುಂತಾದ ರಾಜಧಾನಿ ಕೋಟೆಗಳಲ್ಲಿ ಬಾದಶಹಾನು ತಳವೂರಲಾರಂಭಿಸಿದ! ಆ ಸಮಯದಲ್ಲಿ ನಾಲ್ವರು ಘೋರಪಡೆ ಬಂಧುಗಳು ಒಗ್ಗಟ್ಟಾಗಿ ಜಾತಿಯ ಅಭಿಮಾನದಿಂದ ಸೈನ್ಯವನ್ನು ಸಂಗ್ರಹಿಸಲು ಪ್ರತಿಯೊಂದು ಪ್ರಾಂತದಲ್ಲಿ ಸುತ್ತಾಡುತ್ತಿದ್ದರು. ಅಲ್ಲಿಂದ ಕೂಚ್ ಮಾಡುವಷ್ಟು ಸೈನ್ಯ, ತೋಪುಗಳು ಸಂತಾಜಿ ಘೋರಪಡೆ ಹಾಗೂ ಅವರ ಇಬ್ಬರು ಮೂವರು ಬಂಧುಗಳಲ್ಲಿತ್ತು. ಅದೇ ಕಾಲಕ್ಕೆ ಹಿರಿಯ ಸಂತಾಜಿ ಕಾಪಶಿಕರ ವಿಜಾಪುರ ಸಮೀಪ ಬಂದು ತಲುಪಿದರು. ಇಬ್ಬರು ಘೋರಪಡೆ ಬಂಧುಗಳು ಹೆಂಗಸರ ವೇಷ ಧರಿಸಿ, ತಲೆಯ ಮೇಲೆ ನೀರಿನ ಕೊಡ ಹೊತ್ತು ಸೆರೆಮನೆಗೆ

ಬಂದರು. ರಾಜನು ಮಂಚದ ಮೇಲೆ ಮಲಗಿದ್ದ. ಆಗ ಹೆಂಗಸಿನ ವೇಷ ಮಹಾರಾಜರಿಗೆ ತೊಡಿಸಿ, ಒಬ್ಬ ಘೋರಪಡೆ ರಾಜನ ಮಂಚದ ಮೇಲೆ ರಾಜನಂತೆ ಮುಸುಕು ಹಾಕಿ ಮಲಗಿದನು. ಮತ್ತೊಬ್ಬಾತ ಮತ್ತು ರಾಜ ಇಬ್ಬರೂ ಮಹಿಳೆಯ ವೇಷದಲ್ಲಿ ಸೆರೆಮನೆಯಿಂದ ಹೊರಬಂದು ಸಂತಾಜಿಯ ಸೈನ್ಯವನ್ನು ಕೂಡಿಕೊಂಡರು. ಮಂಚದ ಮೇಲೆ ಮಲಗಿದ ಘೋರಪಡೆ ಆರೋಗ್ಯ ಸರಿಯಿಲ್ಲವೆಂದು ಊಟವನ್ನು ಮಾಡಲಿಲ್ಲ. ಈ ವಿಷಯ ಹುಜೂರರ ಕಿವಿಗೆ ಬಿತ್ತು. ಬಳಿಕ ವಿಚಾರಣೆ ನಡೆಯಿತು. ಮುಸುಕು ಸರಿಸಿದಾಗ ಶತ್ರು ಓಡಿಹೋದ ಸಂಗತಿ ಗೊತ್ತಾಯಿತು. ಇವನನ್ನು ಕೊಂದು ಪ್ರಯೋಜನವಿಲ್ಲೆಂದು ಅವನ ಬಟ್ಟೆ ಕಸಿದುಕೊಂಡು ಹೊರ ಹಾಕಿದರು. ಅನಂತರ ಘೋರಪಡೆ ಕರವೀರ ಪ್ರಾಂತಕ್ಕೆ ಕೂಚು ಮಾಡಿ ರಾಜಧಾನಿಯನ್ನು ಹಸ್ತಗತ ಮಾಡಿಕೊಂಡು ಸಂಭಾಜಿ ರಾಜೇ ಛತ್ರಪತಿಯ ಪಟ್ಟಾಭಿಷೇಕ ಮಾಡಿ ಸಂಪೂರ್ಣ ಠಾಣೆಯನ್ನು ಕೈವಶ ಮಾಡಿಕೊಂಡನು. ಆಗ ಹಿಂದೂ ಹುದ್ದೆಯನ್ನು ಉಳಿಸಿದನು. ಹೀಗಾಗಿ ಹಿರಿಯ ಮನೆತನದ ಸಂತಾಜಿ ಘೋರಪಡೆಗೆ ಸೇನಾಪತಿ ಹುದ್ದೆಯನ್ನು ನೀಡಿ ಛತ್ರಪತಿ ಗೌರವಿಸಿದನು. ಶ್ರೀ ಮಹಾಲಕ್ಷ್ಮಿಯ ಮೂರ್ತಿಯು ಯವನರ ಕಾರಣದಿಂದ ಬಹಳಕಾಲ ಸುಪ್ತವಾಗಿತ್ತು. ಅವಳು ಹಿರಿಯ ಬಹಿರಜಿಯ ಮೊಮ್ಮಗನ ಮಗನಾದ ಶಿದೋಜಿ ಘೋರಪಡೆ ಹಿಂದೂರಾವನ ಕನಸಿನಲ್ಲಿ ಕಾಣಿಸಿಕೊಂಡು, ಮಂದಿರದಲ್ಲಿ ಸ್ಥಾಪಿಸಬೇಕೆಂದು ಆಜ್ಞೆ ಮಾಡಿದಳು. ಕನಸಿನಲ್ಲಿ ಸೂಕ್ತ ಸ್ಥಳವನ್ನು ತೋರಿಸಿದಳು. ಅಲ್ಲಿಗೆ ಹೋಗಿ ಅದನ್ನು ಪಲ್ಲಕ್ಕಿಯಲ್ಲಿಟ್ಟಾಗ, ಅದನ್ನು ಬೋವಿಗಳಿಗೆ ಎತ್ತುವದಾಗಲಿಲ್ಲ. ಆಗ ಘೋರಪಡೆ ಹಿಂದೂರಾವ ಅವನು ತನಗೆ ಕನಸಿನಲ್ಲಿ ಹೇಳಿದ್ದು ಖರೆ ಎಂದಾದರೆ ತಾನು ಹೆಗಲು ಕೊಟ್ಟ ಕೂಡಲೇ ಪಲ್ಲಕ್ಕಿ ಹಗುರವಾಗಬೇಕೆಂದು ದೇವಿಗೆ ಬೇಡಿಕೊಂಡಾಗ ಅವನು ಹೆಗಲು ಹಚ್ಚಿದ್ದೇ ತಡ ಪಲ್ಲಕ್ಕಿ ಹಗುರವಾಯಿತು. ಮಂದಿರದಲ್ಲಿ ಸ್ಥಾಪಿಸಿಯಾದ ಬಳಿಕ ಛತ್ರಪತಿಯು ಹಿಂದೂರಾವನಿಗೆ ದೇವಿಯ ಪ್ರಧಾನದ ಬಟ್ಟೆ ಲಭಿಸಿ, ಐದು ಗ್ರಾಮ ಮತ್ತು ಸರದೇಶಮುಖಿ ವತನ ಇನಾಮು ನೀಡಿದನು. ಆಗ ಹಿಂದೂರಾವನು ಸರದೇಶಮುಖಿ ಮತ್ತು ಸಾಂಗವಡ ಎಂಬ ಗ್ರಾಮವನ್ನು ತನ್ನ ಬಳಿಯಿರಿಸಿಕೊಂಡು, ಉಳಿದ ನಾಲ್ಕು ಗ್ರಾಮವನ್ನು ಗುಮಾಸ್ತೆ ಬ್ರಾಹ್ಮಣನಿಗೆ ಇನಾಮು ನೀಡಿ ಶ್ರೀ ದೇವಿಯ ಅರ್ಚನೆಯ ವ್ಯವಸ್ಥೆ ಮಾಡಿದನು. ಮುಂದೆ ಮಹಾರಾಜನ ಕೃಪೆಯಿಂದ ಪೇಶ್ವೆ ಪ್ರಬಲರಾದರು. ಆಗ ಘೋರಪಡೆ ಅವರಿಗೆ ಬೆಂಬಲ ನೀಡಿದನು. ಶಿದೋಜಿರಾವ ಅವರ ಪುತ್ರ ಹಿರಿಯ ಮುರಾದರಾವ ಕಿರಿಯ ದೌಲತರಾವ ಗಜೇಂದ್ರ ಗಡಕರ–ಈ ಇಬ್ಬರು ಬಂಧುಗಳು. ಅವರಲ್ಲಿ ಮುರಾದರಾವ ಪರಾಕ್ರಮಿ, ಭಾಗ್ಯಶಾಲಿಯಾಗಿ ಮೊಗಲರಿಂದ ಒಂದು ನಾಲ್ಕಾಂಶ ಭಾಗ ಪಡೆದು ಛತ್ರಪತಿಯ ಬಂಧುಗಳಾದ ಚಂದಿ ಚಂದಾವರ ಕಡೆಗೆ ಹೋದನು. ಅವನ ಆಜ್ಞೆಯಂತೆ ಪೇಶ್ವೆಯವರ ಜೊತೆಗೂ ಗೆಳೆತನ ಮಾಡಿ

ಗುತ್ತಿ ಮುಂತಾದ ೪೦ ಲಕ್ಷದ ಸಂಪತ್ತನ್ನು ಅನುಭವಿಸುತ್ತಿದ್ದನು. ಬಾದಶಹಾ, ಶಿವಶಾಹಿ ಮತ್ತು ಪೇಶ್ವೆಯಿ–ಮುಂತಾದ ರಾಜಕಾರಣ ಹಲವು ಬಗೆಯದು. ಈ ಸಕಾಲದಲ್ಲಿ ಎಷ್ಟೋ ಸಂಪತ್ತು ಬಂತು ಹೋಯಿತು. ಕಾಗದ ಪತ್ರಗಳು ನಾಶವಾದವು. ಈ ನಡುವೆ ಟೀಪುವಿಗೂ ಮುರಾದರಾವ ಪ್ರಬಲಶತ್ರುವಾದನು. ಮೇಲಾಗಿ ಹೈದರಲಿಖಾನನು ತ್ರಿಚನಾಪಲ್ಲಿಯ ಮೇಲೂ ಹಕ್ಕು ಹೇಳುತ್ತಿರುವಾಗ, ಆಂಗ್ಲ ಬಾಹಾದೂರನು ಮುರಾದರಾವನನ್ನು ತ್ರಿಚನಾಪಲ್ಲಿಗೆ ಕೆಲದಿನ ಕರೆದುಕೊಂಡು ಹೋದನು. ಮುರಾದರಾವನ ಜೊತೆಗೆ ಶ್ರೀಮಂತನ ವಕೀಲನು ಸದಾಕಾಲ ಇರುತ್ತಿದ್ದ. ಬಳಿಕ ಹಿರಿಯ ಶ್ರೀಮಂತನು ಕರ್ನಾಟಕಕ್ಕೆ ಬಂದನು. ಆಗ ಸಾತಾರಾ ಇಲಾಖೆಯ ದಾಭಾಡೆ ಸೇನಾಪತಿಯ ಪದವಿಯನ್ನು ಕಸಿದುಕೊಂಡು ಮುರಾದರಾವನಿಗೆ ಸಾತಾರೆ ರಾಜಧಾನಿಯ ಸೇನಾಪತಿ ಹುದ್ದೆಯ ಗೌರವ ನೀಡಿ, ಬೇಲವತಿ, ಸಿದ್ಧನಾಥ, ರೋಲಿ, ನಿಡಗುಂದ ಮುಂತಾದ ಜಹಗೀರನ್ನು ನೀಡಿದನು. ಮುರಾದರಾವನ ಬಂಧು ದೌಲತರಾವ ಘೋರಪಡೆ ಗಜೇಂದ್ರಗಡಕರನ ಮೇಲೂ ಶ್ರೀಮಂತನ ಕೃಪೆಯಾಗಿ, ಕೋಟೆಯ ಖರ್ಚಿಗಾಗಿ ಗಜೇಂದ್ರಗಡದ ಮೂರು ತಾಲೂಕು ನೀಡಲಾಯಿತು. ಮುಂದೆ ಟೀಪೂವಿನ ಹೈದರ ಅಲಿಖಾನನ ಜೊತೆಗೆ ಕಾಳಗ ನಡೆದು ಫಿತೂರಿಯಿಂದ ಮುರಾದರಾವ ಹೈದರನ ಸೆರೆಗೊಳಗಾದನು. ಅನಂತರ ಟೀಪೂ ಗಜೇಂದ್ರಗಡವನ್ನು ಗೆದ್ದನು. ಶ್ರೀಮಂತನ ಇಚ್ಚೆಯಂತೆ ದೌಲತರಾವ ಸಾಹೇಬನು ಹರಿಪಂತ ಫಡಕೆ ಮುಂತಾದವರ ಸೈನ್ಯ ಸಹಿತ ಕರ್ನಾಟಕಕ್ಕೆ ದಂಡೆತ್ತಿ ಬಂದು, ಯುಕ್ತಿಯಿಂದ ಗಜೇಂದ್ರಗಡವನ್ನು ಗೆದ್ದು, ಕೋಟೆಯ ಖರ್ಚಿಗಾಗಿ ಮೂರು ಲಕ್ಷದ ಪ್ರದೇಶವನ್ನು ಪಡೆದು ಆಡಳಿತವನ್ನು ಮಾಡಿದನು. ಈವರೆಗೆ ಮುರಾದರಾವನು ಪರಶರಾಮಪಂತ ಭಾವೂ ಪಟವರ್ಧನನ ಗೆಳೆತನ ಬೆಳೆಸಿಕೊಂಡಿದ್ದನು. ಭಾವೂ ಮತ್ತು ಹರಿಪಂತ ಫಡಕೆಯ ನಡುವೆ ವೈಮನಸಿತ್ತು. ಘೋರಪಡೆ ಭಾವೂನ ಗೆಳೆಯ. ತನ್ನ ಇಚ್ಛೆಯಂತೆ ವರ್ತಿಸುತ್ತಿಲ್ಲ ಎಂಬ ರೋಷದಿಂದ ಮೊಗಲರ ಜೊತೆಗೆ ಸಂಧಾನ ಮಾಡಿಕೊಳ್ಳುವಾಗ ಗಜೇಂದ್ರಗಡ ಮುಂತಾದ ೨೫,೦೦೦ದ ಜಹಗೀರನ್ನು ತನ್ನ ಖರ್ಚಿಗಾಗಿ ಉಳಿಸಿಕೊಂಡು, ಎರಡೂ ಮುಕ್ಕಾಲು ಲಕ್ಷದ ತಾಲೂಕನ್ನು ಸಂಧಿಗಾಗಿ ಮೊಗಲರಿಗೆ ನೀಡಿದನು. ಆರಂಭದಿಂದ ಇಲ್ಲಿಯವರೆಗೆ ಶ್ರೀಮಂತನ ಉಡುಗೊರೆಯನ್ನು ಕೈಲಾಸವಾಸಿ ಹಿರಿಯ ಮಾಧವರಾವನು ಗಲಗಲ, ನಿಡಗುಂದೆ, ಇಂಗಲ್ ಮುಂತಾದ ೫೦–೬೦ ಸಾವಿರದ ಗ್ರಾಮಗಳನ್ನು ಆಳಿ, ಬಳಿಕ ಘೋರಪಡೆ ಗಜೇಂದ್ರಗಡಕರರ ಕೈಗೆ ಬಂದು ಅವನು ೪೦–೫೦ ವರ್ಷಗಳ ಕೋಟೆ, ಗ್ರಾಮಗಳನ್ನು ಉಪಭೋಗಿಸುತ್ತ ಬಂದನು. ಸದ್ಯ ಶ್ರೀಮಂತ ಬಾಜೀರಾವ ರಘುನಾಥ ಪ್ರಧಾನಿಯು ಅದನ್ನು ಜಪ್ತಿ ಮಾಡಿ ಹಳೆಯ ಆಳ್ವಿಕೆಯನ್ನು ಕಿತ್ತುಹಾಕಿ ಹೊಸದನ್ನು ಆರಂಭಿಸಿದನು. ಟೀಪೂವಿನ ಕಾಳಗದ ಕಾಲಕ್ಕೆ ಗಜೇಂದ್ರಗಡದ ಕಾಗದ ಪತ್ರಗಳೆಲ್ಲ ನಾಶವಾಯಿತು. ರಾಜಕ್ರಾಂತಿಯಿಂದ

ಗದ್ದಲ ಹೆಚ್ಚಾಗಿ, ಎಲ್ಲ ಠಾಣೆಗಳು ಸೈನ್ಯದ ಕೈವಶವಾಗಿ ಘೋರಪಡೆ ವಂಶ ಮತ್ತು ವಹಿವಾಟು ಮಾತ್ರ ಉಳಿದುಕೊಂಡಿತು. ಉಳಿದ ಕಾಗದ ಪತ್ರಗಳು ಶತ್ರುಗಳ ದಾಳಿಯಲ್ಲಿ ಹಾಳಾಯಿತು. ಸಾರಾಂಶ, ಬಾದಶಹಾನ ಕಾಲದಿಂದಲೂ ಘೋರಪಡೆ ಎಂಬ ವಜೀರ ಮನೆತನವು ಮೂಲ ಪುರುಷ ಸುಬ್ರಹ್ಮಣ್ಯ ನಾಗಸರ್ಪನ ಕಾಲದಿಂದಲೂ ಪ್ರಸನ್‌ಚಿತ್ತರಾಗಿ ಬಾದಶಹಾನ ಆಜ್ಞೆಯಂತೆ ಪರಾಕ್ರಮಶಾಲಿಗಳಾಗಿ ಆಡಳಿತ ನಡೆಸುತ್ತಿತ್ತು. ಬಾದಶಹಾನ ಪುಣ್ಯದ ಬಳಿಕ ಶಿವಶಾಹಿ ಛತ್ರಪತಿ ಸರದಾರ ಕೃಪೆಯಿಂದ ಅವರ ಆಜ್ಞೆಯಂತೆ ಸಾಕಷ್ಟು ಸಂಪತ್ತು ಹೋಗಿ, ಸ್ವಲ್ಪ ಸಂಪತ್ತಿನಲ್ಲೇ ಕಾಲಕಳೆಯುತ್ತ ಬಂದರು. ರಾಜಧಾನಿ ಪುಣೆಯಲ್ಲಿ ಪೇಶ್ವೆರಾಜನ ಯೋಗ ಪ್ರಬಲವಾಯಿತು. ಅವನ ಇಚ್ಛೆಯಂತೆ ಮುರಾದರಾವ, ದೌಲತರಾವ ಅವರು ದಿಟ್ಟತನದಿಂದ ಅಪೂರ್ಣ ಸಂಪತ್ತಿನಲ್ಲಿ ಕಾಲ ಕಳೆದರು. ಪೇಶ್ವೆ ಕಾಲ ಮುಗಿದು ಕಂಪನಿ ಸರಕಾರ ಬಂತು. ಭೂಮಂಡಲದ ಸಾರ್ವಭೌಮರಾದ, ಶಕಕರ್ತರಾದ ಆಂಗ್ಲ ಸರಕಾರವು ದಯಾಳುಗಳು, ಸಾಮಾನ್ಯ ಸರದಾರರನ್ನು ಬೆಳೆಸುವವರು. ದೀನರ ಬಂಧುಗಳು–ಅವರ ಆಜ್ಞೆಯಂತೆ ಮುರಾದರಾವ ಮತ್ತು ದೌಲತರಾವನ ಮೊಮ್ಮಗನಾದ ರಾಜಶ್ರೀ ಭುಜಂಗರಾವ ಘೋರಪಡೆ ಹಿಂದೂರಾವನು ಗಜೇಂದ್ರಗಡ ಕೋಟೆಯಲ್ಲಿ ಸಂಪತ್ತಿನ ಕೊರತೆಯಿಂದಾಗಿ ಸಾಲದ ಪೇಚಿನಲ್ಲಿ ಸಿಲುಕಿದರೂ ಸದರಿ ತಾಲೂಕಿನಲ್ಲಿ ವಾಸಿಸುತ್ತಿದ್ದಾನೆ. ಶ್ರಮ ಪರಿಹಾರ ಮಾಡಲು ಸರಕಾರ ಸಮರ್ಥವಾಗಿದೆ. ತಾರೀಖ ಛ ೨೪ ತಿಂಗಳು. ಮೋಹರಂ ಮುಕಾಬಲಾ ೨೪ ಜೂನ ಶುರು ಸನ್ ಫಸಲಿ ೧೨೪೨ ಸನ್ ೧೮೬೨ ಇಸವಿ. ಜೇಷ್ಠ ವದ್ಯ ೧೧ ನಂದನ ಸಂವತ್ಸರೆ ಶಕೆ ೧೭೫೪.

೩

ಜಾಧವ ರಾವ

ಸಾಹೇಬ ಮುಷಫರ್ ಮೆಹರಬಾ ಕರಮ ಫರ್ಮಾಯ ದೋಸ್ತಾನ ರಾಬರ್ಟ ಕಿಸರ್ ಸಾಹೇಬ ಬಹಾದೂರ ಎಕ್ಟಿಂಗ್ ಏಜಂಟ್ ಜಿಲ್ಲಾ ದಕ್ಷಿಣ ಸಲಾಮಹು.

ಸಾಹೇಬ ರಾಜೇ ರತನಸಿಂಗ ಜಾಧವರಾಜ ಸಲಾಮ್, ನಿಮ್ಮ ಕಡೆಯ ಕ್ಷೇಮ ಸಮಾಚಾರವನ್ನು ತಿಳಿಸುತ್ತ. ಕ್ಷೇಮವಾಗಿರಬೇಕು. ನಂತರ ಪತ್ರದ ಮಜಕೂರನ್ನು ತಾರೀಖ ೨೯ ಮಾಹೇ ಮೇ ಸನ್ ೧೮೫೨ ಇಸವಿ. ನಂಬರ್ ೩೮೨ರಲ್ಲಿ ನಮೂದಿಸಲಾಗಿದೆ. ಅದರಲ್ಲಿ ನಿಮಗೆ ನೀಡಿದ ಕಿತಾಬ್ ರಾಜೇ ಎಂಬ ಪದವಿಯನ್ನು ಯಾವಾಗ, ಯಾವ ಕಾರಣಕ್ಕಾಗಿ, ಯಾರಿಂದ ಪ್ರಾಪ್ತವಾಯಿತು ಎನ್ನುವದರ ಒಟ್ಟು ಮನೆತನದ ಪದವಿ. ಖ್ಯಾತಿಯ ಇತಿಹಾಸವನ್ನು ಪುರಾವೆ ಸಹಿತ ಕಳಿಸಬೇಕು. ಪುರಾವೆಯಿಲ್ಲದಿದ್ದರೆ ಹಾಗೆಯೇ ಬರೆದು ಕಳಿಸಬೇಕೆಂದು ಬರೆಯಲಾಯಿತು. ನಮ್ಮ ಮೂಲ ಪುರುಷ ಅಜ್ಜನಾದ ಧನಾಜಿ ಜಾಧವರಾವನು ಶೂರ ಸೈನಿಕನಾಗಿದ್ದನು. ಅವನಿಗೆ ಮನೆತನದ ಶ್ರೇಷ್ಠೆಯಾಗಿ ರಾಜೇ ಎಂಬ ಪದವಿಯನ್ನು ನೀಡಲಾಗಿತ್ತು. ಅವನಿಗೆ ಶ್ರೀಮಂತ ಮಹಾರಾಜ ಶಿವಾಜಿರಾಜೇ ಛತ್ರಪತಿಯು ರಾಜ್ಯವನ್ನು ವಶಪಡಿಸಿಕೊಂಡ ಬಳಿಕ. ಶೂರ ಸೈನಿಕನೆಂದು, ರಾಜ್ಯ ಗಳಿಸಲು ಸಹಾಯ ಮಾಡಿದವನು ಎಂಬ ಕಾರಣಕ್ಕೆ ಶ್ರೀಮಂತ ಶಾಹಾ ಮಹಾರಾಜನು ಸೇನಾಪತಿ ಹುದ್ದೆಯನ್ನು ನೀಡಿದನು. ಆಗ ಧನಾಜಿ ಜಾಧವರಾವನ ಆಶ್ರಯದಲ್ಲಿದ್ದ ಬಾಳಾಜಿ ವಿಶ್ವನಾಥನು ಮಹತ್ವದ ಕಾರ್ಯವನ್ನು ಕೈಕೊಂಡನು. ಅವನ ರಾಜ್ಯಾಡಳಿತವನ್ನು ಅರಿತು ಅವನಿಗೆ ಪೇಶ್ವೆ ಪದವಿ ನೀಡಲಾಯಿತು. ಪೇಶ್ವೆಯು ಮೂಲವನ್ನು ತಿಳಿದುಕೊಂಡು ಕಾಳಗದ ಕೊನೆಗೆ ಪುಣೆಗೆ ಹೋಗುವ ಮುನ್ನ ಭೇಟಿಗೆ ಬಂದನು. ಧನಾಜಿಗೆ ಚಂದ್ರಸೇನ ಮತ್ತು ಶಂಭುಸಿಂಗನೆಂಬ ಮಕ್ಕಳಿದ್ದರು. ಅವರೇ ನಮ್ಮ ಅಜ್ಜಂದಿರು. ಅವರು ದಿಲ್ಲಿಗೆ ತೆರಳಿ ಬಾದಶಹಾನನ್ನು ಭೇಟಿಯಾದರು. ಅವರ ಪರಾಕ್ರಮವನ್ನು ಕಂಡು ಬಾದಶಹಾನು ಹೈದರಾಬಾದ ಇಲಾಖೆಯಲ್ಲಿ ೫೨ ಲಕ್ಷದ ಜಹಗೀರಿನ ಸನದು ಪತ್ರದ ಜೊತೆಗೆ ರಾಜೇ ಎಂಬ ಕಿತಾಬ್ ನೀಡಿದನು. ಸನದು ಉಳಿದ ಕಾಗದ ಪತ್ರಗಳು ಹೋಳ್ಕರ ದಂಗೆಯಲ್ಲಿ ಹಾಳಾಯಿತು. ಕುಲೀನ ಮನೆತನ, ಖ್ಯಾತಿ, ರಾಜೇ ಎಂಬ ಪದವಿ ಛತ್ರಪತಿಯ ಕಾಲದಿಂದ ಮೊಗಲರ ಕಾಲದವರೆಗೆ ಪ್ರಸಿದ್ಧವಾಗಿದೆ. ಇದೆಲ್ಲ ಕಂಪನಿ ಸರಕಾರಕ್ಕೆ ಗೊತ್ತೇಇದೆ. ಸದಾಕಾಲ ಪತ್ರ ಬರೆಯುತ್ತ ಗೆಳೆತನ ವೃದ್ಧಿಯಾಗಲಿ ಕಳಸಿದ ತಾರೀಖ ಥ ೭ ಮಾಹೇ ಸವಲ್ ಸನ್ ೧೨೬೨ ಹೆಚ್ಚಿಗೇನು ಬರೆಯಲಿ. ಪ್ರೀತಿ ಇರಲಿ.

ಯಾದಿ ರಾಜೇ ರತನಸಿಂಗ ಜಾಧವರಾವ ಸುರೂಸನ್ ಸಲಾಸ್ ಸಲಾಸೀನ್ ಮಯಾತ್ಯೆನ ಮತ್ತು ಆಲಫ. ಸರಕಾರದ ಕಡೆಯಿಂದ ಮೆಹರಬಾನ್ ಡೆಪ್ಯೂಟಿ ಎಜೆಂಟ ಸಾಹೇಬ ಅವರ ಕಾರ್ಯಾಲಯದಿಂದ ತಾರೀಖ ೮ ಸಪ್ಪಂಬರ್ ಸನ್ ೧೮೩೨ ಇಸವಿಯ ಪತ್ರ ಬಂದಿದೆ. ಅದರ ಮಜಕೂರು ಏನೆಂದರೆ, ಹಜರತ್ ಬಂದೇಗಾನ ಅಲ್ಲಿ ರೈಟ್ ಹಾನರೇಬಲ್ ಗವರ್ನರ್ ಕೌನ್ಸಿಲ್ ಬಯಸುವದೇನೆಂದರೆ, ದಕ್ಷಿಣದ ಜಹಗೀರದಾರರ ಕೈಫಿಯತ್ ಹೇಗಿದೆ. ಅದರ ಮಾಹಿತಿಯನ್ನು ಸ್ವಲ್ಪದರಲ್ಲಿ ಬರೆದು ಸರಕಾರಕ್ಕೆ ಕಳಿಸಬೇಕು. ಅದರಲ್ಲಿ ಮನೆತನದ ಬಡತಿ, ಅದನ್ನು ಪ್ರಕಟಪಡಿಸಿದ ತಾರೀಖ, ಸೈನ್ಯ ಮತ್ತು ಸಂಬಳ ಈ ಸಂಬಳವನ್ನು ನೀಡಿದ ತಾರೀಖ, ಪೇಶ್ವೆ ಸರಕಾರದಿಂದ ಹಿಡಿದು ಕಂಪನಿ ಸರಕಾರದವರೆಗಿನ ನಿಮ್ಮ ಜಹಗೀರಿನ ವಹಿವಾಟು ಮತ್ತು ಅದರಲ್ಲಿಯ ವ್ಯತ್ಯಾಸವಿದ್ದರೆ ಅದರ ಪಟ್ಟಿಯನ್ನು ಕಳಿಸಿಕೊಡುವಂತೆ ಪತ್ರ ಬಂದಿದೆ. ಉತ್ತರ ಕಳಿಸಲಾಗಿದೆ. ತಪಶೀಲು–

೧) ನಿಮ್ಮ ಮನೆತನ, ಬಡತಿ ಮತ್ತು ಯಾವ ತಾರೀಖಿಗೆ ಮನೆತನ ಪ್ರಸಿದ್ಧಿಯನ್ನು ಪಡೆದು ಖ್ಯಾತಿಗೊಂಡಿತು. ಈ ಪ್ರಶ್ನೆಗೆ ಉತ್ತರ–ಶ್ರೀಮಂತ ಮಹಾರಾಜ ಶಿವಾಜಿ ರಾಜೇ ಛತ್ರಪತಿಯ ರಾಜ್ಯವನ್ನು ಸ್ಥಾಪಿಸಿದಾಗ ಬಾದಶಾಹನ ಕೋಟೆ ಕೊತ್ತಲಗಳ ಕಾಳಗ ವಗೈರೆ ಶುರುವಾದಾಗ ಆಗ ನಮ್ಮ ಅಜ್ಜ ಧನಾಜಿ ಜಾಧವರಾವ ಈ ಸರದಾರನು ಸೈನ್ಯ ಬಿಟ್ಟು ಪರಾಕ್ರಮ ಮೆರೆದಾಗ ಅವನಿಗೆ ಸೇನಾಪತಿ ಪಟ್ಟ ನೀಡಿದರು. ಮುಂದೆ ಶ್ರೀಮಂತ ಹಾಗೂ ಮಹಾರಾಜ ಛತ್ರಪತಿಗಳು ಶಕೆ ೧೬೩೧ರಲ್ಲಿ ದಿಲ್ಲಿಯಿಂದ ದಕ್ಷಿಣಕ್ಕೆ ಬಂದರು. ಅವರು ಸೇನಾಪತಿಯಾದ ಧನಾಜಿ ಜಾಧವರಾವ ಅವನಿಗೆ ಅನುಕೂಲವನ್ನು ಒದಗಿಸಿ ರಾಜ್ಯ ಕಾರಭಾರ ಮಾಡಲಾರಂಭಿಸಿದರು. ರಾಜ್ಯದ ಬಂದೋಬಸ್ತ ಮಾಡಿದರು. ಧನಾಜಿಯ ಆಸರೆಯಲ್ಲಿ ಬಾಳಾಜಿ ವಿಶ್ವನಾಥಗಿದ್ದ ಅವನಿಂದಲೂ ತುಂಬ ಸಹಾಯವಾಯಿತು. ಹೀಗಾಗಿ ಅವನಿಗೆ ಸೇನಾಕರ್ತನೆಂಬ ಕಿತಾಬ್ ನೀಡಿದರು. ಮುಂದೆ ದೊಡ್ಡ ದೊಡ್ಡ ಕೆಲಸ ಮಾಡುತ್ತ ಪೇಶ್ವೆ ಪದವಿ ಪ್ರಾಪ್ತವಾಯಿತು. ಆದರೆ ನಾನು ಜಾಧವರಾವನ ಆಸರೆಯವನು ಎಂಬ ಅರಿವು ಇತ್ತು. ಮನೆತನದ ಬಡತಿ ಧನಾಜಿ ಜಾಧವರಾವ ಇವರಿಂದ ಮತ್ತು ಮನೆತನದ ಖ್ಯಾತಿಯು ಶಿವಾಜಿ ಮಹಾರಾಜರು ರಾಜ್ಯ ಸ್ಥಾಪನೆ ಮಾಡಿದ ದಿನದಿಂದ ಶುರುವಾಯಿತು.

೨) ಸೈನ್ಯ ಮತ್ತು ಸಂಬಳ ನಮ್ಮ ತಂದೆಯ ಕಾಲದಿಂದ ನಡೆದು ಬಂದಿತ್ತು. ಅದು ಶುರುವಾದ ತಾರೀಖಿಗೆ ಉತ್ತರ–ನಮ್ಮ ಮುತ್ತಜ್ಜ ಧನಾಜಿ ಜಾಧವರಾವ ಸೇನಾಪತಿಯ ಬಳಿಗೆ ದೊಡ್ಡ ಸೈನ್ಯದ ಆದಾಯವಿತ್ತು. ಅವನಿಗೆ ಇಬ್ಬರು ಪುತ್ರರು. ಚಂದ್ರಸೇನ ಮತ್ತು ಶಂಭುಶಿಂಗ. ಇವರು ನನ್ನ ಅಜ್ಜಂದಿರು. ಅವರಿಬ್ಬರೂ

ದಿಲ್ಲಿಗೆ ತೆರಳಿ ಬಾದಶಹಾನನ್ನು ಭೇಟಿಯಾಗಿ, ಬಾದಶಹಾನು ಅವರ ಶೌರ್ಯ-ಪರಾಕ್ರಮವನ್ನು ಅರಿತು (ಮುಂದಿನದು ಹರಿದಿದೆ) ಸುಮಾರು ವರ್ಷಗಳಾದವು. ತಾರೀಖ ಹೇಳಬೇಕೆಂದರೆ ದಂಗೆಯಲ್ಲಿ ಸನದು ಪತ್ರ ನಾಶವಾಗಿದೆ.

೩) ಪೇಶ್ವೆ ಸರಕಾರವು ನಮ್ಮ ಜಹಗೀರಿಯ ವಹಿವಾಟಕ್ಕೆ ಯಾವ ರೀತಿಯಲ್ಲಿ ಗಮನಿಸಿತು. ಇದರ ಉತ್ತರ-ಇನಾಮದಾರ ಆಡಳಿತದ ನಮ್ಮ ಸರಂಜಾಮು ಪ್ರಾಯಃ ಮೊಗಲರ ಆಧೀನದಲ್ಲಿತ್ತು. ಅದರ ಬಲದಿಂದ ನಾವು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೆವು. ಮಾಲೇಗಾಂವ ವಾಸದ ಗ್ರಾಮ. ಅದರ ವ್ಯವಸ್ಥೆಯನ್ನು ಮುಖ್ಯವಾಗಿ ನಮಗೆ ನಾವೇ ಮಾಡುತ್ತಿದ್ದೆವು. ಅದರಲ್ಲಿ ಸರಕಾರದ ಹಸ್ತಕ್ಷೇಪವಿಲ್ಲ.

೪) ನಮ್ಮ ಬಳಿಯಲ್ಲಿರುವ ಸದ್ಯದ ಸರಂಜಾಮು.

೧೦,೦೦೦	ವಾಸಿಸುವ ಗ್ರಾಮ ಮಾಳೆಗಾಂವ ಮತ್ತು ಕುಗ್ರಾಮ ಇನಾಮದಾರಿಕೆಗಾಗಿ ಆಂಬಡಿಬರಸಿ ಉಪಗ್ರಾಮ- ಇದು ಗ್ರಾಮಗಳ ಆಕಾರ.
೧೦,೦೦೦	ಮೊಗಲರ ಕಾಲದಲ್ಲಿ ಸರಂಜಾಮು ಹೋಯಿತು. ಅದರ ಬದಲಿಗೆ ೨೨೦೦೦ ರೂಪಾಯಿಯನ್ನು ಸೈನ್ಯ ವ್ಯವಸ್ಥೆಯ ಬಗೆಗೆ ನೀಡುವ ಮಾತಾಗಿತ್ತು. ಆದರೆ ಸರಂಜಾಮು ಎಂದು ಸಿಗಲಿಲ್ಲ. ೧೦,೦೦೦ ಪೆನ್ಶನ್ ಎಂದು ನೀಡುವಾಗ ಪತ್ರದಲ್ಲಿ ತಿಳಿಸಿದ್ದೇನೆಂದರೆ-ಮಹಾರಾಜರೆಂಬ ಶ್ರೇಷ್ಠತನವನ್ನು ಗಮನಿಸಿ ಪೆನ್ಶನ್ ನೀಡಲಾಗಿದೆ.
೨೦,೦೦೦	ಈ ರೀತಿ ನಡೆದು ಬಂದಿದೆ.

೫) ಪೇಶ್ವೆ ಸರಕಾರದಿಂದ ನಮ್ಮ ಪ್ರತಿಷ್ಠೆ ನಡೆದು ಬಂದಿದೆ. ಸದ್ಯ ಕಂಪನಿ ಸರಕಾರವು ಮುಂದುವರೆಸಿದೆ. ಅದರಲ್ಲಾದ ವ್ಯತ್ಯಾಸಕ್ಕೆ ನೀಡಿದ ಉತ್ತರ-ನಮ್ಮ ತಂದೆ ಅಮರಸಿಂಗ ಜಾಧವರಾವ ಅವರು ನೂರು ವರುಷದ ವೃದ್ಧರು. ಅವರು ಬಾಳಾಜಿ ವಿಶ್ವನಾಥರಿಂದ ಹಿಡಿದು ಶ್ರೀಮಂತ ರಾಜೇಶ್ರೀ ಬಾಜೀರಾವ ಸಾಹೇಬರವರೆಗೆ, ಪ್ರತಿಯೊಂದು ಪೇಶ್ವೆ ಮನೆತನದವರೆಲ್ಲರ ಸಲುವಾಗಿ ದುಡಿದರು. ತಮ್ಮ ಹಿಂದಿನ ಯಜಮಾನ ಜಾಧವರಾವ ಅವರ ದೈವದಿಂದ ಅಧಿಕಾರಕ್ಕೆ ಬಂದೆವು ಎಂದು ಪೇಶ್ವೆ ನೆನಪಿಸಿಕೊಳ್ಳುತ್ತಿದ್ದರು. ಆಡಳಿತದಲ್ಲಿ ನಮ್ಮ ಮುದ್ರೆಯನ್ನು ಬಳಸುತ್ತಿದ್ದರು. ನಮ್ಮ ಜಾಧವರಾವ ಪುಣೆಗೆ ಬಂದಲ್ಲಿ ಅವರನ್ನು ಭೇಟಿಯಾಗಲು ಪೇಶ್ವೆ ನಗರದ ಹೊರಗೆ ಬರಬೇಕೆಂಬ ನಿಯಮವಿತ್ತು. ಪ್ರತಿಷ್ಠಿತ ಕೆಲಸಕಾರ್ಯದಿಂದ ಮತ್ತು ಸೈನ್ಯದ ಸಂಘಟನೆಗಾಗಿ ಕಂಪನಿ ಸರಕಾರವು ಸೈನ್ಯದ ಸಾಮಗ್ರಿಯನ್ನು ಪೂರೈಸಿತು.(ಮುಂದಿನದು ಹರಿದಿದೆ).

ಜಾಧವರಾವ ವಾಘೋಲಿಕರ

ಲಕ್ಷ್ಮಣ ಜಾಧವರಾವ ವಾಘೋಲಿಕರ ಸುರುಸನ್ ಆರ್ಬಾ ಸಲಾಸೀನ ಮಯಾತೈನ ಮತ್ತು ಆಲಫ ಮೆಹರ್ಬಾನ ವಾಡಿನ್ ಸಾಹೇಬ ಬಹಾದೂರ ಡೈಪೂಟಿ ಏಜಂಟ ಜಿಲ್ಲಾ ದಕ್ಷಿಣ ಇವರ ಪತ್ರ ತಾರೀಖ ೮ ಮಾಹೇ ಸಪ್ಟಂಬರ ಸನ್ ೧೮೩೨ ಇಸವಿಯ ಪತ್ರ ಬಂದಿದೆ. ಅಲ್ಲಿಯ ಮಜಕೂರ್‌ನಂತೆ, ಹಜರತ್ ಬಂದೇಗಾನ ಅಲ್ಲಿ ರೈಟ್ ಆನರೇಬಲ್ ಗೌವರ್ನರ ಕೌನ್ಸಿಲ್ ಬಯಸುವದೇನೆಂದರೆ, ದಕ್ಷಿಣದ ಜಹಗೀರುದಾರರ ಕೈಫಿಯತ್ (ಹೇಳಿಕೆ) ಏನಿದೆ. ಅದರ ಬಗೆಗೆ ಮಾಹಿತಿಯನ್ನು ನೀಡಬೇಕು. ಹಾಗೆಯೇ ಸರಕಾರಕ್ಕೆ ಕಳಿಸಲು ಸ್ವಲ್ಪದರಲ್ಲಿ ಕೈಫಿಯತ್ ಬರೆದು ಕಳಿಸಬೇಕು. ಆ ಪ್ರಕಾರ ಇಲ್ಲಿಯ ಮಜಕೂರನ್ನು ಬರೆದು ತಿಳಿಸಿದ್ದು ಹೀಗಿದೆ–

೧) ನಮ್ಮ ಮನೆತನಕ್ಕೆ ಸಿಕ್ಕ ಬಡತಿ, ಮನೆತನದ ಖ್ಯಾತಿಯ ಬಗ್ಗೆ ತಿಳಿಸಿದ್ದು ಹೀಗಿದೆ–ನಮ್ಮ ಅಜ್ಜನ ಅಜ್ಜನಾದ ಪಿಲಾಜಿ ಜಾಧವರಾವನು ಮೂಲ ಪುರುಷ. ಅವರು ಸಂಪಾದಿಸಿದ ಸಂಪತ್ತು. ಶ್ರೀಮಂತ ಶಾಹೂ ಮಹಾರಾಜ ಛತ್ರಪತಿಯವರು ದಿಲ್ಲಿಯಿಂದ ಬಂದರು. ಆಗ ಹಲವು ಸರದಾರರು ಅವರನ್ನು ರಾಜ್ಯಕ್ಕೆ ಕರೆತರಲೆಂದು ಹೋದರು. ಅವರು ಬಾದಶಹಾನ ಪ್ರೀತಿಯನ್ನು ಸಂಪಾದಿಸಿ ಮಹಾರಾಜರನ್ನು ದಕ್ಷಿಣಕ್ಕೆ ಕರೆತಂದರು. ಅವರಲ್ಲಿ ಪಿಲಾಜಿ ಜಾಧವರಾವನು ಮಹಾರಾಜರ ಸೇವೆ ಮಾಡಿದನು. ಅದರಿಂದ ಮೆಚ್ಚಿದ ಶಾಹೂ ಮಹಾರಾಜರು ಪುಣೆ ಪ್ರಾಂತದ ದಿವೆ ಎಂಬಲ್ಲಿಯ ಇನಾಮ ಮತ್ತು ನಾಂದೇಡದಲ್ಲಿಯ ಸ್ವರಾಜ್ಯವನ್ನು ಇನಾಮ ನೀಡಿದರು. ಸನ್ ೧೧೨೩ ಸಾಲಿನ ತಾರೀಖ ೧೩ ಮಾಹೇ ಜಿಲ್‌ಕಾದ ನೀಡಿದ ಬಳಿಕ ಮುಂದೆ ಔರಂಗಾಬಾದ ಪ್ರಾಂತಿನ ಕನಡ ಘುಲಬರಿ ಮುಂತಾದ ಮಹಲಿನ ಒಂದೂವರೆ ಲಕ್ಷದ ಇನಾಮನ್ನು ಸರಂಜಾಮಿಗಾಗಿ ನೀಡಿದರು. ಅದರಿಂದಾಗಿ ಅಶ್ವದಳ ಸುರಕ್ಷಿತವಾಗುಳಿಯಿತು. ಮಹಾರಾಜರ ಬೆಂಬಲದಿಂದ ಸರಕಾರದ ಕಾರ್ಯವನ್ನು ಮಾಡುತ್ತಿದ್ದರು. ದಮಾಜಿ ಥೋರಾಡ ಹಿಂಗನಾಗಾಂವಕರರು ಬಾಳಾಜಿ ವಿಶ್ವನಾಥ ಪೇಶ್ವೆ ಮತ್ತು ಆಬಾಜಿಪಂತ ಪುರಂದರೆಯನ್ನು ಬಂಧಿಸಿದನು. ಅವನನ್ನು ಕುತಂತ್ರದಿಂದ ಸಾತಾರಕ್ಕೆ ಒಯ್ದರು. ಮುಂದೆ ದಾಮೊಜಿಯನ್ನು ಹಿಡಿದು ಬಂಧಿಸಿ ಸಾತಾರಾಕ್ಕೆ ಒಯ್ದರು. ಅಂದಿನಿಂದ ಮನೆತನದ ಪ್ರತಿಷ್ಠೆ ಮತ್ತು ಏಳ್ಗೆ ಪ್ರಸಿದ್ಧವಾಯಿತು. ಇತ್ತೀಚೆಗೆ ಬಾಳಾಜಿ ವಿಶ್ವನಾಥ ಮತ್ತು ಬಾಜೀರಾವ ಸಾಹೇಬರ ಜೊತೆಗೆ ದಿಲ್ಲಿಯ ಮೇಲೆ ದಂಡೆತ್ತಿ ಹೋದರು.

ನವಾಬನ ಮೇಲೆ ಏರಿ ಹೋಗಿ ಕಾರ್ಯಾಚರಣೆ ಮಾಡಿ, ಸರಕಾರದ ಪ್ರದೇಶವನ್ನು ಪಡೆದರು. ನವಾಬ ನಿಜಾಮನ ಮೂಲಕ ಅವರು ನಮಗೆ ಗೋಳೆಗಾಂವ ಮತ್ತು ಮರಕಲ್‌ದಲ್ಲಿಯ ಜಹಗೀರನ್ನು ಇನಾಮ ಎಂದು ನೀಡಿದರು. ಹಿಂದೂಸ್ಥಾನದಲ್ಲಿ ಛತ್ರಸಾಲ ರಾಜನಿಗೆ ಸಹಾಯದ ಅಗತ್ಯವಿದ್ದಾಗ, ಇವರು ಬಾಜೀರಾವ ಸಾಹೇಬರ ಜೊತೆಗೆ ಹೋಗಿ ಛತ್ರಸಾಲನ ಶತ್ರುವನ್ನು ಸದೆ ಬಡಿದು ಸಂಸ್ಥಾನವನ್ನು ರಕ್ಷಿಸಿದನು. ಅದರಿಂದಾಗಿ ರಾಜೇ ಛತ್ರಸಾಲನು ಪೇಶ್ವೆ ಸರಕಾರಕ್ಕೆ ಲಕ್ಷ ರೂಪಾಯಿಯ ಬುಂದೇಲ ಖಂಡದ ಪ್ರದೇಶವನ್ನು ನೀಡಿದನು. ನಮಗೂ ಖಾಸಾ ಮುಂತಾದ ಐದು ಸಾಗರ ಪ್ರಾಂತಗಳನ್ನು ಇನಾಮ ನೀಡಿದರು. ತ್ರ್ಯಂಬಕರಾಜ ದಾಭಾಡೆಯ ಬಾಜೀರಾವ ಸಾಹೇಬರ ಮೇಲೆ ಏರಿ ಬಂದನು. ಅವನ ಸೈನ್ಯವೂ ಅಪಾರವಾಗಿತ್ತು. ಹೀಗಿದ್ದರೂ ಕಾಳಗ ಮಾಡಿ ದಾಭಾಡೆಯನ್ನು ಪರಾಭವಗೊಳಿಸಿದನು. ಚಮಾಜಿ ಅಪ್ಪಾನ ಜೊತೆಗೆ ವಸಯಿಯ ಬಗೆಗೆ ಚರ್ಚಿಸುವಾಗ ಪಿಲಾಜಿ ಜಾಧವರಾವ ಜೊತೆಗಿದ್ದರು. ಅಲ್ಲೂ ಅದ್ಭುತ ಕಾರ್ಯ ಮಾಡಿ ಇನಾಮ ಭಾಗವನ್ನು ವಸಯಿಗೆ ಸಿಗುವಂತೆ ಮಾಡಿದನು.

ಗೋಖಲೆ

ಯಾದಿ ಸೌಭಾಗ್ಯವತಿ ಯಮುನಾಬಾಯಿ ಸಾಹೇಬ ಗೋಖಲೆ, ಸುರುಸನ್ ಅಬಾನ ಸಲಾಸಿನ ಮಯಾತೈನ ಮತ್ತು ಆಲಫ. ತಾರೀಖ ೮ ಸಪ್ಟಂಬರ ಸನ್ ೧೮೩೨ ಮತ್ತು ತಾರೀಖ ೧ ಮಾಹೇ ಜೂನ ಸನ್ ೧೮೩೩ ಇಸವಿ. ಒಟ್ಟೂ ಎರಡು ಪತ್ರಗಳು ಸಾಹೇಬರಿಂದ ಬಂದಿವೆ. ಅದರಲ್ಲಿ ಬಂದಗಾನ ಅಲ್ಲಿ ರೈಟ ಆನ್‌ರೆಬಲ್ ಗೌರನರ್ ಕೌನ್ಸಿಲ್ ಬಯಸುವದೇನೆಂದರೆ, ದಕ್ಷಿಣದಲ್ಲಿಯ ಜಹಗೀರದಾರರ ಹೇಳಿಕೆ ಏನು. ಅದರ ಮಾಹಿತಿಯನ್ನು ಬರೆದು ತಿಳಿಸಬೇಕೆಂದು ಪತ್ರ ಬರೆದಿದ್ದಾರೆ. ನಮ್ಮ ಮನೆತನದ ತಪಶೀಲು ಹೀಗಿದೆ.-

೧) ನಮ್ಮ ತಂದೆ ಧೋಂಡೊ ಬಲ್ಲಾಳ ಗೋಖಲೆಯು ಸರಕಾರದ ಆಜ್ಞೆಯಂತೆ ಚಾಕರಿ ಮಾಡುತ್ತ ಬಂದರು. ಅದರಿಂದ ಸಂತೋಷಗೊಂಡ ಸರಕಾರವು ಬದಾಮಿಯ ಸೈನ್ಯಕ್ಕೆ ೧೫೦೦ ಸೈನಿಕರು, ನಗಾರಿ ನೌಬತ್ತುಗಳನ್ನು ನೀಡಿದರು.

೨) ಕಂಪನಿ ಸರಕಾರ ಮತ್ತು ಸರಕಾರದ ಕರಾರಿನಂತೆ ಕಂಪನಿ ಸರಕಾರಕ್ಕೆ ಸೈನ್ಯ, ತೋಫುಖಾನೆ ಮತ್ತು ಸಾಮಾನ್ಯ ಸೈನಿಕರ ಗುಂಪು ಕಳಿಸಬೇಕೆಂದು ಪರಶುರಾಮ ಭಾವೂ ಪಟವರ್ಧನರಿಗೆ ಆಜ್ಞೆ ಮಾಡಲಾಯಿತು. ಅದರ ಜೊತೆಗೆ ಧೋಡೊಪಂತದಾದಾ ಅವರನ್ನು ನೇಮಿಸಲಾಯಿತು. ಈ ವಿಷಯ ಸರಕಾರಕ್ಕೆ ಗೊತ್ತಾಗಿ, ಸರಕಾರ ಸಂತೋಷಗೊಂಡು ಪಲ್ಲಕ್ಕಿ, ಕುದುರೆ, ನಗಾರಿ, ನಿಶಾನೆಯನ್ನು ನೀಡಬೇಕೆಂದು ಸರಕಾರ ಆಜ್ಞೆ ಮಾಡಿದ್ದರಿಂದ ಸದರಿ ಸಾಮಗ್ರಿಯನ್ನು ನೀಡಲಾಯಿತು.

೩) ಸರಕಾರದ ಆಜ್ಞೆಯಂತೆ ಹರಿಪಂತ ತಾತ್ಯಾ ಫಡಕೆಯವರು ಸೈನ್ಯ ಸಮೇತ ಪುಣೆಯಿಂದ ಹೊರಟು ಶ್ರೀರಂಗಪಟ್ಟಣಕ್ಕೆ ಹೋಗಿ ಕಂಪನಿ ಸರಕಾರವನ್ನು ಸೇರಿಕೊಂಡರು. ಅನಂತರ ಪರಶುರಾಮ ಭಾವೂ ಪಟವರ್ಧನ ಧಾರವಾಡವನ್ನು ಗೆದ್ದು, ಸೈನ್ಯ ಸಹಿತ ಹಂತ ಹಂತವಾಗಿ ಶ್ರೀರಂಗಪಟ್ಟಣವನ್ನು ಸೇರಿಕೊಂಡನು. ಸರಕಾರದ ಆಜ್ಞೆಯಂತೆ ಅವನ ಜೊತೆಗೆ ಧೋಂಡೋಪಂತದಾದಾನ ಸೈನ್ಯಸಹವಿತ್ತು. ಶ್ರೀರಂಗಪಟ್ಟಣಕ್ಕೆ ತೆರಳಿ ಸಾಕಷ್ಟು ಕಾರ್ಯ ಮಾಡಿದರು. ಮುಂದೆ ದೇಶಿ ಸೈನ್ಯ ಬರಲಾರಂಭಿಸಿತು. ಆಗ ಸರಕಾರದ ಆಜ್ಞೆಯಂತೆ ಹೆಚ್ಚಿನ ಖರ್ಚಿನ ವ್ಯವಸ್ಥೆ ಮಾಡಿ, ಹರಿಪಂತ ತಾತ್ಯಾ ಅವರು ಬಂದೋಬಸ್ತಿಗಾಗಿ ಧೋಂಡೊಪಂತದಾದಾ ಅವನನ್ನು ಕರ್ನಾಟಕಕ್ಕೆ ಕಳಿಸಿದನು. ಕರವೀರ ಸರಕಾರದ ಸೈನ್ಯವನ್ನು ಒಯ್ದು

ಕರ್ನಾಟಕದಲ್ಲಿ ಸರಕಾರದ ಠಾಣೆಯನ್ನು ತಂದಿರಿಸಿದರು. ಅವರೊಂದಿಗೆ ಕಾಳಗ ಮಾಡಿ, ಅವರನ್ನು ಸದೆ ಬಡಿದು, ತೋಫು, ಆನೆ, ಅಂಬಾರಿಯನ್ನು ತಂದರು.

೪) ಕಂಪನಿ ಸರಕಾರವು ಟೀಪೂ ಸುಲ್ತಾನನ ಪ್ರದೇಶವನ್ನು ಹಸ್ತಗತ ಮಾಡಿಕೊಂಡ ಬಳಿಕ ಧೋಂಡುಜಿ ವಾಘನು ಅಲ್ಲಿಗೆ ಹೋಗಿ ಸೈನ್ಯ ಸಮೇತ ತಳವೂರಿದನು. ಆಗ ವಾಘನ ಪಾರುಪತ್ಯಕ್ಕಾಗಿ ಮೆಹರಬಾನ ವಸಲಿಸಾಹೇಬ ಬಹಾದ್ದೂರರು ಶ್ರೀರಂಗಪಟ್ಟಣದಿಂದ ಸೈನ್ಯ, ತೋಪುಗಳ ಸಹಿತ ತುಂಗಭದ್ರೆ ಇಳಿದು ಸವಣೂರಿಗೆ ಬಂದರು. ಸೈನ್ಯ ಸಮೇತ ಹಾವನೂರಿಗೆ ಬರುವಂತೆ ಧೋಂಡೊಪಂತದಾದಾನಿಗೆ ಸುದ್ದಿ ಕಳಿಸಲಾಯಿತು. ಅದರಂತೆ ವಸಲಿ ಸಾಹೇಬರ ಭೇಟಿಗೆ ಹೊರಟಾಗ ಧೋಂಡೊಜಿ ವಾಘರ ಸೈನ್ಯವನ್ನು ಎದುರಿಸಬೇಕಾಯಿತು. ಘನಘೋರ ಕಾಳಗವಾಯಿತು. ಅದರಲ್ಲಿ ಧೋಂಡೊಪಂತ ಮತ್ತು ಅಪ್ಪಾಸಾಹೇಬರು ಸರಕಾರಿ ಕೆಲಸದಲ್ಲಿ ನಿರತರಾದರು. ಆ ಕಾಳಗದಲ್ಲಿ ಸಾಕಷ್ಟು ಗಾಯವಾಯಿತು. ಆದರೂ ಗಾಯಕ್ಕೆ ಪಟ್ಟಿ ಕಟ್ಟಿಕೊಂಡು ಮತ್ತೆ ಸೈನ್ಯವನ್ನು ಸಂಗ್ರಹಿಸಿ, ಸವಣೂರಿಗೆ ಹೋಗಿ ವಸಲಿ ಸಾಹೇಬರನ್ನು ಭೇಟಿಯಾದನು. ಬಳಿಕ ಧೋಂಡಿಗೆ ವಾಘ ಅವನ ಮೇಲೆ ಸೈನ್ಯ ಸಮೇತ ಏರಿ ಹೋದನು. ಭೀಕರ ಕಾಳಗವಾಯಿತು. ಬಳಿಕ ಧೋಂಡೊಜಿ ವಾಘನನ್ನು ಕೊಂದನು. ಸೈನ್ಯವನ್ನು ಲೂಟಿ ಮಾಡಿ ಹಾಳುಗೆಡವಿದನು. ಅವನ ಯುದ್ಧದ ಕಾರ್ಯನೋಡಿ ಸಾಹೇಬರು ಸಂತೋಷಗೊಂಡು, ಸಾಹೇಬರು ಸೈನ್ಯಸಹಿತ ತುಂಗಭದ್ರೆಯನ್ನು ದಾಟಿ ಹೋದರು. ಮುಂದೆ ಮುಖ್ಯ ಸೈನ್ಯವನ್ನು ಕರ್ನಾಟಕದ ಬಂದೋಬಸ್ತಿಗಾಗಿ ನೇಮಿಸಲಾಯಿತು.

೫) ಪುಣೆಯಲ್ಲಿ ಯಶವಂತರಾವ ಹೋಳ್ಕರರ ಸೈನ್ಯ ಸಹ ಬಂದು ಯುದ್ದವಾಯಿತು. ಶ್ರೀಮಂತರ ಸೈನ್ಯ ವಸಯಿಗೆ ಹೊರಟು ಹೋಯಿತು. ಬಳಿಕ ವಸಲಿ ಸಾಹೇಬರು ಸೈನ್ಯ, ಕುದುರೆ ಮತ್ತು ತೋಫಖಾನೆ ಸಹಿತ ಕರ್ನಾಟಕದಿಂದ ಪುಣೆಗೆ ಬಂದರು. ಹೀಗಾಗಿ ಸೈನ್ಯ ಸಹ ಬರಬೇಕೆಂದು ಸರಕಾರದ ಆಜ್ಞಾಪತ್ರ ಬಂದಿತು. ಸಾಹೇಬ ಅವರೊಂದಿಗೆ ಪುಣೆಗೆ ಬಂದಾಗ ಶ್ರೀಮಂತರ ಭೇಟಿಯಾಯಿತು. ಆಗ ಖರ್ಚಿನ ವ್ಯವಸ್ಥೆ ಮಾಡಿ ವಸಲಿ ಸಾಹೇಬರ ಜೊತೆಗೂಡಿ ಹೋಳ್ಕರ ಅವರ ಮೇಲೆ ಏರಿಹೋದರು. ಮುಂದೆ ಅಲಿಜಾ ಬಹಾದೂರ ಮತ್ತು ಭೋಸಲೆಯ ಸೈನ್ಯದೊಂದಿಗೆ ಭೀಕರ ಕಾಳಗ ಜರುಗಿತು. ಗಾಯಿಲಗಡದಲ್ಲೂ ಕಾಳಗ ನಡೆಯಿತು. ಆಗ ಅಲಿಜಾ ಬಹಾದೂರ ಮತ್ತು ಭೋಸಲೆಯ ನಡುವೆ ಸಂಧಾನ ಏರ್ಪಟ್ಟು, ವಸಲಿ ಸಾಹೇಬರ ಜೊತೆಗೆ ಪುಣೆಗೆ ಬರುವ ಕಾಲಕ್ಕೆ, ಹಾದಿಯಲ್ಲಿ ಮೊಗಲರ ಇಲಾಖೆಯಲ್ಲಿ ಬಂಡವಾಲೆಯು ಪುಣೆಯ ಆಹಾರಧಾನ್ಯವನ್ನು ಸ್ಥಗಿತಗೊಳಿಸಿ, ಪ್ರದೇಶವನ್ನು ಲೂಟಿ ಮಾಡುತ್ತಲಿದ್ದು, ಅವರನ್ನು ಪಾರಿಪತ್ಯಗೊಳಿಸುವಂತೆ

ಸರಕಾರವು ಆಜ್ಞಾಪತ್ರ ಕಳಿಸಿತು. ಅದರಂತೆ ಬಂಡವಾಲೆಯ ಜೊತೆಗೆ ಕಾಳಗ ಮಾಡಿ ಅವನನ್ನು ಪರಾಭವಗೊಳಿಸಿದನು. ಬಳಿಕ ಸಾಹೇಬರು ಪುಣೆಗೆ ಬಂದು ಸರಕಾರದಿಂದ ಬೀಳ್ಕೊಂಡು ಸರಂಜಾಮು ಸಹಿತ ಶ್ರೀರಂಗಪಟ್ಟಣಕ್ಕೆ ಹೊರಡುವ ಕಾಲಕ್ಕೆ ಸನ್ ೧೮೦೩ರಲ್ಲಿ ದೋಸ್ತಿಯ ಫರ್ಮಾನು ಹೊರಡಿಸಿದರು.

೬) ಪ್ರಾಂತ ಪ್ರತಿನಿಧಿಗಳು ಪರಸ್ಪರರಲ್ಲಿ ಜಗಳ ಮಾಡುತ್ತ ಸೈನ್ಯದ ಸಹಾಯದಿಂದ ಪ್ರದೇಶವನ್ನು ಲೂಟಿ ಮಾಡಲಾರಂಭಿಸಿದರು. ಈ ಸುದ್ದಿ ಸರಕಾರದ ಕಿವಿಗೆ ಬಿದ್ದು. ಅದರ ಬಂದೋಬಸ್ತ ಮಾಡುವಂತೆ ಸರಕಾರ ಆಜ್ಞೆ ಮಾಡಿತು. ಆಗ ವಿಶೇಷ ಸೈನ್ಯ ತೋಪು ಸಹಿತ ತೆರಳಿ, ಸನಸೀತ ಮಯಾತ್ಯೆನಾವರಲ್ಲಿ ಕಾಳಗ ಮಾಡಿ ಪ್ರತಿನಿಧಿಗಳನ್ನು ಸೋಲಿಸಿ, ಸರಕಾರದ ಆಜ್ಞೆಯಂತೆ ಕೋಟೆ ಕೊತ್ತಲದ ಬಂದೋಬಸ್ತ ಮಾಡಿದನು. ಸನ್ ಸಲಾಸ ಆಶರ ವರ್ಷದಲ್ಲಿ ಸೈನ್ಯದ ಖರ್ಚಿಗಾಗಿ ವ್ಯವಸ್ಥೆಗಾಗಿ ಸರಕಾರದಿಂದ ೧೩ ಲಕ್ಷವನ್ನು ಕೊಡಿಸಲಾಯಿತು. ಈ ಕಾಳಗ ಕೊನೆವರೆಗೂ ನಡೆಯುತ್ತಿತ್ತು. ಅವುಗಳಲ್ಲಿ ೭೦,೦೦೦ ಗ್ರಾಮವನ್ನು ಕಂಪನಿ ಸರಕಾರವು ಕರ್ನಾಟಕದಲ್ಲಿ ನೀಡಿತು. ಅದು ಮುಂದುವರಿದಿದೆ. ಕರ್ನಾಟಕದ ಸಂಸ್ಥಾನಿಕರು ಗೆಳೆತನಕ್ಕಾಗಿ ಆರು ಇನಾಮ ಗ್ರಾಮಗಳನ್ನು ನೀಡಿದರು. ಅವುಗಳಲ್ಲಿ ಮೂರು ಊರು ಉಳಿದುಕೊಂಡಿದೆ. ಉಳಿದದ್ದು ಕಂಪನಿ ಸರಕಾರದ ಬಳಿಗಿದೆ.

೬

ದೇವಧರ (ಢಮಢೇರೆ)

ಯಾದಿ ರಾಮಚಂದ್ರ ಪಾಂಡುರಂಗ ದೇವಧರ ಊರ್ಫ್ ಡಮಢೇರೆ ಸುರು ಸನ್ ಅರ್ಬಾಸಲಾಸಿನ್ ಮಯಾತೈನ ಮತ್ತು ಅಲಫ. ಹಜರತ ಬಂದಗಾನ ಅಲ್ಲಿ ರೈಟ್ ಆನ್‌ರೆಬಲ್ ಗೌರನರ್ ಕೌನ್ಸಿಲರು ಬಯಸುವದೇನೆಂದರೆ, ಜಹಗೀರದಾರರ ಹೇಳಿಕೆಯ ಮಾಹಿತಿ ನೀಡಬೇಕು. ಮಾಹಿತಿಯನ್ನು ಸ್ವಲ್ಪದರಲ್ಲಿ ಬರೆದು ಸರಕಾರಕ್ಕೆ ರವಾನಿಸಬೇಕೆಂದು ಬರೆದು ತಿಳಿಸಲಾಗಿದೆ. ಮನೆತನದ ಬಡತಿ ಮತ್ತು ಮನೆತನ ಖ್ಯಾತಿ ಪಡೆದ ದಿನಾಂಕವನ್ನು ನಮ್ಮ ತಂದೆಯ ಬಳಿಯಲ್ಲಿರುವ ಸೈನ್ಯ, ಸಂಬಳ ಅದು ಆರಂಭಗೊಂಡ ತಾರೀಖು ಮತ್ತು ತಮ್ಮ ಜಹಗೀರಿನ ವಹಿವಾಟನ್ನು ಪೇಶ್ವೆ ಸರಕಾರ ಪ್ರಾಶಸ್ತ್ಯ ನೀಡಿದ, ಸದ್ಯ ನಿಮ್ಮ ಹತ್ತಿರವಿರುವ ಸರಂಜಾಮು ಪೇಶ್ವೆ ಸರಕಾರದಿಂದ ಲಭಿಸಿದ ಪ್ರತಿಷ್ಠೆ, ಸದ್ಯ ಕಂಪನಿ ಸರಕಾರ ನೀಡುತ್ತಿರುವದರಲ್ಲಿರುವ ವ್ಯತ್ಯಾಸ ಮುಂತಾದ ವಿಷಯವನ್ನು ಯಾದಿಯಲ್ಲಿ ಬರೆದು ಕಳಿಸಬೇಕು ಎಂದು ತಾರೀಖ ೮ ಸಪ್ಟಂಬರ ಸನ್ ೧೮೩೨ ಇಸವಿಯ ಪತ್ರ ಬಂದಿದೆ ಮತ್ತು ಇತ್ತೀಚಿಗೆ ತಾರೀಖ ೧ ಜೂನ ಸನ್ ೧೮೩೩ ಇಸವಿಯ ಎರಡನೇ ಪತ್ರ ಬಂದಿದೆ. ಅದಕ್ಕೆ ಉತ್ತರ–ನಮ್ಮಜ್ಜ ಕೈಲಾಸವಾಸಿ ತೀರ್ಥಸ್ವರೂಪ ರಾಮಚಂದ್ರ ಪಂತ ಆಬಾ ದೇವಧರ ಉರ್ಫ್ ಢಮಢೇರೆಯವರು ಕೈ. ಬಾಬಾ ಫಡ್ನಿಸರ ಬಳಿ ವಾಸಿಸುತ್ತಿದ್ದರು. ಅವರು ಕೈ. ಶ್ರೀಮಂತ ನಾನಾಸಾಹೇಬ ಪೇಶ್ವೆಯ ಆಡಳಿತದಲ್ಲಿ ಆಸಾಮಿ ಠರಾವು ಮಾಡಿದರು. ಅದರಂತೆ ದಪ್ತರಿನಲ್ಲಿ ೧೫ ವರ್ಷ ಚಾಕರಿ ಮಾಡಿದರು. ಮುಂದೆ ಹಿರಿಯ ಕೈ. ಶ್ರೀಮಂತ ಮಾಧವರಾವ ಸಾಹೇಬ ಪೇಶ್ವೆಯವರು ಸನ್ ಸಲಾಸ ಸೈತನಾತ ಪೇಶ್ವೆಯ ದಪ್ತರಿಗೆ ತಿಳಿಸಿದ ಮೇಲೆ, ಅಂದಿನಿಂದ ಅರಮನೆ ಪ್ರದೇಶ ಕೋಟೆ ಕೊತ್ತಲ, ಅಶ್ವ– ಮುಂತಾದ ಸಂಪತ್ತಿನ ಲೆಕ್ಕಪತ್ರವನ್ನು ನೋಡಿಕೊಳ್ಳುವ ಕೆಲಸವನ್ನು ಇವರಿಗೆ ವಹಿಸಿಕೊಡಲಾಯಿತು. ಅವರು ಸನ್ ಸೀತ ಸಮಾನೀನ ಕೊನೆಗೆ ಕೈಲಾಸವಾಸಿಗಳಾದರು. ಬಳಿಕ ಶ್ರೀಮಂತ ಮಾಧವರಾವ ಪೇಶ್ವೆಯ ಆಡಳಿತದಲ್ಲಿ ನಾನಾ ಫಡ್ನಿಸನು ಅವರ ಹಿರಿಯ ಮಗ ಕೈ. ಮೋರೊಪಂತ ತಾತ್ಯಾ ಢಮಢೇರೆಯವರಿಗೆ ಈ ಪೂರ್ವ ಕೆಲಸವನ್ನು ಮುಂದುವರೆಸುವಂತೆ ತಿಳಿಸಿದನು. ಅವರು ಸನ್ ಟಿಸೈನ್ ಕೊನೆಗೆ ಮರಣ ಹೊಂದಿದರು. ಅನಂತರ ಅದೇ ಕೆಲಸವನ್ನು ಕೈ. ಪಾಂಡುರಂಗ ಪಂತ ಅಣ್ಣಾ ಢಮಢೇರೆಗೆ ನೀಡಲಾಯಿತು. ಅದರಂತೆ ದಪ್ತರಿನ ಕೆಲಸ ಕಾರ್ಯವನ್ನು ಮಾಡುತ್ತಿದ್ದರು. ಸನ್ ಇಸನ್ನೆ ಮಯಾತೈನಾತ ಶ್ರೀಮಂತ ರಾಜಶ್ರೀ ಬಾಜೀರಾವ ಸಾಹೇಬ ಪೇಶ್ವೆಯವರು ವಿಜಯದುರ್ಗದಲ್ಲಿ ಯುದ್ಧ ನೌಕೆಯ ಕೆಲಸ ಮಾಡುವಂತೆ ತಿಳಿಸಿದರು. ವಿಜಯದುರ್ಗ ತಾಲೂಕ ಮತ್ತು ಯುದ್ಧನೌಕೆಯ ಖಜಾನೆಯ ಅಧಿಕಾರಿಗೆ

ತಿಳಿಸಿ ಸರಕಾರದಿಂದ ಹಣ ಕೊಡಿಸಿ ವಿಜಯದುರ್ಗಕ್ಕೆ ತೆರಳುವಂತೆ ಆಜ್ಞಾಪಿಸಿದರು. ಆಗ ನಮ್ಮ ಚಿಕ್ಕಪ್ಪ ಶೀ ರಾ. ಹರಿಪಂತ ಭಾವೂ ಢಮಢೇರೆಯನ್ನು ದಪ್ತರಿನ ಕೆಲಸಕ್ಕಾಗಿ ನೇಮಿಸಿ ಅಣ್ಣಾಸಾಹೇಬ ವಿಜಯದುರ್ಗಕ್ಕೆ ಹೋದರು. ಸನ್ ಸಲಾಸ ಮಾಯಾ ತೈನಾತದಲ್ಲಿ ಹೋಳ್ಕರರ ದಂಗೆಯಾಯಿತು. ಆಗ ವಸಯಿಗೆ ಹೋದ ಶ್ರೀಮಂತ ರಾಜಶ್ರೀ ಬಾಜಿರಾವ ಸಾಹೇಬರು ಸನ್ ಅರಬಾ ಮಯಾತೈನಾತಕ್ಕೆ ವಿವರಿಸಿ ಹೇಳಿದರು. ಅನಂತರ ಸನ್ ಸಮಾನ ಮಯಾತೈನಾತ ನಮ್ಮ ಚಿಗಪ್ಪನ ಮಗಳನ್ನು ಶ್ರೀಮಂತನಿಗೆ ನೀಡಿ ವಿಜೃಂಭಣೆಯ ಲಗ್ನ ಮಾಡಿದರು. ಮೊದಲಿನಂತೆ ದಪ್ತರಿನ ಕೆಲಸವನ್ನು ಮಾಡುತ್ತಲೇ ಇದ್ದರು. ಮತ್ತೆ ಕರ್ನಾಲಾ, ರಾಜಮತಿ ಮತ್ತು ಖೀಲಾಪುರದ ಕಂದಾಯುವನ್ನು ವಸೂಲಿ ಮಾಡಲು ಸನ್ ಟಿನಾ ಮಯಾಟೈನಾತರಂದು ತಿಳಿಸಲಾಯಿತು. ಮುಂದೆ ಕಾರಖಾನೆ ವಗೈರೆ ಮುರಿದಿದ್ದರಿಂದ ದಪ್ತರಿನ ಆದಾಯ ಕಡಿಮೆಯಾಯಿತು. ನಮ್ಮ ಲೇ.ಕೈ. ಅಣ್ಣಾಸಾಹೇಬರಿಗೆ ಲಕ್ಷ ರೂಪಾಯಿಯ ಸರಂಜಾಮನ್ನು ಸನ್ ಇಹಿದೆ ಅಶರ ಮಯಾತೈನಾತ್‌ರಲ್ಲಿ ನೀಡಲಾಯಿತು. ಅದರಲ್ಲಿ ಸಂಬಳಕ್ಕಾಗಿ ೨೦,೦೦೦ ರೂಪಾಯಿ ಮತ್ತು ಸೈನ್ಯಕ್ಕಾಗಿ, ನಗಾರಿ-ನೌಬತ್ತಿಗಾಗಿ ೮೦,೦೦೦ ಮತ್ತು ಕೈ.ಶೀ.ರಾಘೋಬಾದಾದಾ ಢಮಢೋರೆಯವರಿಗೆ ಸಂಬಳಕ್ಕಾಗಿ ೧೫,೦೦೦ ಮತ್ತು ಸೈನ್ಯಕ್ಕೆ ೪೦,೦೦೦ ಒಟ್ಟೂ ೫೫,೦೦೦ ನೀಡಿದರು. ಅದರ ಸಂಪೂರ್ಣ ವಹಿವಾಟನ್ನು ನಾವೇ ಮಾಡುತ್ತಿದ್ದೆವು. ಇನಾಮು ಗ್ರಾಮ ನೀಡಿದ ವರ್ಷವೇ ಸೈನ್ಯದ ಹಾಜರಿಯ ಕೆಲಸ ಕೈ.ಶೀ. ರಾಘೋಬಾದಾದಾ ಅವರ ಬಳಿಯಲ್ಲಿ ಮತ್ತು ನಮ್ಮ ಬಳಿಯಲ್ಲಿತ್ತು. ಸರಕಾರ ಹೇಳಿದಂತೆ ಮಾಡುತ್ತ ಬಂದೆವು. ಅನಂತರ ಸನ್ ಇಸನೇ ಅಶರ ಮಯಾತೈನಾತ ಕೈ.ಶೀ. ಅಣ್ಣಾಸಾಹೇಬರು ಮಹಾಯಾತ್ರೆಗೆ ಹೊರಟರು. ಆ ಕಾಲದಲ್ಲಿ ದಪ್ತರದ ಕೆಲಸ ಕಾರ್ಯವನ್ನು ನಮ್ಮ ಚಿಗಪ್ಪನ ಮಗನಾದ ಕೈ.ಶೀ.ರಾಘೋಬಾದಾದಾ ಮತ್ತು ನಾವು ಇಬ್ಬರೂ ಸೇರಿಯೇ ಮಾಡುತ್ತಲಿದ್ದೆವು. ಅಣ್ಣಾಸಾಹೇಬರು ಕಾಶಿಗೆ ಹೋದ ಕಾಲದಲ್ಲಿ ಮೆಹೆರಬಾನ ಎಲಿಫಿಸ್ಟನ್ ಸಾಹೇಬ ಬಹಾದೂರ ಪುಣೆಯಲ್ಲಿದ್ದು ರೆಸಿಡೆಂಟ್ ಕೆಲಸವನ್ನು ನೋಡಿಕೊಳ್ಳುತ್ತಿದ್ದರು. ಅವರು ಗಯೆಯ ಸಾಹೇಬರಿಗೆ ಹೇಳಿ ೧೦,೦೦೦ ಯಾತ್ರಿಕರ ವ್ಯವಸ್ಥೆ ಮಾಡಿಸಿದರು. ಹಾಗೂ ಸೈನಿಕರ ಪಹರೆ ಇಬ್ಬರು ಮತ್ತು ಚಪರಾಸಿಗೆ ಇಬ್ಬರು ಆಸಾಮಿಗಳನ್ನು ಕಳಿಸಿದರು. ಅನಂತರ ಶ್ರೀ ಕಾಶಿಗೆ ಹೋದರು. ಯಾತ್ರೆಯೂ ಸರಿಯಾಗಿ ನಡೆಯಿತು. ಅವರ ಸರಂಕ್ಷಣೆಗಾಗಿ ಕುದುರೆ ಸವಾರರೂ ಜೊತೆಗಿದ್ದರು. ಹಾದಿಯಲ್ಲಿ ದರೋಡೆ ನಡೆಯುವವದರಿಂದ ಹೊಸ ಸವಾರರನ್ನು-ಸಿಬ್ಬಂದಿಯನ್ನು ಜೊತೆಗೆ ಕಳಿಸಿದರು. ಯಾತ್ರೆ ಮುಗಿಸಿ ಸನ್ ಅಬಾನ್‌ಅಶರ ಮಯಾತೈನಾತ ಅವರ ವರ್ಷ ಪುಣೆಗೆ ಮರಳಿದರು. ಯಾತ್ರೆಗಾಗಿ ಐದುವರೆ ಲಕ್ಷ ಖರ್ಚು ಮಾಡಲಾಯಿತು. ಪುಣೆಗೆ ಮರಳಿದ ಬಳಿಕ ಯುದ್ಧದ ಅಂತಿಮ ಕಾಲದವರೆಗೂ

ದಪ್ತರಿಯ ಕೆಲಸ ಕಾರ್ಯ ಮಾಡುತ್ತಿದ್ದರು. ಮೂರು ವರ್ಗಗಳ ಸರಂಜಾಮವನ್ನು ಯುದ್ಧದ ಕೊನೆಯವರೆಗೂ ಮಾಡುತ್ತಿದ್ದರು. ಸನ್ ಸನೂನ ಅಶರ ಮಯಾಲೈನಾತರಲ್ಲಿ ಶ್ರೀಮಂತನ ಮತ್ತು ಕಂಪನಿ ಸರಕಾರದ ನಡುವೆ ಕಾಳಗ ನಡೆದು ಶ್ರೀಮಂತನು ಪುಣೆಯಿಂದ ಹೊರಟು ಹೋದನು. ಅವರು ಪ್ರದೇಶದಲ್ಲಿ ಸುತ್ತಾಡುವಾಗಲೂ ಸಹ ಸವಾರಿ ಸಿಬ್ಬಂದಿ ಎಂದು ಕೈ.ತೀ.ಅಣ್ಣಾಸಾಹೇಬ ಮತ್ತು ನಾವು ಇದ್ದೆವು. ಸೈನ್ಯ ಖಾನದೇಶ ತಲುಪುವಷ್ಟರಲ್ಲಿ ತಂದೆಯವರ ಆರೋಗ್ಯ ಹದಗೆಟ್ಟಿತು. ಕಂಪನಿ ಸರಕಾರದ ಸಹಾಯ ಸಿಗುವ ಆಶ್ವಾಸನೆಯು ಅಣ್ಣಾಸಾಹೇಬರಿಗೆ ಸಿಕ್ಕಿತು. ಅವರು ಪುಣೆಗೆ ಹೋದರು. ನಾವು ಸೈನ್ಯದ ಜೊತೆಗೆ ಬ್ರಹ್ಮಾವರ್ತಕ್ಕೆ ಹೋದೆವು. ಅಣ್ಣಾಸಾಹೇಬರು ಪುಣೆಗೆ ಬಂದ ಮೇಲೆ ಮೇ ಎಲಿಫಿಸ್ಟನ್ ಸಾಹೇಬರು ಎಲ್ಲ ಮಜಕೂರರನ್ನು ಕೇಳಿ ಎಲ್ಲ ಸರದಾರರ ವ್ಯವಸ್ಥೆಯನ್ನು ಮಾಡಿದರು. ......

ನಮ್ಮ ಮೂಲ ಪುರುಷನಾದ ಶಂಕರಾಜಿ ಪಂತರು ಹಿಂದೆ ವಿಜಾಪುರ ಪ್ರಾಂತಾಧಿಕಾರಿಯ ಕೈಕೆಳಗೆ ದಿವಾನಗಿರಿಯ ಕೆಲಸವನ್ನು (ಆಡಳಿತಗಾರ) ಮಾಡಿದರು. ಅವನಿಗೆ ಮೂವರು ಮಕ್ಕಳು, ಆಬಾಜಿ ಶಂಕರ, ಲಕ್ಷ್ಮಣ ಶಂಕರ ಮತ್ತು ನಾರೋಶಂಕರ. ಅವರಲ್ಲಿಯ ಕೈ.ತೀ.ನಾರೋ ಶಂಕರನು ನಮ್ಮ ಅಜ್ಜ. ಅವನು ಜೇಷ್ಠ ಮಲ್ಹಾರಜಿ ಬಾವಾ ಹೋಳ್ಕರ ಸುಬೇದಾರ ಅವರ ಹತ್ತಿರ ಮೊದಲಿಗೆ ಕಿಲೇದಾರ (ಕುದುರೆ ಸವಾರ) ಕೆಲಸ ಮಾಡುತ್ತಿದ್ದು, ಯುದ್ಧದ ಸಂದರ್ಭದಲ್ಲಿ ಖಡ್ಗವನ್ನು ಹಿಡಿದು ವೀರಾವೇಶದಿಂದ ಹೋರಾಡಿದನು. ಹೀಗಾಗಿ ಹೋಳ್ಕರನು ನಗಾರಿ, ನಿಶಾನೆ, ಕುದುರೆ, ೧೫೦೦ ದಿನಗೂಲಿ ಹೆಚ್ಚಿಸಿದನು. ಇಂದೂರ ಪ್ರಾಂತದ ಬಂದೋಬಸ್ತಿನ ಕೆಲಸವನ್ನು ಹೇಳಿದನು. ಮುಂದೆ ಪೇಶ್ವೆ ಸರಕಾರದ ಸೈನ್ಯ ಮತ್ತು ನಾಯಗಾಂವಕರರು ಹಿಂದುಸ್ಥಾನ ಪ್ರಾಂತದಲ್ಲಿಯ ಲೂಟಿಕೋರರ, ಪಾಳೇಗಾರರ ಬಂದೋಬಸ್ತಿನ ಕೆಲಸ ನೋಡಿಕೊಳ್ಳುತ್ತಿತ್ತು. ದತೀಯಾ, ವೊಂಡೆಸೆವಾಲೆ– ಮುಂತಾದ ಸಂಸ್ಥಾನಿಕರು ಪೇಶ್ವೆಯ ಸೈನ್ಯವನ್ನು ಸದೆ ಬಡಿದು ನಾಯಗಾಂವಕರ ಅವರನ್ನು ಹತ್ಯೆ ಮಾಡಿದರು. ಸೈನ್ಯವನ್ನು ಹೊಡೆದೊಡಿಸಿ, ಆ ಪ್ರಾಂತದ ಮೇಲಿನ ಆಡಳಿತವನ್ನು ಕಿತ್ತು ಹಾಕಿದರು. ಈ ವಾರ್ತೆಯು ಪೇಶ್ವೆ ಸರಕಾರದ ಕಿವಿಗೆ ಬಿದ್ದು. ಒಬ್ಬ ಶೂರನನ್ನು ನೇಮಿಸಬೇಕೆಂಬ ಯೋಜನೆ ಮಾಡಲಾಯಿತು. ಆಗ ಹೋಳ್ಕರ ಸುಭೇದಾರನು ನಾರೋ ಶಂಕರನ ಶೌರ್ಯವನ್ನು ಕೊಂಡಾಡಿ ಸರಕಾರದ ಆಜ್ಞೆಯಂತೆ ನಾರೋ ಶಂಕರನನ್ನು ಪುಣೆಗೆ ಕರೆಯಿಸಲಾಯಿತು. ಬಳಿಕ ಸರಕಾರದ ಭೇಟಿಯಾಗಿ ಪ್ರಸನ್ಗೊಂಡು ಹಿಂದೂಸ್ಥಾನದ ದಂಡಯಾತ್ರೆಯ ಕೆಲಸವನ್ನು ಒಪ್ಪಿಸಿ ಅಧಿಕಾರ ನೀಡಿದರು. ಯುದ್ಧಕ್ಕೆ ಬೇಕಾಗುವ ಸೈನ್ಯವನ್ನು ನೀಡಿ, ಅಲ್ಲಿಯ ಪ್ರದೇಶದಲ್ಲಿ ಪೇಶ್ವೆ ಸರಕಾರದ ಪ್ರಭಾವ ಬೀಳುವಂತೆ ಮಾಡಬೇಕೆಂದು ಆಜ್ಞೆ ಮಾಡಿ ಕಳಿಸಲಾಯಿತು. ದತೀಯಾ ಮೋಡಸೆ–ಮುಂತಾದ

ಸಂಸ್ಥಾನಿಕರ ಜಾಗವನ್ನು ಹಸ್ತಗತ ಮಾಡಿಕೊಂಡು, ಪಾಳೇಗಾರರನ್ನು ಪಾರುಪತ್ಯೆಗೊಳಿಸಿದನು. ವೊಡಸೆ ಸಂಸ್ಥಾನವನ್ನು ಮತ್ತು ಮವಾಸ ಮುಂತಾದ ಪ್ರದೇಶವನ್ನು ಗೆದ್ದು, ಝೂಂಸಿ ಎಂಬ ಚಿಕ್ಕ ಗ್ರಾಮದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಭದ್ರವಾದ ಕಟ್ಟಡ ನಿರ್ಮಿಸಿ ಮಾರುಕಟ್ಟೆ ಕಟ್ಟಿಸಿದನು. ಅಲ್ಲಿ ಪ್ರಾಂತದ ಠಾಣೆಯನ್ನು ಇರಿಸಲಾಯಿತು. ಝೂಂಸಿ ಪ್ರಾಂತದ ಅಡಿಯಲ್ಲಿರುವ ೩೦-೩೫ ದುರ್ಬಲ ಪ್ರದೇಶವನ್ನೆಲ್ಲ ಗೆದ್ದು, ಅಲ್ಲಿಂದ ದಿಲ್ಲಿಯವರೆಗಿನ ಪ್ರದೇಶದಲ್ಲೆಲ್ಲ ಪೇಶ್ವೆಯವರ ವರ್ಚಸ್ಸು ಹರಡುವಂತೆ ಮಾಡಿದನು. ಕೋಟ್ಯಾವಧಿ ರೂಪಾಯಿಯ ಲಾಭ ಸರಕಾರದ್ದಾಯಿತು. ನಂತರ ಪೇಶ್ವೆ ಸರಕಾರದ ಕೃಪೆ ಸಿಕ್ಕು, ದಿಲ್ಲಿಪದ ಬಾದಶಹಾನು ರಾಜೇ ಬಹಾದ್ದೂರ ಎಂಬ ಪದವಿಯನ್ನು ನೀಡಿದನು. ಅದೇ ಪದವಿಯನ್ನು ಶಾಶ್ವತಗೊಳಿಸಿ ಜರೀ ಪಟಕೆ ಮತ್ತು ಆನೆ ಅಂಬಾರಿ ಮತ್ತು ಸರದಾರ ಗೌರವವನ್ನು ನೀಡಿ ಸೈನ್ಯ ಮತ್ತು ಸಂಬಳವೆಂದು ಹದಿನೈದು ಲಕ್ಷದ ಜಿಲ್ಲೆಯನ್ನು, ಕೋಟೆಯನ್ನು ಮತ್ತು ಸ್ವದೇಶಿ ಜಿಲ್ಲೆಗಳಾದ ನಿಂಬಾಯಿತ, ಬೇಲಾಪುರ, ಅಮಳನೇಳ ಮುಂತಾದ ಪ್ರದೇಶ ಮತ್ತು ಕೋಟೆಗಳನ್ನು ಮತ್ತು ಗುಜರಾತ ಪ್ರಾಂತದ ಜಂಬೂಸರದಂತಹ ಠಾಣಗಳನ್ನು ನೀಡಿದರು. ಝೂಂಸಿ ಪ್ರಾಂತವನ್ನು ಸಹ ಶಾಶ್ವತವಾಗಿ ಉಳಿಸಿಕೊಂಡು ಸೈನ್ಯದ ಶಕ್ತಿಯನ್ನು ಹೆಚ್ಚಿಸಿದನು. ಅನಂತರ ಬಂಧು ಲಕ್ಷ್ಮಣ ಶಂಕರನನ್ನು ಝೂಂಸಿ ಪ್ರಾಂತದ ಉಸ್ತುವಾರಿಗಾಗಿ ನೇಮಿಸಿ ನಾರೋಶಂಕರ ಸೈನ್ಯದೊಂದಿಗೆ ಸ್ವದೇಶಕ್ಕೆ ಮರಳಿದನು. ಬಳಿಕ ಕೆಲದಿನಗಳ ಕಾಲ ಪೇಶ್ವೆ ಸರಕಾರದ ಆಜ್ಞೆಯ ಮೇರೆಗೆ ಛತ್ರಪತಿ ಸಾತಾರಕರರ ಬಳಿ ಪ್ರತಿನಿಧಿಯಾಗಿ ಕಾರ್ಯ ಮಾಡಿದನು. ಪುಣೆಯಿಂದ ಶಿಂದೆ ಅಲಿಜಾಬಹಾದರನನ್ನು ಸೈನ್ಯ ಸಹಿತ ಹಿಂದೂಸ್ಥಾನ ಪ್ರಾಂತಕ್ಕೆ ಕಳಿಸುವ ಸಲುವಾಗಿ ಸರಕಾರದ ಆಜ್ಞೆಯಂತೆ ಖರ್ಚಿನ ಯೋಗ್ಯ ವ್ಯವಸ್ಥೆಯನ್ನು ಮಾಡಿ, ಅವರ ಸಂಪತ್ತಿನ ಉಸ್ತುವಾರಿಯ ಜವಾಬ್ದಾರಿಯನ್ನು ವಹಿಸಿಕೊಂಡನು. ಪೇಶ್ವೆ ಸರಕಾರವು ಮೊಗಲರ ಮತ್ತು ಕರ್ನಾಟಕ ಪ್ರಾಂತಗಳ ಮೇಲೆ ದಂಡೆತ್ತಿ ಹೋದಾಗಲೆಲ್ಲ ಕಾಳಗ, ಸಂಘರ್ಷ, ಠಾಣೆ-ಪ್ರದೇಶ ಗೆಲ್ಲುವಾಗ ಸೈನ್ಯ ಸಹಿತ ಹೋರಾಡಿದನು. ಪಾಣಿಪತ ಕಾಳಗದ ಕಾಲಕ್ಕೆ ಸೈನ್ಯದ ಜೊತೆಗೆ ದಿಲ್ಲಿ ಗದ್ದುಗೆಯ ಬಂದೋಬಸ್ತಿನ ಕೆಲಸ ಮಾಡಿದನು. ಕಾಳಗದ ಸಮಯದಲ್ಲಿ ಆಹಾರ ಧಾನ್ಯವನ್ನು ಪೂರೈಸುವ ಸಾಹಸದ ಕೆಲಸವನ್ನು ಕೈಕೊಂಡನು. ಮುಂದೆ ನಮ್ಮ ಅಜ್ಜನಾದ ತ್ರ್ಯಂಬಕರಾವ ಸಾಹೇಬ ಮತ್ತು ಅಜ್ಜನ ಬಂಧು ರಘುಪತರಾವ ಇವರೂ ಸಹ ಸರಕಾರ ಚಾಕರಿ ಮತ್ತು ಖಡ್ಗ ಹಿಡಿಯುವ ಕಾರ್ಯವನ್ನು ಮಾಡಿದರು. ಅವರ ನಂತರ ನಮ್ಮ ತೀರ್ಥರೂಪರಾದ ಗೋಪಾಳರಾವ ಖಾಸಾಸಾಹೇಬರು ಅಲಿಜಾ ಬಹಾದರ ಪಾಟೀಲ ಬಾವಾ ಶಿಂದೆ ಇವರ ಜೊತೆಗೂಡಿ ಸೈನ್ಯ ಸಹಿತ ಹೋಗಿ ಜೈಪುರ, ಜೋಧಪುರ ಮುಂತಾದ ಅಲ್ಲಿಯ ಸಂಸ್ಥಾನಿಕರ ಜೊತೆಗಿನ ಕಾಳಗದ ಪ್ರಸಂಗದಲ್ಲಿ ಶೌರ್ಯವನ್ನು

ಮೆರೆದು, ಪಾಟೀಲಬಾವಾ ಅವರ ಕೃಪೆಯನ್ನು ಸಂಪಾದಿಸಿ ಸರಕಾರದ ಚಾಕರಿ ಮಾಡಿದರು. ಅನಂತರ ಪೇಶ್ವೆ ಸರಕಾರದಿಂದ ನಮ್ಮ ಅಜ್ಜನ ಬಂಧುವಾದ ರಘುಪತರಾವ ನಾರಾಯಣರಾಜೇ ಬಹಾದರ ಇವರಿಗೆ ಮೂರಾಂಶದಷ್ಟು ಸಂಪತ್ತು ಮತ್ತು ಜಿಲ್ಲೆಯ ಪಾಲು ಕೊಡಿಸಿ, ಮಾಲೆಗಾಂವ ಸಂಸ್ಥಾನದ ವಹಿವಾಟನ್ನು ಬೇರೆ ಸರಕಾರದ ಮೂಲಕ ಕೇಸೂ ಕೃಷ್ಣಾ ರಾತಾರ ಅವರ ಮಂತ್ರಿಯ ಮೂಲಕ ನಡೆಸುತ್ತಿದ್ದರು. ಪಾಟೀಲ ಬಾವಾ ಶಿಂದೆಯವರು ಪುಣೆಗೆ ಬಂದಾಗ ಆ ಪಾಲನ್ನು ಮಾಲೆಗಾಂವ ಸಹಿತ ಸರಕಾರದ ಕೃಪೆಯಿಂದ ನಮ್ಮ ತೀರ್ಥರೂಪ ಗೋಪಾಳರಾವ ಬಾವಾಸಾಹೇಬ ರಾಜೇಬಹಾದೂರ ಇವರಿಗೆ ಸ್ವತಂತ್ರ ಮಾಡಿಕೊಟ್ಟರು. ಸಾಮಾನ್ಯದಿಂದ ಹಿಡಿದು ಸರದಾರರವರೆಗಿನ ಸೈನ್ಯದಲ್ಲಾಗಲಿ, ಜಿಲ್ಲೆಯ ಪ್ರದೇಶದಲ್ಲಾಗಲಿ ಪೇಶ್ವೆ ಸರಕಾರವು ಎಂದೂ ಹಸ್ತಕ್ಷೇಪ ಮಾಡಲಿಲ್ಲ. ಪೇಶ್ವೆ ಸರಕಾರಕ್ಕೆ ಮತ್ತು ಸರಕಾರದ ಎಲ್ಲ ಬಗೆಯ ಕೆಲಸ ಕಾರ್ಯಗಳಲ್ಲಿ ನಮ್ಮವರು ಶೌರ್ಯವನ್ನು ಮೆರೆದಿದ್ದಾರೆ. ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಅದೇ ರೀತಿಯ ಸಂಪತ್ತಿನ ಉದ್ದೇಶದಿಂದ ಇಸವಿಯ ಕೊನೆಯ ಪೇಶ್ವೆ ಆಡಳಿತವರೆಗೂ ಸರಕಾರವೇ ಮಹತ್ವ ನೀಡಿತು. ಕೋಟ್ಯಾವಧಿ ರೂಪಾಯಿಯ ಆಮದು ಮತ್ತು ಲಕ್ಷಾಂತರ ರೂಪಾಯಿಗಳ ಪ್ರದೇಶವನ್ನು ಸರಕಾರಕ್ಕೆ ಗೆಲ್ಲಿಸಿಕೊಟ್ಟು ಲಾಭವಾಗುವಂತೆ ಸಹಕರಿಸಿದರು. ಶೌರ್ಯದಿಂದ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದಿಸಿ ನಾಶಿಕ–ಮಾಲೇಗಾವ ಮುಂತಾದ ಕಡೆಗಳಲ್ಲಿ ಕಟ್ಟಡ ಕಟ್ಟಲು ಖರ್ಚು ಮಾಡಿತು. ಕಂಪನಿ ಸರಕಾರದ ಕಾಲಕ್ಕೆ ನಮ್ಮ ತಂದೆಯವರಾದ ಕೈ.ತೀ. ಗೋಪಾಳರಾವ ಬಾವಾಸಾಹೇಬ ರಾಜೇಬಹಾದೂರ ಇವರು ಮಾಲೇಗಾಂವ ಕಾಳಗ ಮಾಡಬೇಕಾಗಿ ಬಂದಿದ್ದರಿಂದ ಹಿಂದಿನ ಪರಂಪರೆಯ ಶಕಸಂವತ್ಸರಗಳ ದಾಖಲೆ ಕಾಗದ ಪತ್ರಗಳೆಲ್ಲ ಹಾಳಾದವು. ಪೇಶ್ವೆ ಸರಕಾರದ ದಪ್ತರಿನಲ್ಲಿರುವ ದಾಖಲೆಗಳ ಮೇಲಿಂದ ಇದು ಸರಕಾರದ ಗಮನಕ್ಕೆ ಬರಬಹುದು. ಎಲ್ಲೆಡೆ ಸರದಾರರ ಜೊತೆಗೆ ನಮಗೆ ಜಿಲ್ಲೆ, ಸೈನ್ಯವನ್ನು ನೀಡಿ ಆಡಳಿತ ನಡೆಸುತ್ತಿದ್ದಾರೆ. ಅದರಲ್ಲೇ ನಮ್ಮ ಜೀವನ ಸಾಗುತ್ತಿದೆ. ಇವಕ್ಕಿಂತಲೂ ಹೆಚ್ಚಿನ ಸತ್ತೆಯನ್ನು ನೀಡುವದು ಮತ್ತು ನಮ್ಮ ಮನೆತನದ ಪಾರಂಪಾರಿಕ ಗೌರವಕ್ಕೆ ತಕ್ಕಂತೆ ನಡೆಸಿಕೊಳ್ಳುವದು ಸರಕಾರದ ಕೈಯಲ್ಲಿದೆ. ಮಿತಿ ಫಾಲ್ಗುಣ ಶುದ್ಧ ೩ ಶಕೆ ೧೭೫೪, ಸನ್ ೧೨೪೨. ಕ್ರಿ.ಶ. ೧೮೩೨

ರಾಮದುರ್ಗಕರ

ನಾರಾಯಣರಾವ ರಾಮ ರಾಮದುರ್ಗಕರ ಮರಣ ಹೊಂದಿದ್ದಾರೆ. ಹೀಗಾಗಿ ಅವರ ಜಹಾಗೀರು ಬಾದಶಹಾರ ಪರವಾಗಿ ಅಥವಾ ಸಾತಾರಾ ಮಹಾರಾಜರ ಪರವಾಗಿ ಅಥವಾ ಹೊಸ ಪೇಶ್ವೆ ಸರಕಾರದ ಪರವಾಗಿ ಮತ್ತು ಮೂಲ ಪುರುಷರ ಮರಣೋತ್ತರ ವಿಷಯಕ್ಕೆ ವಾರಸುದಾರರು ಯಾರೆಂದು ವಿಚಾರಣೆ ಮಾಡಿ ಬರೆಯಬೇಕೆಂದು ಆಜ್ಞೆಯಂತೆ ದಪ್ತರಿನ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಮತ್ತು ಮಾಹಿತಿಯದ್ವರರ ಹೇಳಿಕೆಯ ಪ್ರಕಾರ ವಂಶದ ಮೂಲ ಪುರುಷ ದಾದಾಜಿರಾವ.

ರಾಮರಾವ ದಾದಾಜಿ (ರಾಮದುರ್ಗಕರ)	ಬಳವಂತರಾವ ದಾದಾಜಿ (ನರಗುಂದಕರ)
ಮಗ ಯೋಗಿರಾವ ರಾಮ	ಪುತ್ರ ದಾದಾಜಿರಾವ ಬಲ್ಲಾಳ
ಮಗ ಗೋವಿಂದರಾವ	ಪುತ್ರ ಭಾಸ್ಕರರಾವ ದಾದಾಜಿ
ರಾಮರಾವ ಗೋವಿಂದ ದತ್ತಕಪುತ್ರ	ಪುತ್ರ ವೆಂಕಟರಾವ ಭಾಸ್ಕರ ದತ್ತಕ
ಮಗ ನಾರಾಯಣರಾಮ ಸದ್ಯಕ್ಕೆ ಸತ್ತಿದ್ದಾರೆ.	ಪುತ್ರ ದಾದಾಜಿರಾವ ವೆಂಕಟೇಶ ಸದ್ಯ
ಅವರ ಪತ್ನಿ ರಾಧಾಬಾಯಿ ಮತ್ತು ಇಬ್ಬರು ಪುತ್ರಿಯರಿದ್ದಾರೆ.	ಇದ್ದಾರೆ. ಅವರಿಗೆ ಇಬ್ಬರು ಪುತ್ರರು.

ಅವರ ಕೈಫಿಯತ್

೧) ಮಾಹಿತಿದಾರರು ಹೇಳಿದಂತೆ, ಮೂಲ ರಾಮರಾವ ದಾದಾಜಿಯವರು ಅಪ್ಪಾಜಿ ಸೂರ್ಯರಾವ ಕಿರವಂತ ಅರ್ಚಕರ ಎಂಬ ಕರವೀರದಲ್ಲಿದ್ದ ರಾಜೇಯವರ ಚಾಕರರಾಗಿದ್ದ ಅವರ ಶಿಷ್ಯರಾಗಿದ್ದರು. ಒಂದು ದಿನ ಅವರು ಚಾಕರಿ ಮಾಡಲು ತಪ್ಪಿದ್ದರಿಂದ ಅಪ್ಪಾಜಿಗೆ ಸಿಟ್ಟುಬಂತು, ಹೀಗಾಗಿ ರೋಸಿ ಹೊರಗೆ ಹೋಗಿ ಮಲಗಿದ್ದರು. ಆಗ ಮಲಗಿದ ಅವರ ತಲೆಯ

ಹತ್ತಿರ ನಾಗಸರ್ಪ ಹೆಡೆಯೆತ್ತಿ ನಿಂತಿರುವದು ಅಪ್ಪಾಜಿಯ ಕಣ್ಣಿಗೆ ಬಿತ್ತು. ಇವನು ಪುಣ್ಯವಂತನೆಂದು ಭಾವಿಸಿ, ಅವನಿಗೆ ಶಿಷ್ಯತನ ನೀಡುವ ನಿರ್ಧಾರ ಮಾಡಿ, ತಮ್ಮ ಮಗನೆಂದೇ ಭಾವಿಸಿ ಸಂಪತ್ತಿನ ಉಸ್ತುವಾರಿಯನ್ನು ನೀಡಿದರು. ಅನಂತರ ರಾಮದುರ್ಗಕರ ಅವರು ಶೌರ್ಯವನ್ನು ಮೆರೆದು ನರಗುಂದ ಸಂಸ್ಥಾನವನ್ನು ಗೆದ್ದರು. ಆಗ ಕರವೀರ ಮಹಾರಾಜರು ಪ್ರಸನ್‌ರಾಗಿ ಸಚಿವ ಪದವನ್ನು ನೀಡಿದರು. ಅದರಂತೆ ವಹಿವಾಟು ಮಾಡಿಕೊಂಡಿದ್ದರು. ಮುಂದೆ ಅಪ್ಪಾಜಿರಾವ ಅವರ ಅಂತ್ಯಕಾಲ ಸಮೀಪಿಸಿತು. ಮಕ್ಕಳಂತೂ ಇಲ್ಲ. ಹೀಗಾಗಿ ಕ್ರಿಯಾಕರ್ಮ ಮಾಡಲೆಂದು ಬಳವಂತರಾವನಿಗೆ ದತ್ತಕ ಕೊಡಿಸಿದರು. ಅವನ ಖರ್ಚಿಗಾಗಿ ಕೆಲವು ಜಿಲ್ಲೆಯನ್ನು ನೀಡಲಾಯಿತು. ಅವರ ವಂಶಸ್ಥರಾದ ಹೆಬಳಿಕರರು ಇದ್ದಾರೆ. ರಾಮರಾವ ದಾದಾಜಿಯವರು ಸಂಪೂರ್ಣ ನರಗುಂದ ಸಂಸ್ಥಾನ ಅನುಭವಿಸುತ್ತಲಿದ್ದರು. ಮುಂದೆ ಕಾಶಿಗೆ ಹೋದರು. ಮರಣ ಹೊಂದಿದರು. ಬಳಿಕ ಸಂಸ್ಥಾನದ ಆಡಳಿತವನ್ನು ಪುತ್ರ ಯೋಗಿರಾವ ಮತ್ತು ತಮ್ಮನ ಮಗನಾದ ದಾದಾಜಿರಾವ ಬಲ್ಲಾಳ ನಡೆಸುತ್ತಿದ್ದರು.

೧) ದಪ್ತರಿನ ದಾಖಲೆ–ಹೀಗಿದೆ –

೧) ಸನ್ ಇಸನ್ನೆ ಆರ್ಬೈನ್ ಮುತಾಬಕ–೧೧೫೧ ಫಸಲಿ, ೧೭೪೧ ಇಸವಿಯಲ್ಲಿ ದಾದಾಜಿರಾವ ಮತ್ತು ಯೋಗಿರಾವ ಇವರಿಗೆ ಗೌರವ ವಸ್ತ್ರನೀಡಿದ ಖರ್ಚು ಅರಮನೆಯ ಹೆಸರಿನಲ್ಲಿ ತೋರಿಸಲಾಗಿದೆ. ಕಾಲ ಬಾಳಾಜಿ ಬಾಜೀರಾವ ನಾನಾಸಾಹೇಬ ಪೇಶ್ವೆ

೨) ಸನ್ ಅಬಾರ ಅಬ್ಯೆನನ್ ಮುತಾಬಕ ೧೧೫೩ ಫಸಲಿ. ೧೭೪೩ ಇಸವಿಯಲ್ಲಿ ಯೋಗಿರಾವ ರಾಮ ನರಗುಂದಕರ ಇವರ ಹೆಸರಿನಲ್ಲಿ ತರ್ಜ ವಾಗ ಲೆಕ್ಕಕ್ಕೆ ವಸ್ತ್ರ ಎಂದು ಅರಮನೆ ಹೆಸರಿನಲ್ಲಿ ಖರ್ಚು ಬಿದ್ದಿದೆ. ಕಾಲ ಸದರಿ.

೩) ಸನ್ ಇಹಿದೆ ಖಮಸ್ಯೆನ್ ಮುತಾಬಕ ೧೧೬೦ ಪಸಲಿ. ಸನ್ ೧೭೫೦ ಇಸವಿಯಲ್ಲಿ ಅಪ್ಪಾಜಿರಾವ ಅವರ ಮಗ ಬಳವಂತರಾವ ಅಪ್ಪಾಜಿ ನರಗುಂದಕರ ಇವರ ಬಳಿಯ ಗುಮಾಸ್ತನಿಗೆ ವಸ್ತ್ರ ನೀಡಲಾಗಿದೆ ಎಂದು ಅರಮನೆ, ಹೆಸರಿನಲ್ಲಿ ಖರ್ಚು ತೋರಿಸಲಾಗಿದೆ. ಕಾಲ ಸದರಿ.

೪) ಇಸನ್ನೆ ಖಮಸ್ಯೆನ ಮುತಾಬಕ ೧೧೬೧ ಫಸಲಿ. ೧೭೫೧ ಇಸವಿಯಲ್ಲಿ ಬಳವಂತರಾವ ಅಪ್ಪಾಜಿ ನರಗುಂದಕರ ಇವರ ಗುಪ್ತಚಾರ ಪತ್ರ ತೆಗೆದುಕೊಂಡು ಬಂದ ಅವನಿಗೆ ಕಾಣಿಕೆ ನೀಡಿದ ಖರ್ಚು ಬರೆಯಲಾಗಿದೆ. ಕಾಲ ಸದರಿ.

೫) ಸನ್ ತಿಸ್ಸಾ ಖಮಸೈನ ಮುತಾಬಕ ಸನ್ ೧೧೬೮ ಫಸಲಿ. ಸನ್ ೧೭೫೮ ಇಸವಿ ಕಾಲ ಸದರಿ.

೬) ಬಳವಂತರಾವ ಅಪ್ಪಾಜಿ ನರಗುಂದಕರ ಅವರನ್ನು ಸಂಬಳ ಸಹಿತ ನೇಮಿಸಿಕೊಳ್ಳಲಾಗಿದೆ. ಅದರ ಬೇರಿಜಿ ೨,೦೬,೮೫೨/-ಸದರಿ ಪ್ರದೇಶವನ್ನು ಉಪಭೋಗಿಸುತ್ತ ೫೦೦ ಕುದುರೆದಳದ ನಾರಾಯಣರಾವ ವೆಂಕಟೇಶರ ಸಹಾಯದಿಂದ ಕೈಕೊಳ್ಳಬೇಕೆಂದು ಕರಾರು ಮಾಡಲಾಗಿದೆ.

೭) ಯೋಗಿರಾಜ ರಾಮು ನರಗುಂದ ಅವರನ್ನು ಸಂಬಳ ಸಹಿತ ನೇಮಿಸಲಾಗಿದೆ. ಮೇಲೆ ಹೇಳಿದ ಜಿಲ್ಲೆಯನ್ನು ಬಳವಂತರಾವ ಅಪ್ಪಾಜಿಯವರು ಕರಾರು ಮಾಡಿ ನೀಡಿದರು. ಅದರ ಒಟ್ಟು ಮೊತ್ತ ೨೮೪೯೯ – ೧೧೧.ಇದರಲ್ಲಿ ೫೦ ಕುದುರೆ ಸವಾರರೊಂದಿಗೆ ನಾರಾಯಣ ವೆಂಕಟೇಶ ಅವರ ಸಹಾಯದಿಂದ ಚಾಕರಿ ಮಾಡಬೇಕೆಂದು ನಿರ್ಧರಿಸಲಾಗಿದೆ.

೮) ಭಾಸ್ಕರರಾವ ದಾದಾಜಿಯವರನ್ನು ಸಂಬಳ ಸಹಿತ ನೇಮಿಸಲಾಗಿದೆ. ಮೇಲೆ ಹೇಳಿದ ಜಿಲ್ಲೆಗಳನ್ನು ಬಳವಂತರಾವ ಅಪ್ಪಾಜಿಗೆ ಖಾಸಗಿ ಖರ್ಚಿಗಾಗಿ ಕರಾರು ಮಾಡಿ ನೀಡಿದ ರೂಪಾಯಿ ೧೨,೦೦೦.

೧) ಸನ್ ಇಸನ್ನೆ ಸಿತ್ತೈನ ಸನ್ ೧೧೭೧ ಫಸಲಿ ೧೭೬೧ ಇಸವಿ, ಮಾಧವರಾವ ಬಲ್ಲಾಳ ಪೇಶ್ವೆಯ ಕಾಲ. ಆ ವರ್ಷ ಸಂಬಳ ಸಹಿತ ಯೋಗಿರಾವ ರಾಮ ಮತ್ತು ಭಾಸ್ಕರರಾವ ದಾದಾಜಿ ಅವರನ್ನು ನೇಮಿಸಿಕೊಳ್ಳಲಾಗಿದೆ. ಅದರಲ್ಲಿಯ ಮಜಕೂರು ಹೀಗಿದೆ. ಪೂರ್ವದಿಂದಲೂ ಸಂಪೂರ್ಣ ಸಂಸ್ಥಾನವು ರಾಮರಾವ ದಾದಾಜಿಯ ಬಳಿಯಲ್ಲಿತ್ತು. ಅವರ ಸಾವಿನ ನಂತರ ಅವರ ಮಗ ಯೋಗಿರಾವ ರಾಮ ಮತ್ತು ತಮ್ಮನ ಮಗನಾದ ದಾದಾಜಿರಾವ ಬಲ್ಲಾಳ ಇವರ ಮೇಲೆ ಸಂಪೂರ್ಣ ಭಾರವಿತ್ತು. ಅವರೇ ಆಡಳಿತ ನಡೆಸುತ್ತಿದ್ದರು. ಕೆಲ ದಿನಗಳ ಬಳಿಕ ದಾದಾಜಿರಾವ ಅವರನ್ನು ನರಗುಂದದಲ್ಲಿ ಕೊಲ್ಲಲಾಯಿತು. ಅಲ್ಲಿಂದ ಮುಂದೆ ಒಂದು ವರ್ಷ ಸಂಸ್ಥಾನದ ಆಡಳಿತವನ್ನು ಯೋಗಿರಾವನೇ ನೋಡಿಕೊಳ್ಳುತ್ತಿದ್ದನು. ಆಗ ಬಳವಂತರಾವ ಹೇಳಿದಂತೆ ವರ್ತಿಸುತ್ತಿದ್ದರು. ಅದಾದ ಕೆಲ ದಿನಗಳ ಬಳಿಕ ಕೈ. ಸಂಬಾಜಿ ಮಹಾರಾಜರು ತೋರಗಲ್ಲಿಗೆ ಬಂದಿದ್ದರು. ಅಲ್ಲಿ ಯೋಗಿರಾವ ಅವರ ಭೇಟಿಗೆ ಹೋದಾಗ, ಅದೇ ಅವಕಾಶವನ್ನು ಬಳಸಿ ಬಳವಂತರಾವನು ಕಿಲ್ಲೆದಾರನೊಂದಿಗೆ ಫಿತೂರಿ ಮಾಡಿ ತಾನೇ ಆಡಳಿತವನ್ನು ಕೈಗೆತ್ತಿಕೊಂಡರು. ಆಗ ಯೋಗಿರಾಜನು ರಾಮದುರ್ಗಕ್ಕೆ ಹೊರಟು ಬಂದನು. ಆಗ ಅವರಿಗೆ ನೀಡಿದ ಜಿಲ್ಲೆ ಪ್ರದೇಶದಿಂದ ಖರ್ಚು ನಿಭಾಯಿಸುತ್ತಿದ್ದರು. ಭಾಸ್ಕರರಾವ ದಾದಾಜಿ

ಅಲ್ಲಿಂದ ಹೊರಬಿದ್ದು ಸರಕಾರದ ಸೇವೆಯಲ್ಲಿದ್ದರು. ಮುಂದೆ ಕೆಲ ದಿನಗಳ ಬಳಿಕ ಯೋಗಿರಾವ ಪೇಚಿಗೆ ಸಿಲುಕಿ ಅಲ್ಲಿಂದ ಹೊರ ಬೀಳಬೇಕಾಯಿತು. ಸಾಲಗುದಸ್ತ ಸನ್ ಇಹಿದೇತ ೧೧೭೦ ಫಸಲಿ, ೧೭೦೦ ಇಸವಿಯಲ್ಲಿ ನೀವು ಉಭಯತರು ನಾನಾಸಾಹೇಬನ ಆಜ್ಞೆಯಂತೆ ನರಗುಂದ ಮತ್ತು ರಾಮದುರ್ಗ ಕೋಟೆಯನ್ನು ಸ್ವಾಧೀನ ಪಡಿಸಿಕೊಳ್ಳಬೇಕು. ಹುಜೂರರ ವಿನಂತಿಯ ಮೇರೆಗೆ ಕೋಟೆ ನಮ್ಮ ವಶಕ್ಕೆ ಬಂದಿದೆ. ಬಳವಂತರಾವ ಹತ್ತಿರವಿರುವ ತಾಲೂಕನ್ನು ಕಸಿದುಕೊಂಡು ನಮ್ಮದನ್ನು ನಮಗೆ ನೀಡಿ, ಸೇವೆ ಮಾಡಿಸಿಕೊಳ್ಳಬೇಕೆಂದು ತಿಳಿಸಲಾಯಿತು. ಆ ರೀತಿ ಪರಂಪರೆಯ ಸಂಬಂಧವನ್ನು ಪರಿಶೀಲಿಸಿ, ಸಂಸ್ಥಾನದ ಅಧಿಕಾರಿ ಸೇವೆ ಎಂದು ಅರಿತುಕೊಂಡು ಈ ವರೆಗೆ ಕೃಪೆ ತೋರಿಸಿ, ಬಳವಂತರಾವನನ್ನು ದೂರ ಸರಿಸಿ, ಸಂಪೂರ್ಣ ಕೋಟೆ ನಿಮಗೇ ಸೇರಿದ್ದೆಂದು ತಿಳಿಸಿದರು. ಉಭಯತರಲ್ಲಿ ಮೊದಲಿನಂತೆ ಜಿಲ್ಲೆ ಉಳಿದು ಬಂದಿದೆ. ಅದನ್ನು ಸಹ ಕರಾರು ಮಾಡಿದರು. ಬರಹುಕುಮ ಬೆಹಡಾ, ಸನ್ ತಿಸ್ಸ ಖಮಸ್ಸೈನ.

೨೦೬೮೩೨/- ಸಂಬಳ ಸಹಿತ ನೌಕರ ಚಾಕರರು ಬಳವಂತರಾವ ಅಪ್ಪಾಜಿ ಇವರ ಕಡೆಯಿಂದ.

೨೮೪೧೯/-।।। ಸಂಬಳ ಸಹಿತ ನೌಕರ ಚಾಕರರು ಯೋಗಿರಾವ ರಾಮ ಇವರ ಕಡೆಯ ಜಿಲ್ಲಾಪ್ರದೇಶ.

೧೨೦೦೦/- ಸಂಬಳ ಸಹಿತ ನೌಕರ ಚಾಕರರು ಭಾಸ್ಕರರಾವ ದಾದಾಜಿ ಅವರ ಬಳಿಯ ಜಿಲ್ಲಾಪ್ರದೇಶ.
೨೪೭೨೫೧ ।।।೦।।।

ಸದರಿ ತಾಲೂಕು ಉಪಭೋಗಿಸಲು ಮೊದಲಿನಿಂದಲೂ ಮಾಡಿದ ಕರಾರು.

೩೦೦ ಕುದುರೆ ಸವಾರರು ಬಳವಂತ ಅಪ್ಪಾಜಿಯವರಿಂದ ನೇಮಿಸಿದ್ದು.

೫೦ " ಯೋಗಿರಾವ ರಾಮನಿಂದ ನೇಮಿಸಿದ್ದು.
೩೫೦

ಬೇರೆ ಕಾರಣಕ್ಕಾಗಿ ಎರಡು ಮೂರು ವರ್ಷ ೫೦ ಕಡಿಮೆ ಮಾಡಿ ೩೦೦ ಸವಾರರ ಚಾಕರಿ. ಮುಂದೆ ನೇಮಕಾತಿಯಂತೆ ೩೫೦ ಸವಾರರ ಚಾಕರಿ ಮಾಡಬೇಕು. ಬಳವಂತರಾವನಿಗೆ ೧೨೦೦೦ ರೂಪಾಯಿಯ ಸಂಬಳ ಸಹಿತ ನೌಕರ ಚಾಕರರು

ಅದರಂತೆ ತಲುಪಿಸುವದು. ಈ ರೀತಿ ನೌಕರ ಚಾಕರರ ವ್ಯವಸ್ಥೆ ಮಾಡಿ ಸರಕಾರದ ಕಾಣಿಕೆ ರೂ. ೧೦೦೦೦೦ ನೀಡುವ ನಿರ್ಧಾರ ಮಾಡಲಾಗಿದೆ.

೧) ಸನ್ ಅಬಾಕ ಸಬೈನ್ ಮುತಾಬಕ ೧೧೮೩, ಫಸಲಿ, ೧೭೭೩ ಇಸವಿ ನಾರಾಯಣರಾವ ಬಲ್ಲಾಳನ ಕಾಲ. ಭಾಸ್ಕರರಾವ ದಾದಾಜಿಯ ಸಾವಿನ ಬಳಿಕ ಯೋಗಿರಾವ ರಾಮ ಮತ್ತು ವೆಂಕಟರಾವ ಭಾಸ್ಕರ-ಇವರ ಹೆಸರಿಗೆ ಸಂಸ್ಥಾನವನ್ನು ಮೊದಲಿನಂತೆ ನೀಡಿ ಸನದು ನೀಡಲಾಯಿತು. ಇದಕ್ಕೆ ನಗದು ಕಾಣಿಕೆ ಸರಕಾರಕ್ಕೆ ನೀಡಬೇಕಾಗಿರುವದು ೪೫೦೦೦೦ ರೂಪಾಯಿ.

೨) ಮುಂದೆ ಕೆಲದಿನಗಳ ಬಳಿಕ ಯೋಗಿರಾವರಾಮ ಸಾವನ್ನಪ್ಪಿದ. ಆಗ ವೆಂಕಟರಾವ ಭಾಸ್ಕರ ಸಂಸ್ಥಾನದ ವಹಿವಾಟು ಮಾಡುತ್ತಿದ್ದ. ಬಳಿಕ ಸಂಸ್ಥಾನವನ್ನು ಟೀಪೂ ಸುಲ್ತಾನನು ಹಸ್ತಗತ ಮಾಡಿಕೊಂಡ. ಅದನ್ನು ಸನ್ ಸಬ್ಬಾ ಸಮಾನೀನ ಮುತಾಬಕ ೧೧೯೬ ಫಸಲಿ. ೧೭೮೬ ಇಸವಿಯಲ್ಲಿ ಪೇಶ್ವೆ ಮರಳಿ ಪಡೆದರು. ಅಂದಿನಿಂದ ಸನ್ ೧೨೦೦ ಫಸಲಿ, ೧೭೯೦ ಇಸವಿಯವರೆಗೆ ಸರಕಾರದ ವಹಿವಾಟುಯಿತ್ತು. ಕಾಲ ಮಾಧವರಾವ ನಾರಾಯಣರಾವ ಪೇಶ್ವೆ.

೩) ಸನ್ ಇಸನ್ನೆ ತಿಸೈನ ಮುತಾಬಕ ೧೨೦೧ ಫಸಲಿ ೧೭೯೧ ಇಸವಿ, ಸದರಿ ಕಾಲ. ಸಂಪೂರ್ಣ ಸಂಸ್ಥಾನವನ್ನು ರಾಮರಾವ ಗೋವಿಂದ, ವೆಂಕಟರಾವ ಭಾಸ್ಕರ ಇವರ ಹೆಸರಿನಲ್ಲಿ ಕರಾರು ಮಾಡಿ ಸನದು ಬರೆಯಲಾಗಿದೆ. ಅದರಲ್ಲಿರುವ ಮಜಕೂರು ಏನೆಂದರೆ-ಹಿಂದೆ ಹರಿಬಲ್ಲಾಳ ಅವರ ವಿದ್ಯಮಾನದಿಂದ ಸರಕಾರ ಮತ್ತು ಟೀಪೂ ನಡುವೆ ಸಂಧಾನವಾಯಿತು. ಆ ನರಗುಂದ, ರಾಮದುರ್ಗ ಕೋಟೆ, ಕೋಟೆಯ ಕೆಳಗಿನ ಪ್ರದೇಶ ಸರಕಾರದಲ್ಲಿ ಸೇರಿತು. ಅದನ್ನು ಮೊದಲಿನಂತೆ ಕರಾರು ಮಾಡಿ ನಿಮಗೆ ನೀಡಲಾಗಿದೆ. ಆದರೂ ನಿಷ್ಠೆಯಿಂದ ಸರಕಾರದ ಸೇವೆ ಮಾಡಬೇಕು. ಇತ್ತೀಚೆಗೆ ಪರಶರಾಮ ರಾಮಚಂದ್ರನು ಸದರಿ ತಾಲೂಕ ಬಿಟ್ಟು ಬೇರೆ ಪ್ರದೇಶ ಬಿಡುಗಡೆ ಮಾಡಿರುವಾಗ ನಿಮಗೆ ಸಂಬಂಧವಿಲ್ಲ. ಈ ರೀತಿ ಸನದು ನೀಡಿ ಸರಕಾರ ಪಡೆಯಲಿರುವ ಕಾಣಿಕೆ ೨೫೦೦೦೦. ಮುಂದೆ ಸದರಿಯಂತೆ ಸನ್‌ತಿಸ್ಸಾ ಮಯಾತೈನ ಸನ್ ೧೨೧೮ ಮತಾಬಕ ೧೮೦೮ವರೆಗೆ ಈ ವಹಿವಾಟು ಮುಂದುವರೆಯಿತು.

೪) ಸನ್ ಅಶರ ಮಯಾತೈನ ಮುತಾಬಕ್ ೧೨೧೯ಫಸಲಿ, ಸನ್ ೧೮೦೯ ಇಸವಿ ಬಾಜೀರಾವ ರಘುನಾಥ ಪೇಶ್ವೆಗೆ ನಾರಾಯಣರಾವ ರಾಮನು ಮಾಡಿಕೊಂಡು ವಿನಂತಿ ಏನೆಂದರೆ. ಸಂಸ್ಥಾನದ ಸಂಪೂರ್ಣ ವಹಿವಾಟು ನಮಗೆ ಅರ್ಧ

ಮತ್ತು ವೆಂಕಟರಾವ ಭಾಸ್ಕರ ಅವರಿಗೆ ಅರ್ಧವಿರಬೇಕು. ಹಾಗಾಗದೆ ರಾಮದುರ್ಗ ಕೋಟೆ ಮತ್ತು ಕೆಲವು ಗ್ರಾಮ ಮಾತ್ತ ನಮ್ಮ ಹತ್ತಿರವಿದೆ. ಉಳಿದ ಸಂಪೂರ್ಣ ಸಂಸ್ಥಾನದ ವಹಿವಾಟು ವೆಂಕಟರಾವ ಭಾಸ್ಕರ ನಡೆಸುತ್ತಾರೆ. ಅಂಥದರಲ್ಲಿ ರಾಮರಾವ ಗೋವಿಂದ ಸಾವು ಅಪ್ಪಿದರು. ಹೀಗಾಗಿ ಅರ್ಧ ಸಂಸ್ಥಾನ ನಮಗೆ ಸಿಗಬೇಕೆಂದು ಕರಾರು ಮಾಡಬೇಕು. ಅದಕ್ಕೆ ಸಂಬಂಧಿಸಿದಂತೆ ಮೊದಲಿನಿಂದಲೂ ಉಭಯತರ ಹೆಸರಿನಲ್ಲಿ ಕರಾರು ಮಾಡಲಾಗಿದೆ. ರಾಮರಾವ ಗೋವಿಂದನ ಸಾವಿನ ಬಳಿಕ ಅವರ ಮಗ ನಾರಾಯಣರಾವ ರಾಮ ಅವರಿಗೆ ಅರ್ಧ ಸಂಸ್ಥಾನ ನಡೆಸುವಂತೆ ಕರಾರು ಮಾಡಿ ರಾಮದುರ್ಗ ಕೋಟೆ ಮುಂತಾದ ತಾಲೂಕ ಮೇಲೆ ಹೇಳದಂತೆ ಅವರ ವಹಿವಾಟಿಗೆ ನೀಡಲಾಗಿದೆ. ಅದನ್ನು ಅವರಿಗೆ ಅರ್ಧ ಪಾಲು ನೀಡಿ, ಉಳಿದರ್ಧ ಪಾಲು ಸೇರ್ಪಡೆ ಮಾಡಬೇಕೆಂದು ಸನದು ಬರೆದು ಕಾಣಿಕೆ ನೀಡಬೇಕೆಂದು ನಿರ್ಧರಿಸಲಾಯಿತು. ಸಂಸ್ಥಾನದ ಖರ್ಚಿಗಾಗಿ ಒಂದು ಲಕ್ಷ ನೀಡಬೇಕೆಂದು ಸನ್ ೧೧೭೧ ಫಸಲಿ ರೂಪಾಯಿ ೨೪೭೨೫೧ ಆಜ್ಞೆ ಮಾಡಲಾಯಿತು. ಆ ಖರ್ಚಿನಲ್ಲಿ ಆಡಳಿತ ನಡೆಸಲಾಗುತ್ತಿದೆ. ಅದೇ ಕಾಲಕ್ಕೆ ३೫೦ ಕುದುರೆ ಸವಾರರ ಚಾಕರಿ ಮಾಡಬೇಕೆಂಬ ಕರಾರು ಇದೆ. ಟೀಪೂವಿನ ಜೊತೆಗೆ ಮಾಡಿದ ಸಂಧಾನದಿಂದ ನರಗುಂದ ತಾಲೂಕು ಸರಕಾರಕ್ಕೆ ಸೇರ್ಪಡೆಯಾಯಿತು. ಇತ್ತೀಚೆಗೆ ಪರಶುರಾಮ ರಾಮಚಂದ್ರನು ಬಿಡಿಸಿದ ಪ್ರದೇಶ ಇದರಲ್ಲಿ ಸೇರುವದಿಲ್ಲ ಎಂದು ಸನ್ ೧೨೦೧ ಫಸಲಿ ಸನ್ ೧೭೯೧ ಇಸವಿಯಲ್ಲಿ ಕರಾರು ಮಾಡಲಾಯಿತು. ಅದೂ ಅಲ್ಲದೆ ನೌಕರ ಚಾಕರರ ಬೇರಿಜಿನಲ್ಲಿ ಪ್ರದೇಶದ ಬಾಬತ್ತು ಸರಕಾರದ ಹತ್ತಿರ ರುಪಾಯಿ ೮೮೨೫೧ ಉಳಿದಿದೆ. ಅದರ ಸವಾರಿಗಳ ಆಹಾರ ಧಾನ್ಯದ ಪಾಲಿನ ವಜಾ ೧೨೫. ಉಳಿದದ್ದು ಪ್ರದೇಶ ಮುನ್ನಡೆಸುತ್ತಿದೆ. ಅದರ ಮೊತ್ತ ೧೪೯೦೦೦. ಅದರಲ್ಲಿ ಸವಾರಿ ಆಸಾಮಿ ೨೨೫, ಅದರಲ್ಲಿ ಅರ್ಧ ವಜಾ ಮಾಡಿ ವೆಂಕಟರಾವ ಭಾಸ್ಕರ ಚಾಕರಿ ಮಾಡಬೇಕು. ಅಂಥವರು ೧೧೨ ಸವಾರರು, ಒಟ್ಟು ಮೊತ್ತ ೭೯೫೦೦, ಉಳಿದದ್ದು ನಾರಾಯಣರಾಮ ಚಾಕರಿ ಮಾಡಬೇಕು. ಆ ಸವಾರರ ಸಂಖ್ಯೆ ೧೧३, ಒಟ್ಟು ರುಪಾಯಿ ೭೯೫೦೦.

೮

ರಾಸ್ತೆ

ಸಾಹೇಬ ಮುಷಫರ್ ಮೆಹೆರಬಾನ ಕರಮ ಫದಮಾಯ ದೋಸ್ತಾ ಹೆನರಿ ಚಾನ್‌ಸಾಹೇಬ ಬಹಾದೂರ ಏಜಂಟ ಜಿಲ್ಲಾ ದಕ್ಷಿಣ ಸಲಾಮ ಹೂ.

ಶ್ರೀ ಅಜಿಸಾಹೇಬ ರಾಮರಾಮ ಲಕ್ಷ್ಮಣ ರಾಸ್ತೆ, ಸಲಾಮ ಬಾಜದ ಸಲಾಮ ಖೈರಯತ ಅಜ್ಯಾಮ ತಂದೆ. ಇಲ್ಲಿಯ ಕ್ಷೇಮವನ್ನು ಅರಿತುಕೊಳ್ಳುತ್ತ ನಿಮ್ಮ ಕ್ಷೇಮ ಸಮಾಚಾರವನ್ನು ಸದಾ ತಿಳಿಸುತ್ತಲೇ ಇರಬೇಕು. ದರವಿಲಾ ಆ ಸಾಹೇಬರ ಪತ್ರ ನಂಬರ ೧೦೪೮ ತಾರೀಖ ೨೬ ಅಗಸ್ಟ ಸನ್ ೧೮೫೧ ಇಸವಿಯ ಸರಕಾರದಿಂದ ಪತ್ರ ಬಂದಿದ್ದು, ಅದರಲ್ಲಿ ರಾಸ್ತೆ ಪದವಿಯಿದೆ. ಇದು ಯಾರಿಂದ, ಎಂದು, ಯಾವ ಕಾರಣಕ್ಕಾಗಿ ಲಭಿಸಿತು. ಎನ್ನುವದರ ಪರಂಪರಾಗತ ಇತಿಹಾಸವನ್ನು ಬರೆದು ತಿಳಿಸಬೇಕೆಂದು ಪತ್ರ ಬಂದಿದೆ. ಹಿಂದೆ ವಿಜಾಪುರದ ಆಡಳಿತವಿದ್ದಾಗ ನಮ್ಮ ಪೂರ್ವಜರಾದ ಗಂಗಾಧರಪಂತ ಗೋಖಲೆಯವರು ಮುಕ್ಕಾಂ ವೇಲಣೇಶ್ವರ, ತಾಲೂಕಾ ಅಂಜನವೇಲ. ಜಿಲ್ಲಾ ರತ್ನಾಗಿರಿಯಲ್ಲಿ ವ್ಯಾಪಾರಕ್ಕಾಗಿ ವಾಸ ಮಾಡಿಕೊಂಡಿದ್ದರು. ದಾಭೋಲ ಪ್ರಾಂತದ ಅಡಿಯಲ್ಲಿರುವ ಜಿಲ್ಲೆ ರಾಜವಾಡೆಗೆ ಮತ್ತು ಜಾಫರಾಬಾದ ಎಂಬೆರಡು ಜಿಲ್ಲೆಯ ಪ್ರಾಂತಗಳಿಗೆ ಆಹಾರಧಾನ್ಯ ಪೂರೈಸುವ ಪ್ರಾಂತಾಧಿಕಾರಿಯಾಗಿ ಕಾರ್ಯ ಮಾಡುತ್ತಿದ್ದರು. ಅನಂತರ ಕೆಲದಿನಗಳ ಬಳಿಕ ಅವರ ಮೊಮ್ಮಗ ಹರಿಪಂತ ಗೋಖಲೆಯುವರು. ವಿಜಾಪುರಕ್ಕೆ ಬಂದು ಪ್ರಾಂತಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಅನಂತರ ಅಲ್ಲಿಯ ಬಾದಶಹಾನು ಅವರ ಕಾರ್ಯ ನೋಡಿ, 'ರಸದೆ' ರಸ್ತೆ ಎಂಬ ಪದವಿ ನೀಡಿದನು. ಅಲ್ಲಿಯ ಹಲವು ಪ್ರಾಂತಗಳ ಆಹಾರಧಾನ್ಯ ಪೂರೈಸುವ ಕೆಲಸ ಬಾದಶಾಹನ ಆಜ್ಞೆಯಂತೆ ಮಾಡುತ್ತಲಿದ್ದು, 'ರಸದೆ' ಪದವನ್ನು ಸದಾಕಾಲ ಬಳಸಲಾರಂಭಿಸಿದರು. ಅನಂತರ ಶ್ರೀಮಂತ ಶಾಹೂ ಮಹಾರಾಜರ ಆಡಳಿತ ಬಂದ ಬಳಿಕ ವಿಜಾಪುರದ ಆಹಾರಧಾನ್ಯದ ಅವರ ಕಾರ್ಯವನ್ನು ಗಮನಿಸಿ ಸಾತಾರಾದಲ್ಲಿಯೂ ಇಂಥದೇ ವ್ಯವಸ್ಥೆಗಾಗಿ ಹರಿಪಂತರ ಮೊಮ್ಮಗನಾದ ರಾಮಜಿ ಪಂತ ಗೋಖಲೆಗೆ ಆಸರೆ ನೀಡಿ, ಶನಿವಾರ ಪೇಠೆಯಲ್ಲಿ ಬಂದಿರಲು ಆಜ್ಞೆ ಮಾಡಿದರು. ಆಗ ಅವರ ಮಗ ಭಿಕಾಜಿ ನಾಯಿಕ ಅಪ್ಪಾ ಇವರು ವಾಡೆಯನ್ನು ಕಟ್ಟಿ ಅಲ್ಲಿ ವಾಸಿಸಲಾರಂಭಿಸಿದರು. ಪ್ರಾಂತಕ್ಕೆ ಆಹಾರಧಾನ್ಯ ಪೂರೈಸುವ ವ್ಯಾಪಾರದ ಕಾರ್ಯ ಮಾಡುತ್ತಲೇ ಇದ್ದರು. ಅವರ ವರ್ತನೆ ಮತ್ತು ವ್ಯಾಪಾರದ ಬಗೆಗೆ ಛತ್ರಪತಿಗೆ ಭರವಸೆ ಮಾಡಿ 'ರಸದೆ' ಎಂಬ ಹೆಸರಿನ ಬದಲಿಗೆ 'ರಾಸ್ತೆ' ಎಂಬ

ಪದ ನೀಡಿದರು. ಅಂದಿನಿಂದ ಈ ಹೆಸರೇ ಬಳಸಲಾಗುತ್ತಿದೆ. ಬಾಜೀರಾವ ಬಲ್ಲಾಳ ಪೇಶ್ವೆಯವರು ಭಿಕಾಜಿನಾಯಕನ ವ್ಯಾಪಾರದ ಪದ್ಧತಿ, ಯೋಗ್ಯತೆಯನ್ನು ಅರಿತು ಪುಣೆಯ ಶನಿವಾರ ಪೇಠೆಯಲ್ಲಿ ಶನಿವಾರ ವಾಡೆಯ ಸನ್ನಿಧಿಯಲ್ಲಿ ವಾಡೆಯನ್ನು ಕಟ್ಟಲು ಭಾಗವನ್ನು ನೀಡಿದರು. ಅಲ್ಲಿ ವಾಡೆ ಕಟ್ಟಿ ವಾಸಿಸಲಾರಂಭಿಸಿದರು. ಅನಂತರ ಅವರ ಪುತ್ರಿಯಾದ ಕೈ. ಸೀಪಿಕಾಬಾಯಿಯನ್ನು ತಮ್ಮ ಮಗ ಬಾಳಾಜಿ ಬಾಜೀರಾವ ಉರ್ಫ್ ನಾನಾಸಾಹೇಬ ಪೇಶ್ವೆಯೊಂದಿಗೆ ಮದುವೆ ಮಾಡಿಸಿದರು. ಅವರಿಗೆ ಮೂವರು ಮಕ್ಕಳು. ಮೊದಲನೆಯವನು ವಿಶ್ವಾಸರಾವ, ಎರಡನೆಯವನು ಮಾಧವರಾವ, ಮೂರನೆಯವನು ನಾರಾಯಣರಾವ ಪೇಶ್ವೆ. ಈ ಮೂವರೂ ನಮ್ಮ ಮುತ್ತಜ್ಜ ಕೈ. ಲಕ್ಷ್ಮಣರಾವ ಭಿಕಾಜಿ ಮುಂತಾದ ಬಂಧುಗಳ ಅಣ್ಣನ ಮಕ್ಕಳಾಗಿದ್ದು ಅವರೂ ಸಹ ನಮ್ಮ ಮುತ್ತಜ್ಜನ ವರ್ತನೆ, ಯೋಗ್ಯತೆಯನ್ನು ಕಂಡು ಮೊದಲಿಗಿಂತ ಹೆಚ್ಚಿನ ವ್ಯವಸ್ಥೆಯನ್ನು ಮಾಡಿ ಹಿಂದಿನ ಪದ್ಧತಿಯನ್ನು ಮುಂದುವರಿಸಿದರೆ ಆದರೆ ಈಗ ರಾಸ್ತೆ ಪದ ನೀಡಿದ ದಾಖಲೆಗಳು ದಪ್ತರಿನಲ್ಲಿ ಸಿಗುವದಿಲ್ಲ. ಏಕೆಂದರೆ ಬಾಜೀರಾವ ರಘುನಾಥ ಪೇಶ್ವೆ ಜಪ್ತು ಮಾಡಿದ್ದರು. ಆಗ ದಪ್ತರಿನಲ್ಲಿದ್ದ ಹಿಂದಿನ ಕಾಗದ ಪತ್ರಗಳು ನಾಶವಾದವು. ಆದರೆ ಕೆಲವು ಹಳೆಯ ಮಾಹಿತಿಯದ್ದು ಜನರ ಬಾಯಿಂದ ವಿಷಯವನ್ನು ಸಂಗ್ರಹಿಸಿ, ಬರೆದು ಕಳಿಸಿದ್ದೇವೆ. ನಮ್ಮ ಮುತ್ತಜ್ಜರ ಹಿಂದಿನ ಕಾಲದಿಂದಲೂ ಅಂದರೆ ಭಿಕಾಜಿ ನಾಯಿಕರ ಹಿಂದಿನ ಕಾಲದಿಂದ ಸ್ಥಾವರ ಜಂಗಮ ಆಸ್ತಿಯಲ್ಲಿ ಪಾಲಾಗದೆ ಒಕ್ಕಟ್ಟಿನಿಂದ ವಹಿವಾಟು ನಡೆಸುತ್ತ ಬಂದಿದ್ದಾರೆ. ಈ ಸದರಿ ವಿಷಯದ ಕುರಿತು ಯೋಗ್ಯತೆ, ಮನೆತನ ಮತ್ತು ರಾಸ್ತೆ ಪದದ ಮಾಹಿತಿಯು ಆ ಸಾಹೇಬರಿಗೆ ಮನವರಿಕೆಯಾಗಬಹುದು. ತಾರೀಖ ೧೧ ಮಾಹೇ ಅಕ್ಟೋಬರ ಸನ್ ೧೮೫೧ ಇಸವಿ, ಹೆಚ್ಚಿಗೇನು ಬರೆಯಲಿ? ಪ್ರೀತಿ ವಿಶ್ವಾಸವಿರಲಿ.

(ಬ)

ಯಾದಿ ರಾಜಶ್ರೀ ಬಳವಂತರಾವ ಮಾಧವ ರಾಸ್ತೆ, ಸುರುಸನ್ ಸಬ್ಬಾ ಆಶರೀನ ಮಯಾತೈನ ಮತ್ತು ಆಲಫ. ಸನ್ ೧೨೬೬ ಫಸಲಿ. ಶಕೆ ೧೭೪೮ ವ್ಯಯನಾಮ ಸಂವತ್ಸರೆ. ನಮ್ಮ ಹಿರಿಯ ಮೂಲಪುರುಷರಾದ ಶಾಮಜಿ ಹರಿ ರಾಸ್ತೆ ಅವರ ಹಿರಿಯ ಮಗ ಭಿಕಾಜಿ ರಾಮರಾವ ಮತ್ತು ಕಿರಿಯ ಮಗ ಸದಾಶಿವ ರಾಮರಾವ, ಇವನಿಗೆ ಮಕ್ಕಳಿಲ್ಲ. ಭಿಕಾಜಿ ರಾಮರಾವನ ಮಕ್ಕಳು.

೧) ಮಲ್ಹಾರರಾವ ಸಂಪತ್ತು ಗಳಿಸಿದರು. ಮುದ್ರೆ ಅವರ ಹೆಸರಿಗಾಯಿತು. ಅದೇ ಮುಂದುವರೆದಿದೆ. ಅವರಿಗೆ ಮಕ್ಕಳಿಲ್ಲ.

೨) ಗಣಪತರಾವನ ಮಕ್ಕಳು–

೧) ಕಾಶಿರಾವ ಅವನ ಮಗ ಮಲ್ಹಾರರಾವ ಸದ್ಯ ಇದ್ದಾರೆ.

೨) ಯಶವಂತರಾವ ಮಗ ಗಣಪತರಾವ ಸದ್ಯ ಇದ್ದಾರೆ.

೩) ಮಾಧವರಾವ, ಮಗ ಆನಂದರಾವನು ದತ್ತಕ ತೆಗೆದುಕೊಂಡ.

೩) ಆನಂದರಾವನಿಗೆ ಮಹಿಪತರಾವ ಎಂಬ ಮಗನಿದ್ದ. ಅವನು ಮರಣ ಹೊಂದಿದ. ಮುಂದೆ ಮಾಧವರಾವನನ್ನು ದತ್ತಕ ತೆಗೆದುಕೊಂಡನು. ಅವನ ಮಕ್ಕಳು ಸಧ್ಯ ಬದುಕಿದ್ದಾರೆ. ಅವರು–ಬಳವಂತರಾವ, ಗಂಗಾಧರರಾವ, ಯಶವಂತರಾವ, ಆನಂದರಾವನ ಮಗಳ ಮಗನಾದ ರಾಮಚಂದ್ರರಾವ ಸಾಠೆ ಸದ್ಯ ಇದ್ದಾರೆ.

೪) ಲಕ್ಷ್ಮಣರಾವನಿಗೆ ಸಂತಾನವಿರಲಿಲ್ಲ. ಹೀಗಾಗಿ ಬಂಧುಬಳಗದ ಹೊರತು ಗೋತ್ರದವನಾದ ಸದಾಶಿವರಾವ ಗೋಖಲೆಯವರ ಮಗನನ್ನು ದತ್ತಕ ಪಡೆದು ಶಾಮರಾವ ಎಂದು ಹೆಸರಿಟ್ಟನು. ಅವನ ಮಗನಾದ ಲಕ್ಷ್ಮಣರಾವ ಸದ್ಯ ಬದುಕಿದ್ದಾರೆ.

೫) ಗಂಗಾಧರನ ಹಿರಿಯ ಮಗ ವೆಂಕಟರಾವ, ಕಿರಿ ಮಗ ವಿಶ್ವಾಸರಾವ ಇಬ್ಬರೂ ಮೃತರಾದರು. ಮಕ್ಕಳಿಲ್ಲ. ಮಡದಿಯರಿದ್ದಾರೆ.

೧) ವೆಂಕಟರಾವನ ಮಡದಿ ಸಾವಿತ್ರಿಬಾಯಿ.

೨) ವಿಶ್ವಾಸರಾವನ ಮಡದಿ ಅನ್ನಪೂರ್ಣಾಬಾಯಿ.

೬) ರಾಮಚಂದ್ರನಿಗೆ ಮಕ್ಕಳಿಲ್ಲ. ಹಿರಿಯ ಹೆಂಡತಿ ರಾಧಾಬಾಯಿ, ಕಿರಿಯ ಹೆಂಡತಿ ವಾರಣಾಸಿಬಾಯಿ.

೭) ಜೀವನರಾವನಿಗೆ ಅಮೃತರಾವನೆಂಬ ಮಗ. ಮೃತನಾದ ಅವನಿಗೆ ಹೆಂಡತಿಯೂ ಇಲ್ಲ. ಮಕ್ಕಳೂ ಇಲ್ಲ.

ನಮ್ಮ ನಾಲ್ಕನೇ ಪುರುಷರಾದ ಭಿಕಾಜಿ ಮತ್ತು ಸದಾಶಿವ ಶಾಮರಾಜ, ಇಬ್ಬರೂ ಸಾತಾರದಲ್ಲಿ ಶಾಹೂ ಮಹಾರಾಜರ ಕೃಪೆಯಲ್ಲಿದ್ದರು. ಮಹಾರಾಜರು ಪ್ರಾಂತವನ್ನು ನೀಡಿದರು. ಸದಾಶಿವ ಸಾತಾರದಲ್ಲಿದ್ದ ಭಿಕಾಜಿಗೆ ಮಹಾರಾಜರು ವಾಯಿಯಲ್ಲಿ ವಾಡೆ ಕಟ್ಟಲು ಜಾಗ ನೀಡಿದರು. ಅಲ್ಲಿ ವಾಡೆ ಕಟ್ಟಿ ವಾಸಿಸಿದರು. ಅವನ ಮೊದಲ ಮಗಳೇ ಗೋಪಿಕಾಬಾಯಿ. ಅವಳನ್ನು ನಾನಾ ಸಾಹೇಬ ಪೇಶ್ವೆಯ ಜೊತೆ ಲಗ್ನ ಮಾಡಿದರು. ವಾಯಿಯಲ್ಲಿ ಲಗ್ನವಾಯಿತು. ಅನಂತರ ಮಲ್ಹಾರರಾವ ಭಿಕಾಜಿ, ಪೇಶ್ವೆ ಸರಕಾರದಲ್ಲಿ ಕೆಲಸ ಮಾಡುತ್ತಿದ್ದ. ಸವಣೂರ ನವಾಬನಿಂದ ಪ್ರಾಂತವನ್ನು ಪಡೆಯಲು ಸರಕಾರ ಕರ್ನಾಟಕಕ್ಕೆ ಹೋಯಿತು. ಬಾಗಲಕೋಟೆ ವಶಪಡಿಸಿಕೊಂಡು

ಮಲ್ಹಾರರಾವನಿಗೆ ನೀಡಲಾಯಿತು. ಬದಾಮಿ ಕೋಟೆ ರುಸ್ತುಮ ಅಲಿಖಾನ್ ಬಳಿಯಲ್ಲಿತ್ತು. ದೇಸಾಯಿ, ಪಾಳೇಗಾರರ ಉಪದ್ರವವಿತ್ತು. ಅವರ ಬಂದೋಬಸ್ತ ಮಾಡಲು ತಿಳಿಸಿದರು. ಸೈನ್ಯ ಮತ್ತು ಕಾಲ್ದಳದ ಸಹಾಯದಿಂದ ಪಾಳೇಗಾರರ ಪಾರುಪತ್ಯ ಮಾಡಿ, ಕಾರಸ್ತಾನದಿಂದ ಬದಾಮಿ ಕೋಟೆ ಹಸ್ತಗತ ಮಾಡಿಕೊಂಡು ಆಡಳಿತ ಆರಂಭಿಸಿದ. ಕಾರ್ಯಾಚರಣೆ ಮಾಡಿದನು. ಸರಕಾರ ಪ್ರಸನ್ನಗೊಂಡು ಮೂರುಸಾವಿರ ಸೈನ್ಯದ ಸರದಾರನನ್ನಾಗಿ ಮಾಡಿ, ಸೈನ್ಯ ನೀಡಲಾಯಿತು. ಸೈನ್ಯದ ಖರ್ಚಿಗೆ ದ್ರವ್ಯ ನೀಡಲಾಯಿತು. ಮೊದಲಿಗೆ ಮೂರು ಬಗೆಯ ಸೈನ್ಯ ನೀಡಿ, ಹಳ್ಳಿಗಳನ್ನು ಕೊಡಲಾಯಿತು. ಪರಗಣೆ, ಬಾಗಲಕೋಟೆ ಗ್ರಾಮ ನೀಡಬೇಕೆಂದು ಸನದು ಮಾಡಲಾಯಿತು. ಇದರ ಬದಲಿಗೆ ರೋಖ ಹಣ ಪಡೆಯಲಾಯಿತು. ಮಕ್ಕಳು ಇರಲಿಲ್ಲ. ಅವನ ಬಳಿಕ ಗಣಪತರಾವ ಅವನಿಗೆ ಸರದಾರ ಪಟ್ಟ ಸಿಗಬೇಕಾಗಿತ್ತು. ಆದರೆ ಆನಂದರಾವನ ಕಾರ್ಯ ಕೌಶಲ್ಯ ಕಂಡು ಸರಕಾರ ಪ್ರಸನ್ನಗೊಂಡು ಅವನಿಗೆ ಸರದಾರನನ್ನಾಗಿ ಮಾಡಲಾಯಿತು. ಅನಂತರ ಗಣಪತರಾವನ ಕೋರಿಕೆಯ ಮೇರೆಗೆ ಅವನಿಗೂ ಸೈನ್ಯ ಮತ್ತು ಸರದಾರ ಪಟ್ಟ ನೀಡಿದರು. ಹಿಂದಿನವರ ಸೈನ್ಯವನ್ನು ಹಾಗೆ ಉಳಿಸಿ, ಮುಂದಿನ ಪುರುಷರು ಪರಂಪರೆಯನ್ನು ಮುನ್ನಡೆಸಿದರು. ಕರಾರಿನಂತೆ ಈವರೆಗೆ ನಾಲ್ವರು ಪುರುಷರ ಪೀಳಿಗೆಯವರಿದ್ದರೂ ವಹಿವಾಟು ಒಂದೇ ಕಡೆ ನಡೆಯುತ್ತಿತ್ತು. ಕುಟುಂಬ ಪಾಲಾಗಿಲ್ಲ. ಹಿರಿಯ ಮಾಧವರಾವ ಸಾಹೇಬರ ಕಾಲದಲ್ಲಿ ಸೈನ್ಯ, ಪ್ರಾಂತ ನೀಡಲಾಯಿತು. ಆನಂದರಾವ ಭಿಕಾಜಿಯ ಹೆಸರಿನ ಅಧಿಕಾರದ ದಾಖಲೆಪತ್ರ ದಪ್ತರಿನಲ್ಲಿಲ್ಲ.

ಜಾಧವರಾಮ ವಾಡಿಕರ್

ಅರ್ಜಿದಾರ ಲಾಡೋಜಿ ಜಾಧವರಾವ ವಾಡಿಕರ್ ಸುರುಸನ್ ಸಲಾಸ್ ಸಲಾಸಿನ್ ಮಯಾತೈನ್ ಮತ್ತು ಆಲಫ ಮೆಹರಬಾನ್ ವಾರ್ಡಿನ ಸಾಹೇಬ ಬಹಾದ್ದೂರ ಡೆಪ್ಯೂಟಿ ಏಜಂಟ ಜಿಲ್ಲಾ ದಕ್ಷಿಣ ಇವರ ಪತ್ರ ದಿನಾಂಕ ೮ನೇ ಸೆಪ್ಟೆಂಬರ್ ೧೮೩೨ ಇಸವಿಯ ಈಜಾನಿಬಾಸ್ ಪತ್ರಬಂತು.. ಅದರಲ್ಲಿ ಹೀಗೆ ಬರೆಯಲಾಗಿದೆ– ಹಜರತ್ ಬಂದೇದಾವಲಿ ರೈಟ್ ಆನರೇಬಲ್ ಗವರ್ನರ್ ಕೌನ್ಸಿಲ್‌ರು ಬಯಸುವುದೇನೆಂದರೆ– ದಕ್ಷಿಣದ ಜಹಾಗೀರದಾರರ ಕೈಫಿಯತ್(ಹೇಳಿಕೆ) ಬಗೆಗೆ ಗೊತ್ತಾಗಬೇಕಾಗಿದೆ. ಇದನ್ನು ಸರಕಾರಕ್ಕೆ ಕಳುಹಿಸಬೇಕಾಗಿದ್ದರಿಂದ ಕೈಫಿಯತ್ತು ಬರೆದು ಕಳುಹಿಸಬೇಕು. ಈ ಕಾರಣಕ್ಕಾಗಿ ಇಲ್ಲಿಯ ಮಜಕೂರನ್ನು ಬರೆದು ಕಳುಹಿಸುತ್ತಿದ್ದೇನೆ. ತಪಶೀಲು–

೧. ನಮ್ಮ ಮನೆತನದ ಬಡ್ತಿ ಯಾವ ತಾರೀಕಿಗೆ ನೀಡಲಾಗಿದೆ ಎಂಬ ಬಗೆಗೆ ಬರೆದು ತಿಳಿಸಬೇಕೆಂದು ಪತ್ರದಲ್ಲಿ ಬರೆಯಲಾಗಿದೆ. ಅದರ ಉತ್ತರ ಹೀಗಿದೆ– ನಮ್ಮ ಮುತ್ತಜ್ಜ ಪಿಲಾಜಿ ಜಾಧವರಾವ, ಛತ್ರಪತಿ ಶಾಹೂ ಮಹಾರಾಜರು ದಿಲ್ಲಿಯಿಂದ ಮರಳಿಬಂದರು. ಆ ಕಾಲಕ್ಕೆ ಹಲವು ಸರದಾರರು ಅವರನ್ನು ರಾಜ್ಯಕ್ಕೆ ಕರೆಸಬೇಕೆಂಬ ಕಾರಣಕ್ಕಾಗಿ ಹೋಗಿದ್ದರು. ಅವರು ಬಾದಶಾಹನ ಒಲವನ್ನು ಗಳಿಸಿ ಮಹಾರಾಜರನ್ನು ದಕ್ಷಿಣಕ್ಕೆ ಕರೆಯಿಸಿದರು. ಆಗ ಐಲಾಜಿ ಜಾಧವರಾವ ಅವರು ಮಹಾರಾಜರಿಗೆ ತುಂಬ ಸಹಾಯ ಮಾಡಿದರು. ಈ ಕಾರಣದಿಂದಾಗಿ ಶಾಹೂ ಛತ್ರಪತಿಯವರು ಕೃಪೆ ತೋರಿ ಪುಣೆ ಪ್ರಾಂತವನ್ನು –ಗ್ರಾಮಗಳನ್ನು ಇನಾಮಾಗಿ ನೀಡಿದರು. ಸನ್ ೧೧೨೫ರ ೧೫ನೇ ತಾರೀಕಿನ ಜಿಲ್‌ಕಾದಿ (ಹನ್ನೊಂದನೇ ತಿಂಗಳು)ಯಿಂದ ನಾಂದೇಡದಲ್ಲಿ ಸ್ವರಾಜ್ಯದ ಆಡಳಿತ ಶುರುವಾಯಿತು. ಅನಂತರ ಔರಂಗಾಬಾದ ಪ್ರಾಂತದ ಕನ್ನಡ ಘುಲಬರಿ ಮುಂತಾದ ಜಿಲ್ಲೆಗಳ ಒಂದೂವರೆ ಲಕ್ಷದ ಗ್ರಾಮಗಳನ್ನು ಸರಂಜಾಮಿಗಾಗಿ ನೀಡಲಾಯಿತು. ಅದರಿಂದಾಗಿ ಅಶ್ವದಳದ ಸೈನ್ಯ ಸಿದ್ಧತೆಯಲ್ಲಿರುತ್ತಿತ್ತು. ಸರಕಾರ ಆಜ್ಞಾಪಿಸಿದ ಕಾರ್ಯವನ್ನು ಮಹಾರಾಜರ ಪ್ರತಾಪದಿಂದ ನಿರ್ವಹಿಸುತ್ತಿದ್ದರು. ವಿಶ್ವನಾಥ ಮತ್ತು ಆಬಾಜಿಪಂತ ಪುರಂದರೆಯನ್ನು ಬಂಧಿಸಲಾಯಿತು. ಅವರನ್ನು ಕಾರಸ್ತಾನ ಮತ್ತು ಪೌರುಷದಿಂದ ಸೆರೆಹಿಡಿದು ಸಾತಾರಕ್ಕೆ ಒಯ್ಯಲಾಯಿತು. ಅಂದಿನಿಂದ ಮನೆತನಕ್ಕೆ ಬಡ್ತಿ ಮತ್ತು ಗೌರವ ಪ್ರಾಪ್ತವಾಯಿತು. ಇತ್ತೀಚೆಗೆ ಬಾಳಾಜಿ

ವಿಶ್ವನಾಥ ಮತ್ತು ಬಾಜೀರಾವ ಸಾಹೇಬ ಪೇಶ್ವೆ ಅವರೊಂದಿಗೆ ದಿಲ್ಲಿಯವರೆಗೆ ದಂಡೆತ್ತಿ ಹೋದರು. ನವಾಬರ ಜೊತೆಗೂ ದಂಡಯಾತ್ರೆ ಕೈಕೊಂಡು, ಕಾರ್ಯನಿರ್ವಹಿಸಿ ಸರಕಾರಕ್ಕೆ ಪ್ರದೇಶಗಳನ್ನು ಗೆದ್ದುಕೊಟ್ಟರು. ನವಾಬ ನಿಜಾಮ ಉಲ್ ಮುಲುಖರು ಮೋಳೇಗಾವ ಮತ್ತು ಮರಕಲ್‌ದಲ್ಲಿಯ ಜಹಾಗೀರಿನ ಆಡಳಿತವನ್ನು ನಮಗೆ ಇನಾಮಾಗಿ ನೀಡಿದರು. ಹಿಂದೆ ಹಿಂದೂಸ್ತಾನದ ರಾಜನಾದ ಛತ್ರಸಾಲ ಬುಂದೇಲೆ ಅವರ ಮೇಲೆ ಶತ್ರುಸೈನ್ಯ ಏರಿಬಂದ ಸಮಯದಲ್ಲಿ ಬಾಜೀರಾವ ಸಾಹೆಬರ ಜೊತೆಗೆ ಹೋಗಿ ಅವರ ಪರಿ ಮಾರ್ಜನವನ್ನು ಮಾಡಿ ಸಂಸ್ಥಾನವನ್ನು ರಕ್ಷಿಸಿದ್ದರು. ಈ ಕಾರಣಕ್ಕಾಗಿ ಅವರು ಬುಂದೇಲಖಂಡದ ಲಕ್ಷಾಂತರ ರೂಪಾಯಿಗಳ ಪ್ರದೇಶವನ್ನು ಬುಂದೇಲೆಯವರು ಸರಕಾರ ಅವರಿಗೆ ನೀಡಿದರು. ತ್ರ್ಯಂಬಕರಾವ ದಾಬಾಡೆಯು ಬಾಜಿರಾವ ಸಾಹೇಬರ ಮೇಲೆ ಏರಿಬಂದಿದ್ದರು. ಅವನ ಅಪಾರ ಸೈನ್ಯದೊಂದಿಗೆ ಹೋರಾಡಿ ದಾಭಾಡೆಯನ್ನು ಪರಾಭವಗೊಳಿಸಿ ಕೊಂದುಹಾಕಿದನು. ವಸಯಿಯ ಸಮಾಲೋಚನೆಯಲ್ಲಿ ಯೋಗ್ಯ ಕಾರ್ಯವನ್ನು ನಿರ್ವಹಿಸಿ ಇನಾಮು ಪಡೆದರು. ನಾನಾ ಸಾಹೇಬ ಪೇಶ್ವೆಯವರ ಜೊತೆಗೆ ಸೇನಾಪತಿಯಾಗಿ ಬಂಗಾಲದ ದಂಡಯಾತ್ರೆಯಲ್ಲೂ ಭಾಗವಹಿಸಿದರು. ಅದರಿಂದಾಗಿ ಪಿಲಾಜಿ ಜಾಧವರಾವ ಅವರಿಗೆ ಗೌರವ ಮತ್ತು ಪರಾಕ್ರಮ ಪ್ರಾಪ್ತವಾಯಿತು. ಅದರಿಂದಾಗಿ ಶ್ರೀಮಂತ ನಾನಾಸಾಹೇಬ ಪೇಶ್ವೆಯವರು ಪಿಲಾಜಿ ಜಾಧವರಾವ ಅವರನ್ನು ಚಿಗಪ್ಪನೆಂದೇ (ಕಾಕಾ) ಎಂದೇ ಕರೆಯುತ್ತಿದ್ದರು. ಜಾಧವರಾವ ಅವರು ಅರಮನೆಗೆ ಬಂದರು ಎಂದರೆ ಗೌರವಿಸಿ ಸತ್ಕರಿಸಲಾಗುತ್ತಿತ್ತು. ಅವರ ಪರಾಕ್ರಮಕ್ಕೆ ದೊಡ್ಡಸ್ತಿಕೆಯ ಗೌರವ ನೀಡಲಾಗುತ್ತಿತ್ತು.

೨. ಸೈನ್ಯದ ಸಕಲ ವ್ಯವಸ್ಥೆಯು ನನ್ನ ತಂದೆಯವರ ಬಳಿಯಲ್ಲಿತ್ತು. ಸದರಿ ಸರಂಜಾಮನ್ನು ಯಾವ ತಾರೀಕಿಗೆ ನೀಡಿದರು. ನಮ್ಮ ಜಹಾಗೀರಿನ ವಹಿವಾಟನ್ನು ಪೇಶ್ವೆ ಸರಕಾರವು ಯಾವ ರೀತಿಯಲ್ಲಿ ಹಸ್ತಕ್ಷೇಪ ಮಾಡಿತು ಮತ್ತು ನಮ್ಮ ಬಳಿ ಯಾವ ಬಗೆಯ ಸರಂಜಾಮು ನಡೆಯುತ್ತಿದೆ ಎಂಬ ಬಗೆಗೆ ಮಾಹಿತಿಯನ್ನು ನೀಡುವಂತೆ ಪತ್ರದಲ್ಲಿ ತಿಳಿಸಲಾಗಿದೆ. ಅದರ ಉತ್ತರ ಹೀಗಿದೆ– ಛತ್ರಪತಿ ಶಾಹೂ ಮಹಾರಾಜರ ಶಕೆ ೧೬೪೦ರಲ್ಲಿ ಸೈನ್ಯ ಮತ್ತು ಸರಂಜಾಮಿಗಾಗಿ ಪುಣೆ ಪ್ರಾಂತದ ವಾಘೋಲಿ, ಘುಟಗಾಂವಿನ ಪ್ರದೇಶಗಳ ಆಡಳಿತ ಮತ್ತು ಔರಂಗಾಬಾದ ಪ್ರಾಂತದ ಕನ್ನಡ ಘುಲಬರಿ ಮುಂತಾದ ಜಿಲ್ಲೆಗಳ ಪ್ರದೇಶ ಒಟ್ಟೂ ಒಂದೂವರೆ ಲಕ್ಷದಷ್ಟು

ಭೂಪ್ರದೇಶವನ್ನು ನೀಡಿದರು. ಅದಕ್ಕೆ ಈ ವರ್ಷದ ಮೂಲ ಸನದಿನ ತಾರೀಕು ಲಗತ್ತಿಸಬೇಕು. ಆದರೆ ಕಾಗದಪತ್ರ ಅಸ್ತವ್ಯಸ್ತಗೊಂಡಿದೆ. ಇದರಿಂದಾಗಿ ಸನದಿನ ತಾರೀಕು ಲಗತ್ತಿಸಲಾಗಿಲ್ಲ. ಇತ್ತೀಚಿನ ಮಹಾರಾಜರ ಕನ್ನಡ ವಗೈರೆ ಜಿಲ್ಲೆಗೆ ಸಂಬಂಧಿಸಿದ ಆಜ್ಞಾಪತ್ರಗಳಿವೆ. ಅದು ಸನ್ ೧೧೩೧ರ ವರ್ಷದ್ದು. ಅದರಲ್ಲಿ ಮಾರ್ಗಶೀರ್ಷ ಬಹುಳ ಅಷ್ಟಮಿಯ ತಾರೀಕಿದೆ. ಮುಂದೆ ಬಾಜೀರಾವ ಸಾಹೇಬರ ಪೇಶ್ವೆ ಅವರು ಹಿಂದೂಸ್ತಾನದ ನರವರ ಪ್ರಾಂತದ ಶಿಪರಿ ಕಲಾರಸ ಮುಂತಾದ ಜಿಲ್ಲೆಗಳ ಲಕ್ಷ ರೂಪಾಯಿಯ ಆಡಳಿತವನ್ನು ನೀಡಿದರು. ಅದರ ಮೂಲ ಸನದು ಇಲ್ಲ. ಒಟ್ಟೂ ಸೈನ್ಯ ಮತ್ತು ಸಮುದಾಯ ಸೇರಿ ೨ ೧/೨ ಲಕ್ಷದ ಸರಂಜಾಮು ನಡೆಯುತ್ತಿತ್ತು. ಮೂಲಪುರುಷ--- ಜಾಧವರಾವ ಅವರ ಪುತ್ರ ಪಟವೋಜಿ ಜಾಧವರಾವ. ಅವರ ಸುತ ಸುಭಾನಜಿ ಜಾಧವರಾವ ವಾಘೋಲಿಕರ ನಮ್ಮ ಅರ್ಧ ಪಾಲುದಾರರು ಮತ್ತು ನಮ್ಮ ತೀರ್ಥರೂಪರಾದ ಜೋತ್ಯಾಜಿ ಜಾಧವರಾವ ಅವರ ಪುತ್ರರಾದ ನಾವು- ಹೀಗೆ ಆಗ ಶ್ರೀಮಂತ ರಾಜಶ್ರೀ ಬಾಜೀರಾವ ಸಾಹೇಬರು ಪುಣೆ ಪ್ರಾಂತದ ಪ್ರದೇಶಗಳನ್ನು ಮತ್ತು ಕನ್ನಡ ಘುಲಬರಿ ಮುಂತಾದ ಜಿಲ್ಲೆಗಳನ್ನು ಯುದ್ಧಕ್ಕಿಂತ ಮೊದಲು ಎರಡು-ಮೂರು ವರ್ಷಗಳಲ್ಲಿ ಇನಾಮಸಹಿತ ಜಪ್ತು ಮಾಡಿದರು. ಅದರಿಂದಾಗಿ ಸದ್ಯ ಸರಂಜಾಮು ನಮ್ಮ ಬಳಿಯಿಲ್ಲ. ಸರಂಜಾಮು ನಡೆಯುತ್ತಿದ್ದಾಗ ನಾವೇ ಅಧಿಕಾರದ ವಹಿವಾಟು ನಡೆಸುತ್ತಿದ್ದೆವು. ಪೇಶ್ವೆ ಸರಕಾರದ ಹಸ್ತಕ್ಷೇಪ ಮಾಡುತ್ತಿರಲಿಲ್ಲ.

೩. ಪೇಶ್ವೆ ಸರಕಾರವು ನಮಗೆ ಮಹತ್ವ ನೀಡುತ್ತಿತ್ತು. ಅದೇ ಪ್ರತಿಷ್ಠೆ ಈಗ ಕಂಪನಿ ಸರಕಾರದಿಂದಲೂ ಸಿಗುತ್ತಲಿದೆ. ಅದರಲ್ಲಿ ಹೆಚ್ಚು ಕಡಿಮೆ ಏನಾದರೂ ಬದಲಾವಣೆಯಾಗಿದ್ದರೆ ಅದರ ಪಟ್ಟಿಯನ್ನು ಸಿದ್ಧಪಡಿಸಿ ಕಳಿಸಬೇಕೆಂದು

೧೦

ಜಾಧವರಾಯ

ಅರ್ಜಿದಾರನ ಹೇಳಿಕೆ ಮಾಧವ ಜಾಧವರಾಯ ಸುರುಸನ್ ಸಲಾಸ್ ಸಲಾಸೀನ್ ಮಯಾತ್ಯೆನ್ ಮತ್ತು ಆಲಫ್. ತಾರೀಕೆ ರ, ತಿಂಗಳು ಸೆಪ್ಟೆಂಬರ್ ೧೮೩೨ರ ವಾರ್ಡಿನ ಸಾಹೇಬ ಬಹಾದ್ದೂರ ಡೆಪ್ಯೂಟಿ ಏಜಂಟ್, ದಕ್ಷಿಣ ಜಿಲ್ಲೆ ಬರೆದ ಸಂಗತಿ ಏನೆಂದರೆ - ಹಜರತ್ ಬಂದೇಗಾನ ಅಲಿ ರೈಟ್ ಆನರೇಬಲ್

ಗವ್ಹರ್ನರ್ ಬಯಸಿದ್ದೇನೆಂದರೆ, ದಕ್ಷಿಣದಲ್ಲಿಯ ಜಹಾಗೀರದಾರರ ಕೈಫಿಯತ್ ಏನಿದೆಯೋ ಅದರ ಮಾಹಿತಿಯನ್ನು ಪಡೆಯಬೇಕಾಗಿದೆ ಎಂದು ಅವರು ತಿಳಿಸಿದ್ದರಿಂದ ತಾವು ದಯಮಾಡಿ ಸರಕಾರದವರಿಗೆ ಕಳಿಸುವುದಕ್ಕಾಗಿ ಸ್ವಲ್ಪದರಲ್ಲಿ ಕೈಫಿಯತ್‌ನ್ನು ಬರೆದು ಕಳಿಸಬೇಕು. ಬೇಕಾದ ತಪಶೀಲು–ನಿಮ್ಮ ಮನೆತನದ ಏಳ್ಗೆ, ಯಾವ ತಾರೀಕಿಗೆ

ಪತ್ರದಲ್ಲಿ ಸೂಚಿಸಲಾಗಿದೆ. ಅದರ ಉತ್ತರ ಹೀಗಿದೆ– ಪೇಶ್ವೆ ಸರಕಾರ ಎಲ್ಲಿಯವರೆಗೆ ಪ್ರತಿಷ್ಠೆ ನೀಡಿತೋ ಅಲ್ಲಿಯವರೆಗೆ ಉಳಿಸಿಕೊಳ್ಳಲಾಗಿತ್ತು. ಅದರ ಮಜಕೂರು ಮೊದಲನೇ ಕಲಮಿನಲ್ಲಿದೆ. ಕೊನೆಗೆ ಬಾಜೀರಾವ ಸಾಹೇಬರು ಇನಾಮಸಹಿತ ಜಪ್ತಿ ಮಾಡಿದ ಕಾರಣ ಗೊತ್ತಾಗಲಿಲ್ಲ. ಕಂಪನಿ ಸರಕಾರವು ಮನಸ್ಸು ಮಾಡಿ ಇನಾಮಗ್ರಾಮ ಬಿಟ್ಟುಕೊಟ್ಟರು. ಜೀವನ ನಿರ್ವಹಣೆಗೆ ಪೆನ್ಶನ್ ನೀಡಿದರು. ಜಕಾತಿಯನ್ನು ಮಾಫ ಮಾಡಿ, ದಸರಾದ ಪೋಷಾಕಿನ ಗೌರವ ನೀಡಿ ಪ್ರತಿಷ್ಠೆಯನ್ನು ಮುಂದುವರೆಸಿದೆ.

ಈ ರೀತಿಯಲ್ಲಿ ಮೂರು ಕಲಮನ್ನು ಬರೆದು ತಿಳಿಸಲಾಗಿದೆ. ಇದರ ಮೇಲಿಂದ ಇಲ್ಲಿಯ ವಿಷಯ ಸರಕಾರಕ್ಕೆ ಮನವರಿಕೆಯಾಗಬಹುದು.

ತಿಥಿ ಜೇಷ್ಠ ಶುದ್ಧ ೧೩ ಶಕೆ ೧೭೫೫ ವಿಜಯನಾಮ ಸಂವತ್ಸರ.

ಮನೆತನಕ್ಕೆ ಪ್ರತಿಷ್ಠೆ ಸಿಕ್ಕಿತು ಎಂಬ ಬಗೆಗೆ ಮತ್ತು ಸೈನ್ಯ ಮತ್ತು ಸಮುದಾಯದ ಸರಂಜಾಮು ಯಾವುದು ನಿಮ್ಮ ತಂದೆಯವರ ಕೈಯಲ್ಲಿತ್ತು ಅದು, ಸದರಿ ಸರಂಜಾಮನ್ನು ಯಾವ ತಾರೀಕಿಗೆ ನೀಡಲಾಯಿತು. ಪೇಶ್ವೆ ಸರಕಾರವು ನಿಮ್ಮ ಜಹಾಗೀರಿನ ಆಡಳಿತದಲ್ಲಿ ಯಾವ ಬಗೆಯಲ್ಲಿ ಹಸ್ತಕ್ಷೇಪ ಮಾಡಿದರು, ಸದ್ಯ ನಿಮ್ಮ ಹಕ್ಕಿನಲ್ಲಿರುವ ಸರಂಜಾಮಿನ ವ್ಯವಸ್ಥೆ ಮತ್ತು ಪೇಶ್ವೆ ಸರಕಾರ ನಿಮಗೆ ನೀಡದ ಗೌರವದ ಸ್ಥಾನ ಹಾಗೂ ಕಂಪನಿ ಸರಕಾರ ನೀಡುತ್ತಿರುವ ಕಂಪ್ರೆಶ್ ಮತ್ತು ಇರುವ ವ್ಯತ್ಯಾಸ – ಮುಂತಾದ ವಿಷಯಗಳನ್ನು ಬರೆದು ರವಾನೆ ಮಾಡಬೇಕು. ಈ ವಿಷಯದ ಕುರಿತು ನೀಡಿದ ಕೈಫಿಯತ್ ಏನೆಂದರೆ – ನಮ್ಮ ಅಜ್ಜನಾದ ಸದಾಶಿವರಾವನು ಚಂದ್ರಸೇನ ಜಾಧವರಾವ ಅವರ ಬಳಿಯಲ್ಲಿ ಪಲ್ಲಕ್ಕಿಯಲ್ಲಿ ಕೂರುವ ಅಧಿಕಾರವನ್ನು ಪಡೆದಿದ್ದನು. ಅವನ ಮಗನಾದ ಮಾಧವರಾವ ಇವರು ನನ್ನ ತಂದೆಯವರಾಗಿದ್ದರು. ಅವರು ಮೊಗಲ ಸರಕಾರದ ಕೈಕೆಳಗೆ ಕಾರ್ಯ ನಿರ್ವಹಿಸಿ ಪ್ರತಿಷ್ಠೆಯನ್ನು ಸಂಪಾದಿಸಿ ಮೊಗಲ ಸರಕಾರದಿಂದ –ತಿಂಗಳು ರಮಜಾನ ಸನ್ ೧೧೭೧ ಹಿಜರಿ ಸನ್ (೧೭೬೮) ರಂದು ಐದುಸಾವಿರದ ಜಹಗೀರನ್ನು ಪಡೆದನು. ಬಳಿಕ ನವಾಬ ಸರಕಾರವನ್ನು ತೊರೆದು ಪೇಶ್ವೆ ಸರಕಾರವನ್ನು ಸೇರಿ ಚತುರ ರಾಜಕಾರಣದ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಅದೂ ಅಲ್ಲದೆ ಸನ್ (೧೭೭೧) ಇಹಿದೇ ಸಬೈನಾಂತ ಭ ೧೨ ಜಮಾದಿಲಾವಲಿ ಸರಕಾರದಿಂದ ನವಾಬ ಮಹಮ್ಮದ ಅಲ್ಲಿಖಾನ ಸುಭೇ ಅರ್ಕಾಟ್ ಇವರಿಂದ ಸರಕಾರಕ್ಕೆ ಖಂಡಣಿ (ದ್ರವ್ಯ) ಬರಬೇಕಾಗಿತ್ತು. ಈ ಕಾರಣಕ್ಕಾಗಿ ಸರಕಾರವು ಯಾತ್ರೆಯ ಯೋಜನೆಯನ್ನು ರೂಪಿಸಿ ನನ್ನ ತಂದೆ ಮಾಧವರಾವ ಅವರ ಜೊತೆಗೆ ಆನೆ, ಕುದುರೆ ಒಂಟೆಯ ಸೈನ್ಯವನ್ನು ನೀಡಿ ಕಳಿಸಿತು. ಆಗ ಅವರು ನವಾಬರನ್ನು ಭೇಟಿಯಾಗಿ ಕರಾರುರಹಿತ ಖಂಡಣಿಯನ್ನು ವಸೂಲು ಮಾಡಿ ಸರಕಾರದ ಬೊಕ್ಕಸಕ್ಕೆ ಜಮೆ ಮಾಡಿದರು. ಚೆನ್ನಪಟ್ಟಣ, ಚಂದಾವರ, ಗದವಾಲ್ ಮತ್ತು ಸುರಾಪುರ ಮುಂತಾದ ಸಂಸ್ಥಾನಿಕರ ಜೊತೆಗೆ ಆಡಳಿತದ ಮಾತುಕತೆ ನಡೆಸುವ ಕಾರ್ಯವು ಮಾಧವರಾವ ಅವರೇ ಸರಕಾರದ ಪರವಾಗಿ ನಿರ್ವಹಿಸುತ್ತಿದ್ದರು. ಸನ್ (ಕ್ರಿ.ಶ. ೧೭೭೫) ಸೀತ ಸಬೈನಾತ ಕರ್ನಲ್ ಆಸಟೆನ್ ಸಾಹೇಬ ಮತ್ತು ಮೇಫ ಪರಸನ್ ಸಾಹೇಬರು ಪೇಶ್ವೆ ಸರಕಾರದ ಬಳಿ ವಕೀಲಿ ಕಾರ್ಯ ಮಾಡಲು ಕಲ್ಕತ್ತೆಯಿಂದ ಆಗಮಿಸಿದ್ದರು. ಆಗ ಸಹ ಮಾಧವರಾವ ಅವರ ಮೂಲಕವೇ ಮಾತುಕತೆ ನಡೆಯುತ್ತಿತ್ತು. ನಮ್ಮ ಹತ್ತಿರ ಸೈನ್ಯಕ್ಕಾಗಿ ಸರಂಜಾಮಿಲ್ಲ. ಸರಕಾರದ ಪರವಾಗಿ ದಂಡಯಾತ್ರೆಗೇನಾದರೂ ಹೋಗಬೇಕಾದ ಸಂದರ್ಭ ಬಂದರೆ ಸರಕಾರವೇ ಸೈನ್ಯವನ್ನು ಕಳಿಸುತ್ತಿದ್ದರು. ಸೈನ್ಯದಲ್ಲಿ ಸದಾಕಾಲ ಆನೆ ಮತ್ತು ಗೂಢಚಾರರು, ಸಂದೇಶವಾಹಕರು ಜೊತೆಯಲ್ಲಿರುತ್ತಿದ್ದರು. ಸರಕಾರದಿಂದಲೇ ನೇಮಕಾತಿಯಾಗಿ ಬರುತ್ತಿದ್ದರು. ಈ ಸಮುದಾಯ ಸರಂಜಾಮಿನ ಜಹಾಗೀರ ಬದಲಿಗೆ ಸೈನ್ಯದ

ವ್ಯವಸ್ಥೆಗಾಗಿ ೧೫ ಸಾವಿರದ ಗ್ರಾಮವನ್ನು ಸನ್ (೧೭೬೯) ಸಬೈನ್ ಮಯಾ ಮತ್ತು ಆಲಫ ಛ ೨೬ ಜಿಲಕಾದ ನವಾಬರಿಂದಲೇ ದೊರಕಿತು. ಅದೂ ಅಲ್ಲದೆ ಕುರಣ ಮತ್ತು ಅಸಾಮಿ ರೂಪಾಯಿ ೩೦೦ ಮತ್ತು ರಾಜಕೀಯ ಸಮಾಲೋಚನೆ ವಗೈರೆ ಆಂತರಿಕ ಆಡಳಿತಕ್ಕಾಗಿ ೫೦೦೦/– ರುಪಾಯಿ ಪ್ರತಿವರ್ಷ ಬಹುಮಾನವಾಗಿ ಸಿಗುತ್ತಿತ್ತು. ಈ ರೀತಿಯಲ್ಲಿ ವಹಿವಾಟು ನಡೆಯುತ್ತಿತ್ತು. ನಾವು ಕೈಕೊಂಡ ಗ್ರಾಮ ಜಹಾಗೀರಿನ ವಹಿವಾಟಿನಲ್ಲಿ ಪೇಶ್ವೆ ಸರಕಾರ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ನಾವೇ ನಮ್ಮ ಅಧಿಕಾರವನ್ನು ನಡೆಸುತ್ತಿದ್ದೆವು. ನಮ್ಮ ಬಳಿಯಲ್ಲಿರುವ ಸರಂಜಾಮು ವಹಿವಾಟಿನ ತಪಶೀಲು ಹೀಗಿದೆ.

೨೧೩೦ ನಿಂಬಗಾಂವ ಗ್ರಾಮ ಪ್ರದೇಶದ ಕಡೆವಳಿಯಲ್ಲಿ ಕುಗ್ರಾಮ ಸೇರಿದೆ.

೧೧೦೦ ಗ್ರಾಮ ಟಾಕಳಿ ಖಂಡೇಶ್ವರಿ ಶ್ರೀಗೊಂದೆ ಪ್ರದೇಶದಲ್ಲಿಯ ಜಹಗೀರಿನ ಆಡಳಿತ ಮತ್ತು ಸ್ವರಾಜ್ಯ ರುಪಾಯಿ ೨೨೦೦ ಇದರಲ್ಲಿ ಅರ್ಧಶಿಂದೆ ಇವರಿಂದ ರುಪಾಯಿ ೧೧೦೦ ಬಾಕಿ ರೂಪಾಯಿ ನಮ್ಮ ಬಳಿಗಿದೆ.

೯೩೬ ಗ್ರಾಮ ವಡಗಾಂವ ಶಿಂದೆ ತರ್ಫ್ ಹವೇಲಿ ಪ್ರಾಂತ ಪುಣೆ ಸಂಬಳ ಸಹಿತ ಆದಾಯದ ಅಧಿಕಾರ (ಸರದೇಶಮುಖಿ)

೧೬೨೫ ಗ್ರಾಮ ವಾಘೋಲಿ ಪ್ರದೇಶದ ಧಾರೂರ ಕೇಂದ್ರದ ಜಹಾಗೀರಿನ ಅಧಿಕಾರ ಮತ್ತು ಖರ್ಚಿನ ಬಾಬತ್ತು

೭೫ ಗ್ರಾಮ ಎರವಡೆಯಲ್ಲಿಯ ನೀರಾವರಿಭೂಮಿ ಮತ್ತು ಅರಮನೆ

——

೫೮೬೬

ಸದ್ಯ ನಡೆಯದೆ ಇರುವ ವಹಿವಾಟಿನ (ವ್ಯವಹಾರ ತಪಶೀಲು)

೬೫೬೮೧೧೧ ಗ್ರಾಮ ಶಿಂಗವೇ ಪ್ರದೇಶ ಕುಂಭಾರಿ ಈ ಗ್ರಾಮವು ಪೇಶ್ವೆ ಆಡಳಿತದ ಕಾಲದಲ್ಲಿ ಬಾಜೀರಾವ ಸಾಹೇಬರು ಭಗವಂತಸಿಂಗ ಬಾಬಾ ಇವರ ಮೂಲಕ ಜಪ್ತಿ ಮಾಡಿಸಿದರು. ಇದನ್ನು ಛ ೧೯ ಸವಾಲ ಮಾಘ ಮಾಸ ಸನ್ ಇಸನೇ ಮಯಾತೇನಾತ ಮುಕ್ತಗೊಳಿಸಿದ್ದರಿಂದ ಅಲ್ಲಿ ನಮ್ಮ ಅಧಿಕಾರ ನಡೆಯಲಿಲ್ಲ.

೧೦೦೩೧ ಗ್ರಾಮಶಹಾ ಪ್ರದೇಶ ಇಂದಾಪುರೀ ಊರಿನ ಹಕ್ಕನ್ನು ಬಾಜೀರಾವ ಸಾಹೇಬರು ನಮ್ಮಿಂದ ಕಸಿದುಕೊಂಡು ಗಮಾಜಿ ನಿಂಬಾಳಕರ

ಅವರಿಗೆ ನೀಡಿದರು. ಅದನ್ನು ಬಗೆಹರಿಸಿ ನಮಗೆ ಒಪ್ಪಿಸುವ ಸನದು ಸನ್ ಇಸನೇ ಮಯಾನೆತ್ ಛ ೨೭ ರಬಿಲಾವಲ್ ಮಾಡಲಾಯಿತು. ಮುಂದೆ ಸದಾಶಿವ ಮಾಣಕೇಶ್ವರ ಇವರ ಕೈಗೆ ಇಂದಾಪುರ ಜಿಲ್ಲೆ ಹೋದಾಗ ಅವರು ಈ ಗ್ರಾಮವನ್ನು ನಮ್ಮಿಂದ ಕಸಿದುಕೊಂಡು ಸರಕಾರಕ್ಕೆ ಜಮೆ ಮಾಡಿದರು.

೧೪೯ ಗ್ರಾಮ ಅರಣಿ ಪ್ರದೇಶ ಘೋಗಿ ಊರು ಯುದ್ಧದ ಕೊನೆಯವರೆಗೂ ನಮ್ಮ ಹತ್ತಿರವಿತ್ತು. ಮುಂದೆ ಸನ್ ೧೨೨೭ ಶಕೆಯಲ್ಲಿ ಮೊಗಲ ಸರಕಾರ ಗ್ರಾಮವನ್ನು ಜಪ್ತು ಮಾಡಲಾಯಿತು. ಈ ಕಾರಣಕ್ಕಾಗಿ ಮೆಹರಬಾನ್ ಚಾಪ್ಲಿನ್ ಸಾಹೇಬ ಬಹಾದ್ದೂರ ಮೊಗಲರಿಂದ ಬರೆಯಿಸಿಕೊಂಡ ಗ್ರಾಮವನ್ನು ನಮ್ಮ ಸುಪರ್ದಿಗೆ ನೀಡಿದರು. ಆ ಬಳಿಕ ಸನ್ ೧೨೩೨ ಶಕೆಯಿಂದ ಗ್ರಾಮದ ಹಕ್ಕನ್ನು ಮತ್ತೆ ಮೊಗಲರು ಜಪ್ತು ಮಾಡಿದರು. ಈ ಬಗೆಗಿನ ಮಾಹಿತಿಯನ್ನು ಈ ಮೊದಲೇ ಕಂಪನಿ ಸರಕಾರಕ್ಕೆ ನೀಡಲಾಗಿದೆ. ಹೀಗಿದ್ದರೂ ಯಾವುದೇ ನಿರ್ಣಯವಾಗದೆ ನಮ್ಮ ಗ್ರಾಮವನ್ನು ನಮಗೆ ಮರಳಿ ನೀಡಲಿಲ್ಲ. ಈ ಕಾರಣಕ್ಕಾಗಿ ದಯಮಾಡಿ ನಮ್ಮ ಗ್ರಾಮ ನಮಗೆ ನೀಡಬೇಕು.

೧೦೦ ಗ್ರಾಮ ರಾಯಖಲೆ ಪ್ರದೇಶ ನಲದುರ್ಗ ಪರಸ್ಪರವಾಗಿ ಮೊಗಲ ಸರಕಾರದಿಂದ ಜಪ್ತು ಆಗಿದೆ.

೪೩ ಆಜ್ಞೆಯಂತೆ ಸೈನ್ಯದ ಉಸ್ತುವಾರಿಯ ಖರ್ಚು

೯೧೩೪

ಅದೂ ಅಲ್ಲದೆ ನಡೆಯದೆ ಇರುವ ಕಲಮು–

೧. ಕುರಣ ಗ್ರಾಮದ ನಾಣೋಲಿ ತರ್ಫ್ ಚಾಕಣ ಪ್ರದೇಶ ಜುನ್ನರವು ಯುದ್ಧದ ಕೊನೆಯವರೆಗೂ ಪೇಶ್ವೆ ಸರಕಾರ ನಮಗೆ ನೀಡಿತ್ತು. ಮುಂದೆ ಕಂಪನಿ ಸರಕಾರದ ಆಡಳಿತ ಬಂದ ಬಳಿಕ ಆ ಹಕ್ಕು ನಮಗೆ ಉಳಿಯಲಿಲ್ಲ. ಅದನ್ನು ಮರಳಿ ಕೊಡಿಸಬೇಕು.

೧. ಚಿಟಗೋಡೆ ಪ್ರದೇಶದ ಮುಜಮಿ, ಆಸಾಮಿನ ವ್ಯವಹಾರ ನಮ್ಮ ಬಳಿಯಿಲ್ಲ.

೧. ಬಹುಮಾನವೆಂದು ಪೇಶ್ವೆ ಸರಕಾರವು ೫೦೦೦/- ರೂಪಾಯಿ ನೀಡುತ್ತಿತ್ತು. ಅದು ಈಗ ಸಿಗುವುದಿಲ್ಲ.

ಸದರಿಯಂತೆ ಜಹಾಗೀರಿನ ವ್ಯವಹಾರ ನಡೆಯುತ್ತಿತ್ತು. ನಡೆಯದೆ ಇರುವ ತಪಶೀಲನ್ನು ನೀಡಲಾಗಿದೆ. ಅದೂ ಅಲ್ಲದೆ ನಮ್ಮ ತಂದೆ ಪೇಶ್ವೆ ಸರಕಾರಕ್ಕೆ ರಾಜಕೀಯ ಸಲಹೆಯನ್ನೂ ನೀಡುತ್ತಿದ್ದರು. ಅವರ ಸಹಾಯದಿಂದ ಸಂಸ್ಥಾನಿಕರು ತಮ್ಮ ಕೆಲಸ ಕಾರ್ಯ, ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಿದ್ದರು. ಅದರಿಂದ ಪೇಶ್ವೆ ಸರಕಾರದಲ್ಲಿ ಅವರಿಗೆ ಉನ್ನತ ಗೌರವ ಸಿಗುತ್ತಿತ್ತು. ಮುಂದೆ ಸನ್ ಸಬಾ ಸಮಾನಿನ್ ಮಯಾತ್‌ರಲ್ಲಿ ನಮ್ಮ ತಂದೆ ದೈವಾಧೀನರಾದರು. ಮುಂದೆ ಸರಕಾರ ಕೃಪೆ ಮಾಡಿ ಜಹಗೀರನ್ನು ಮುಂದುವರೆಸಿತು. ಸದ್ಯ ಯುದ್ಧದ ಕೊನೆಯವರೆಗೂ ಯಾವ ಜಹಾಗೀರು ನಮ್ಮ ಅಧಿಕಾರದಲ್ಲಿತ್ತೋ ಆ ತಪಶೀಲು ಮೇಲೆ ತಿಳಿಸಿದಂತೆ ನಡೆಯುತ್ತ ಬಂದಿದೆ. ಅದರ ಸಹಾಯದಿಂದ ಜೀವನ ನಿರ್ವಹಣೆ ಮಾಡುತ್ತಲಿದ್ದೇನೆ. ಮತ್ತು ಗೌರವದ ಪೋಷಾಕು ದಸರೆಯಂದು ಸರಕಾರ ಕಳಿಸುತ್ತ ಇರುತ್ತದೆ. ಇದು ಇಲ್ಲಿಯ ಮಜಕೂರು.

(ತಾರೀಕ ವ. ತಿಂಗಳು ಡಿಸೆಂಬರ್, ಸನ್ ೧೮೩೨ ಇಸವಿ)

ಸಾಹೇಬ ಮೆಹರ್ಬಾನ ದೋಪ್ತಾ ರಾಬರ್ಟ್ ಕಿಸನ್ ಸಾಹೇಬ ಬಹಾದೂರ ಎಕ್ಟಿಂಗ್ ಜಿಲ್ಲೆ ದಕ್ಷಿಣ ದಾಮೋಹಬತಹೂ

ಛ ಆಜದಿಲ್ ಏಖಲಾಸ್ ಗಣಪತರಾವ ಮಾಧವ ಜಾಧವರಾಯ ಜಹಾಗೀರದಾರ ಮೂಲಕ ಕಂಪನಿ ಸರಕಾರಕ್ಕೆ ಸಲಾಮ್. ನಿಮ್ಮ ಕ್ಷೇಮ ಸಮಾಚಾರವನ್ನು ಸದಾಕಾಲ ಬರೆದು ತಿಳಿಸುತ್ತಿರಬೇಕು. ದರಿವಿಲಾ ದಿಗರ್ ಮಜಮುನ್ ಸಾಹೇಬರ ಕಡೆಯಿಂದ ನಂಬರ್ ೩೭೭ ತಾರೀಕ ೨೯. ಮಾಹೇ ಜುಲೈ ಸನ್ ೧೮೫೧ರಂದು ಮಾಡಲಾದ ಸೂಚನೆಯಂತೆ - ನಿಮಗೆ ನೀಡಿದ ಕಿತಾಬ್ ಜಾಧವರಾಯ ಹುದ್ದೆಯು ಎಂದು, ಯಾವ ಕಾರಣಕ್ಕಾಗಿ, ಯಾರಿಂದ ಪ್ರಾಪ್ತವಾಗಿದೆ ಮತ್ತು ನಿಮ್ಮ ಒಟ್ಟೂ ಮನೆತನದ ಹುದ್ದೆ ಪ್ರತಿಷ್ಠೆಯ ಚರಿತ್ರೆಯನ್ನು ದಾಖಲೆ ಸಹಿತ ಬರೆದು ತಿಳಿಸಬೇಕು ಹಾಗೆ ದಾಖಲೆಯ ಪತ್ರಗಳಿದ್ದರೆ ಅದನ್ನು ಕಳಿಸಬೇಕು. ಅನ್ಯರು ಹೇಳಿದ ಸುದ್ದಿಯಿದ್ದರೆ, ಅದಕ್ಕೆ ಪುರಾವೆಯಿರದಿದ್ದರೆ, ಅದನ್ನು ಸ್ಪಷ್ಟವಾಗಿ ಬರೆದು ತಿಳಿಸಬೇಕು- ಎಂದಿದೆ. ಅದಕ್ಕೆ ಉತ್ತರ - ನನ್ನ ವಯಸ್ಸು ಮೂರು ಆಗಿದ್ದಾಗ, ೫೦-೬೦ ವರ್ಷದ ಯಜಮಾನನು ಹೇಳಿದ್ದು ಹೀಗಿದೆ, ಮೊಗಲರ ನೌಕರನಾದ ಚಂದ್ರಸೇನ ಜಾಧವರಾವ ಸರಕಾರ ಅವರ ಆಶ್ರಯದಲ್ಲಿದ್ದ ನನ್ನಜ್ಜ ಸದಾಶಿವರಾವನು ಇನ್ನೂರ ಜನರ ಸರದಾರನಾಗಿದ್ದನು. ಅವನ ಮಗ ಮಾಧವರಾವ, ಅವನ ಮಾನಸಪುತ್ರ ನಾನು, ನನ್ನ ಹೆಸರು ಗಣಪತರಾವ, ಸದ್ಯ ನನ್ನ ವಯಸ್ಸು ಎಪ್ಪತ್ತೆರಡು. ಹೀಗಾಗಿ ಹಿಂದಿನ

ಕೇಳಿದ-ತಿಳಿದ ವಿಷಯವನ್ನು ಸಾಹೇಬರ ಗಮನಕ್ಕೆ ತರಬಯಸುತ್ತೇನೆ. ಮೊಗಲ ಕಾಲದಲ್ಲಿ ಬಂಡಾಯ ನಡೆದು ಜಾಧವರಾವ ಮತ್ತು ಸಂಪತ್ತು-ಸೈನ್ಯ ಎಲ್ಲವೂ ನಾಶವಾಯಿತು. ಆಗ ನಮ್ಮ ಅಜ್ಜನೂ ತೀರಿಹೋದ. ನಮ್ಮ ತಂದೆ ಅಲ್ಲಿಂದ ಹೊರಬಿದ್ದು, ಅವರ ವಾಸದ ಊರಾದ ಭ್ರಾಚಿ ಚಿಟಗೋಪೆಗೆ ಮರಳಿ ಬಂದು ನೆಲೆಸಿದರು. ಆ ಸಮಯದಲ್ಲಿ ನವಾಬ ಸರಕಾರದಿಂದ ೫ ಸಾವಿರದ ಮೂರು ಗ್ರಾಮಗಳ ಉಂಬಳಿಯನ್ನು ನೀಡಲಾಯಿತು. ಬಳಿಕ ಜಾನಬಾಸಾಹೇಬ ನಿಂಬಾಳಕರ ಅವರು ನವಾಬರ ಆಶ್ರಯದಲ್ಲಿದ್ದವರು. ಅವರಿಗೆ ಕಮಾಯಲ್ಲಿ ಹತ್ತುಲಕ್ಷ ರುಪಾಯಿಯ ಜಹಾಗೀರು ನೀಡಲಾಗಿತ್ತು. ಅವರ ದಿವಾನರಾದ ಅಪ್ಪಾ ಅವರ ಮಾವನು ಇವರ ಭೇಟಿಗೆ ಬಂದರು. ಮೊಗಲರು ನೀಡಿದ ಮೂರು ಗ್ರಾಮಗಳಲ್ಲಿ ಕಮಾನಳೆಯ ಸನಿಹದಲ್ಲಿದ್ದ ನಿಂಬಗಾಂವ ಎಂಬಲ್ಲಿಗೆ ಸರಂಜಾಮು ಸಹಿತವಾಗಿ ಬಂದು ನೆಲೆಸಿದರು. ಮುಂದೆ ಸವಾಯಿ ಮಾಧವರಾವ ಅವರ ಮದುವೆ ನಡೆದಾಗ ನಿಂಬಾಳಕರ ಅವರು ಪೇಶ್ವೆಯವರಿಗೆ ಅಧಿಕಾರ ನೀಡಿ ಪುಣೆಗೆ ಕಳಿಸಿದರು. ಅಲ್ಲಿ ಪೇಶ್ವೆಯ ಭೇಟಿಯಾಗಿ ಅವರನ್ನು ಗೌರವಿಸಲಾಯಿತು. ಆಗ ಇವರು ಸರಕಾರದ ಆಸರೆಯಲ್ಲಿರಬೇಕೆಂದು ರಾಜನಿಗೆ ಅನಿಸಿತು. ಈ ಕಾರಣದಿಂದಾಗಿ ೧೦,೦೦೦/- ರೂಪಾಯಿಯ ಜಹಾಗೀರು ಮತ್ತು ಒಂದು ಆನೆಯನ್ನು ಬಹುಮಾನವಾಗಿ ನೀಡಿ ನಾಲ್ಕು ಕೆಲಸವನ್ನು ಒಪ್ಪಿಸಿದರು. ಚೆನ್ನಪಟ್ಟಣದ ನವಾಬರ ವಕೀಲಿ ಮತ್ತು ಚಂದಾವರರಾಜನ ವಕೀಲಿ, ಸುರಪುರದ ವಕೀಲಿ ಹಾಗೂ ಕರ್ನೂಳ ಕಡಪಾದ ನವಾಬರ ವಕೀಲಿ, (ರಾಯಭಾರಿ) ಕಾರ್ಯವನ್ನು ನೇಮಿಸಿದರು. ಈ ವಿಷಯ ನೋಡಿದ ಕೇಳಿ ಜನರಿಂದ ಸಂಗ್ರಹಿಸಲಾಗಿದೆ. ಅದನ್ನು ಸಾಹೇಬರ ಗಮನತರುವ ಉದ್ದೇಶದಿಂದ ಬರೆದು ತಿಳಿಸುತ್ತಿದ್ದೇವೆ. ಇದರ ಹೊರತು ನಮ್ಮ ಹತ್ತಿರ ದಾಖಲೆಪತ್ರವಿರಬೇಕಿತ್ತು. ಆದರೆ ಸರಕಾರಿ ದಪ್ತರದ ಕೆಲಸ ಇವರ ಬಳಿ ಇಲ್ಲದ್ದರಿಂದ ಯಾವುದೇ ಕಾಗದಪತ್ರಗಳ ಪುರಾವೆ ನಮ್ಮ ಹತ್ತಿರವಿಲ್ಲ. ಸರಕಾರ ಸೈನ್ಯದ ವ್ಯವಸ್ಥೆಗಾಗಿ ನೀಡಿದ ೧೫,೦೦೦/-ರುಪಾಯಿಯ ಜಹಗೀರು ನಮ್ಮ ಬಳಿಯಿತ್ತು. ಅದನ್ನು ಪರಿಶೀಲನೆಗಾಗಿ ಸಾಹೇಬರ ಬಳಿಗೆ ಕಳಿಸಲಾಗಿದೆ. ಅದರ ಹೊರತು ನಮ್ಮ ಹತ್ತಿರ ಬೇರೆ ಯಾವುದೇ ದಾಖಲೆಯಿಲ್ಲ. ಸೈನ್ಯದ ವ್ಯವಸ್ಥೆಗೆ ೭೬ ವರ್ಷಗಳಾದವು. ಆ ಕಾಗದ ಪತ್ರದ ಮೇಲೆ ನಾನಾಫಡ್ನಿಸರ ರುಜುವಿದೆ. ತಾರೀಕ ೧೮,ಮಾಹೇ ಜೂನ, ಸನ್ ೧೮೫೨ ಇಸವಿ. ಹೆಚ್ಚಿಗೇನು ಬರೆಯಲಿ?

ರುಜು
ಗಣಪತರಾವ ಮಾಧವ ಜಾಧವರಾವ
ದಸ್ತೂರ ಖುದ್

ಡಫಳೆ

ಯಶವಂತರಾವ ಬಿನ್ ನಾರಾಯಣರಾವ ರಾಜೇ, ಚವ್ಹಾಣ ಡಫಳೆ ದೇಶಮುಖ ಚಾರ ಪ್ರದೇಶದ ಸರಕಾರ ವಿಜಾಪುರ ಸುರಸನ್ ೧೨೨೮ ಫಸಲಿ ಮಾಹೆ ರಾಖಿಲಾಖರ್ ಬರೆದುಕೊಟ್ಟ ಕೈಫಿಯತ್ ಹೀಗಿದೆ. ನಮ್ಮ ತಂದೆಯವರು ಸಾತಾರಾದಲ್ಲಿ ಔರಂಗಜೇಬ ಬಾದಶಹನೊಂದಿಗೆ ಯುದ್ಧ ಮಾಡಿದರು. ಆಗವರು ಸರಕಾರಕ್ಕೆ (ರಾಜನಿಗೆ) ಸಹಾಯ ಮಾಡಿದರು. ಈ ಕಾರಣಕ್ಕಾಗಿ ಶೆಟ್ಯಾಜಿರಾವ ರಾಜೇ ಚವ್ಹಾಣ ಡಫಳೆ ದೇಶಮುಖ ಚಾರಪ್ರದೇಶದ ಸರಕಾರ ವಿಜಾಪುರ ಇವರಿಗೆ ಜತ್ ಪ್ರದೇಶ ೧, ಹಾನವಡ್ ಪ್ರದೇಶ ೧, ಚಾರ ಪ್ರದೇಶದ ದೇಶಮುಖಿ ಮತ್ತು ಎರಡು ಪ್ರದೇಶಗಳ ಜಹಗೀರು ಜತ್ ಮತ್ತು ಕರ್ಜಗಿ ಪ್ರದೇಶವನ್ನು ನೀಡಿದರು. ಅಂದಿನಿಂದ ಇಂದಿನವರೆಗೆ ಈ ವಹಿವಾಟು ಅನುಭವಿಸುತ್ತ ಬಂದಿದ್ದೇವೆ. ಶೇಟ್ಯಾಜಿರಾವ ರಾಜೆ ಚವ್ಹಾಣ ಇವರ ಪುತ್ರ ಬಾಬಾಜಿ ಚವ್ಹಾಣರೂ ಭೋಗಿಸಿದರು. ಅವರ ಪುತ್ರ ಯಶವಂತರಾವ ರಾಜೇ ಚವ್ಹಾಣ ಡಫಳೆ ದೇಶಮುಖ ಅವರ ಸೋದರ ರಾಮರಾವ ರಾಜೇ ಚವ್ಹಾಣ ಮತ್ತು ಮೂರನೆಯವರು ಭಗವಂತರಾವ ಚವ್ಹಾಣ, ಯಶವಂತರಾವ ಚವ್ಹಾಣರ ಮಗ ಅಮೃತರಾವ ಚವ್ಹಾಣ ಅವರ ಜೊತೆಗೂಡಿ ರಾಮರಾವ ಚವ್ಹಾಣರು ಸೇರಿ ಜಿಲ್ಲೆಯ ವಹಿವಾಟನ್ನು ನೋಡಿಕೊಳ್ಳುತ್ತಿದ್ದರು. ಅಮೃತರಾವ ಬಿನ್ ಯಶವಂತರಾವ ಚವ್ಹಾಣ ಮತ್ತು ನಾರಾಯಣ ಬಿನ್ ರಾಮರಾವ ಚವ್ಹಾಣ ಇಬ್ಬರೂ ಸೇರಿ ಸಂಸ್ಥಾನದ ಆಡಳಿತವನ್ನು ನೋಡಿಕೊಳ್ಳುತ್ತ ಬಂದರು. ಅಮೃತರಾವ ಅವರ ಉದರದಲ್ಲಿ ಹುಟ್ಟಿದ ಖಾನಾಜಿರಾವ ಚವ್ಹಾಣ ದೇಶಮುಖರು ಭೋಗಿಸಿದರು. ಸನ್ ೧೨೨೪ ಫಸಲಿ ವರ್ಷ ಜಿಲ್ಲೆಯ ರಾಜರಿಂದ ಡೆಂಗಳೆಯ ಕೈಗೆ ಹೋಯಿತು. ಖಾನಾಜಿರಾವ ಚವ್ಹಾಣ, ಯಶವಂತರಾವ ಬಿನ್ ನಾರಾಯಣ ಚವ್ಹಾಣ ಈ ಉಭಯತರು ಜಿಲ್ಲೆಯ ವ್ಯವಹಾರವನ್ನು ನೋಡಿಕೊಂಡರು. ಖಾನಾಜಿರಾವ ಅವರಿಗೆ ಮಾತೋಶ್ರೀ ರೇಣುಕಾಬಾಯಿ ಮತ್ತು ಮಾತೋಶ್ರೀ ಸಾಳುಬಾಯಿ ಎಂಬ ಇಬ್ಬರು ಪತ್ನಿಯರಿದ್ದರು. ಹಿರಿಯ ಪತ್ನಿಯ ಜೊತೆಗೆ ಹೊಂದಾಣಿಕೆಯಾಗದೆ ಇರುವುದರಿಂದ ರೇಣುಕಾಬಾಯಿಯವರು ನಿಪ್ಪಾಣಿಗೆ ಹೊರಟುಹೋದರು. ಕಿರಿಯ ಪತ್ನಿ ಜತ್ತದಲ್ಲಿದ್ದರು. ಮುಂದೆ ಸನ್ ೧೨೨೫ರಲ್ಲಿ ಖಾನಾಜಿರಾವ ಡಫಳೆ ಕಾಲವಶರಾದರು. ಆಗ ಯಶವಂತರಾವ ಚವ್ಹಾಣ ಸನಿಹದಲ್ಲಿದ್ದರು. ಅವರ ತೊಡೆಯ ಮೇಲೆ ಪ್ರಾಣವನ್ನು ಬಿಟ್ಟರು. ಉದರದಲ್ಲಿ ಸಂತಾನವಿರಲಿಲ್ಲ. ಯಶವಂತರಾವ ಅವರೇ ಯಥಾಸಾಂಗ ವಿಧಿಯನ್ನು ಮಾಡಿದರು. ಮುಂದೆ ಐದಾರು ತಿಂಗಳ ಬಳಿಕ ರೇಣುಕಾಬಾಯಿಯನ್ನು ನಿಪ್ಪಾಣಿಯಿಂದ ಕರೆ ತರಲಾಯಿತು. ಅಲ್ಲಿಂದ ಅಥಣಿಗೆ ಬಂದರು. ಗೋವಿಂದ

ವಾಸುದೇವ ನಿಸಬತ್ ತ್ರ್ಯಂಬಕಜಿ ಡೆಂಗಳೆಯವರ ವಿದ್ಯಮಾನದಲ್ಲಿ ಸಮಾಲೋಚನೆ ನಡೆದು ಯಜಮಾನಿಕೆಯಲ್ಲಿ ಮಾತೋಶ್ರೀ ಅವರಿಗೆ ನೀಡಿ ಅವರು ಆಡಳಿತವನ್ನು ಮುಂದುವರೆಸಬೇಕು ಎಂದಾಯಿತು. ಈ ಕಾರಣದಿಂದ ಮಾತೋಶ್ರೀ ಜತ್ತಗೆ ಬಂದರು. ಒಂದೆರಡು ವಾರ ವಾಸ್ತವ್ಯ ಮಾಡಿದರು. ಮಾತೋಶ್ರೀ ರೇಣುಕಾಬಾಯಿ ಅವರು ಗೋವಿಂದ ವಾಸುದೇವ ನಿಸಬತ್ ಡೆಂಗಳೇ ಇವನೊಂದಿಗೆ ಸಂಧಾನ ಮಾಡಿಕೊಂಡು, ಅವನನ್ನು ಸಂತೋಷಪಡಿಸಿದರು. ನಾನು ಜತ್ತನಲ್ಲಿರಬಾರದೆಂದು ನಿರ್ಧರಿಸಿ ಅಲ್ಲಿಂದ ಹೊರದೂಡಿದರು. ನಾನು ಅಲ್ಲಿಂದ ಹೊರಬಿದ್ದು ಹುಜತಿಸ್‌ಗೆ ಬಂದೆ. ಇವತ್ತಿನವರೆಗೆ ಜತ್ತಗೆ ಹೋಗಲಿಲ್ಲ. ಸಂಸ್ಥಾನಕ್ಕೆ ನಾವೇ ಅಧಿಕಾರವಿದ್ದವರು ಮತ್ತು ರೇಣುಕಾಬಾಯಿ ದೇಶ ತೊರೆದು --ಯಾದವರು. ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳಲಾಗಿದೆ. ಹೀಗಿರುವಾಗ ಅವರಿಬ್ಬರೂ ಕಾರಭಾರಿಗಳು ಸೇರಿ ನಮಗೆ ಪ್ರತಿಯೊಂದು ವಿಷಯದಲ್ಲಿ ನಮಗೆ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಬಂದೋಬಸ್ತ್ ಮಾಡಿಕೊಡುವ ಬಾದಶಹಾ ಇದ್ದಾರೆ. ನನ್ನಿಂದ ಸೇವೆ ಚಾಕರಿ ವಿಷಯದಲ್ಲಿ ಯಾವ ವ್ಯತ್ಯಾಸವೂ ಆಗಲಾರದು.

೧೨

ಥೋರಾತ್

ಸಾಹೇಬ ಮುಷವಕ್ ಮೆಹರಬಾನ್ ದೋಸ್ತಾ ಹೆನ್ರಿ ಬ್ರೌನ್ ಸಾಹೇಬ ಬಹಾದ್ದೂರ ಏಜಂಟ್ ಜಿಲ್ಲಾ ದಕ್ಷಿಣ ಸಲಾಮ್.

೧. ಆಜದಿಲ್ ಏಖಲಾಸ್ ಆನಂದರಾವ ಥೋರಾತ್ ದಿನಕರರಾವ ಜಹಾಗೀರದಾರ ಠಾಣೆ ಗ್ರಾಮ ವೀರಗಾಂವದಲ್ಲಿರುವ ಆಕೋಲೆ ಜಿಲ್ಲೆ, ಅಹಮದ ನಗರ ಸಲಾಮ ಬಾಜದ್ ಸಲಾಮ ಆಜ್ಯಮ ಅಂಕಿ ತಾಗಾಯಿತ್ ಕಾರ್ತಿಕ ವದ್ಯ ೧೩ ಸನ್ ೧೨೬೧ವರೆಗೆ ಸಾಹೇಬರು ತಮ್ಮ ಕ್ಷೇಮ ಸಮಾಚಾರವನ್ನು ಬರೆದು ಸದಾಕಾಲ ತಿಳಿಸುತ್ತಿರಬೇಕು. ದಿಗರ್ ಮಜಮುನ್ ಸಾಹೇಬರಿಂದ ದಿನಾಂಕ ೨೬, ಮಾಹೇ ಅಗಸ್ಟ್ ಸನ್ ೧೮೫೧ರ ಇಸವಿಯ ಪತ್ರ ಬಂದಿದೆ. ಅದರಲ್ಲಿರುವ ವಿಷಯವೇನೆಂದರೆ ತಮಗೆ ದಿನಕರರಾವ ಎಂಬ ಶ್ರೇಷ್ಠ ಪದವಿಯನ್ನು ನೀಡಲಾಗಿದ್ದು, ಅದನ್ನು ಎಂದು ಯಾವ ಕಾರಣಕ್ಕಾಗಿ ಯಾರಿಂದ ಪ್ರಾಪ್ತವಾಗಿದೆ ಎನ್ನುವುದರ ಸಂಪೂರ್ಣ ಮನೆತನದ ಮತ್ತು ಶ್ರೇಷ್ಠ ಹುದ್ದೆಯ ಇತಿಹಾಸವನ್ನು ದಾಖಲೆ ಸಹಿತ ಬರೆದು ತಿಳಿಸಬೇಕು. ಅದರ ಜೊತೆಗೆ ದಾಖಲೆಗಳನ್ನೂ ಲಗತ್ತಿಸಬೇಕು. ಜನರ ಬಾಯಿಂದ ಕೇಳಿ ತಿಳಿದುಬಂದ ಇತಿಹಾಸವಿದ್ದಲ್ಲಿ, ಅದರ ಬಗೆಗೂ ಸ್ಪಷ್ಟವಾಗಿ ಬರೆಯಬೇಕು. ಆದರೂ ಹಳೆಯ ಕಾಗದ ಪತ್ರಗಳ ಸಹಾಯದಿಂದ ಮತ್ತು ಮಾಹಿತಿಯಿರುವ ಜನರಿಂದ ಎಷ್ಟು ಮಾಹಿತಿಯನ್ನು ಸಂಗ್ರಹಿಸುವುದು ಸಾಧ್ಯವೋ ಅದೆಲ್ಲವನ್ನೂ ಬರೆದು ಕಳಿಸಬೇಕು. ಈ ವಿಷಯದ ಕುರಿತು ತಿಳಿಸುವುದೇನೆಂದರೆ – ನನ್ನ ಅಜ್ಜನ ಅಜ್ಜನಾದ ಕೈಲಾಸವಾಸಿ ಶಕೋಜಿರಾವ ಥೋರಾತ ಇವರು ಶ್ರೀಮಂತ ಮಹಾರಾಜ ರಾಜೇ ಶಾಹೂ(?)ಛತ್ರಪತಿ ಮಹಾರಾಜರು ವಿಜಾಪುರ ಬಾದಶಹಾನ ಮೇಲೆ ದಂಡೆತ್ತಿಹೋಗಿ, ಭೀಕರ ಕಾಳಗ ನಡೆಯಿತು. ಈ ಕಾಳಗದಲ್ಲಿ ಛತ್ರಪತಿ ಮಹಾರಾಜರು ಸೋತು ಪರಾಭವಗೊಂಡರು. ಆಗ ನನ್ನ ಅಜ್ಜನ ಅಜ್ಜನು ಛತ್ರಪತಿ ಮಹಾರಾಜರನ್ನು ತಾನು ಕೂತ ಕುದುರೆಯ ಮೇಲೆ ಹೊತ್ತು ರಾತ್ರಿಯೇ, ಸಾತಾರದ ಕೋಟೆಗೆ ಕರೆತಂದರು. ಬಳಿಕ ಬೆಳಕು ಹರಿಯಿತು. ಮಹಾರಾಜರು ತುಂಬ ಪ್ರಸನ್ನರಾಗಿ ದಿನಕರರಾವ್ ಎಂಬ ಪದವಿಯನ್ನು ನೀಡಿದರು. ಮತ್ತು ಒಂಬತ್ತು ಲಕ್ಷದ ಬೆಲೆಯ ಸನದು ಜಿಲ್ಲೆಯ ಪ್ರದೇಶವನ್ನು ನೀಡಿದರು. ಸನದು ಹಾಗೂ ಉಳಿದ ಕಾಗದಪತ್ರಗಳಲ್ಲಿ ನಮ್ಮ ೫ನೇ ವಂಶದ ಪುರುಷರಿಂದ ದಿನಕರರಾವ

ಎಂಬ ಪದವಿಯನ್ನು ಬರೆವ ವಹಿವಾಟು ಇಂದಿನವರೆಗೂ ನಡೆದುಬಂದಿದೆ. ದಿನಕರ ಪದವಿಯನ್ನು ನೀಡದ ಬೇರೆ ಪ್ರತ್ಯೇಕ ದಾಖಲೆಯ ಬಗೆಗೆ ಹೇಳಬೇಕಂದರೆ, ನಮ್ಮ ಪೂರ್ವಜರು ಪರಾಕ್ರಮ ಮಾಡಿ ಮಹಾರಾಜರಿಂದ ಪಡೆದ ಸನದು ಪದವವಿಯ ಹೋಳ್ಕರರ ದಂಗೆ ಮತ್ತು ಬರಗಾಲದ ಕಾಲದಲ್ಲಿ ಕಳೆದುಹೋಯಿತು. ಆಗ ಸರಕಾರ ಕಡೆಯಿಂದ ದಿನಕರ ಎಂಬ ಪಡೆದ ಪದವಿಯೂ ಕಳೆದು ಹೋಗಿರಲೂಬಹುದು. ಇದರ ಬಗೆಗೆ ಖಚಿತ ಮಾಹಿತಿಯಿಲ್ಲ. ಆದರೆ ಛತ್ರಪತಿಯ ಕಾಲದ ಕೆಲವು ಸನದು ಮತ್ತು ಪೇಶ್ವೆಯವರ ಸನದುಗಳು ಇವೆ. ಅದರಲ್ಲಿ ದಿನಕರರಾವ ಎಂದು ಉಲ್ಲೇಖಿಸಲಾಗಿದೆ. ವಹಿವಾಟೂ ಸಹ ಇಂದಿನವರೆಗೂ ನಡೆಯುತ್ತ ಬಂದಿದೆ. ಇದರ ಮೇಲಿಂದ ಈ ಎಲ್ಲ ಮಾಹಿತಿಯನ್ನು ಸರಕಾರಕ್ಕೂ ಕಳಿಸಲಾಗಿದೆ. ಹೆಚ್ಚಿಗೆ ಏನು ಬರೆಯಲಿ. ಪ್ರೀತಿಯಿರಲಿ.

ಆನಂದರಾವ ಥೋರಾತ ದಿನಕರರಾವ ಅವರ ಪರವಾಗಿ ರುಜು ಮಾಡಿದ ಕಾರಕೂನ ವಿಠ್ಠಲ ರಾಮಚಂದ್ರ ಮುಖ್ತ್ಯಾರ ನಿಸಬತ್ ಮಶಾರನಿಲ್ಲೆ.

ಫಲಟನ್ ನಿಂಬಾಳಕರ

ಸನ್ ೧೮೨೧ರಲ್ಲಿ ಫಲಟನ್ನಿನ ನಿಂಬಾಳಕರ ಅವರ ಬಗೆಗೆ ಬರೆದ ಸಾರಾಂಶ. ಅದರಲ್ಲಿ ಸದರಿ ಮನೆತನದ ಬಗೆಗೆ ಬರೆದ ಹಕೀಕತೀ ಕೆಳಗಿನಂತಿವೆ.

ನಿಂಬಾಳಕರ ಅವರ ವಂಶಾವಳಿಯ ಯಾದಿ.

೧. ವಂಶಾವಳಿಯ ಮುಧೋಜಿ ನಾಯಕ ಇವನ ಎರಡನೇ ಮಗ ಮಾತೋಜಿ ನಾಯಕ ಇವನ ಬಗೆಗಿನ ಮಾಹಿತಿ.

೧. ಎರಡನೇ ಮಗನಾದ ಮಾಲೇಜಿ ನಾಯಿಕನ ವಿವರ

೧. ಕುಸಾಜಿ ನಾಯಿಕ ತಂದೆ ೨. ಗೊರಖೋಜಿ ನಾಯಿಕ

ತಪಶೀಲು

ಕುಸಾಜಿಯ ಮಕ್ಕಳು	**ಗೋರಖೋಜಿಯ ಸುತ ದಾರಕೋಜಿನಾಯಿಕನ ಮಕ್ಕಳು**
೧. ಮಾತೋಜಿ ನಾಯಿಕ	೧. ಗೋರಖೋಜಿ ನಾಯಿಕನಿಗೆ ಸಂತಾನವಿಲ್ಲ.
೧. ಮಾನಸಿಂಗ ನಾಯಿಕ	ಅವರು ತೀರಿಹೋದರು.
೧. ಶಿವಾಜಿ ನಾಯಿಕ	೧. ಬಾಜಾಜಿ ನಾಯಿಕ
೧. ಸಾಬಾಜಿ ನಾಯಿಕ	೧. ಖಂಡೇರಾವ ನಾಯಿಕ ತೀರಿಹೋದರು.

ತಪಶೀಲು

೧. ಮಾತೋಜಿ ನಾಯಿಕ ಸಂಸ್ಥಾನಕ್ಕೆ ಸದ್ಯ ಒಬ್ಬ ಮಗನಿದ್ದಾನೆ.	
೧. ಮಾನಸಿಂಗ ನಾಯಿಕನಿಗೆ ಮಕ್ಕಳಿಲ್ಲ.	೧. ಯಶವಂತರಾವನಾಯಿಕನನ್ನು ಜಾನರಾವ ಬಿನ್ ತುಕಾರಾಮನಾಯಿಕ ಗುಂಜವಟಿಕರ್
ನಾಯಕನ ಮಗನಾದ	--
ಮಹಾದಜಿ ನಾಯಕನನ್ನು	೪

ಉಡಿಯಲ್ಲಿ ಹಾಕಲಾಯಿತು.

ಮಹಾದಜಿ ನಾಯಕನ ಮಗ
ಮಾನಸಿಂಗ್ ನಾಯಿಕನ ಮಕ್ಕಳು

೧ ಕೃಷ್ಣಾಜಿ ನಾಯಿಕ ತಂದೆ
೧ ಪರ್ವತರಾವ ನಾಯಿಕ
೧ ಶಿವಾಜಿ ನಾಯಿಕ

–
೩

೧ ಶಿವಾಜಿ ನಾಯಕನ ಮಕ್ಕಳು
೧ ಜಾನರಾವ ನಾಯಿಕ

–
೨

ಇಬ್ಬರಲ್ಲಿ ಮಹಾರಜಿ ನಾಯಿಕನನ್ನು
ಮಾನಸಿಂಗ್ ನಾಯಿಕನಿಗೆ ನೀಡಲಾಯಿತು
ಜಾನರಾವ ನಾಯಿಕನನ್ನು ಸಂಸ್ಥಾನದ
ಮಾತೋಜಿ ನಾಯಿಕನಿಗೆ ದತ್ತಕ ನೀಡಲಾಯಿತು
ಬಾಕಿ ಶಿವಾಜಿ ನಾಯಿಕನಿಗೆ ಸಂಬಂಧಿಕರು
ಯಾರೂ ಇಲ್ಲ.

೧ ಸಾಬಾಜಿ ನಾಯಿಕ
೧ ತುಳಾಜಿ ನಾಯಿಕ
೧ ಸಂಭಾಜಿ ನಾಯಿಕ

––
೨

ಇವರಲ್ಲಿ ತುಳಾಜಿ ನಾಯಿಕ ತೀರಿಕೊಂಡರು
ಸಂಭಾಜಿ ನಾಯಿಕನನ್ನು ಸಂಕ್ರೋಜಿ ನಾಯಿಕ
ಬಿನ್ ಜಗದೇವರಾವ ನಾಯಕರು ದತ್ತಕ ಪಡೆದರು.
– ೪

೧ ಮೂರನೆಯ ಪುತ್ರನಾದ ಜಗದೇವರಾಯ ನಾಯಿಕ ಇವನ ಮಗ ಸಂಕ್ರೋಜಿ ನಾಯಿಕನು ತೀರಿಹೋದನು. ಅವನ ದತ್ತಕ ಪುತ್ರನಾದ ಸಾಬಾಜಿ ನಾಯಿಕನ ಮಗ ಸಂಭಾಜಿ ನಾಯಿಕ. ಅವನ ದತ್ತಕಪುತ್ರನಾದ ಸಾಬಾಜಿ ನಾಯಿಕನ

ಮಗ ಸಂಬಾಜಿನಾಯಿಕ, ಇವನ ಮಗ ಸಂಕ್ರಾಜಿ ನಾಯಿಕ. ಅವನ ಮಗ ವಿಠ್ಠಲರಾವ ನಾಯಿಕರು ಇದ್ದಾರೆ.

೧ ನಾಲ್ಕನೇ ಮಗ ಮಹಾದಜಿ ನಾಯಿಕನ ಮಗ ತುಕಾರಾಮನಾಯಿಕ, ಇವನ ಮಕ್ಕಳು-ಜಾನರಾವ ನಾಯಿಕ ಮತ್ತು ಮುದೋಜಿ ನಾಯಿಕ. ಇಬ್ಬರೂ ಉಭಯತರರು ತೀರಿಹೋಗಿದ್ದಾರೆ. ಅವರಿಗೆ ಮಕ್ಕಳಿಲ್ಲ.

೧ ಐದನೇ ಮಗ ಬಜಾಜಿನಾಯಿಕ ಇವನ ರಾಯರೋಜಿ ನಾಯಿಕ ಮತ್ತು ಬಾಜಿ ಧಾರರಾವ. ಉಭಯತರು ತೀರಿಕೊಂಡಿದ್ದಾರೆ. ಸಂತಾನವಿಲ್ಲ.

೧ ವಣಗೋಜಿ ನಾಯಕರು ಆರನೇ ಮಗ. ಇವನಿಗೆ ಸಂತಾನವಿಲ್ಲ.

೧ ಮುಧೋಜಿ ಬಿನ್ ಜಾನೋಜಿ ನಾಯಿಕ ನಿಂಬಾಳಕರ ಸನ್ ೧೭೭೬ ಫಸಲಿ ಕಾರ್ತಿಕ ಶುದ್ಧ ೪ ಚತುರ್ಥಿಯಂದು ಫಲಟನ್‌ದಲ್ಲಿ ದೈವಾಧೀನರಾದರು.

೧ ಮುಧೋಜಿ ನಾಯಿಕ ಬದುಕಿದ್ದಾಗ ಮಾತೋಜಿ ನಾಯಿಕನು ಕುಸಾಜಿ ನಾಯಿಕರ ಹಿರಿಯ ಮಗನನ್ನು ದತ್ತಕ ಪಡೆದು ಸರಕಾರಕ್ಕೆ ವಿನಂತಿ ಮಾಡಿದ್ದೇನೆಂದರೆ – ನಾನೀಗ ಮುದುಕನಾಗಿದ್ದೇನೆ. ನನ್ನ ಮಗನ ಕೈಯಿಂದ ಸೇವೆಯನ್ನು ಮಾಡಿಸಿಕೊಳ್ಳಬೇಕು. ಮುಂದೆ ಕೆಲಕಾಲ ಚಾಕರಿ ಮಾಡುತ್ತಿರುವಾಗ ಮುಧೋಜಿ ನಾಯಿಕನು ಸರಕಾರಕ್ಕೆ ಮಾತೋಜಿ ನಾಯಿಕನ ದತ್ತಕ ಪುತ್ರನಲ್ಲ ಎಂದು ತಕರಾರು ಸಲ್ಲಿಸಿದನು. ಆಗ ಸೋಯರಾಜಿ ಬಿನ್ ಬಜಾಜಿ ನಾಯಿಕನ ಸಬಲ ಪಕ್ಷವೆಂದರೆ ಸಖಾರಾಮಬಾಪೂ ಎಂದು ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟು ಫಲಟಣ್‌ಗೆ ಜಪ್ತಿ ಕಳಿಸಿದನು. ಮುಧೋಜಿ ನಾಯಿಕನ ಪತ್ನಿ ಸುಗುಣಾಬಾಯಿಯು ಜಪ್ತಿ ಮಾಡಲು ಆಗಮಿಸಿದ ಗುಮಾಸ್ತ ಮತ್ತು ಕಾಲ್ದಳದ ಮೇಲೆ ಗುಂಡು ಹಾರಿಸಿದಳು. ಈ ರೋಷ ಸರಕಾರದ ಗಮನಕ್ಕೆ ಬಂದು ಸೋಯರಾಜಿ ಬಿನ್ ಬಜಾಜಿ ನಾಯಿಕ ಇವನ ಕೈಗೆ ಫಲಟಣ್ ಪ್ರದೇಶವನ್ನು ನೀಡಲಾಯಿತು. ಅಂದಿನಿಂದ ಸೋಯರಾಜಿ ನಾಯಿಕ ಇವರು ಮುಧೋಜಿ ಇನ್ ಬಜಾಬಿ ನಾಯಿಕರು ಸರಕಾರದಲ್ಲಿ ಹೆಸರು ನೀಡುತ್ತ ಬಂದರು. ಸರಕಾರದ ಜನರು ಬಂದು ಸಗುಣಾಬಾಯಿಯು ಕಾಗದಪತ್ರಗಳಿಗೆ ಬೆಂಕಿ ಹಚ್ಚಿದರು. ತನ್ನ ಬಳಗದ ಜನರೊಂದಿಗೆ ತೇರಘೋಕೆಯ ಬಾಲೆಘಾಟೆಗೆ ಹೋಗಿ ಆರು ವರ್ಷಗಳ ನೆಲೆಸಿದರು. ಸಗುಣಾಬಾಯಿಯ ಪರವಾಗಿ ನರಸಿಂಗರಾವ ಕಾನ್ವೇರ್ ವಕೀಲರಾಗಿ ಪುಣೆಯಲ್ಲಿ ನೇಮಿಸಲ್ಪಟ್ಟರು. ಅವರು ಮುಧೋಜಿ ನಾಯಕರು ಸೋಯರಾಜಿ ನಾಯಕನನ್ನು ದತ್ತಕ ತೆಗೆದುಕೊಂಡಿದ್ದಾರೆಂದು ರಘುನಾಥ ಬಾಜೀರಾವ ಪೇಶ್ವೆಯವರಿಗೆ ವಿನಂತಿ ಮಾಡಿಕೊಂಡರು. ಸರಕಾರ ಅದರ

ಬಗೆಗೆ ಸಾಕಷ್ಟು ವಿಚಾರಣೆಯನ್ನು ಕೈಗೊಂಡು ದತ್ತಕ ಕ್ರಿಯೆಯು ನಡೆಯಬೇಕೆಂದು ತಿಳಿಸಿದರು. ದತ್ತಕ ಸ್ವೀಕರಿಸಿದ ಕ್ರಿಯೆಯು ಬೇಜೂರಿಯಲ್ಲಿ ನಡೆಸುವಂತೆ ಸೂಚಿಸಿದರು. ಅದರಂತೆ ನರಸಿಂಗರಾವ ವಕೀಲರ ಹೇಳಿಕೆಯಂತೆ ಜೇಜೂರಿಗೆ ಹೋಗಿ ಮಾತೋಜಿಯನ್ನು ಮುಧೋಜಿ ನಾಯಿಕನು ದತ್ತಕ ಪಡೆದ ಕ್ರಿಯೆಯನ್ನು ಮಾಡಿಸಿದನು. ಬಳಿಕ ಇದನ್ನು ವಕೀಲರಿಗೂ ತಿಳಿಸಲಾಯಿತು. ಬಿಕ ಸುಗುಣಾಬಾಯಿ ಸಾಹೇಬರನ್ನು ತೆರದೊಕೆಯಿಂದ ಪುಣೆಗೆ ಕರೆಯಿಸಿ ಮಾತೋಜಿ ಬಿನ್ ಮಾಧೋಜಿ ನಾಯಿಕರಿಗೆ ಸನದನ್ನು ಮಾಡಿಕೊಟ್ಟು ಲಕ್ಷ ರೂಪಾಯಿ ಕಾಣಿಕೆಯನ್ನು ಪಡೆದರು.

೧ ರಘುನಾಥ ಬಾಜೀರಾವ ಪ್ರಧಾನ

೧ ನಾರಾಯಣರಾವ ಬಲ್ಲಾಳ ಪ್ರಧಾನ

–

೨

ಒಟ್ಟೂ ಎರಡು ಪತ್ರಗಳು ಅಸಲಿಯಾಗಿವೆ. ಅಂದಿನಿಂದ ಸುಗುಣಾಬಾಯಿಯವರು ಸಂಪೂರ್ಣ ಅಧಿಕಾರ ಚಲಾಯಿಸುತ್ತಿದ್ದಾರೆ. ಮಾತೋಜಿ ನಾಯಿಕನು ಸರಕಾರದ ಚಾಕರಿ ಸಹ ಮಾಡುತ್ತಲಿದ್ದ.

೧. ಮಾತೋಜಿ ಬಿನ್ ಮುಧೋಜಿ ನಾಯಿಕ ನಿಂಬಾಳಕರ ಅವರು ಕರ್ನಾಟಕದ ಯಾತ್ರೆಗೆ ಹೊರಟಾಗ ಸುಗುಣಾಬಾಯಿ ಸಾಹೇಬರು ಅವರ ಜೊತೆಗೆ ಹಂಪತಾತ್ಯಾ ಅವರನ್ನು ಚಾಕರಿಗಾಗಿ ಕಳಿಸಿದರು. ಅಲ್ಲಿ ಸನ್ ೧೧೮೬ ಫಸಲಿಯಲ್ಲಿ ಕಾರ್ತಿಕ ಶುದ್ಧ ೯ರಂದು ಸಾವನ್ನಪ್ಪಿದರು. ಮಾತೋಜಿ ನಾಯಿಕ ತೀರ ಕ್ಷೀಣರಾಗಿದ್ದನು. ಅವರ ಸಂಗಡ ಸದಾಶಿವ ಶಾಮರಾವ ಫಡ್ನಿಸ್ ಇದ್ದರು. ಅವರು ಹರಿಪಂತ ತಾತ್ಯಾ ಫಡಕೆಗೆ ಹೇಳಿದ್ದೇನೆಂದರೆ –ಮಾಲೋಜಿ ನಾಯಿಕ ತುಂಬಕ್ಷೀಣರಾಗಿದ್ದಾರೆ. ತಾತ್ಯಾ ಕೇಳಿದರು–ಮುಂದೇನು ಮಾಡೋಣ? ಆಗ ಸದಾಶಿವ ಪಂತ ಹೇಳಿದ್ದೇನೆಂದರೆ ಮಾಲೋಜಿರಾವ ನಾಯಿಕರನ್ನು ಚಾಕರಿಗೆ ಕಳಿಸುವಾಗ, ಅವರ ಆರೋಗ್ಯ ತುಂಬ ಕ್ಷೀಣಿಸಿದೆ. ಆದ್ದರಿಂದ ಶಿವಾಜಿ ನಾಯಿಕರ ಮಗ ಜಾನರಾವ ನಾಯಕನನ್ನು ದತ್ತಕ ಪಡೆಯಬೇಕೆಂದು ಸಗುಣಾಬಾಯಿಯವರು ಹೇಳಿದ್ದರು. ಆದರೆ ಯುದ್ಧದ ಯಾತ್ರೆಗೆ ಹೋಗಲೇಬೇಕಿತ್ತು. ಯಾತ್ರೆ ಮುಗಿಸಿ ಬಂದ ಬಳಿಕ ಈ ಕಾರ್ಯವನ್ನು ಮಾಡೋಣ ಎಂದಿದ್ದರು. ಆದರೆ ಈಗ ಮಾಲೋಜಿಯ ಆರೋಗ್ಯ ಮತ್ತಷ್ಟು ಹದಗೆಟ್ಟಿದೆ. ಅದೂ ಅಲ್ಲದೆ ಜಾನರಾವನೂ ಸೈನ್ಯದ ಜೊತೆಗೆ ಹೋಗಿದ್ದಾನೆ. ನನಗೆ ಅನುಮತಿ ನೀಡಿದರೆ ಅವನನ್ನು ಕರೆದುಕೊಂಡು ಬರುತ್ತೇನೆ. ಸಗುಣಾಬಾಯಿಯ ಅನುಮತಿಯಿದೆ. ಅದಕ್ಕಿಂತ

ಜಾನರಾವ ನಾಯಿಕನನ್ನು ಕರೆತರುವುದು ಒಳ್ಳೆಯದು. ಅದರಂತೆ ಸದಾಶಿವಪಂತನು ಪರಶುರಾಮ ಭಾವೂ ಅವರ ಸೈನ್ಯದಳ ಶಿಬಿರದಿಂದ ಜಾನರಾವ ನಾಯಿಕನನ್ನು ಕರೆತಂದನು. ಮಾಲೋಜಿ ನಾಯಿಕನು ಪ್ರಜ್ಞೆಯ ಅವಸ್ಥೆಯಲ್ಲಿದ್ದಾಗ, ಜಾನರಾವ ನಾಯಿಕನ ಬಾಯಲ್ಲಿ ಸಕ್ಕರೆ ಹಾಕಿ, ಜನರಿಗೆ ಎಲೆ ಅಡಿಕೆಯ ತಾಂಬೂಲವನ್ನು ನೀಡಿದನು. ಒಂದು ಒಂದೂವರೆ ಪ್ರಹರಿನ ಬಳಿಕ ಅಂತ್ಯಕಾಲ ಸಮೀಪ ಬಂದಾಗ ಜಾನರಾವ ನಾಯಿಕನು ತೊಡೆಯ ಮೇಲೆ ಮಾಲೋಜಿಯ ತಲೆಯಿರಿಸಿಕೊಂಡನು. ಅಲ್ಲೇ ಪ್ರಾಣಪಕ್ಷಿ ಹಾರಿಹೋಯಿತು. ಅನಂತರ ಉತ್ತರಕ್ರಿಯೆ ವಿಧಿಯನ್ನು ಸೈನ್ಯದಲ್ಲೇ ಮಾಡಲಾಯಿತು. ಹದಿಮೂರನೇ ದಿನ ನಾಲ್ಕೈದು ಸಾವಿರ ಜನರ ಭೋಜನ ಸಮಾರಾಧನೆ ನಡೆಯಿತು. ತಾತ್ಯಾ ಸೈನ್ಯದ ಶಿಬಿರಕ್ಕೆ ಹೋಗಿ ಶ್ರದ್ಧಾಂಜಲಿಯನ್ನು ಅರ್ಪಿಸಿದನು. ಉಳಿದ ಹಿರಿಯರೂ ಬಂದು ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಹರಿಪಂತ ತಾತ್ಯಾನು ಮಾಲೋಜಿ ನಾಯಿಕನು ತೀರಿಹೋದ ಸಂಗತಿಯನ್ನು ನಾನಾ ಫಡಣಿಸಗೆ ಬರೆದು ತಿಳಿಸಿ, ಮಾಲೋಜಿ ನಾಯಿಕನು ನಮಗೆ ಇಳಿಸಿಯೇ ಜಾನರಾವ ನಾಯುಕನನ್ನು ದತ್ತಕ ಪಡೆದು ದೈವಾಧೀನರಾದರು. ಕ್ರಿಯಾಕರ್ಮವನ್ನು ಸಹ ಜಾನರಾವ ನಾಯಿಕನೇ ಮಾಡಿದನು. ಈ ವಿಷಯಕ್ಕೆ ಸಂಬಂಧಿಸಿದ ಪತ್ರಗಳಿವೆ. ಅದರ ತಪಶೀಲನ್ನು ಮೇಲೆ ನೀಡಲಾಗಿದೆ. ಸರಕಾರದ ಚಾಕರಿಯನ್ನು ಸಹ ಜಾನರಾವ ನಾಯಿಕನೇ ಮಾಡುತ್ತಾನೆ. ಪತ್ರದ ಉತ್ತರ ತಾತ್ಯಾನಿಗೆ ಬಂತು. ನೀವು ಬರೆದ ಮಜಕೂರನ್ನು ಸರಕಾರಕ್ಕೆ ಬರೆದು ತಿಳಿಸಿ ವಿನಂತಿ ವಿನಂತಿ ಮಾಡಿಕೊಳ್ಳಲಾಯಿತು. ಮುಂದೆ ನಾಯಿಕತ್ವವನ್ನು ಸತತ ಸಗುಣಾಬಾಯಿಯೇ ಮಾಡುತ್ತ ಬಂದರು. ಜಾನರಾವ ನಾಯಿಕ ಚಾಕರಿ ಮಾಡುತ್ತಲಿದ್ದರು. ಅನಂತರ ಸನ್ ೧೨೦೧ ಫಸಲಿ ಅಶ್ವೀನ ವದ್ಯ ೧೨ಕ್ಕೆ ಸಗುಣಾಬಾಯಿಯವರು ದೈವಾಧೀನರಾದರು. ಆಗ ಜಾನರಾವ ನಾಯಿಕನು ಹರಿಪಂತ ತಾತ್ಯಾನ ಜೊತೆ ಪೈಠಣಕ್ಕೆ ಸೈನ್ಯ ತೆಗೆದುಕೊಂಡು ಹೋಗಿದ್ದರು. ಅಲ್ಲಿಂದ ಮರಳಿ ಬಂದ ಬಳಿಕ ಸರಕಾರದ ಚಾಕರಿ ಜಿಲ್ಲೆಯ ಸತತ ವ್ಯವಹಾರವನ್ನು ಮುಖ್ತಾರ ಹಕ್ಕಿನಿಂದ ಮಾಡಿದರು. ಬಳಿಕ ಸನ್ ೧೨೦೪ ಫಸಲಿಯಲ್ಲಿ ನಾನಾ ಫಡಣಿಸ ಹೇಳಿದ್ದೇನೆಂದರೆ– 'ನಿಮ್ಮ ಹೆಸರು ಸರಕಾರದ ದಾಖಲೆಯಲ್ಲಿ ಇನ್ನೂ ಸೇರಿಲ್ಲ. ಅದರಿಂದ ಕಪ್ಪ ಕಾಣಿಕೆ ಸಲ್ಲಿಸಿ ಸನದು ಮಾಡಿಕೊಳ್ಳಬೇಕು. ಹೀಗಾಗಿ ಒಂದು ಲಕ್ಷ ರೂಪಾಯಿಯ ಕಾಣಿಕೆ ನೀಡುವ ನಿರ್ಧಾರಗೊಂಡು ಜಾನರಾವ ನಾಯಿಕ ಇವನ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಂಯನ್ನು ಕೃಷ್ಣಾಜಿ ನಾಯಿಕ ಥತ್ತೆ ಇವನಿಗೆ ಹಾನಿ

ತುಂಬಿಕೊಡಬೇಕೆಂದು ತಗಾದೆ ಮಾಡಿದರು. ಮುಂದೆ ನಾಯಿಕ ಸಾಹೇಬರು ಬಜಾಬಂ ಶಿರವಳಕರ ಹತ್ತಿರ ಲಕ್ಷ ರುಪಾಯಿಯ ಸಾಲ ಪಡೆದು, ಥತ್ತೆಗೆ ನೀಡಿ ಸನದು ಮಾಡಿಕೊಂಡರು.

೧೪

ಪವಾರ

ಯಾದಿ ರಾಜಶ್ರೀ ಅವಧೂತರಾವ ಪವಾರ ಗುರುಸನ್ ಅರ್ಬಾ ಸಲಾಸಿನ್ ಮಯಾತೈನ್ ಮತ್ತು ಅಲಫ ಮೆಹರ್ಬಾನ ಜಾನ ವಾರ್ಡಿನ್ ಸಾಹೇಬ ಬಹಾದೂರ ಡೆಪ್ಯುಟಿ ಏಜಂಟ ಜಿಲ್ಲೆ ದಕ್ಷಿಣ ಇವರು ತಾರೀಕ ೭ ಮಾಹೇ ಸಪ್ಟಂಬರ್ ಸನ್ ೧೮೩೨ ಇಸವಿಯ ಪತ್ರದಲ್ಲಿ ಬರೆದಿರುವುದೇನೆಂದರೆ – ದಕ್ಷಿಣದ ಜಹಾಗೀರದಾರರ ಕೈಫಿಯತ್ ಮಾಹಿತಿಯನ್ನು ಪಡೆಯಬೇಕೆಂಬ ಕಾರಣಕ್ಕಾಗಿ ಈ ಪತ್ರವನ್ನು ಬರೆಯಲಾಗಿದೆ. ನೀವು ದಯವಿಟ್ಟು ಸರಕಾರಕ್ಕೆ ಕಳಿಸಬೇಕಾದ ಕಾರಣಕ್ಕಾಗಿ ಕೈಫಿಯತ್ ಬರೆದು ಕಳಿಸಬೇಕು. ಅದರಲ್ಲಿ ನಿಮ್ಮ ಮನೆತನದ ಬಡತಿ, ಯಾವ ತಾರೀಕಿಗೆ ಮನೆತನಕ್ಕೆ ಮಾನ್ಯತೆ ನೀಡಲಾಯಿತು. ಸೈನ್ಯ, ಸರಂಜಾಮ ಗ್ರಾಮ-ಪತನಗಳು ಯಾವುದು ನಿಮ್ಮ ತಂದೆಯವರ ಆಡಳಿತದಲ್ಲಿತ್ತು. ಅದು ಸದರಿ ಸರಂಜಾಮು ನೀಡಿದ ತಾರೀಕು, ನಿಮ್ಮ ಜಹಗೀರದಲ್ಲಿಯ ವ್ಯವಹಾರವನ್ನು ಪೇಶ್ವೆ ಸರಕಾರ ಯಾವ ರೀತಿಯಲ್ಲಿ ಹಸ್ತಕ್ಷೇಪ ಮಾಡಿತ್ತು. ಸದ್ಯ ನಿಮ್ಮ ಬಳಿಯಲ್ಲಿರುವ ಸರಂಜಾಮ ವತನಗಳು, ಪೇಶ್ವೆ ಸರಕಾರದಿಂದ ಲಭಿಸಿದ ಪ್ರತಿಷ್ಠೆ ಮತ್ತು ಸದ್ಯ ಕಂಪನಿ ಸರಕಾರದಿಂದ ನಿಮಗೆ ಸಿಗುತ್ತಿರುವ ಹೆಚ್ಚು-ಕಡಿಮೆ ಗೌರವ – ಮುಂತಾದ ತಪಶೀಲನ್ನು ಯಾದಿಯಲ್ಲಿ ಬರೆದು ಕಳಿಸಬೇಕಾಗಿ ತಿಳಿಸಲಾಗಿದೆ. ಅದಕ್ಕೆ ನೀಡಲಾದ ಉತ್ತರ ಹೀಗಿದೆ, --- ನಾಲ್ಕು ಲಕ್ಷ ಮೂವತ್ತೆರಡು ಸಾವಿರದಲ್ಲಿ ಕಳೆದ ವರ್ಷ ನಾಲ್ಕು ಸಾವಿರ ಒಂಬೈನೂರ ಮೂವತ್ಮೂರು ಸನ್ ೧೨೪೩ ವರ್ಷದವರೆಗಿನ ಶಕೆ ರಾಜರ ತಪಶೀಲು-

೩೦೪೪	ಶಕೆ ಯುಧಿಷ್ಠಿರ ಧರ್ಮರಾಜ ಪಾಂಡವ ಇಂದ್ರಪ್ರಸ್ಥ ದಿಲ್ಲಿಗೆ ೩೦೪೪ ವರ್ಷಗಳು
೧೩೫	ರಾಜಾ ವಿಕ್ರಮ ಶಕೆ ಉಜ್ಜಯನಿ ೧೩೫ ವರ್ಷ ಸಂವತ್ ೧೮೯೦
೧೭೫೫	ಶಾಲಿವಾಹನ ಶಕೆ ಪ್ರತಿಷ್ಠಾನ ಪೈಠಣಗೆ ವರ್ಷ ೧೭೫೫ ಅವರಲ್ಲಿ ರಾಜಾಭೋಜ ಮುಂತಾದವರು ರಾಜಾ ಸದಲ ಮತ್ತು ಖಡಗಸಿಂಗ ಮತ್ತು ಚತುರ್ಭುಜ ಮತ್ತು ಅಗ್ರಸೇನ ಮತ್ತ ಉದಯದೀಪ ಮತ್ತು ರಣಘೌಲ ಮತ್ತು ಜಗದೇವ ಪವಾರ ಮತ್ತು ಅಲಗಪಾಲ ತುವರ ಮತ್ತು ಪ್ರೀತಿರಾಜ ಚವ್ಹಾಣ ಮುಂತಾದವರ ರಾಜಶಾಹೀ

೫೧೨ ೧೨೪೩

ಒಟ್ಟೂ ವರ್ಷ ಹದಿನೇಳನೂರಾ ಐವತ್ತೈದು ೧೭೫೫ ಜಗದೇವ ಪವಾರರು ಶ್ರೀದೇವಿ ಉಪಾಸಕರಲ್ಲಿ ನಿಸ್ಸೀಮರಾಗಿದ್ದರು. ಶ್ರೀ ಜಗದಂಬೆಯ ಪ್ರತ್ಯಕ್ಷ ದರ್ಶನ ನೀಡಿ ಮಾತನಾಡುತ್ತಿದ್ದಳು. ಅವನ ಭಕ್ತಿಗೆ ಮೆಚ್ಚಿ ಶ್ರೀದೇವಿಯ ಕಂಕಾಲ ಭಾಟಣಿಯ ಸ್ವರೂಪವನ್ನು ಧಾರಣ ಮಾಡಿ ಧಾರಾದಲ್ಲಿ ಪ್ರತ್ಯಕ್ಷಳಾಗಿ ಜಗದೇವ ಪವಾರನಿಂದ ಶಿರದಾನವನ್ನು ಬೇಡಿದಳು. ಆಗವನು ತನ್ನ ಕೈಯಾರೆ ಖಡ್ಗದಿಂದ ಶಿರಚ್ಛೇದ ಮಾಡಿ ಶ್ರೀದೇವಿಗೆ ಅರ್ಪಿಸಿದನು. ಬಳಿಕ ಶ್ರೀಕಾಳಿಕಾ ಪ್ರಸನ್ಳಾಗಿ ರುಂಡವನ್ನು ದೇಹಕ್ಕೆ ಜೋಡಿಸಿ ಜಗದೇವ ಪವಾರನನ್ನು ಜೀವಂತಗೊಳಿಸಿದಳು. ವರದಾನ ಮಾಡಿ ರಾಜ್ಯವನ್ನು ಸ್ಥಾಪಿಸಿದಳು. ಈ ಶ್ರೀ ಕಾಳಿಕಾ ಸ್ಥಾನವು ಈಗಲೂ ಧಾರೆಯಲ್ಲಿದೆ.

೪೯೩೩ ಕಳೆದ ವರ್ಷ ನಾಲ್ಕು ಸಾವಿರದ ಒಂಬೈನೂರಾ ಮೂವತ್ಮೂರು ವರ್ಷಗಳು.

ಬಾಕಿ ಶೇಷ ಕಲಿ ನಾಲ್ಕು ಲಕ್ಷ ಇಪ್ಪತ್ತೇಳು ಸಾವಿರದ ಅರವತ್ತೇಳು ವರ್ಷ ಉಳಿಯಿತು. ಅದರಲ್ಲಿ ೬೭ ವರ್ಷಗಳ ಬಳಿಕ ಭಾಗೀರಥಿಯ ಮಹಾತ್ಮೆ ಹೊರಟು ಹೋಗುತ್ತದೆ. ಮಾವಿನ ಮರಗಳಿಗೆ ಫಲ ಬರಲಾರದು. ಮುಂದೆ ೫೦೦೦ ವರ್ಷಗಳ ಬಳಿಕ "ಶ್ರೀ ವಿಷ್ಣು ಭಗವಾನ್ ತ್ಯಜಿತಿ ಮೋದಿನಿ" ಎಂದು ಶಾಸ್ತ್ರ ಮರ್ಯಾದೆಯಿದೆ. ಪವಾರ ಕುಲದ ವರ್ಣಧರ್ಮದ ತಪಶೀಲು–

೧ ವಂಶ ಸೂರ್ಯವಂಶ

೧ ವರ್ಣಜಾತಿ ಕ್ಷತ್ರಿಯ

೧ ಧರ್ಮ ಕ್ಷತ್ರಿಯದ್ದು

೧ ಆಚಾರ ವಿಪ್ರವತ್

೧ ವಜೋಪವಿತ ಧಾರಣೆ

೧ ಗಾಯತ್ರಿ ಅಷಪದ

೧ ಸಂಧ್ಯಾಕಾಲ

೧ ಲಗಿಬಾಣಾವರ ಶ್ರೀ ಪನುಮಂತ ಮೂರ್ತಿ

೧ ಮಾರುತಿಸಹಿತ ಥಾಲು

೧ ವೇದ ಋಗ್ವೇದ

೧ ಕಾಲದ ಗೋತ್ರ ಅಗಸ್ತ್ಯ

೧ ಕುಲಸ್ವಾಮಿ ಕಾಲಭೈರವ

೧ ಶಕ್ತಿಯ ಉಪಾಸನೆ

೧ ಸಂಸ್ಥಾನ ಅಬೂಗಡ

೧ ಧಾರಗಿರಿ ನಗರ

೧ ದೇವ ಪ್ರತಿಷೆಯ ಸಮಯದಲ್ಲಿ ಧಾರಾತವಾರಿಯ ದೇವತೆ

೧ ಕೆಂಪು ನಿಶಾನೆ, ಮೇಲೆ ಜಂಪಗಡಿ ಅದರ ಮೇಲೆ ಮಾರುತಿ

೧ ಆಲಕಾಬ ಪವಾರ ತೋಡರಮಲ್ ೧ ಬ್ರದ್ ತೋಡರ್

– – –

೧೦ ೯ ೧೯

ಸದರಿ ಪ್ರಕಾಶ ಪವಾರ ಮನೆತನದ ಹಿಂದಿನ ಮಾರ್ಗವಾಗಿದೆ. ಪವಾರ ಅವರು ಪೂರ್ವಾಪಾರ ಪರಾಕ್ರಮವನ್ನು ಮಾಡಿದ್ದಾರೆ. ಅವರ ಕೀರ್ತಿಯ ದಕ್ಷಿಣ ತೀರದಿಂದ ಇಂದ್ರಪ್ರಸ್ತದಾಚೆಗಿನ ಹಿಂದೂಗಳ ಸೀಮೆಯವರೆಗೆ ಪವಾರ ಮತ್ತು ತುವರ ಎಂದು ಖ್ಯಾತಿಯನ್ನು ಪಡೆದಿದೆ. ಅದರಂತೆ ಬಾದಶಹಾನ ಪ್ರದೇಶದಲ್ಲಿ ೪ ಆಡಳಿತ ನಡೆಯಲಾರಂಭಿಸಿತು. ಪವಾರ ಅವರು ಆಡಳಿತ, ಖಂಡಣಿ(ಕರ ವಸೂಲಿ) ಮತ್ತು ಚಾಕರಿಗಾಗಿ ಸೈನ್ಯವನ್ನು ಕೊಡಲಿಲ್ಲ. ಇಂದ್ರಪ್ರಸ್ತ ಮತ್ತು ರಾಜಸ್ಥಾನಿ ಸೈನ್ಯ ಸಹ ಬಂದರೆ ಭೇರಿ–ನಗಾರಿ–ನೌಬತ್ತು ವಾದ್ಯವನ್ನು ಬಾರಿಸಿ ನಿಶಾನೆ, ಜರಿಪಗಡಿ ಸಹಿತ ನಡೆದು ಹೋಗಬೇಕು. ಶಸ್ತ್ರ ಸಹಿತ ವಂದನೆಯನ್ನು ಮಾಡದೆ, ಸಲಾಮು ಮಾಡಿ ಗದ್ದುಗೆಯ ಬಲಬದಿಗಿರುವ ಆಸನದ ಮೇಲೆ ಕೂರಬೇಕು. ಕಪ್ಪ ಕಾಣಿಕೆಯನ್ನು ಸಲ್ಲಿಸಿ ಬಳಸಬೇಕೆಂಬ ಪದ್ಧತಿಯು ಹಿಂದೆ ಇತ್ತು. ಅದನ್ನು ಹಿರಿಯ ತಲೆಮಾರಿನವರು ಹೇಳಿದ್ದರು. ನಮ್ಮ ತಂದೆಯವರು ನಮಗೆ ಹೇಳಿದರು. ಆ ನಡೆದು ಬಂದ ಪದ್ಧತಿಯನ್ನು ಬರೆಯಲಾಗಿದೆ. ಆ ಪವಾರ ವಂಶಜರು ಕಾಲಾಂತರದಲ್ಲಿ ಸೈನ್ಯಸಹಿತ ಧಾರಾದಿಂದ ನರ್ಮದೆಗೆ ಬಂದು, ತಾಪಿಯನ್ನು ದಾಟಿ, ಖಾನದೇಶ ಪ್ರಾಂತದಿಂದ ದಕ್ಷಿಣಕ್ಕೆ ಬಂದರು. ಅವರು ಗನಿಮಾ ಪದ್ಧತಿ (ಗೆರಿಲ್ಲಾ ಯುದ್ಧ)ಯಂತೆ ಈ ಪ್ರದೇಶವನ್ನು ಆಳಿದರು. ಹೀಗಾಗಿ ದಕ್ಷಿಣದಲ್ಲಿ ಗೆರಿಲಾ ಮತ್ತು ಮೊಗಲ ಎಂಬೆರಡು ಬಗೆಯ ಆಡಳಿತ ನಡೆಯಿತು. ಶಿವಾಜಿರಾಜೇ ಭೋಸಲೆಯು ಗನಿಮಾದ ಮೂಲಕವೇ ರಾಜ್ಯವನ್ನು ಗಳಿಸಿದರು. ಯುದ್ಧ ನಡೆದಾಗ ನಮ್ಮ ತಂದೆಯವರು ಪರಾಕ್ರಮವನ್ನು ಮೆರೆದು ರಾಜ್ಯ ಗಳಿಸಿದರು. ರಾಜಕಾರಣಕ್ಕಾಗಿ ದೇಹವನ್ನು ಮುಡುಪಾಗಿಟ್ಟದ್ದರಿಂದ ಶಾಹೂ ರಾಜರು ತಮ್ಮ ತಂದೆಯವರ ಗೌರವ, ಮಾನ ಸನ್ಮಾನ, ಸೈನ್ಯ, –– ಒಂದೂ ನಾಕಾಂಶವನ್ನು ಮೊದಲಿನಂತೆ ಮುಂದುವರೆಸಿದರು. ನಮ್ಮ ಪೂರ್ವಜರು ದಕ್ಷಿಣಕ್ಕೆ ಬಂದು ನೆಲೆಸಿದ್ದರಿಂದ ಕ್ಷೇತ್ರಧರ್ಮದ ಆಚಾರ ರದ್ದಾಯಿತು. ಗಂಧರ್ವ ವಿವಾಹದ ಹೊರತು ಸತ್ ಶೂದ್ರರಂತೆ ಆಚಾರ ನಡೆದಿದೆ. ಗೋತ್ರ ವಶಿಷ್ಠ ಮತ್ತು ಪ್ರವರ ಮೂರು. ವಶಿಷ್ಠ, ಅಲಗೀರಾ ಮತ್ತು ಪ್ರಮೋದ ಒಟ್ಟೂ ಮೂರು ಪ್ರವರ ಮತ್ತು ಜನಿವಾರ ಧಾರಣೆ ಮಾಡುತ್ತಾರೆ. ಸತ್‌ಶೂದ್ರರ ಕನ್ಯೆಯೊಂದಿಗೆ ಲಗ್ನ ನಡೆಯುತ್ತದೆ– ಈ ರೀತಿ ನಡೆದಿದೆ. ಅಜ್ಞಾನಿದೆ. ಅವರಿಗೆ ಗೋತ್ರವಾಗಲಿ, ಪೂರ್ವಜರಾಗಲಿ ಗೊತ್ತಿಲ್ಲ. ಅವರು ಕಶ್ಯಪ ಗೋತ್ರವೆನ್ನುತ್ತಾರೆ. ಹೀಗೆ ಪರಂಪರೆಯಿದೆ. ದಕ್ಷಿಣಕ್ಕೆ ಬಂದ ಬಳಿಕ ಪವಾರ ಕಾಲದವರು ಗೋತ್ರಜರಾದರು. ಅದರ ವಿವ –

ವಾಘ, ವಾನಖಡೆ, ನಿಂಬಾಳಕರ, ಇಂಗಳೆ, ಧಾಯಬಾರ, ಘುಮರೆ, ಕರ್ಹೇಕರ, ಪಾಡಭರ್, ಮಗನೆ, ವಾಗಚವರೆ, ಶೇಟೆ, ಪರನುಡೆ ಮತ್ತು ವಾಘಮಾರೆ- ಮುಂತಾದ ಸದರಿ ಗೋತ್ರಜದವರೊಂದಿಗೆ ದೇಹ ಮಾಡಬಾರದು ಎನ್ನುವುದು ಕುಲದ ರೀತಿಯಾಗಿದೆ. ಶಾಹೂ ಮಹಾರಾಜರು ಶಾಂತವಾಗಿ, ಸುವ್ಯವಸ್ಥಿತವಾಗಿ ಆಡಳಿತ ಮಾಡಿದರು. ಮುಂದೆ ಸ್ವರಾಜ್ಯ ಮತ್ತು ಮೊಗಲರು ಎರಡೂ ಕಡೆಯ ಆಡಳಿತವನ್ನು ಮುನ್ನಡೆಸಿದರು. ಪೇಶ್ವೆಯ ಆಡಳಿತದಲ್ಲಿ ಸೇನಾಪತಿ ದಾಭಾದೆಯ ಸಹಾಯಕ್ಕೆ ಸೈನ್ಯ ಮತ್ತು ಸರಂಜಾಮು ಕಡಿಮೆಯಾಗಲಾರಂಭಿಸಿತು. ಗೌರವ ಪ್ರತಿಷ್ಠೆ ಎಂದಿನಂತೆ ಮುಂದುವರೆಯಿತು. ಸೈನ್ಯ ಬಂದಾಗಲೆಲ್ಲ ನಮ್ಮ ತಂದೆಯವರು ಸೀಮೆಯನ್ನು ದಾಟಿ ಭೇಟ್ಟಿಯಾಗುತ್ತಿದ್ದರು. ವಾಡೆಯಲ್ಲಾಗಲಿ, ಶಿಬಿರದಲ್ಲಾಘಲಿ ಭೇಟಿಗೆ ಬಂದಲ್ಲಿ ಗೌರವದಿಂದ ನಡೆದುಕೊಳ್ಳುತ್ತಿದ್ದರು. ತಾಂಬೂಲಾದಿ ಉಪಚಾರವನ್ನು ನೀಡಿ ವಿದಾಯ ಹೇಳುತ್ತಿದ್ದರು. ಆ ಕಾಲದಲ್ಲಿ ನಮ್ಮ ತಂದೆಯ ಹೊರತು ಬೇರೆ ಯಾವುದೇ ಸೈನ್ಯವಿರುವ ಸರದಾರನಿರಲಿಲ್ಲ. ಅನಂತರ ಮಲ್ಹಾರರಾವ ಹೋಳ್ಕರ, ಬಳಿಕ ಶೀಂಧೆ ಮುಂತಾದವರ ಆಗಮನವಾಯಿತು. ಈ ಬಗೆಯಲ್ಲಿ ನಮ್ಮ ತಂದೆಯವರು ರಾಜಕಾರಣಕ್ಕಾಗಿ ದೇಹವನ್ನು ಮುಡುಪಾಗಿಟ್ಟಿದ್ದರು. ಅದರ ದಾಖಲೆ ಸರಕಾರದ ಕಚೇರಿಯಲ್ಲಿರಬೇಕು. ನಮ್ಮ ತಂದೆಯವರು ಈ ಪೂರ್ವ ವೃತ್ತಾಂತವನ್ನು ನಮಗೆ ತಿಳಿಸಿ ಪೂರ್ವಜರ ವಂಶಾವಳಿಯನ್ನು ಹೇಳಿದರು. ಅವರ ಹೆಸರು ಗುರುತಿನ ತಪಶೀಲು ಹೀಗಿದೆ-

೧ ಸುಭಾನಜಿ ಪವಾರನ ಮಗ ಸಾಬಾಜಿ ಪವಾರ

೧ ಸಾಬಾಜಿ ಪವಾರನ ಮಗ ಕೇರೋಜಿ ಪವಾರ

೧ ಕೇರೋಜಿ ಪವಾರನ ಮಗ ಸಾಬಾಜಿ ಪವಾರ

೧ ಸಾಬಾಜಿ ಪವಾರನ ಮಗ ಕೃಷ್ಣಾಜಿ ಪವಾರ

೧ ಕೃಷ್ಣಾಜಿ ಪವಾರನ ಪುತ್ರ ಬುವಾಜಿ ಪವಾರ, ಕಾಳಗದಲ್ಲಿ ಮಡಿದರು.

೧ ಬುವಾಜಿ ಪವಾರನ ಮಗ ಸಂಭಾಜಿ ಪವಾರ

೧ ಸಂಭಾಜಿಗೆ ಮೂವರು ಮಕ್ಕಳು

—

೭

ಯುದ್ಧದ ಕಾಲದಲ್ಲಿ ದೇಹದ ಮೇಲಾದ ಗಾಯಗಳಿವೆ.

೧ ಉದಾಜಿ ಪವಾರ ೧ ಆನಂದರಾವ ಪವಾರ

೧ ಬಗದೇವರಾವ ಪವಾರ   ೦ ಲಿಂಗ (ಅಪೂರ್ಣ ಕಾಲಂ)

——   ——

೨   ೧

———

೩

ನಮ್ಮ ಮುತ್ತಜ್ಜ ಸಂಭಾಜಿ ಪವಾರನು ಬದುಕಿದ್ದಾಗ ದಯಾ ಬಹಾದ್ದೂರನ ಹತ್ತಿರ ೮೦,೦೦೦ ಸೈನ್ಯವಿತ್ತು. ಅವನು ಆ ಸೈನ್ಯ, ಕಾಲ್ದಳ ಮತ್ತು ೩೫೦ ತೋಫುಗಳ ಸಹಿತ ಏರಿ ಬಂದ. ಆಗ ನಮ್ಮಜ್ಜ ತ್ರಿವರ್ಗ ಬಂಧುಗಳು ಸೇರಿ ೧೫,೦೦೦ ದಷ್ಟು ಅಶ್ವದಳ, ಸೈನ್ಯದಳ ಸಹಿತ ಹೋಗಿ ಯುದ್ಧ ಮಾಡಿದರು. ಅಜ್ಜ ಜಗದೇವರಾವ ಪವಾರನು ದಯಾ ಬಹಾದ್ದೂರನನ್ನು ಕೈಯಾರೆ ಕೊಂದನು. ಸ್ವತಃ ಆನೆಯನ್ನು ಏರಿ, ಅಂಬಾರಿಯೊಳಗೆ ಹೋಗಿ ಅವನ ಶಿರಚ್ಛೇದ ಮಾಡಿ ಕೆಳಗೆ ಚೆಲ್ಲಿದನು. ಇಂಥ ಹೋರಾಟವನ್ನು ಆಗಾಗ ನಡೆದ ಯುದ್ಧದಲ್ಲಿ ಮಾಡಿ ಪರಾಕ್ರಮವನ್ನು ಮೆರೆದಿದ್ದಾರೆ. ಯುದ್ಧ ನಡೆದಾಗಲೆಲ್ಲ ಖಡ್ಗ, ಭಲ್ಲೆ, ಗುಂಡು, ಬಾಣ ಮುಂತಾದವುಗಳಿಂದಾದ ಗಾಯದ ಗುರುತು ದೇಹದ ಮೇಲಿದ್ದವು. ನಮ್ಮ ತಂದೆಯವರೇ ದಯಾ ಬಹಾದ್ದೂರನ ಸೈನ್ಯವನ್ನು ಲೂಟಿ ಮಾಡಿ, ತೋಫುಖಾನೆ ಸಹಿತ ಎಲ್ಲವನ್ನು ದೋಚಿತಂದು ತಮ್ಮ ಬಳಿ ಉಳಿಸಿಕೊಂಡರು. ರಾಜನಿಗೆ ನೀಡುವ ಸಂಪ್ರದಾಯವಿಲ್ಲ. ನಮ್ಮಜ್ಜ ತ್ರಿವರ್ಗ ಬಂಧುಗಳ ದಕ್ಷಿಣದಲ್ಲಿಯ ಸರಂಜಾಮು, ವತನ, ಉತ್ತರ ಪ್ರಾಂತ ಧಾರಾ ಸಂಸ್ಥಾನದ, ಪ್ರದೇಶ, ಕರವಸೂಲಿ, ಚತುರ್ಥಾಂಶದ ಪಾಲು, ಸಂಪತ–ವಗೈರೆ, ಕಾಲ್ದಳ, ಅಶ್ವದಳ, ಗಜಶಾಲೆ, ತೋಫುಖಾನೆ–ಮುಂತಾದ ೧೮ ಕಾರಖಾನೆಗಳ, ಕಾಗದ ಪತ್ರಗಳ, ದೇವಧರ್ಮದ–ಹೀಗೆ ಯಾವುದೂ ಪಾಲಾಗಲಿಲ್ಲ. ನಮ್ಮ ಮುತ್ತಜ್ಜ ಆನಂದರಾವ ಪವಾರ ಗತರಾದರು. ಸಂಭಾಜಿರಾವ ಪವಾರರು ತೀರಿಹೋದ ನಂತರ ನಮ್ಮಜ್ಜ ಜಗದೇವರಾವ ಪವಾರರು ಮಡಿದರು. ಅನಂತರ ಉದಾಜಿ ಪವಾರನು ಸದರಿ ಪಾಲು ಮಾಡದೇ ವಿಶ್ವಾಸರಾವನ ಚತುರ್ಥಾಂಶದ ಪಾಲಿನಲ್ಲೇ ಮಗನ ಸ್ವಂತ ಖರ್ಚಿಗಾಗಿ, ಖಾಸಗಿ ಸರಂಜಾಮಿಗಾಗಿ ದಾರಕೋಜಿ ಪವಾರ, ಚಂದರರಾವ, ಗೋವಿಂದರಾವ ಪವಾರ, ಯಶವಂತರಾವ ಪವಾರರು ವಿನಿಯೋಗಿಸುತ್ತ ಬಂದು ಯುದ್ಧ ಮುಗಿಯುವವರೆಗೂ ಮುಂದುವರಿಸಿದರು. ಇದರ ದಾಖಲೆಗಳು ಸರಕಾರದ ದಪ್ತರಿನಲ್ಲಿದೆ (ಕಚೇರಿ) ಹೊಸದಾಗಿ ತಾರೀಖು ಬರೆದು ಕಳಿಸುವ ಅಗತ್ಯವಿಲ್ಲ. ಅದೂ ಅಲ್ಲದೆ ಸದರಿ ಬರೆದಂತೆ ಸರಂಜಾಮಿನಲ್ಲಾಗಲಿ, ಸಂಸ್ಥಾನದಲ್ಲಾಗಲಿ, ವತನದ್ದಾಗಲಿ– ಯಾವುದೂ ಪಾಲಾಗಲಿಲ್ಲ. ನಮ್ಮ ಮುತ್ತಜ್ಜ ಸಂಭಾಜಿ ಪವಾರರ ಮೂರು ಮಕ್ಕಳ ವಂಶದ ತಪಶೀಲು ಹೆಸರು ಗುರುತ ಸಹಿತ ಹೀಗಿದೆ–

೧ ಉದಾಜಿ ಪವಾರನಿಗೆ ನಾಲ್ವರು ಮಕ್ಕಳು.

೧ ಮೈನಾಜಿ ಪವಾರ ೧ ಕಾರಕೋಜಿ ಪವಾರ, ಯುದ್ಧದಲ್ಲಿ ಮಡಿದರು.

೧ ಗೋವಿಂದರಾವ ಪವಾರ ೧ ಚಂದರರಾವ ಪವಾರ, ಅರಾಜಕತೆಯ ಕಾಲದಲ್ಲಿ ಹೋರಾಡಿಸತ್ತ

—
೨ —
೨

—
೪

ಇವರಲ್ಲಿ ಮೂವರಿಗೆ ಸಂತಾನವಿಲ್ಲ. ದಾರಕೋಜಿಯ ಮಗ ಮಲ್ಲಾರರಾವ ಮತ್ತು ಆನಂದರಾವ ಪವಾರರು ಮಲಠಣದಲ್ಲಿದ್ದರು. ಆನಂದರಾವ ಅಲ್ಪ ವಯಸ್ಸಿನಲ್ಲೇ ಮಡಿದರು. ಮಲ್ಲಾರರಾವನಿಗೆ ಪುತ್ರ ಸಂತಾನವಿರಲಿಲ್ಲ. ಅವನು ದತ್ತಕವನ್ನೂ ಪಡೆಯಲಿಲ್ಲ. ಅವರಿಗೆ ಇಬ್ಬರು ಮದುವೆಯ ಮಡದಿಯರಿದ್ದರು. ಅವರು ಮಲ್ಲಾರರಾವ ಇದ್ದಾಗಲೇ ಗತರಾದರು. ಅನಂತರ ರಾಜಸಬಾಯಿ ಖಂಜಿರಿ ಸಂಪ್ರದಾಯದಂತೆ ಅವರ ಬಳಿಯಲ್ಲಿದ್ದರು. ಮಲ್ಲಾರರಾವ ಮಡಿದಾಗ ಸನ್ ೧೨೧೨ರಲ್ಲಿ ನಮ್ಮ ಮಗ ಮಲಠಣಗೆ ಹೋಗಿ ಸಂಸ್ಥಾನದ ವ್ಯವಹಾರವನ್ನು ಮುಂದುವರೆಸಿದ್ದರಿಂದ ಸರಕಾರ ಸರಂಜಾಮನ್ನು ಜಪ್ತ್ ಮಾಡಲಿಲ್ಲ. ಯುದ್ಧದ ಕೊನೆಯವರೆಗೂ ಸರಂಜಾಮು ವಿಶ್ವಾಸರಾಯಿಯ ಚತುರ್ಥಾಂಶದ ಸಾಲಿನಲ್ಲೇ ಮಲ್ಲಾರರಾವನ ಹೆಸರಿನಲ್ಲೇ ಮುಂದುವರೆಯಿತು. ಇದರ ದಾಖಲೆಯ ಸರಕಾರಿ ದಪ್ತರಿನಲ್ಲಿದೆ. ಸದ್ಯ ರಾಜಸಬಾಯಿ ಖಂಜಿರಿ ಮಲಠಾಣದಲ್ಲಿದ್ದಾರೆ. ಅವಳ ಹತ್ತಿರ ಅಧಿಕಾರವಿಲ್ಲ. ಇಲ್ಲಿಯವರೆಗೂ ಹೀಗೆ ನಡೆದಿತ್ತು. ಗಾಯಕವಾಡ ...... ಸಮಶೇರ ಬಹಾದ್ದೂರ ಇಲ್ಲಿ ಬರೋಡೆಯಲ್ಲಿದ್ದಾರೆ. ಅವರ ಉದರದಲ್ಲಿ ಮಗ ಜನಿಸಿದ್ದರೂ ಯಜಮಾನಿಕೆಯ ಅಧಿಕಾರವಿರುತ್ತಿರಲಿಲ್ಲ. ಹೀಗಿರುವಾಗ ರಾಜಸಬಾಯಿಯ ಹತ್ತಿರ ಯಶವಂತರಾವ ಪವಾರ, ಅಮೃತರಾವ ಪವಾರ ಅವರ ಮಗ ಸುಪೇಕರ ಇವರು ವಾಸಿಸಿ ಜೀವನ ಸಾಗಿಸುತ್ತಿದ್ದಾರೆ. ಸುಪೇಕರನು ನಮ್ಮೊಂದಿಗೆ ವಾಸಿಸುವ ಪ್ರಶ್ನೆಯೇ ಬರುವದಿಲ್ಲ. ಹೀಗಿದ್ದು ಯಶವಂತರಾವ ಪವಾರ ಸುಪೇಕರ ಸರಕಾರದ ಪರವಾಗಿ ಜಹಾಗೀರಿನ ಆಡಳಿತದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದಾರೆ. ಸರಕಾರ ಇದನ್ನು ನಿರ್ಬಂಧಿಸಬೇಕು. ನಮ್ಮ ವತನದ ವ್ಯವಹಾರವನ್ನು ನಾವು ಮುಂದುವರಿಸಲು ಜೀವನ ಕಾಗದಪತ್ರ ಮುಂತಾದ ಎಲ್ಲ ಸಂಗತಿಯನ್ನು ರಾಜಸಬಾಯಿ ಜೀವಂತವಾಗಿರುವಾಗಲೇ ಪಡೆಯುತ್ತೇವೆ ಅಥವಾ ಗತಿಸಿದ ಬಳಿಕ ಪಡೆಯಬಹುದಾಗಿದೆ. ಈ ಹಿಂದೆ ಮಲ್ಲಾರರಾವ ಪವಾರರ ಹೆಸರಿನಲ್ಲಿ

ನಡೆಯುವ ಯಜಮಾನಿಕೆಯು ನಮ್ಮ ಕೈಗೆ ಬರಬೇಕು. ಈ ವಿಷಯಕ್ಕೆ ಸಂಬಂಧಿಸಿದ ಯಜಮಾನಿಕೆಯ ಸರಕಾರದ ಆಜ್ಞೆಯಂತೆ ಒಪ್ಪಿಕೊಳ್ಳಲಾಗಿದೆ. ದಯವಿಟ್ಟು ಸರಕಾರ ಇದಕ್ಕೆ ಒಪ್ಪಿಗೆ ನೀಡಬೇಕು.

೧ ಜಗದೇವರಾವ ಪವಾರನಿಗೆ ಇಬ್ಬರು ಮಕ್ಕಳು.

ಮೊಗಲರು, ಪಂಢರಪುರದ ಮತ್ತು ಆನಂದ ಮೊಗರಿನ ಯುದ್ಧದ ಕಾಲದಲ್ಲಿ ಜನರಿಗೆ ಗಾಯವಾದರೂ ಕೆಲಸ ಬಂದಿದ್ದಾರೆ.

೧ ಗೋವಿಂದರಾವ ಪವಾರ

೧ ದಾರಕೋಜಿ ಪವಾರ

೨

ಮೇಲಿನ ಇಬ್ಬರು ಮಕ್ಕಳಲ್ಲಿ ಗೋವಿಂದರಾವ ಪವಾರರಿಗೆ ಮಗನಾಗಲಿ, ವಂಶವಾಗಲಿ ಇಲ್ಲ. ದಾರಕೋಜಿ ಪವಾರರ ಪುತ್ರನಾದ ನಾನು ಅವಧೂತರಾವ ಪವಾರ ಜೀವಂತವಾಗಿದ್ದೇನೆ. ನನಗೂ ಪುತ್ರ ಸಂತಾನವಿದೆ. ವಿಶ್ವಾಸರಾಯಿಯ ಚತುರ್ಥಾಂಶದ ಸಾಲಿನಲ್ಲಿ ಸರಂಜಾಮಿಯು ಯುದ್ಧದ ಕೊನೆಯವರೆಗೂ ಮುಂದುವರೆದಿತ್ತು. ಅದರ ಯಾದಿಯನ್ನು ಸನ್ ೧೨೩೪ ಶ್ರಾವಣ ತಿಂಗಳಲ್ಲಿ ನೀಡಲಾಗಿದೆ. ಸರಕಾರದ ಕಚೇರಿಯಲ್ಲಿ ದಾಖಲೆಯಿದೆ. ಪ್ರತಿ ಜಿಲ್ಲೆಯಲ್ಲಿ ೩೮ ಹಳ್ಳಿಗಳು, ನಾಲ್ಕು ಜಿಲ್ಲೆ, ಬಿಡಾರ, ಜಕಾತ-ಮುಂತಾದ ವಿಷಯಗಳಲ್ಲಿ, ಅಲ್ಲದೆ ದಿನಗೂಲಿ, ೧೮೩೦ ರೂಪಾಯಿ ಅದೂ ಅಲ್ಲದೆ.............

೪೦೦ ರೂಪಾಯಿ, ಒಟ್ಟೂ ರೂಪಾಯಿ ೨೨೩೦, ಹಾಗೆಯೇ ಪೋಷಾಕು, ದೀಪಾವಳಿಯ ಎಣ್ಣೆ ಮುಂತಾದ ಮಾನಸನ್ಮಾನ ಈ ಹಿಂದಿನಂತೆಯೇ ನಡೆಯುತ್ತಿತ್ತು. ನಮ್ಮ ಯಜಮಾನಿಕೆಯ ವ್ಯವಹಾರವನ್ನು ಸರಕಾರದ ಆಡಳಿತದಂತೆ ನಮಗೆ ನಾವೇ ಎಲ್ಲ ಸಂಕಟಗಳನ್ನು ವಹೀವಾಟಿನಂತೆ ಕೈಕೊಳ್ಳುತ್ತಿದ್ದೆವು. ಇದಕ್ಕೆ ಸರಕಾರದಿಂದ ನಿರ್ಬಂಧವಿಲ್ಲ. ಈಗ ಕಂಪನಿ ಸರಕಾರದವರಿಂದ ನಮ್ಮ ಸರಂಜಾಮಿನಲ್ಲಿಯ ಸ್ವತ ಸರಂಜಾಮು ೧೭ ಹಳ್ಳಿಗಳ ತಪಶೀಲನ್ನು ಸಂಗಮ ೩೧೮ ಪ್ರದೇಶದಲ್ಲಿಯ ಬೇಲಾಪುರ ಹಳ್ಳಿ ಮತ್ತು ದೇವಪುರ ಮೂರು ಹಳ್ಳಿಗಳು, ಒಟ್ಟು ಎಂಟು, ಶಿರಗಾಂವ ಪ್ರದೇಶದಲ್ಲಿಯ ಎಂಟು ಹಳ್ಳಿಗಳು, ಕೋತಲ ಪ್ರದೇಶದ ಹೊಳಸಣೆಯ ಒಂದು ಹಳ್ಳಿ, ಒಟ್ಟು ಹದಿನೇಳು ಹಳ್ಳಿಗಳು, ವಹೀವಾಟಿನ ಪದ್ಧತಿಯಂತೆ ತಾರೀಖ ೧೪, ಸಪ್ಟೆಂಬರ್ ತಿಂಗಳು ಸನ್ ೧೮೨೪ ಇಸವಿಯಿಂದ ಮುಂದುವರೆದಿದೆ. ಅದರ ವಹೀವಾಟು ಉಭಯತರಿಗೂ

ಸಂಬಂಧಿಸಿದ್ದರಿಂದ ಮೊದಲಿನಂತೆ ಸರಕಾರದ ಆಡಳಿತ ನಡೆಯುತ್ತಿಲ್ಲ. ಕೃಷಿಕಾರ್ಯದ ಪ್ರತಿಯೊಂದು ವಿಷಯದಲ್ಲೂ ವ್ಯತ್ಯಾಸವಾಗುತ್ತಲಿದ್ದು ಅದರಿಂದ ನಮಗೆ ಹಾನಿಯಾಗುತ್ತಲಿದೆ. ಸದರಿ ಹದಿನೇಳು ಗ್ರಾಮಗಳ ಸರಿಯಾದ ವ್ಯವಸ್ಥೆಯಾಗುವದಿಲ್ಲ. ಸದ್ಯ ಕೃಷಿಯಿಂದಾಗುವ ವಸೂಲಿಯು, ಪ್ರತಿ ವರ್ಷದ ಪ್ರಾಪ್ತಿಯಷ್ಟು ಆಗುವದಿಲ್ಲ. ದುಡಿಮೆ ಆದಾಯ ಬರುತ್ತದೆ. ಅದು ನಮ್ಮ ಖರ್ಚಿಗೆ, ಜೀವನ ನಿರ್ವಹಣೆಗೆ ಸಾಕಾಗುವದಿಲ್ಲ ಅದರಿಂದ ಸಾಲಸೋಲವಾಗಿ ತೀರ ತೊಂದರೆಯಲ್ಲಿದ್ದೇವೆ. ಇದಕ್ಕೆ ಸಂಬಂಧಿಸಿದ ಏಳು ಕಲಮಿನ ಇಂಗ್ಲೀಷ ಪತ್ರವನ್ನು ತಾರೀಕ ೧, ನವಂಬರ್ ಸನ್ ೧೮೨೭ ರಂದು ಬರೆಯಲಾಗಿದೆ. ಅದರಲ್ಲಿ ಈ ಮಜಕೂರು ಇದೆ. ಆದರೂ ಸಾಹೇಬರು ಮೆಹರ್ಬಾನ್‌ಗೊಂಡು ನಮ್ಮ ಸರಂಜಾಮಿನಲ್ಲಿಯ ಸ್ವಂತ ಸರಂಜಾಮು ಅಥವಾ ಸ್ವಂತಕ್ಕಾಗಿ, ಉದರ ನಿರ್ವಹಣೆಗಾಗಿ ಗ್ರಾಮವನ್ನು ಉಂಬಳಿಯಾಗಿಯೋ, ನೇಮಕಾತಿಯಿಂದಲೋ ಅನುಕೂಲ ಮಾಡಿಕೊಟ್ಟರೆ ಜೀವನ ನಿರ್ವಹಣೆಗೆ ಅನುಕೂಲವಾಗುತ್ತದೆ. ದಸರೆಯ ಪೋಷಾಕು ಮೂರುವರೆ ಬಟ್ಟೆ ಮತ್ತು ದೀಪಾವಳಿ ಎಣ್ಣೆಯ ವ್ಯವಸ್ಥೆಯಾಗಬೇಕು. ಸದ್ಯ ದಸರೆಗಾಗಿ ಎರಡು ಬಟ್ಟೆಗಳು ಸರಕಾರದಿಂದ ಸಿಗುತ್ತಿದೆ. ಕೊರತೆಯ ವ್ಯತ್ಯಾಸವಿರುವ ಯಾದಿಯನ್ನು ಕಳಿಸಲಾಗಿದೆ. ಕುಲದವರಿಂದ ಬಂದಿರುವ ಪತ್ರವನ್ನು ಈ ಹಿಂದೆಯೇ ಸನ್ ೧೭೪೧ರಲ್ಲಿ ಮುಂಬೈ ಹುಜೂರ ಅವರಿಗೆ ಸಲ್ಲಿಸಲಾಗಿದೆ. ಮಲಠಣ ಹಾಗೂ ಧಾರೆ ಸಂಸ್ಥಾನದ ಕಾಗದ ಪತ್ರಗಳಿವೆ. ನಮ್ಮ ಬಳಿಯಿದ್ದ ಕಾಗದಪತ್ರದಲ್ಲಿ ದಫ್ತರ ಬಂಡಾಯದಲ್ಲಿ ಪೆಂಢಾರಿಗಳ ಲೂಟಿಯಲ್ಲಿ ಮತ್ತು ಯುದ್ಧದ ಸಮಯದಲ್ಲಿ ಹಾಳಾದವು. ಕೆಲವು ಕಾಗದಪತ್ರಗಳನ್ನು ವಿಲೇಗೆ ತರಲಾಗಿದೆ. ಈ ತಾರೀಖಿನ ಮಜಕೂರು ಬರೆಯಲಿಲ್ಲ. ಸರಕಾರದ ದಫ್ತರಿನಲ್ಲಿ ದಾಖಲೆಗಳಿವೆ.

(ನನ್ನ ತಂದೆಯವರಾದ ಯಶವಂತರಾವ ಪವಾರ ಅವರು ಪೇಶ್ವೆಯ ಬೆದರಿಕೆಗೆ ಉತ್ತರವೆಂಬಂತೆ ಸೈನ್ಯವನ್ನು ಕಟ್ಟಿ ತೋಫಿನಿಂದ ಮದ್ದುಗುಂಡು ಹಾರಿಸಿ, ಬಾಣವನ್ನು ಬಿಟ್ಟು ಪೇಶ್ವೆಯರ ಡೇರೆ ಸುಟ್ಟರು. ಆದರೆ ಪೇಶ್ವೆಯವರು ಸಹಿಸಿಕೊಂಡು ತಿಳುವಳಿಕೆ ಹೇಳಿ ಮೊದಲಿನಂತೆ ಮಾನ-ಮರ್ಯಾದೆ ನೀಡುವದಾಗಿ ಹೇಳಿದ್ದರಿಂದ ಪ್ರಾಣ ಉಳಿಯಿತು.)

೧ ಆನಂದರಾವ ಪವಾರನಿಗೆ ಇಬ್ಬರು ಮಕ್ಕಳು.

೧. ಯಶವಂತರಾವ ಪವಾರನ ಮಗನ ಹೆಸರು ಖಂಡೇರಾವ ಪವಾರ. ಅವರ ಮಗ ಆನಂದರಾವ ಪವಾರ ಅವರು ಧಾರಾ ಸಂಸ್ಥಾನದಲ್ಲಿದ್ದರು. ಅವನಿಗೆ ಪುತ್ರ ಸಂತಾನವಿರಲಿಲ್ಲ. ದತ್ತಕವನ್ನು ಪಡೆದಿರಲಿಲ್ಲ. ಇದರ

ದಾಖಲೆಯೂ ಸರಕಾರಿ ದಪ್ತರದಲ್ಲಿದೆ. ಸದ್ಯ ಅವರ ಧರ್ಮಪತ್ನಿಯಾದ ಮೈನಾಬಾಯಿ ಪವಾರ ಇವರು ಧಾರೆಯಲ್ಲಿದ್ದಾರೆ. ಜಿಲ್ಲೆ, ಪ್ರದೇಶ, ಸಂಸ್ಥಾನವನ್ನು ಕಂಪನಿ ಸರಕಾರ ಮುಂದುವರೆಸಿದೆ. ನಾನು ಅಲ್ಲಿಯ ಮಾಲೀಕ ಅಧಿಕಾರಿಯಾಗಿದ್ದಾನೆ. ಸರಕಾರ ಆಜ್ಞೆ ಮಾಡಿದ ಕಾಣಿಕೆ ಮತ್ತು ಸರಂಜಾಮಿನ ವಿಷಯು ನಮಗೆ ಒಪ್ಪಿಗೆಯಿದೆ. ಮೆಹರ್ಬಾನಗೊಂಡು ನಮ್ಮ ಸಂಸ್ಥಾನವನ್ನು ನಮಗೆ ಸಿಗುವಂತೆ ಮಾಡಬೇಕು.

(ಯಶವಂತರಾವ ಪವಾರ ಮತ್ತು ರಾಯಾಜಿ ಪವಾರ ಮತ್ತು ಉಭಯತರ ವಂಶದವರು ಸದರಿ ಬರೆದಂತೆ ಮೊಗಲ ಮೇಲೆ ಏರಿಹೋಗಿ ಮುಳುಗಿಸಿದರು. ಮುಂದೆ ಯಶವಂತರಾವ ಪವಾರ ____ ಯುದ್ಧದಲ್ಲಿ ಸೈನ್ಯ ಸಮೇತ ನೆಲ ಕಚ್ಚಿದರು. ಇದಕ್ಕಾಗಿ ಫತ್ತರಗಡದ ಕಾಳಗದಲ್ಲಿ ಕೆಲಸ ಕಾರ್ಯದ ಚತುರ್ಥಾಂಶದ ಪಾಲು ಪಡೆಯಲಾಗಿದೆ.)

೧ ರಾಮಾಜಿ ಪವಾರ ಅವರಿಗೆ ಇಬ್ಬರು ಮಕ್ಕಳು–

೧ ಮಲ್ಲಾರರಾವ ಪವಾರ ಅವರಿಗೆ ಬಳವಂತರಾವ, ಹನುಮಂತರಾವ ಎಂಬ ಇಬ್ಬರು ಮಕ್ಕಳು. ಬಳವಂತರಾವ ಪವಾರ ಅವರಿಗೂ ಪುತ್ರನಿದ್ದಾನೆ.

೧ ವಿಠ್ಠಲರಾವ ಪವಾರನಿಗೂ ಮಗನಿದ್ದಾನೆ. ಸುಂದರಸಿಯಲ್ಲಿದ್ದಾನೆ.

೨

ಪಾಲು ಆಗಲಿಲ್ಲವೆಂಬ ಕಾರಣಕ್ಕಾಗಿ ರಾಯಾಜಿ ಪವಾರ ಅವರಿಗೆ ಯಶವಂತರಾವ ಪವಾರರು ಸರಂಜಾಮು ನೀಡಲಿಲ್ಲ. ಪಾಲು ನೀಡಲು ಪೇಶ್ವೆಯವರ ಮಾತು ಒಪ್ಪಲಿಲ್ಲ. ಹೀಗಾಗಿ ಪೇಶ್ವೆಯವರು ನೀಡಿದ ಹೊಸ ಸರಂಜಾಮು ಮುಂದುವರೆಯಿತು. ರಾಯಾಜಿ ಪವಾರ ಗತಿಸಿದ ಬಳಿಕ ನಡೆಯಲಿಲ್ಲ. ಡಗ ಮತ್ತು ಗರ್ಗಾಡ ಎಂಬೆರಡು ಜಿಲ್ಲೆಯಾಯಿತು.

ವಿಶ್ವಾಸರಾಯಿಯ ಚತುರ್ಥಾಂಶದ ಪಾಲಿನಲ್ಲಿ ಹಳ್ಳಿಗಳು ಮತ್ತು ಪ್ರದೇಶದಲ್ಲಿಯ ನೇವಾಸಿಯಲ್ಲಿಯ ೪೦ ಹಳ್ಳಿ ಮತ್ತು ಜಹಾಗೀರನ ಹಳ್ಳಿ ೧–ಈ ರೀತಿಯಲ್ಲಿ ಯುದ್ಧದ ಕೊನೆಯವರೆಗೂ ಮುಂದುವರೆಯಿತು. ಅದರ ದಾಖಲೆಯು ಸರಕಾರದ ದಪ್ತರಿನಲ್ಲಿದೆ. ಸದ್ಯ ಕಂಪನಿ ಸರಕಾರದಂತೆ ಚಿರಂಜೀವ ಬಳವಂತರಾವ ಪವಾರ

ಅವರ ಹೆಸರಿನಲ್ಲಿ ಹಳ್ಳಿಗಳ ಬದಲಿಗೆ ಜಹಾಗೀರಿನ ಹಳ್ಳಿ ಒಂದು, ನೇವಾಸಿ ಪ್ರದೇಶಗಳ ಬದಲಿಗೆ ಹದಿಮೂರು ಹಳ್ಳಿಗಳು, ಒಟ್ಟು ಹದಿನಾಲ್ಕು ಹಳ್ಳಿಗಳಲ್ಲಿ ಆಡಳಿತ ನಡೆಯುತ್ತಿದೆ. ತೀರ್ಥರೂಪ ವಿಠ್ಠಲರಾವ ಪವಾರ ಅವರು ಸುಂದರಸಿಯಲ್ಲಿ ಆಡಳಿತ ನಡೆಯುತ್ತಿದೆ. ಚಿರಂಜೀವಿ ರಾಜಶ್ರೀ ಬಳವಂತರಾವ ಅವರಿಗೆ ಸರಕಾರ ದಸರೆಯ ಪೋಷಾಕು ನೀಡುತ್ತಿದೆ. ಸರಂಜಾಮಿನ ಆದಾಯ ಖರ್ಚಿಗೆ ಸಾಲುವುದಿಲ್ಲ. ಸಾಹೇಬರು ದಯಮಾಡಿ ಹೆಚ್ಚು ಸರಂಜಾಮನ್ನು ನೀಡಬೇಕು. ಅದರಿಂದ ಖರ್ಚನ್ನು ನಿಭಾಯಿಸಬೇಕು.

ಚಿರಂಜೀವ ರಾಜಶ್ರೀ ಬಳವಂತರಾವ ಪವಾರ ಅವರ ಹೆಸರಿನಲ್ಲಿ ನೇವಾಸೆ ಪ್ರದೇಶದ ಬದಲಿಗೆ ಹದಿಮೂರು ಹಳ್ಳಿಗಳು. ಅಹಮದಾಬಾದ ಜಹಾಗೀರು, ವತನದ, ವಾಡೆಯ ಮುಂತಾದವುಗಳ ಪ್ರತಿಯೊಂದರ ವ್ಯವಹಾರ ಸರಕಾರದಿಂದ ಆಜ್ಞೆಯಾಗಿ ನಾವೇ ಮುನ್ನಡೆಸುತ್ತಿದ್ದೇವೆ.

ಸದರಿ ರೀತಿಯಲ್ಲಿ ಮನೆತನದ ವಿಷಯ, ಮಜಕೂರು ಮತ್ತು ವಂಶಾವಳಿಯ, ಬಡತಿಯ, ಕೀರ್ತಿ ಗೌರವದ, ಪರಾಕ್ರಮ ಶೌರ್ಯದ ಹಾಗೂ ಸರಂಜಾಮು ಮುಂತಾದ ವಿಷಯಗಳ ಕುರಿತು ನಮ್ಮ ತಂದೆಯವರು ನಮಗೆ ಹೇಳಿದಂತೆ ಬರೆದು ಯಾದಿಯನ್ನು ರವಾನಿಸಿದ್ದೇವೆ. ಸಾಹೇಬರು ಇದನ್ನು ಕೂಲಂಕುಷವಾಗಿ ಪರಿಶೀಲಿಸಿದರೆ ಸಂಪೂರ್ಣ ಮನವರಿಕೆಯಾಗಬಹುದು. ಸಾರಾಂಶ. ಸರಕಾರವು ದಯೆ ತೋರಿ ಸದರಿ ರೀತಿಯಲ್ಲಿ ಬರೆದಂತೆ ಮುನ್ನಡೆಸಿಕೊಂಡು ಹೋಗಬೇಕು.

ಸನ್ ೧೮೩೩ ಇಸವಿ ಮುಕ್ಕಾಂ ಪುಣೆ.

ತಾರೀಖ ಥ ೨೫ ತಿಂಗಳು ರಬಿಲಾಖರ, ಅಧಿಕ ಭಾದ್ರಪದ ಮಾಸ–ಸನ್ ೧೨೪೩ ಶಕೆ ೧೭೫೫

೧೫

ಪವಾರ ಮಲಠಣಕರ್

ಸಾಹೇಬ ಮುಷಫರ್ ಮೆಹರ್ಬಾನ ದೋಸ್ತಾನ ಹೆನ್ರಿಟ್ಮಾನ್ ಸಾಹೇಬ ಬಹಾದ್ದೂರ ಏಜಂಟ್ ಜಿಲ್ಲೆ ದಕ್ಷಿಣ ಸಲಾಮ –

೧. ಅಜ್ ದಿಲ್ ಏಕಲಾಸ ಯಶವಂತರಾವ ಪವಾರ ಸಂಸ್ಥಾನ ಮಲಠಣ ಸಲಾಮ್. ಇಲ್ಲಿಯ ಕುಶಲವನ್ನು ಅರಿತುಕೊಂಡು, ತಮ್ಮ ಕ್ಷೇಮ ಸಮಾಚಾರವನ್ನು ಸದಾಕಾಲ ಬರೆದು ತಿಳಿಸುತ್ತಿರಬೇಕು. ಹಾಗೆಯೇ ಸರಕಾರದ ಹುಕುಂ ತಾರೀಖ ೩೦ ಜುಲೈ ಸನ್ ೧೮೫೧ ಇಸವಿಯದು. ಅವರು ಕೇಳಿದ್ದೇನೆಂದರೆ–ನಿಮಗೆ ವಿಶ್ವಾಸರಾವ ಎಂಬ ಹುದ್ದೆಯನ್ನು ನೀಡಲಾಗಿದೆ. ಇದು ಎಂದು, ಯಾವ ಕಾರಣಕ್ಕಾಗಿ, ಯಾರಿಂದ ಪ್ರಾಪ್ತವಾಯಿತು ಎನ್ನುವದರ ಬಗೆಗೆ ಒಟ್ಟೂ ಮನೆತನದ ಬಗೆಗೆ, ಹುದ್ದೆ–ಗೌರವ ಪ್ರತಿಷ್ಠೆ ಲಭಿಸಿದ ಇತಿಹಾಸವನ್ನು ದಾಖಲೆ ಸಹಿತ ಬರೆದು ತಿಳಿಸಬೇಕು. ಜೊತೆಗೆ ಏನಾದರೂ ದಾಖಲೆಯಿದ್ದರೆ ಅದನ್ನು ಕಳಿಸಬೇಕು. ವದಂತಿ, ಬೇರೆಯವರಿಂದ ಕೇಳಿದ ಮಾಹಿತಿ ಏನಾದರೂ ಇದ್ದರೆ, ಪುರಾವೆಯಿಲ್ಲದ್ದರೆ ಅದನ್ನು ಬರೆದು ತಿಳಿಸಬೇಕು. ಜನರಿಂದ ಕೇಳಿದ ಮಾಹಿತಿಯಿದ್ದರೆ, ಕಾಗದ ಪತ್ರಗಳಲ್ಲಿ ನಮೂದಿಸಿದ್ದು ಏನಾದರೂ ಇದ್ದರೆ, ಅದನ್ನು ಬರೆದು ತಿಳಿಸಬೇಕು–ಎಂದು ಸಾಹೇಬರು ಬರೆದ ದಿನಾಂಕ–೩ ಡಿಸೆಂಬರ್ ಮಾಹೆ, ಸನ್ ೧೮೫೧ ಇಸವಿಯ ನಂಬರ್ ೧೩೧೮ರ ಪತ್ರ ಬಂದಿದೆ. ಇದಕ್ಕೆ ಉತ್ತರ ಹೀಗಿದೆ. ನಮ್ಮ ತಂದೆ ಬುಬಾಜಿ ಪವಾರ ಇವರಿಗೆ ಶ್ರೀಮಂತ ಶಿವಾಜಿ ಮಹಾರಾಜ ಛತ್ರಪತಿಯ ಪುತ್ರ ರಾಜಾರಾಮ ಸಾಹೇಬ ಛತ್ರಪತಿಯವರು ತಮ್ಮ ಪ್ರದೇಶದ ಬಂದೋಬಸ್ತ ಮಾಡಲು ತಿಳಿಸಿದ್ದರಿಂದ ಅವರು ಕಾಳಗ ಮಾಡಿ, ಬಂಡಾಯವನ್ನು ಮುರಿದು ಹಾಕಿ. ಆಡಳಿತವನ್ನು ಶುರು ಮಾಡಿ ನಂಬಿಕೆಯಿಂದ ಬಂದೋಬಸ್ತ ಮಾಡಿದರು. ಈ ಕಾರಣಕ್ಕಾಗಿ ಜಿಂಜಿಯ ಕೋಣೆಯಲ್ಲಿ ವಿಶ್ವಾಸರಾವ ಎಂಬ ಪದವಿಯನ್ನು ನೀಡಿ, ವಿಶ್ವಾಸರಾಯಿಯ ಸರಂಜಾಮ ಪ್ರಾಂತ ದಕ್ಷಿಣ ಮತ್ತು ಖಾನದೇಶ ಪ್ರಾಂತವನ್ನು ನೀಡಿದನು. ಬುಬಾಜಿ ಪವಾರ ಅವರ ಮೊಮ್ಮಗ ಉದಾಜಿ ಪವಾರ ಅಂದರೆ ನಮ್ಮ ಮುತ್ತಜ್ಜನ ಶೌರ್ಯವನ್ನು ಮೆಚ್ಚಿದ ಶಾಹ ಮಹಾರಾಜ ಮತ್ತು ಪೇಶ್ವೆಯವರು ವಿಶ್ವಾಸರಾಯಿಯ ಸರಂಜಾಮು ಅಲ್ಲದೆ ಗುಜರಾತ, ಮಾಳವಾ, ಮೇವಾಡ, ಮಾರವಾಡ, ಬುಂದೇಲ–ಖಂಡ–ಮುಂತಾದ ಪ್ರಾಂತದ ಪ್ರದೇಶವನ್ನು ನೀಡಿದರು. ಅದರಂತೆ ದಿನೇ ದಿನೇ ಪರಾಕ್ರಮದ ಪದವಿ ಸಿಗಲಾರಂಭಿಸಿತು. ಇವರ ಬಗೆಗೂ ಈ ಮೊದಲೇ ಯಾದಿಯನ್ನು ಏಜಂಟ ಕಚೇರಿಯಲ್ಲಿ ಗೌವರ್ನರ್ ಕೌನ್ಸಿಲ್‌ನಲ್ಲಿ ನೀಡಲಾಗಿದೆ. ಇದರ ಜೊತೆಗೆ ರಾಜಸನದಿ ಮತ್ತು ಪೇಶ್ವೆಸನದನ್ನು

ತೋರಿಸಿ, ನಕಲನ್ನು ಏಜಂಟ್ ಕಚೇರಿಯಲ್ಲಿ ದಾಖಲೆಗಾಗಿ ನೀಡಲಾಗಿದೆ. ವಿಶ್ವಾಸರಾವ ಹುದ್ದೆಯ ಬಗೆಗಿನ ಮತ್ತು ಸರಂಜಾಮ ಬಗೆಗಿನ ದಾಖಲೆಯು ಸರಕಾರದ ದಫ್ತರದಲ್ಲಿದೆ. ನಮ್ಮ ಹತ್ತಿರ ಕಾಗದಪತ್ರ ಇರಿಸಿಕೊಳ್ಳ ಬೇಕೆಂದರೆ, ಸದಾಕಾಲ ತಂದೆಯವರು ಯುದ್ಧಕ್ಕೆ ಹೋಗಬೇಕಾಗಿ ಬಂದುದರಿಂದ ಕಾಗದ ಒಂದೇ ಕಡೆಗೆ ಉಳಿಯಲಿಲ್ಲ. ಅದು ದೊರಕಿದಾಗಲೆಲ್ಲ ದಾಖಲೆಗಾಗಿ ನೀಡುತ್ತಲೇ ಇದ್ದೆವು. ಸದ್ಯ ಹಿರಿಯ ಬಾಜೀರಾವ ಸಾಹೇಬರ ಸನದು ಲಭಿಸಿದೆ. ಅದನ್ನು ಚಿರಂಜೀವ ರಾಜಮಾನ್ಯ ರಾಜಶ್ರೀ ರಾವಸಾಹೇಬ ಸಂಸ್ಥಾನ ಧಾರ-ಇವರ ಲಗ್ನ ಮುಗಿದ ಬಳಿಕ ಚೈತ್ರ ತಿಂಗಳಲ್ಲಿ ತಮ್ಮ ಭೇಟಿಗೆ ಬರಲಿದ್ದೇವೆ. ಆಗ ತಮಗೆ ತೋರಿಸಲಾಗುವದು.

ತಾರೀಖ ೧೮, ಮಾಹೇ ಜನೆವರಿ ಸನ್ ೧೮೫೨ ಇಸವಿ ಉರ್ಫ್‌ನ ಪೌಷ್ಯ ವದ್ಯ ೧೨ ಶಕೆ ೧೭೭೩ ಮುಕ್ಕಾಂಧಾರ ಪ್ರಾಂತ ಮಾಳವ. ಹೆಚ್ಚಿಗೇನು ಬರೆಯಲಿ-ಪ್ರೀತಿ ಇರಲಿ.

೧೬

ಪವಾರ ಸುಪೇಕರ್

ಅರ್ಜಿ ಚಂದರರಾವ ಪವಾರ ಸುಪೇಕರ್ ಅರ್ಬಾ ಸಲಾಸೀನ ಮಯಾತ್ಯೆನ ವ ಅಲಫ್. ಮೆಹರ್ಬಾನ ಜಾನ್ ವಾರ್ಡಿನ್ ಸಾಹೇಬ ಬಹಾದೂರ ಡೆಪ್ಯೂಟಿ ಏಜಂಟ್ ಜಿಲ್ಲೆ ದಕ್ಷಿಣ ಅವರ ತಾರೀಖ ೮, ಮಾಹೆ ಸಪ್ಟಂಬರ್, ಸನ್ ೧೮೩೨ ಇಸವಿಯ ಪತ್ರ ಬಂದಿದೆ. ಅದರಲ್ಲಿರುವ ಮಜಕೂರು ಏನೆಂದರೆ–ಹಜರತ್ ಬಂದೆರಾವ ರೈಟ್ ಹಾನರೇಬಲ್ ಗವ್ಹರ್ನರ್ ಕೌನ್ಸಿಲ್ ಬಯಸುವದೇನೆಂದರೆ, ದಕ್ಷಿಣದ ಜಹಾಗೀರದಾರರ ಕೈಫಿಯತ್ ಏನು ಎಂಬುದು ಬರೆದು ತಿಳಿಸಬೇಕು. ಈ ಕಾರಣಕ್ಕಾಗಿ ಸರಕಾರಕ್ಕೆ ಕಳಿಸಲು ದಯವಿಟ್ಟು ಸ್ವಲ್ಪದರಲ್ಲಿ ಮಜಕೂರಿನಲ್ಲಿ ಕೈಫಿಯತ್ ಬರೆದು ತಿಳಿಸಬೇಕು. ಅದರಲ್ಲಿಯ ತಪಶೀಲು–ಯಾವ ಕಾಲಕ್ಕೆ ನಿಮ್ಮ ಮನೆತನಕ್ಕೆ ಪ್ರತಿಷ್ಠೆ ಲಭಿಸಿತು ಎಂಬ ಮಾಹಿತಿ; ಸೈನ್ಯ ಜಾತಸರಂಜಾಮು ನಿಮ್ಮ ತಂದೆಯ ಹತ್ತಿರವಿರುವಂತಹದು. ಸದರಿ ಸರಂಜಾಮು ಯಾವ ತಾರೀಖಿಗೆ ನೀಡಲಾಯಿತು. ನಿಮ್ಮ ಜಹಾಗೀರಿನ ವ್ಯವಹಾರದಲ್ಲಿ ಪೇಶ್ವೆ ಸರಕಾರ ಹಸ್ತಕ್ಷೇಪ ಮಾಡಿದ ಬಗೆ, ಸದ್ಯ ನಿಮ್ಮ ಬಳಿಯಿರುವ ಸರಂಜಾಮಿನ ಸ್ಥಿತಿ ಮತ್ತು ಪೇಶ್ವೆ ಸರಕಾರ ನಿಮಗೆ ನೀಡಿದ ಗೌರವ ಮತ್ತು ಈಗ ಕಂಪನಿ ಸರಕಾರ ನೀಡುತ್ತಿರುವ ಗೌರವದಲ್ಲಿರುವ ವ್ಯತ್ಯಾಸದ ವಿವರವನ್ನು ಯಾದಿಯಲ್ಲಿ ಸೇರ್ಪಡೆ ಮಾಡಿ ರವಾನೆ ಮಾಡಬೇಕು. ಈ ಪತ್ರದ ಆದೇಶದಂತೆ ನೀಡಲಾದ ತಪಶೀಲಿನ ವಿವರ ಹೀಗಿದೆ –

೧) ನಮ್ಮ ಮನೆತನಕ್ಕೆ ಸಿಕ್ಕ ಬಡತಿ, ಪ್ರತಿಷ್ಠೆಯ ತಾರೀಖಿನ ಬಗೆಗಿನ ಉತ್ತರ ನಮ್ಮ ತಂದೆಯವರಾದ ಸಾಬುಸಿಂಗ ಪವಾರ ರಜಪೂತ ಹಿಂದೂಸ್ತಾನದಿಂದ ಆಗಮಿಸಿದರು. ಅವನ ಮಗ ಕೃಷ್ಣಾಜಿ ಪವಾರ ಸ್ವತಂತ್ರವಾಗಿ ಜೀವಿಸುತ್ತಿದ್ದ. ಮುಂದೆ ಅವನ ಪುತ್ರ ಬುಬಾಜಿ ಪವಾರ, ರಾಯಾಜಿ ಪವಾರ ಮತ್ತು ಕೇಶೇಜಿ ಪವಾರ ಇವರು ಶ್ರೀಮಂತ ಶಿವಾಜಿ ರಾಜೇ ಮಹಾರಾಜ ರಾಜೇ ಛತ್ರಪತಿಯ ಬಳಿ ಸೈನ್ಯದಲ್ಲಿ ನೌಕರಿಯನ್ನು ಮಾಡುತ್ತಿದ್ದ. ಶಿವಾಜಿ ಮಹಾರಾಜರ ಪುತ್ರ ರಾಜಾರಾವ ಸಾಹೇಬರ ಬುಬಾಜಿ ಪವಾರ ಅವರಿಗೆ ಪ್ರದೇಶದ ಬಂದೋಬಸ್ತ ಮಾಡಲು ಹೇಳಿದರು. ಅವರು ತಮ್ಮ ಪ್ರತಿಷ್ಠೆಗೆ ತಕ್ಕಂತೆ ತಾವೆ ತೀರದವರೆಗೆ ಈ ವ್ಯವಸ್ಥೆಯನ್ನು ಕೈಕೊಂಡು ಬಂದೋಬಸ್ತ ಮಾಡಿದರು. ಈ ಕಾರಣಕ್ಕಾಗಿ ವಿಶ್ವಾಸರಾವ ಎಂಬ ಪ್ರತಿಷ್ಠೆ ನೀಡಿದರು. ಗೌರವ ಬೆಳೆಯಿತು. ಬುಬಾಜಿ ಪವಾರ ಅವರ ಕಿರಿಯ ಸೋದರರಾದ ರಾಮಾಜಿ ಪವಾರ ಮತ್ತು ಕೇರೋಜಿ ಪವಾರ ಅವರೂ ರಾಮರಾಜನ ಸನ್ನಿಧಿಯಲ್ಲಿ ಸೈನ್ಯದಲ್ಲಿದ್ದರು.

ಅವನಿಗೆ ಸೇನಾ ಬಾಣ ಸಹಸ್ರ (ಹನ್ನೆರಡು ಸಾವಿರ) ಎಂಬ ಹುದ್ದೆಯನ್ನು ಕೇರೋಜಿ ಪವಾರ ಅವನಿಗೆ ನೀಡಿದರು. ಅನಂತರ ಶ್ರೀಮಂತ ಮಹಾರಾಜರು ದಿಲ್ಲಿಯಿಂದ ಪ್ರತಿಷ್ಠೆಗಳಿಸಿ ದಕ್ಷಿಣಕ್ಕೆ ಬಂದರು. ಆ ಸಮೀಪದಲ್ಲಿ ಎಷ್ಟೊ ಸೈನಿಕರು ಸರದಾರರು ಬುಬಾಜಿ ಪವಾರದ ಬಳಿಗೆ ಬಂದರು. ಆಗ ಬುಬಾಜಿ ಪವಾರರು ಮಹಾರಾಜರು ಬಾದಶಾಹನ ಕಡೆಯಿಂದ ವಿಶ್ವಾಸರಾಯಿಯ ಚತುರ್ಥಾಳ ಸರಂಜಾಮನ್ನು ಪಡೆದರು. ಅದರಲ್ಲಿ ಸೈನ್ಯ ಮತ್ತು ಗ್ರಾಮಗಳ ಜಾತ ಸರಂಜಾಮನ ಆಡಳಿತವನ್ನು ಸಂಗಮದೇಶ ಮತ್ತು ಖಾನ್‌ದೇಶದ ಸರಕಾರಕ್ಕೆ ನೀಡಲಾಯಿತು. ಅಂದಿನಿಂದ ಮನೆತನದ ಬಡ್ತಿ ಮತ್ತು ಪ್ರತಿಷ್ಠೆಯು ಗಳಿಸಿದ ಬಳಿಕ ಸೋದರತ್ವದಲ್ಲಿ ಸರಕಾರ ಬೇರೆ- ಬೇರೆಯಾದರು. ಮುಂದೆ ಪರಾಕ್ರಮವನ್ನು ಕಂಡು ಮಹಾರಾಜರು ಸರಂಜಾಮಿನ ಹತ್ತನೇ ಪಾಲನ್ನು ಹೆಚ್ಚಿಗೆಯಾಗಿ ನಮ್ಮ ಮನೆತನಕ್ಕೆ ಒಂದು ಪಾಲು ಮತ್ತು ಉದಾಜಿ ಪವಾರ ________ ಇವನಿಗೆ ಎರಡು ಪಾಲು ನೀಡಿದರು. ಬಳಿಕ ಬಾಳಾಜಿ ವಿಶ್ವನಾಥ ಮತ್ತು ಬಾಜೀರಾವ ಬಲ್ಲಾಳ ಪೇಶ್ವೆಯವರ ಜೊತೆಯಲ್ಲಿ ದಿಲ್ಲಿ ವಗ್ಯೆರೆಯ ಆಕ್ರಮಣ, ಯುದ್ಧ ಮತ್ತು ಉಳಿದ ಕಾರ್ಯವನ್ನು ನಮ್ಮ ತಂದೆಯವರು ಕೈಕೊಂಡರು.

೨) ಸೈನ್ಯ ಮತ್ತು ಜಾತ ಸರಂಜಾಮನ್ನು ನಮ್ಮ ತಂದೆಯವರ ಆಧೀನದಲ್ಲಿತ್ತು. ಸರಂಜಾಮು ಯಾವ ತಾರೀಖಿಗೆ ನೀಡಲಾಯಿತು. ಮತ್ತು ನಿಮ್ಮ ಜಹಾಗೀರಿನ ವ್ಯವಹಾರದಲ್ಲಿ ಯಾವ ರೀತಿ ಪೇಶ್ವೆ ಪರ ಹಸ್ತಕ್ಷೇಪ ಮಾಡಿತು? ಎಂಬ ಪ್ರಶ್ನೆಯು ಉತ್ತರ–ಬುಬಾಜಿ ಪವಾರನಿಗೆ ಇಬ್ಬರು ಮಕ್ಕಳು. ಅವರ ಹೆಸರು – ೧) ಹಿರಿಯ ಮಗ ಕಾಳೋಜಿ ಪವಾರ. ಅವರಿಗೆ ನಾಲ್ವರು ಮಕ್ಕಳು

೧ ಕೃಷ್ಣಾಜಿ ಪವಾರ ವಿಶ್ವಾಸರಾವ ಹಿರಿಯ

೧ ತುಕೋಜಿ ಪವಾರ ಗಣೇಗಾಂವಕರ

೧ ಜೀವಾಜಿ ಪವಾರ ಹಿಂಗವಾಕರ

೧ ಮಾನಾಜಿ ಪವಾರ ಸುಪೇಕರ ಕಿರಿಯ

—
೪

೧ ಕಿರಿಯ ಸಂಭಾಜಿ ಪವಾರ ಇವನಿಗೆ ಮೂವರು ಮಕ್ಕಳು

೧ ಉದಾಜಿ ಪವಾರ ಮಲಡಣಕರ್

೧ ಆನಂದರಾವ ಪವಾರ ಕವರೇಕರ್

೧ ಜಗದೇವರಾವ ಚಿತೆಗಾಂವಕರ

೩

ಅವರಲ್ಲಿ ಹಿರಿಯ ಕಾಳೋಜಿ ಪವಾರನ ನಾಲ್ಕೂ ಮಕ್ಕಳು ಅವಿಭಕ್ತರಾಗಿದ್ದಾಗ ನಮ್ಮಿಬ್ಬ ಮಾನಾಜಿ ಪವಾರ ಅವರು ರಾಜೇ ಶಾಹೂ ಛತ್ರಪತಿಯ ಹತ್ತಿರ ಸೈನ್ಯದ ನೌಕರಿಯಲ್ಲಿದ್ದರು. ಅವರ ಕೆಲಸ ಕಾರ್ಯವನ್ನು ಕಂಡು ಪ್ರಸನ್ನರಾಗಿ ಮಹಾರಾಜರು ಹತ್ತನೇ ___ ಸರಂಜಾಮು ರೂಪಾಯಿ ೨೦,೦೦೦ನಗದು ನೀಡಿದನು. ಅದರ ಬಗೆಗಿನ ಸನದು ದಂಗೆಯಲ್ಲಿ ಹಾಳಾಯಿತು. ಒಂದು ಸನದು ರಾಜ ಶಕೆ ೬೧ ಮತ್ತೊಂದು ೬೨ರಷ್ಟು ಇದೆ. ಕಲಮ್.

೩) ಡ್ವಾರ ಆಸಾಮಿ ೬೦ ಸರಂಜಾಮಿನ ಚಾಕರಿಗೆ ದಿನಗೂಲಿಯ ಹೊರತು ನಡೆದುಕೊಳ್ಳುತ್ತಿದ್ದ ಸರಂಜಾಮಿನ ವ್ಯವಹಾರವನ್ನು ನಾವೇ ಹಕ್ಕಿನಿಂದ ಮಾಡಿದೆವು. ಹೀಗಾಗಿ ಪೇಶ್ವೆಯವರು ಎಂದೂ ಹಸ್ತಕ್ಷೇಪ ಮಾಡಲಿಲ್ಲ. ವಿಠ್ಠಲ ಶಿವದೇವ ಇವರ ಸೈನ್ಯದಲ್ಲಿ ಪಾನಿಪತ್ತಿನ ಯುದ್ಧದವರೆಗೆ ಚಾಕರಿ ಮಾಡುತ್ತಿದ್ದ ಹಿಂದೂಸ್ತಾನದ ಸೈನ್ಯದ ಜೊತೆಗಿದ್ದಾಗ ಮಾನಾಜಿ ಪವಾರ ಪಲಿಪಡಗಂಜಿ ಸನಿಹ ದಿಲ್ಲಿಯಲ್ಲಿ ಕೈಲಾಸವಾಸಿಯಾದ. ಮುಂದೆ ನಮ್ಮ ತಂದೆಯವರಾದ ಯಾದವರಾವ ಪವಾರ ಅವರ ಹೆಸರಿಗೆ ಸರಂಜಾಮ ಬದಲಾವಣೆ ಮಾಡಿ ಅಂತಾಜಿ ಮಾಣಕೇಶ್ವರ ಮತ್ತು ವಿಸಾಜಿ ಪಂತ ಬಿನಿವಾಲೇ ಮತ್ತು ಮಹಾ___ ಶಿಂದೆ ಇವರ ಜೊತೆಯಲ್ಲಿ ಸೈನ್ಯದಲ್ಲಿ ನಾಲ್ವರೂ ಸೋದರರ ಸೈನ್ಯದ ತುಕಡಿಗಳಿದ್ದವು. ಅವರ ಜೊತೆಗೂಡಿ ಹಿಂದೂಸ್ತಾನದಲ್ಲಿ ಯುದ್ಧದ ಕಾರ್ಯ ನಡೆಯಿತು. ಅದು ತ್ರಿವರ್ಗಸೈನ್ಯಕ್ಕೆ ಗೊತ್ತಿದೆ. ಶಿಂದೆ ಅಲಿಜಾ ಬಹಾದೂರನು ಹಿಂದಿನ ವ್ಯವಹಾರವನ್ನು ಗಮನಿಸಿ ಹಿಂದೂಸ್ಥಾನದಲ್ಲಿ ಅಮೀರಪುರ ಜಿಲ್ಲೆ ಲಕ್ಷರೂಪಾಯಿ ಆದಾಯದ್ದು, ಖಂಡನಿಯಲ್ಲಿ (ಕರ ವಸೂಲಿ) ಪಾಲು ಪವಾರನಿಗೆ ನೀಡುತ್ತ ಬಂದರು. ತೀರ್ಥರೂಪ ತಂದೆಯವರ ತಾಪಿತೀರದಲ್ಲಿ ಶಾಂತರಾದರು. ಆಗ ಶ್ರೀಮಂತ ಸವಾಯಿ ಮಾಧವರಾವ ಸಾಹೇಬರು ನಮ್ಮ ಹೆಸರಿಗೆ ಸರಂಜಾಮನ್ನು ಕರಾರು ಮಾಡಿಕೊಟ್ಟರು. ಅದು ಕಂಪನಿ ಸರಕಾರದ ಯುದ್ಧದ ಕೊನೆಯವರೆಗೂ ನಮ್ಮ ಹಕ್ಕಿನಲ್ಲಿತ್ತು.

ಕಲಮ್.

೪) ತಮ್ಮ ಹಕ್ಕಿನಲ್ಲಿರುವ ಸರಂಜಾಮರು ಯಾವುದು ಎಂಬ ಬಗೆಗೆ ಉತ್ತರ ಐದು ಸಾವಿರದ ಜಾತ ಸರಂಜಾಮಿದೆ. ಅವರ ಮೋಕಾಸಿ ಗ್ರಾಮಗಳು ಸಾವದೆ ಮತ್ತು ಗಾಲಣೆ ಪ್ರದೇಶ. ಖಾನದೇಶ ಪ್ರಾಂತದಲ್ಲಿದೆ.

೫) ಪೇಶ್ವೆ ಸರಕಾರ ತಮಗೆ ನೀಡಿದ ಪ್ರತಿಷ್ಠೆ ಮತ್ತು ಈಗ ಕಂಪನಿ ಸರಕಾರ ನೀಡಿದರ ಬಗೆಗೆ ಮಾಹಿತಿ ಸದರಿ ಕಲಮಿನಲ್ಲಿ ಎಲ್ಲ ಒಳಗೊಂಡಿದೆ. ದಸರೆಯ ಬಹುಮಾನದಲ್ಲಿ ಮೂರೂವರೆ ಬೆಲೆಯುಳ್ಳ ಬಟ್ಟೆ ನೀಡಲಾಗುತ್ತಿತ್ತು. ಈಗ ಸದ್ಯ ಕಂಪನಿ ಸರಕಾರವು ಎರಡು ನೀಡುತ್ತಿತ್ತು. ಕಲಮ್.

ಒಟ್ಟು ಐದು ಕಲಮಿನಲ್ಲಿ ಮಜಕೂರು ಬರೆಯಲಾಗಿದೆ. ಸರಕಾರದ ಮನಸ್ಸಿಗೆ ಬರಬಹುದು. ತಾರೀಖ ೫, ಮಾಹೆ ಜುಲೈ, ಸನ್ ೧೨೩೩ ಇಸವಿ. ಮುತಾಬಕ ಆಷಾಢ ವದ್ಯ ೪ ಶಕೆ ೧೭೫೫ ವಿಜಯನಾಮ ಸಂವತ್ಸರೆ. ಸನ್ ೧೨೪೩ ಫಸಲಿ.

೧೭

ಪವಾರ ಸುಪೇಕರ್

ಅರ್ಜಿ ಬುಬಾಜಿ ಪವಾರ ವಿಶ್ವಾಸರಾವ ಸುಪೇಕರ ಸುರುಸನ್ ಆಬಾನ ಸಲಾಸೀನ್ ಮಯಾತೈನ ವ ಅಲಫ್ ಮೆಹರ್ಬಾನ ಜಾನ್ ವಾರ್ಡಿನ್ ಸಾಹೇಬ ಬಹಾದ್ದೂರ ಡೆಪ್ಯೂಟಿ ಏಜಂಟ್ ಜಿಲ್ಲೆ ದಕ್ಷಿಣ ಇವರು ಬರೆದ ಪತ್ರದ ತಾರೀಖು ೮, ಮಾಹೆ ಸಪ್ಟೆಂಬರ್, ೧೮೩೨ ಇಸವಿಯದು ತಲುಪಿದೆ. ಅದರಲ್ಲಿರುವ ಮಜಕೂರು– ಹಜರತ್ ಬಂದೇಗಾನ ಅಲ್ಲಿ ರೈಟ್ ಹಾನರೇಬಲ್ ಗವ್ಹರ್ನರ್ ಕೌನ್ಸಿಲು ಬಯಸುವದೇನೆಂದರೆ ದಕ್ಷಿಣದ ಜಹಾಗೀರದ ಕೈಫಿಯತ್ ಏನಿದೆ ಎನ್ನುವದನ್ನು ಪರಿಶೀಲಿಸಬೇಕಾಗಿದೆ. ಈ ಕಾರಣಕ್ಕಾಗಿ ತಾವು ದಯವಿಟ್ಟು ಸ್ವಲ್ಪದರಲ್ಲಿ ಕೈಫಿಯತ್ತನ್ನು ಬರೆದು ಕಳುಹಿಸಬೇಕು. ಅದರಲ್ಲಿಯ ತಪಶೀಲು–ನಿಮ್ಮ ಮನೆತನದ ಬಡ್ತಿ ಮತ್ತು ಯಾವ ತಾರೀಖಿಗೆ ನಿಮ್ಮ ಮನೆತನಕ್ಕೆ ಪ್ರತಿಷ್ಠೆ ಸಿಕ್ಕಿತು? ನಿಮ್ಮ ತಂದೆಯವರ ಹತ್ತಿರವಿರುವ ಸೈನ್ಯ, ಮತ್ತು ಸರಂಜಾಮು ಯಾವ ತಾರೀಖಿಗೆ ನೀಡಲಾಯಿತು? ನಿಮ್ಮ ಜಹಾಗೀರಿನ ವ್ಯವಹಾರದಲ್ಲಿ ಪೇಶ್ವೆ ಸರಕಾರ ಹಸ್ತಕ್ಷೇಪ ಮಾಡಿದೆಯೆ? ನಿಮ್ಮ ಬಳಿಯಿರುವ ಸರಂಜಾಮು ಬಗ್ಗೆ ಪೇಶ್ವೆ ಸರಕಾರ ಪ್ರತಿಷ್ಠೆ, ಸದ್ಯ ಆಂಗ್ಲ ಸರಕಾರ ನೀಡುತ್ತಿರುವ ಪ್ರತಿಷ್ಠೆ, ಈ ಎರಡರಲ್ಲೂ ಕಂಡು ಬರುವ ವ್ಯತ್ಯಾಸ–ವಗೈರೆಯ ಬಗೆಗೆ ಯಾದಿಯಲ್ಲಿ ಸೇರ್ಪಡೆ ಮಾಡಿ ಬರೆದು ರವಾನೆ ಮಾಡಬೇಕು. ಈ ಪತ್ರಕ್ಕೆ ನೀಡಿದ ಉತ್ತರದ ಮಜಕೂರು ತಪಶೀಲು ಹೀಗಿದೆ.

೧) ತಮ್ಮ ಮನೆತನದ ಬಡ್ತಿ ಮತ್ತು ಯಾವ ದಿನಾಂಕಕ್ಕೆ ಮನೆತನಕ್ಕೆ ಪ್ರತಿಷ್ಠೆ ದೊರಕಿ ಖ್ಯಾತಿಯನ್ನು ಪಡೆಯಿತು ಎಂಬುದಕ್ಕೆ ಉತ್ತರ ಹೀಗಿದೆ– ನಮ್ಮ ತಂದೆಯವರಾದ ಬುಬಾಜಿ ಪವಾರ ಮತ್ತು ಕೆರೋಜಿ ಪವಾರ ಅವರು ಛತ್ರಪತಿ ಶಿವಾಜಿ ಮಹಾರಾಜರ ಹತ್ತಿರ ಕಿಲ್ಲೆದಾರಿಕೆಯನ್ನು ಸ್ವಂತಕುದುರೆ ಏರಿ ಹೋಗಿ ಸರಕಾರದ ನೌಕರಿ ಮಾಡುವ ವ್ಯಕ್ತಿ ಮಾಡುತ್ತಿದ್ದರು. ಸ್ವದೇಶದಲ್ಲಿ ದಮಾಜಿ ತಿಮಾಜಿ ಮುಂತಾದವರು. ಬೇರೆ ಬೇರೆ ಕಡೆಗಳಲ್ಲಿ ಬಂಡಾಯ ಮಾಡುವದನ್ನು ಕಂಡ ಅವರನ್ನು ನಿಯಂತ್ರಿಸಲು ಛತ್ರಪತಿ ರಾಜಾರಾಮ ಮಹಾರಾಜರು ಬುಬಾಜಿ ಮತ್ತು ಕೇರೋಜಿ ಪವಾರ ಅವರನ್ನು ನೇಮಿಸಿದರು. ಅವರಿಬ್ಬರೂ ಸೇರಿ ೧೨,೦೦೦ ಸೈನ್ಯದೊಂದಿಗೆ ಬಂಡಾಯುವನ್ನು ನಿಯಂತ್ರಿಸಿದರು. ಆಗ ಕೇರೋಜಿ ಪವಾರ ಅವರಿಗೆ 'ಸೇನೆ ಹನ್ನೆರಡು ಸಾವಿರ' ಎಂಬ ಬಿರುದನ್ನು ನೀಡಿದರು. ಅನಂತರ ಉಭಯ ಸೋದರರು ಸೇರಿ ಭಾರೀ ಸೈನ್ಯದೊಂದಿಗೆ ಹೋಗಿ ಗಂಗಾದಡ, ಖಾನದೇಶ ಪ್ರಾಂತ, ತಾಪಿ

ತೀರದವರೆಗಿನ ಸ್ವರಾಜ್ಯದಲ್ಲಿ ಸುವ್ಯವಸ್ಥೆಯನ್ನು ತರುವ ದೊಡ್ಡ ದೊಡ್ಡ ಕಾರ್ಯಗಳನ್ನು ವಿಶ್ವಾಸದಿಂದ ಮಾಡಿದರು. ಆಗ 'ವಿಶ್ವಾಸರಾವ' ಎಂಬ ಪದವಿಯನ್ನು ನೀಡಿ, ಹಲವು ಜಿಲ್ಲೆಗಳ ಆಡಳಿತದ ಕಾರ್ಯವನ್ನು ನೀಡಿದರು. ಉಪರೋಕ್ತ ಬುಬಾಜಿ ಪವಾರ ಅವರ ಪುತ್ರ ಕಾಳೋಜಿ ಪವಾರ ಮತ್ತು ಸಂಭಾಜಿ ಪವಾರ ಇವರು ಸೈನ್ಯವನ್ನು ನಿರ್ಮಿಸಿಕೊಂಡು ಛತ್ರಪತಿ ಮಹಾರಾಜರ ಸನ್ನಿಧಿಯಲ್ಲಿ ಕಾರ್ಯನಿರತರಾಗಿದ್ದರು. ಆಗ ವಿಶ್ವಾಸರಾಯಿಯ ಸರಂಜಾಮಿನಲ್ಲಿ ಪಾಲಾಗಿ ಅರ್ಧಪಾಲು ಕೇರೋಜಿ ಪವಾರನಿಗೂ, ಒಂದು ನಾಲ್ಕಾಂಶ ಪಾಲು ಸಂಭಾಜಿ ಪವಾರನಿಗೂ, ಉಳಿದ ಚತುರ್ಥಾದಳ ಸರಂಜಾಮನ್ನು ಕಾಳೋಜಿ ಪವಾರ ಅವರಿಗೂ ನೀಡಲಾಗಿದ್ದು, ಅವರು ಸೋದರತ್ವದಲ್ಲಿ ವ್ಯವಹಾರವನ್ನು ಮುಂದುವರೆಸಿಕೊಂಡು ಹೋದರು. ಕಾಳೋಜಿ ಪವಾರನಿಗೆ ನಾಲ್ವರು ಮಕ್ಕಳು. ಕೃಷ್ಣಾಜಿ ಪವಾರ ಜೇಷ್ಠಪುತ್ರ. ನಮ್ಮ ಮುತ್ತಜ್ಜ, ಎರಡನೆಯವನು ತುಕೋಅ ಪವಾರ, ಮೂರನೆಯವನು ಜಿವಾಜಿ ಪವಾರ, ನಾಲ್ಕನೆಯವನು ಮಿನಾಜಿ ಪವಾರ ಸ್ವದೇಶದಲ್ಲಿ ಸೈನ್ಯದ ಜೊತೆಗೆ ಇದ್ದರು. ಮುಂದೆ ಶ್ರೀಮಂತ ಬಾಜೀರಾವ ಸಾಹೇಬ ಪೇಶ್ವೆಯವರು ಮಾಳವ ಪ್ರಾಂತವನ್ನು ಗೆಲ್ಲಲು ಹೋದರು. ಅವರೊಂದಿಗೆ ______ ಪವಾರ ಮತ್ತು ಜಿವಾಜಿ ಪವಾರ ಸೈನ್ಯ ಸಮೇತ ಹೋದರು. ಅವರು ಮಾಳವ ಪ್ರಾಂತದಲ್ಲಿ ಸರಕಾರಕ್ಕೆ ಉಪಯೋಗ ಬೀಳುವ ಕಾರ್ಯವನ್ನು ನಿರ್ವಹಿಸಿದರು. ಈ ಕಾರಣದಿಂದಾಗಿ ಅವರಿಗೆ ಮಾಳವೆ ಪ್ರಾಂತವನ್ನು ಗೆದ್ದಿರುವುದರಿಂದ ಶಿಂದೆ ಹಾಗೂ ಹೋಳ್ಕರರ ಜೊತೆಗೆ ಅವರಿಗೂ ಲಕ್ಷಾಂತರ ರೂಪಾಯಿಯ ಸರಂಜಾಮಿನ ಪಾಲು ನೀಡಲಾಯಿತು. ಅದು ಉಭಯತರಲ್ಲೂ ಮುಂದುವರೆದಿದೆ. ಅದೂ ಅಲ್ಲದೆ ಬುಂದೇಲಖಡ ಪ್ರಾಂತದ ಹಮೀರಪುರ ಎಂಬ ಪ್ರದೇಶವು ಅಂತಾಜಿ ಮಾಣಕೇಶ್ವರ ಬಳಿಯಿತ್ತು. ಸರಕಾರ ಆದಷ್ಟು ಜಪ್ತಿ ಮಾಡಿ, ಅದರ ಬದಲಿಗೆ ಹೊಸದನ್ನು ನೀಡಿತು. ಅದರಲ್ಲಿ ಮೂರು ಪಾಲು ಅವರಿಗೂ, ನಾಲ್ಕನೇ ಪಾಲು ನಮ್ಮ ಹಕ್ಕಿನಲ್ಲಿತ್ತು. ನಾಲ್ಕನೇ ಸೋದರನಾದ ಮಾನಾಜಿ ಪವಾರನಿಗೆ ಛತ್ರಪತಿ ಮಹಾರಾಜರು ಖಾನದೇಶದಲ್ಲಿಯ ಹತ್ತನೆಯ ಸರಂಜಾಮ ಹಳ್ಳಿಗಳನ್ನು ನೀಡಿದರು. ಅದರಲ್ಲಿ ಮೂರನೆ ಪಾಲು ಅವನದು ಮತ್ತು ಎರಡು ಪಾಲು ಉದಾಜಿ ಪವಾರನಿಗೆ ಸೇರಿದ್ದು. ಈ ರೀತಿ ನಾಲ್ವರು ಸಹೋದರರ ಬಳಿಯಲ್ಲಿ ಸರಂಜಾಮು ಇತ್ತು. ಅವರಿವರು ತಮ್ಮ ಬಳಿಯಲ್ಲಿ ಹಿಂದಿನ ವಿಶ್ವಾಸರಾಯಿಯ ನಾಲ್ಕನೆಯ ಪಾಲಿನ ಸರಂಜಾಮು ಹಳ್ಳಿಗಳು ಸ್ವದೇಶದಲ್ಲಿತ್ತು. ಶಾಹಾ ಮಹಾರಾಜರು ಅದರ ರಾಜಪತ್ರವನ್ನು ರಾಜಶಕೆ ೫೩ ಪರಾಭವಾಮ ಸವಂತ್ಸರದಲ್ಲಿ ನೀಡಿದರು. ಪಾರನೇರ ಪ್ರದೇಶದ ಸುಪೇ ಎಂಬೂರು ಇನಾಮ ಮಕ್ಕಳ ಮೊಮ್ಮಕ್ಕಳಾದಿಯಾಗಿ

ವಂಶಪರಂಪರೆಯಿಂದ ನೀಡಲಾಯಿತು. ಇದು ಬುಬಾಜಿ ಪವಾರ ವಿಶ್ವಾಸರಾವ ಇವರು ಸೈನ್ಯ ಸಮೇತ ಶಾಹಾ ಮಹಾರಾಜರ ಹತ್ತಿರ ಕಾರ್ಯವನ್ನು ಕೈಕೊಂಡಿದ್ದರು. ಅದರ ಮೇಲೆ ಛತ್ರಪತಿ ಮಹಾರಾಜರು ಪ್ರಸನ್‌ರಾದರು. ಕೇರೋಜಿ ಪವಾರರ ಪುತ್ರ ಧಿರಾಜಿ ಪವಾರನು ಮೊಗಲರ ಸಹವಾಸ ಮಾಡಿದನು. ಅವನ ಹತ್ತಿರ ವಿಶ್ವಾಸರಾಯಿಯ ಸರಂಜಾಮು, ಸ್ವದೇಶದ ಚತುರ್ಥಾಂಶ ಗ್ರಾಮಗಳಿದ್ದವು. ಆ ಸರಂಜಾಮನ್ನು ಅವನಿಂದ ದೂರ ಮಾಡಿ, ವಿಶ್ವಾಸರಾವ ಪದವನ್ನು ರಾಜಶಕೆ ೬೨ ರಾಕ್ಷಸನಾಮ ಸವಂತ್ಸರಿಯಂದು ಬುಬಾಜಿ ಪವಾರರಿಗೆ ನೀಡಿದರು. ಅವರೇ ನಮ್ಮ ಅಜ್ಜ. ಅವರಿಂದಾಗಿ ನಮ್ಮ ಮನೆತನದ ಗೌರವ-ಘನತೆ ಬೆಳೆಯಿತು. ಅವರ ಮಗ ಮಾಧವರಾವ ಪವಾರ ವಿಶ್ವಾಸರಾವ ಇವನು ನಮ್ಮ ಕಕ್ಕ. ಅವನಿಗೆ ಶಾಹಾ ಮಹಾರಾಜರು ವಸ್ತ್ರವನ್ನು ನೀಡಿದರು. ಅವನು ಸೈನ್ಯವನ್ನು ಸಾಕಿ, ಮಹಾದಜಿ ಶಿಂದೆಯ ಜೊತೆಗೆ ೪೦ ವರ್ಷಗಳ ಕಾಲ ಹಿಂದೂಸ್ತಾನದಲ್ಲಿ ಕಾರ್ಯಕಲಾಪವನ್ನು ಮಾಡಿಕೊಂಡಿದ್ದನು. ಅವನು ಮಾಡಿದ ಬಳಿಕ ಅವನ ಕಿರಿಯ ಬಂಧು ರಾಣೋಜಿ ಪವಾರ ವಿಶ್ವಾಸರಾವ ನಮ್ಮ ತಂದೆಯವರು –ಇವನಿಗೆ ಶ್ರೀಮಂತ ಸವಾಲು ಮಾಧವರಾವ ಪೇಶ್ವೆಯವರು ವಸ್ತ್ರವನ್ನು ನೀಡಿ ಸರಂಜಾಮಿನ ಸನದು ಮಾಡಿಕೊಟ್ಟರು. ಆ ಸರಂಜಾಮು ಹೋಳ್ಕರರ ದಂಗೆಯವರೆಗೂ ಸತತವಾಗಿ ಮುಂದುವರೆದಿತ್ತು. ಮುಂದೆ ಶ್ರೀಮಂತ ರಾಜಶ್ರೀ ಬಾಜೀರಾವ ಸಾಹೇಬರು ಕೆಲವು ಸರಂಜಾಮನ್ನು ಜಪ್ತಿ ಮಾಡಿ, ಜನರಿಗೆ ನೀಡಿದರು. ಕೆಲವನ್ನು ಸರಕಾರದ ಜಹಾಗೀರಿನಲ್ಲಿ ಸೇರಿಸಿದರು. ಉಳಿದ ಕೆಲವು ನಮ್ಮ ಬಳಿಯಲ್ಲಿತ್ತು. ಅದರ ಕಾಗದ ಪತ್ರ ನಮ್ಮ ಬಳಿಯಲ್ಲಿತ್ತು. ಉಳಿದ ಎಲ್ಲ ಪವಾರ ಕುಟುಂಬದಲ್ಲಿ ನಮ್ಮದೇ ಮೂಲಮನೆ. ನಮ್ಮ ಸರಕಾರಕ್ಕೆ ವಿಶ್ವಾಸರಾವ ಹುದ್ದೆ ನೀಡಿದ್ದು, ಅದೇ ಮುನ್ನಡೆಯುತ್ತಿದೆ. ಕಲಮ್.

೨. ನಮ್ಮ ತಂದೆಯವರ ಹತ್ತಿರವಿದ್ದ ಸೈನ್ಯ ಮತ್ತು ಜಾತ ಸರಂಜಾಮು ನೀಡಿದ ತಾರೀಖು ಯಾವುದು ಎಂದು ಕೇಳಿದ ಪ್ರಶ್ನೇಗೆ, ಉತ್ತರ-ಛತ್ರಪತಿ ರಾಜಾರಾಮ ಮಹಾರಾಜರ ಕಾಲದಿಂದಲೂ ನಮ್ಮ ತಂದೆಯವರ ಹತ್ತಿರ ಸೈನ್ಯ ಸರಂಜಾಮು ಇತ್ತು. ಅದರ ತಪಶೀಲು–

೧) ಛತ್ರಪತಿ ರಾಜಾರಾಮ ಮಹಾರಾಜರು ಸ್ವದೇಶದ ವಿಶ್ವಾಸರಾಯಿ ಸರಂಜಾಮು ನೀಡಿದರು. ಅದು ಸೋದರರ ನಡುವೆ ಪಾಲಾದ ತಪಶೀಲು.

೧) ಚತುರ್ಥಾಂಶ ಸರಂಜಾಮಿನ ವ್ಯಕ್ತಿಗಳು

೧ ಯಶವಂತರಾವ ಪವಾರ ಮಲರ್ಡೆಕರ್

೧ ರಾಮಚಂದ್ರರಾವ ಪವಾರ ಕವಡೆಕರ್ ಮಾಳವದಲ್ಲಿ ವಾಸ

೧ ಬಳವಂತರಾವ ಪವಾರ ಆಮದಾಬಾಜಿಕರ್

೧ ಅವಧೂತರಾದ ಪವಾರ ಚಿತೆಗಾಂವಕರ

೪

೧/೨ ಚತುರ್ಥಾಂಶ ಸರಂಜಾಮು ಶಿವರಾಮ ಪವಾರ ನಗರದೇವಳೆಕರ ಉಳಿದ ಅರ್ಧ ಸರಂಜಾಮು ವಿಶ್ವಾಸರಾಯಿಯ ಸ್ವತಂತ್ರ ಪಾಲು ಮಾಡಲಾಗಿದೆ. ಛತ್ರಪತಿ ಶಾಹೂ ಮಹಾರಾಜರು ರಾಜಶಕೆ ೬೨ ರಾಕ್ಷಸನಾಮ ಸವಂತ್ಸರದಲ್ಲಿ ಅವರ ರಾಜಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಆ ಜಿಲ್ಲೆ ಮತ್ತು ಗ್ರಾಮಗಳ ವಿವರ.

೧ ಸಂಗಮನೇರ ಪ್ರದೇಶದ ಭಾಗದ ಹವೇಲಿ
೧ ಸಂಗಮೇಶ ಪ್ರದೇಶದ ದೇವನೂರ ಭಾಗ
೧ ಸಂಗಮೇಶ ಪ್ರದೇಶದ ಬೇಲಾಪುರ ಭಾಗ
೧ ಆಕೋಲೆ ಪ್ರದೇಶದ ರಾಜೂರ ಭಾಗ
೧ ನಾಶಿಕ ಪ್ರದೇಶ
೧ ಕುಂಬಾರಿ ಪ್ರದೇಶ
೧ ಶೇವಗಾಂವ ಪ್ರದೇಶ
೧ ಸಾತಾರೆಹರಸೂಲ ಪ್ರದೇಶ
೧ ಕೋತಳ ಪ್ರದೇಶ
೧ ಖಾನದೇಶ ಪ್ರಾಂತದ ಧುಳೇಪ್ರದೇಶ
೧ ಖಾನದೇಶ ಪ್ರಾಂತದ ಝುಡಗೆ ಪ್ರದೇಶ
೧ ಖಾನದೇಶ ಪ್ರದೇಶದ ವಾಫಲಿ ಬಾರ್
೧ ಘಟಗಾಂವ ಗ್ರಾಮಗಳು
೧ ಬಕಾತ ಮಹಾಲ ನಿಹಾಯ

ಇದಕ್ಕೆ ಆರಿರದ ಬೇರಿಜನ್ನು ಸರಕಾರವೇ ರಚಿಸಿ ಸವಾರಿ ನೇಮಿಸಲಾಗಿದೆ. ಅದಕ್ಕೆ ನೌಕರರನ್ನು ನೇಮಿಸಲಾಗಿದೆ. ಅದರ ಬೇರಿಜು ೭೯೨೦೨ ರುಪಾಯಿ ತಪಶೀಲು.

೨೦೯೬೧ ಸರದಾರರಿಗೆ,

೧೨೫೦ ಹುಜೂರ ಕಾರ್ಯದರ್ಶಿ, ವಸೂಲಿದಾರ, ಖಜಾಂಚಿ, ದೇಶಮುಖ

೭೨೩   ಜಿಲ್ಲೆಯ ಮಜಕೂರ

೪೭೫೨   ಪಂಚ ಸಚಿವರ ಹಳ್ಳಿ

೪೫೦೦೦   ಸ್ವಾರ ಆಸಾಮಿ ೨೨೫ದರ ೨೦೦ ಪ್ರಮಾಣದಂತೆ, ಅದೂಅಲ್ಲದೆ ಹಮೀರ ಪೂರದ ಜಿಲ್ಲೆಯ ಸ್ವಾರ೭೫

೭೯೨೦೨

ಸದರಿ ಸರಂಜಾಮು ಹೋಳ್ಕರರ ದಂಗೆಯವರೆಗೆ ಮುಂದುವರೆದಿತ್ತು. ಮುಂದೆ ಶ್ರೀಮಂತ ರಾಜಶ್ರೀ ಬಾಜೀರಾವ ಅವರು ಕೆಲವನ್ನು ಜಪ್ತ ಮಾಡಿ ಜನರಿಗೆ ಹಂಚಿದರು. ಮತ್ತೆ ಕೆಲವು ಸರಕಾರದ ಜಹಾಗೀರದಲ್ಲಿ ಸೇರ್ಪಡೆ ಮಾಡಿದರು. ಕೆಲವು ಯುದ್ಧದ ಕೊನೆಗೆ ಕಾಗದಪತ್ರ....... ಅದರ ಬೇರಿಜು ಹುಷಾರ ೧೩,೦೦೦ರೂಪಾಯಿ ಮುಂದೆ ಆಲಿಶಾನ ಬಡೇಸಾಬ ಬಹಾದೂರ ಅವರು ಎಲ್ಲವನ್ನು ಬಂದೋಬಸ್ತ್ ಮಾಡಿದರು. ಆಗ ನಮಗೂ ಐದು ಸಾವಿರ ರೂಪಾಯಿಯನ್ನು ನಗದು ನೀಡಿ ನಗರ ಪ್ರಾಂತವನ್ನು ನೀಡಿದರು. ಅದರಂತೆ ಮುನ್ನಡೆದಿದೆ.

೧. ಹಿಂದೂಸ್ತಾನ ಪ್ರಾಂತದ ಹಮೀರಪುರ ಪ್ರದೇಶವು ಬುಂದೇಲಖಂಡ ಪ್ರಾಂತದ ಮತ್ತು ಜಿಲ್ಲೆಯು ಅಂತಾಜಿ ಮಾಣಕೇಶ್ವರ ಇವರ ಬಳಿಗಿತ್ತು. ಶ್ರೀಮಂತರು ಅದನ್ನು ಜಪ್ತಿ ಮಾಡಿದರು. ಆ ಸಮಯದಲ್ಲಿ ಪವಾರ ಅವರಿಗೆ ಮಾಳವ ಪ್ರಾಂತದ ಬದಲಿಗೆ ಹೊಸದನ್ನು ನೀಡಿದರು. ಆ ಜಿಲ್ಲೆಯ ಮೂರು ಪಾಲು ತುಕೋಜಿ ಪವಾರ ಮತ್ತು ಜೀವಾಲಿ ಪವಾರ ಇವರ ಕಡೆಗಿತ್ತು. ಉಳಿದ ಚತುರ್ಥಾಂಶದ ಪಾಲು ನಮ್ಮ ಆಡಳಿತದಲ್ಲಿತ್ತು. ಅದರ ಬದಲು ೭೫ ಸವಾರರು ಚಾಕರಿ ಮಾಡುತ್ತಿದ್ದರು. ಅದೆಲ್ಲ ಪೇಶ್ವೆಯರ ಆಡಳಿತವಿದ್ದಾಗ ಆಂಗ್ಲ ಸರಕಾರದಲ್ಲಿ ಸೇರ್ಪಡೆಯಾಯಿತು. ಕಲಮ್

೨. ನಮ್ಮ ಜಹಗೀರಿನ ಆಡಳಿತದಲ್ಲಿ ಪೇಶ್ವೆ ಸರಕಾರದಿಂದ ಯಾವ ಬಗೆಯ ಹಸ್ತಕ್ಷೇಪವಾಗುತ್ತಿತ್ತು. ಎನ್ನುವದಕ್ಕೆ ಉತ್ತರ–ಸ್ವದೇಶಿ ಸರಂಜಾಮಿನ ಗ್ರಾಮಗಳ ವ್ಯವಹಾರವನ್ನು ನಾನೇ ನಿರ್ವಹಿಸಿ ಜಿಲ್ಲೆಯಲ್ಲಿ ಆಡಳಿತ ಮಾಡುತ್ತಿದ್ದೆವು. ಪಾರನೇಹ ಪ್ರದೇಶದ ಸುಪೇ ಎಂಬ ಗ್ರಾಮವು ಮಾತ್ರ ಶಾಹೂ ಛತ್ರಪತಿಯವರು ಕೃಷ್ಣಾಜಿ ಪವಾರ ಇವನಿಗೆ ರಾಜಶಕೆ ಶಕೆ ೫೩ ಪರಾಭವನಾಮ ಸಂವತ್ಸರಿಯಂದು ಇನಾಮವೆಂದು ನೀಡಿದರು. ಆದರೆ ವ್ಯವಹಾರವನ್ನು ನಾವೇ ಮೋಖತ್ಯಾರಿಯಿಂದ(ಹಕ್ಕು) ಮಾಡುತ್ತಿದ್ದೆವು. ಸರಕಾರದಿಂದ ಯಾವುದೇ

ಹಸ್ತಕ್ಷೇಪವಿರಲಿಲ್ಲ. ಅದೇರೀತಿ ಹಿಂದೂಸ್ತಾನದ ಹಮೀರಪುರ ಜಿಲ್ಲೆಯ ವ್ಯವಹಾರವನ್ನು ನಾವೇ ನೋಡಿಕೊಳ್ಳುತ್ತಿದ್ದೆವು.

೩. ತಮ್ಮ ಹತ್ತಿರವಿರುವ ಸದ್ಯದ ಸರಂಜಾಮು ಯಾವುದು ಎಂಬುದಕ್ಕೆ ಉತ್ತರ ಶ್ರೀಮಂತ ರಾಜಶ್ರೀ ಬಾಜೀರಾವ ಸಾಹೇಬರು ಸರಂಜಾಮನ್ನು ಜಪ್ತ ಮಾಡಿದರು. ಇದರ ವಿವರ ಮೇಲೆ ನೀಡಲಾಗಿದೆ. ಈ ಹಿಂದೆಯೇ ನೀಡಿದ ಸ್ವಂತಖರ್ಚಿನ ನೇಮಕಾತಿ ೨೦೯೬೧ ರುಪಾಯಿಯಿದೆ. ಇದರಲ್ಲಿ ಸದ್ಯ ೫೦೦೦ ರೂಪಾಯಿಯನ್ನು ನಗರ ಪ್ರಾಂತದಿಂದ ನೇಮಿಸಿ ಕೊಡಲಾಗಿದೆ. ಅದು ಖರ್ಚಿಗೆ ಸಾಲುವದಿಲ್ಲ. ಸ್ವಂತ ಖರ್ಚು ಮಾಡಬೇಕಾದ ಉಸ್ತುವಾರಿ ಪರಿವಾರವಿದೆ. ಅದರ ವ್ಯವಸ್ಥೆಯನ್ನು ಸರಕಾರ ಮಾಡಬೇಕಾಗಿದೆ.

ಕಲಮ್.

೪. ಪೇಶ್ವೆ ಸರಕಾರ ನಮ್ಮ ಪ್ರತಿಷ್ಠೆಯನ್ನು ನೋಡಿಕೊಳ್ಳುತ್ತಿತ್ತು. ಈಗ ಸದ್ಯ ಕಂಪನಿ ಸರಕಾರ ಮುಂದುವರೆದಿದೆ. ಇದರಲ್ಲೇನಾದರೂ ವ್ಯತ್ಯಾಸವಿದೆಯೇ? ಇದಕ್ಕೆ ಉತ್ತರ–

೧. ಪಾರನೇರ ಪ್ರದೇಶದ ಸುಪೇ ಎಂಬುದನ್ನು ಛತ್ರಪತಿ ಶಾಹೂ ಮಹಾ ರಾಜರು ಇನಾಮ ನೀಡಿದರು. ಅದನ್ನು ಶ್ರೀಮಂತ ರಾಜಶ್ರೀ ಬಾಜೀರಾವ ಸಾಹೇಬರು ಜಪ್ತಿ ಮಾಡಿ ತನ್ನ ಚಿಕ್ಕಮ್ಮನ ಮಗನಾದ ಗೋವಿಂದರಾವ ಪರಾಂಜಪೆಗೆ ನೀಡಿದ್ದರು. ದೊಡ್ಡ ಅಪರಾಧ ಮಾಡಿದ ಹೊರತು ಸರಕಾರದಿಂದ ಇನಾಮು ಜಪ್ತಿಯಾಗುವುದಿಲ್ಲ. ಈ ವಿಚಾರವನ್ನು ಕಂಪನಿ ಸರಕಾರ ಗಮನಿಸಿ. ಪಿಲಾಜಿ ಜಾಧವರಾವ ವಾಡೀಕರ ಅವರ ಹಲವು ಗ್ರಾಮಗಳನ್ನು ಕುದುರೆಗಳನ್ನು ಹಾಗೆಯೇ ಹಲವರ ಊರು–ಗ್ರಾಮಗಳನ್ನು ಮರಳಿ ನೀಡಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಗ್ರಾಮಗಳನ್ನು ಮನೆತನಕ್ಕೆ ಗೌರವ ನೀಡಿ ಮುಕ್ತ ಮಾಡುವ ಕಾರ್ಯವನ್ನು ಸರಕಾರ ಕೈಕೊಳ್ಳಬೇಕು. ಕಲಮ್.

೧. ಎಲ್ಲ ಬಂದೋಬಸ್ತ್........ ರೀತಿಯಲ್ಲಿ ಆಗಬೇಕಿದೆ. ನಮ್ಮದು .... ರೀತಿಯಲ್ಲಿ ಆಗಲಿಲ್ಲ. ಐದು ಸಾವಿರ ರೂಪಾಯಿ ಖರ್ಚಿಗೆ ಸಾಲುವುದಿಲ್ಲ. ಖರ್ಚು ಹೆಚ್ಚು ಮಾಡಬೇಕಾಗುತ್ತದೆ. ಉಸ್ತುವಾರಿ ಚಾಕರರ ಸಂಖ್ಯೆ ಹೆಚ್ಚು. ಕಂಪನಿ ಸರಕಾರ ಇದನ್ನೆಲ್ಲ ಗಮನಿಸಿ ಸ್ವತಃ .... ಬಂದೋಬಸ್ತ್ ಮಾಡಿಕೊಡಬೇಕು.

ಕಲಮ್.

೧. ನಮ್ಮ ಅಜ್ಜನಾದ ಬುಬಾಜಿ ಪವಾರ ಇವರಿಗೆ ಛತ್ರಪತಿ ಶಾಹೂ ಮಹಾರಾಜರು ರಾಜಶಕ ಶಕೆ ೬೨ ರಾಕ್ಷಸನಾಮ ಸಂವಸ್ತರದಂದು ವಿಶ್ವಾಸರಾವ ಎಂಬ

ಪದವಿಯನ್ನು ನೀಡಿದರು. ಇದನ್ನು ನೀಡಿ ನೂರು ವರ್ಷಗಳಾದವು. ಅಂದಿನಿಂದ ಅವರ ಹೆಸರ ಜೊತೆಗೆ ಸರಕಾರವು ವಿಶ್ವಾಸರಾವ ಎಂಬ ಪದವನ್ನು ಬಳಸುತ್ತ ಬಂದಿದೆ. ಆ ರೀತಿಯಲ್ಲಿ ಕಂಪನಿ ಸರಕಾರದ ಪತ್ರ ಬರುವದಿಲ್ಲ. ಮರೆತು ಕೈಬಿಟ್ಟು ಹೋಗಿರಬಹುದು. ಆ ಪದವನ್ನು ಬಳಸಬೇಕು.

ಕಲಮ್.

೧. ದಸರೆಯ ಪೋಷಾಕು ಹುಜೂರ ಇದ್ದಾಗ ಬರುತ್ತಿತ್ತು. ಮಾಧವರಾವ ಪವಾರ ವಿಶ್ವಾಸರಾವವರೆಗಿನ ದಾಖಲೆ ಸರಕಾರದ ಬಳಿಗಿದೆ. ಅದರಂತೆ ನಮಗೆ ಸಿಗಬೇಕು.

ಕಲಮ್.

೪

ಸದರಿ ನಾಲ್ಕು ಕಲಮಿನ ಕೊರತೆಯಿದೆ. ಸರಕಾರ ಅದರ ಬಗ್ಗೆ ಯೋಚಿಸಬೇಕು.

ಒಟ್ಟು ಐದು ಕಲಮಿನ ಮಜಕೂರ ಇದೆ. ಅದು ಸರಕಾರದ ಗಮನಕ್ಕೆ ಬರುತ್ತದೆ. ತಾರೀಖ ೧೬, ಮಾಹೇ ಅಗಸ್ಟ್, ಸನ್ ೧೮೩೩ ಇಸವಿ ಮುತಾಬಕ್ ಅಧಿಕ ಭಾದ್ರಪದ ಶುದ್ಧ ೧ ಶಕೆ ೧೭೫೫ ವಿಜಯನಾಮ ಸಂವತ್ಸರ ಸನ್ ೧೨೪೩ ಫಸಲಿ.

ಭೋಸಲೆ ಅಕ್ಕಲಕೋಟಕರ್

ಸಾಹೇಬ ಮುಷಫಕ ಮೆಹರ್ಬಾನ್ ದೋಸ್ತಾ ಹೆನ್ರಿ ಬ್ರೌನ್‌ಸಾಹೇಬ ಬಹಾದೂರ ಏಜಂಟ್ ಜಿಲ್ಲೆ ದಕ್ಷಿಣ ಸಲಾಮ್.

ಅಜಿತರ್ಫ್ ಶಹಾಜಿರಾಜೇ ಭೋಸಲೆ ಇಲಾಖೆ ಅಕ್ಕಲಕೋಟ ಸಲಾಮ್ ಬಾದಜ್ ಸಲಾಮ ಅಂಕಿ. ಇಲ್ಲಿ ಕ್ಷೇಮವನ್ನು ತಾರೀಖ ೨೧, ಮಾಹೇ ಡಿಸೆಂಬರ, ಸನ್ ೧೮೫೧ ಇಸವಿಯ ವರೆಗೆ ಅರಿತುಕೊಂಡು ತಮ್ಮ ಯೋಗಕ್ಷೇಮವನ್ನು ಸದಾಕಾಲ ಬರೆದು ತಿಳಿಸುತ್ತಿರಬೇಕು. ದಿಗರ ಮಜಮಾನ ಆಸಹೋ ಅವರಿಂದ ತಾರೀಖ ೨೬, ಅಗಸ್ಟ ಸನ್ ೧೮೫೧ ಇಸವಿ, ನಂಬರ್ ೧೦೪೨ರ ಪತ್ರ ಬಂದು ತಲುಪಿದೆ. ತಮಗೆ ರಾಜೇ, ಎಂಬ ಕಿತಾಬ್ ಇದೆ. ಇದು ಎಂದು, ಯಾವ ಕಾರಣಕ್ಕಾಗಿ, ಯಾರಿಂದ ಪ್ರಾಪ್ತವಾಯಿತು. ಅದರ ಬಗೆಗೆ ಹಾಗೂ ಒಟ್ಟೂ ಮನೆತನ ಮತ್ತು ಪದವಿ ಪ್ರತಿಷ್ಠೆಯ ಇತಿಹಾಸವನ್ನು ದಾಖಲೆ ಸಹಿತ ಅಥವಾ ಹಳೆಯ ಬಲ್ಲವರಿಂದ ತಿಳಿದು ಬರೆದು ಕಳಿಸಿ ಕೊಡಬೇಕೆಂದು ಕೋರಲಾಗಿದೆ. ಇದಕ್ಕೆ ಉತ್ತರ, ನಮ್ಮ ಮೂಲಪುರುಷನಾದ ಕೈಲಾಸವಾಸಿ ಪತ್ರೆಸಿಂಗಬಾವಾ ಭೋಸಲೆಯವರು ಸಂಪತ್ತು ಗಳಿಸಿದ ವ್ಯಕ್ತಿ. ಇದರ ಬಗೆಗಿನ ಇತಿಹಾಸ ಹೇಗಿದೆ ಎಂದರೆ– ಶಾಹೂ ಮಹಾರಾಜರು ದಿಲ್ಲಿಯಿಂದ ಮರಳಿ ಬರುವಾಗ ಖಾನದೇಶದಲ್ಲಿ ಪಾರಧ ಎಂಬೂರು ಇದೆ. ಅದರ ಸನಿಹದಲ್ಲಿ ಅವರು ವಾಸ್ತವ್ಯ ಮಾಡಿದರು. ಅಲ್ಲಿ ಕಾಳಗ ನಡೆದು ಅಲ್ಲಿಯ ಪಾಟೀಲ (ಗೌಡ) ಅಸುನೀಗಿದ. ಅವನ ಮಡದಿ ತನ್ನ ಮಗನ ಜೊತೆಗೆ ಸೈನ್ಯದ ಪಾಳೇಯಕ್ಕೆ ಬಂದು ಮಹಾರಾಜನನ್ನು ಭೇಟಿಯಾದಳು. ಮಗನಿಗೆ ಮಹಾರಾಜರ ಪಾದಕ್ಕೆ ಎರಗುವಂತೆ ಸೂಚಿಸಿದಳು. ಶಾಹೂ ಮಹಾರಾಜರು ಅವಳ ರೂಪ–ಸೌಂದರ್ಯವನ್ನು ಕಂಡು, ಅವಳಲ್ಲಿ ರಾಜಚಿಹ್ನೆಯಿರುವದನ್ನು ಗುರುತಿಸಿ ಅವಳಿಗೆ ಆಸರೆ ನೀಡಿದನು. ಅಷ್ಟರಲ್ಲಿ ಆ ಸರಹದ್ದಿನ ಪ್ರದೇಶ ಗೆದ್ದ ವಾರ್ತೆ ಬಂತು. ಹೀಗಾಗಿ ಮಹಾರಾಜನು ಸಂತೋಷಗೊಂಡು, ಆ ತರುಣ ಪುಣ್ಯವಂತನೂ, ಯಶಸ್ವಿಯೂ ಆಗಿದ್ದಾನೆ ಎಂದು ಭಾವಿಸಿ, ಪ್ರಸನ್ ಚಿತ್ತರಾಗಿ ಫತ್ತೆಸಿಂಗ್ ಭೋಸಲೆ ಎಂಬ ಹೆಸರು ನೀಡಿ ಆ ದಿನ ಸಮಾರಂಭವನ್ನು ಏರ್ಪಡಿಸಿದ. ಬಳಿಕ ಸನ್ ೧೧೧೭ರಲ್ಲಿ ಸಾತಾರಾಕ್ಕೆ ಕರೆತಂದರು. ಫತ್ರೆಸಿಂಗಬಾವಾ ರಾಜ್ಯಕ್ಕೆ ಸಂಬಂಧಿಸಿದ ಎಲ್ಲ ಕೆಲಸ ಕಾರ್ಯವನ್ನು ಮಾಡಿದನು. ಆಗ ತುಂಬ ಪ್ರಸನ್‌ಗೊಂಡು. ತನ್ನ ಕುಲದಲ್ಲಿ ಸೇರಿಸಿಕೊಂಡು ತನಗೆ ಬಾದಶಹಾರಿಂದ ಜಹಗೀರು ಲಭಿಸಿತು. ಅಕ್ಕಲಕೋಟೆಯ ರಾಜ್ಯನೀಡಿ, ಸೈನ್ಯ...... ಆಡಳಿತ, ಸರಂಜಾಮದ ಸರದಾರರು, ಸರಕಾರಿ ಅಧಿಕಾರಿಗಳು–ಮುಂತಾದವನ್ನು ನೀಡಿದನು. ಅದೇ ಕಾಲಕ್ಕೆ

ಛತ್ರಚಾಮರ, ನಗಾರಿ ಮುಂತಾದ ರಾಜಚಿಹ್ನೆಗಳನ್ನು ನೀಡಿದನು. ಬಳಿಕ ಕೆಲದಿನ ಸಾತಾರಾದಲ್ಲಿ ತಂಗಿದರು. ಮುಂದೆ ಸನ್ ೧೧೫೬ರಲ್ಲಿ ಶಾಹು ಮಹಾರಾಜರು ನಿಧನ ಹೊಂದಿದ ಬಳಿಕ ಕೆಲದಿನ ಅಲ್ಲೇ ಉಳಿದು ಸನ್ ೧೧೬೦ರಲ್ಲಿ ತಮ್ಮ ಸಂಸ್ಥಾನವಾದ ಅಕ್ಕಲಕೋಟೆಗೆ ಮರಳಿದರು. ಮಹಾರಾಜರು ದಯತೋರಿ ಮಾನಸಪುತ್ರನನ್ನಾಗಿ ಮಾಡಿದರು. ಅಂದಿನಿಂದ ಎಲ್ಲರೂ ರಾಜೇ ಎಂದು ಕರೆಯುತ್ತಾರೆ. ಇದು ಮನೆತನದ ಹಾಗೂ ಪದವಿಯ ಇತಿಹಾಸವಾಗಿದೆ. ಮಾಹಿತಿಯಿರುವ ಜನರಿಂದ ಕೇಳಿ ತಿಳಿದ ಈ ಮಜಕುರು ಬರೆಯಲಾಗಿದೆ. ದಾಖಲೆಯ ಕಾಗದ ಪತ್ರಗಳಿವೆ. ಆದರೆ ಸನ್ ೧೨೪೦ರಲ್ಲಿ ಕಾಳಗ ನಡೆದು ದಂಗೆಯಾಯಿತು. ಆಗ ಗೈರು ಎಲೆಗೆ ಬಿದ್ದಿರುವರಿಂದ ಸಕಾಲಕ್ಕೆ ಸಿಗುತ್ತಿಲ್ಲ. ಸದಾಕಾಲ ಪತ್ರ ಬರೆಯಿತ್ತು. ಗೆಳೆತನ ಬೆಳೆಯುವಂತಾಗಲಿ. ಹೆಚ್ಚಿಗೇ ಏನು ಬರೆಯಲಿ, ಪ್ರೀತಿ ಸೌಹಾರ್ದತೆಯಿರಲಿ ಎಂದು ಬೇಡಿಕೊಳ್ಳುತ್ತೇವೆ.

೧೯

ಪಟವರ್ಧನ

ಮೂಲ ಪುರುಷನಾದ ಪಟವರ್ಧನನು ಈ ಹಿಂದೆ ಕೊಂಕಣದಲ್ಲಿ ತನ್ನ ವತನಿನ ಗ್ರಾಮವಾದ ಕೋತವದೆ-ರತ್ನಾಗಿರಿಯ ಭಾಗ-ಯನ್ನು ದಂಗೆ ನಡೆದ ಕಾರಣದಿಂದಾಗಿ ಊರು ತೊರೆದು ಸಾಂಪತವಾಡಿ ಪ್ರದೇಶದ ಭಾಗವಾದ ಮಹಾದಣ ಎಂಬೂರಿಗೆ ಕುಟುಂಬ ಸಹಿತ ಬಂದು ತಂಗಿದನು. ಬಳಿಕ ಅವನ ಶೂರ ಮಗನು ತನ್ನ ತೋಳ್ಬಲದಿಂದ ಸಂಪತ್ತ ಗಳಿಸಿದನು. ತಪಶೀಲು-

೧. ಜೇಷ್ಠಪುತ್ರ ಕೃಷ್ಣಂಭಟ್ಟ ವಾಸ್ತವ ಮಂಗಳವಾಡೆ ಅವನ ಪುತ್ರರು -

೧. ಪುರುಷೋತ್ತಮರಾವ ಇವನಿಗೆ ಸರಕಾರದಿಂದ ಸೈನ್ಯದಳ ಮತ್ತು ಆಂಬೇ ನಿಮೆಗಾಂವವನ್ನು ಇನಾಮವನ್ನಾಗಿ ನೀಡಲಾಯಿತು. ಅವರಿಗೆ ನಾಲ್ವರು ಮಕ್ಕಳು. ಇಬ್ಬರನ್ನು ನಾರಾಯಣರಾವನಿಗೆ ದತ್ತಕ ನೀಡಿದರು. ಅದರ ವಿವರವನ್ನು ನಾರಾಯಣರಾವ ಅವರ ಹೆಸರಿನ ಅಡಿಯಲ್ಲಿ ನೀಡಲಾಗಿದೆ. ಉಳಿದವರು ಇಬ್ಬರು ಪುತ್ರರು.

೧. ಹರಿಹರರಾವ

೧. ವಿಠ್ಠಲರಾವ ಮಡಿದನು, ಅವನ ಮಗ ಪುರುಷೋತ್ತಮರಾವ

೨

೧. ಸರಕಾರದಿಂದ ನೇಮಕಾತಿಗೊಂಡ ಮೇಘಶ್ಯಾಮರಾವನಿಗೆ ಮಕ್ಕಳು -

೦ ಕೊಂಡೊಪಂತ ಮಡಿದನು.

೦ ಜನಾರ್ಧನರಾವ ಸರಕಾರಿ ಕೆಲಸಕ್ಕೆ ಧಾರವಾಡಕ್ಕೆ ಬಂದ.

೧ ಕೃಷ್ಣರಾವ ತೀರಿಹೋದ. ಅವನ ಪುತ್ರ ನಾರಾಯಣರಾವ.

೧. ಸರಕಾರದಲ್ಲಿ ನೇಮಕಾತಿ ಮತ್ತು ವಾದರ ಎಂಬ ಇನಾಮಗ್ರಾಮ ಮಾಧವರಾವನಿಗೆ ನೀಡಲಾಯಿತು. ಅವನು ಸರಕಾರಿ ಕೆಲಸಕ್ಕೆ ಬಂದ. ಆ ಕಾರಣಕ್ಕಾಗಿ ಇನಾಮ.

೦ ಔರಸ್ ದಾಮೋದರ ಮಡಿದನು.

೧ ದತ್ತಕ ಗೋಪಾಲರಾವ, ಬಳವಂತರಾವನ ಪುತ್ರ.

೧. ಸರಕಾರದಲ್ಲಿ ನೇಮಕಾತಿಯಾದ ನಾರಾಯಣರಾವನಿಗೆ, ಆಂಬೆ ಎಂಬೂರು ಇನಾಮ ಊರು ಮತ್ತು ಭೂಮಿ.

೦ ಔರಸ್

೧ ದತ್ತಕ ಪುರುಷೋತ್ತಮನ ಮಕ್ಕಳು

೦ ಮೊದಲನೆಯವನು ಮಡಿದನು.

೧ ಎರಡನೆಯವನನ್ನು ದತ್ತಕ ಪಡೆಯಲಾಯಿತು.

ಅವನ ಹೆಸರು ಸದಾಶಿವರಾವ.

೧. ಬಳವಂತರಾವನಿಗೆ ಇಬ್ಬರು ಮಕ್ಕಳು. ಇವರಲ್ಲಿ ಮಾಧವರಾವನನ್ನು ದತ್ತಕ ನೀಡಲಾಯಿತು. ಉಳಿದವರು ಇಬ್ಬರು ಮಕ್ಕಳು–

೧ ಆಪ್ಪಾರಾವ ಮಡಿದನು. ಅವರ ಮಗ ಲಕ್ಷ್ಮಣರಾವ

೧ ಗಣಪತರಾವ

೨

೧. ಎರಡನೇ ಮಗ ಬಾಳಂಭಟ್ಟ, ಅವರ ಮಗ ಮೋರೋಬಾ ಆಬಾ, ಅವನೂ ಕರ್ತೃತ್ವಶಾಲಿ. ಹೀಗಾಗಿ ಇವನನ್ನೂ ಸರಕಾರದಲ್ಲಿ ನೇಮಕಾತಿ. ಅವರ ಪುತ್ರ. ಶ್ರೀಪತರಾವ ಅವರ ಮಗ ಮೋರೋಪತ. ಅವರ ಪುತ್ರ ಬಳವಂತರಾವ ಸದ್ಯಕ್ಕೆ ಬದುಕಿದ್ದಾರೆ.

೧. ಮೂರನೇ ಪುತ್ರ ತ್ರೈಂಯಂಬಕಪಂತ ಆಪ್ಪಾ ಕುರಂದವಾಡಕರ. ಸದ್ಯ ಬದುಕಿರುವ ನಾರಾಯಣರಾವ ಅವರ ಮೂಲ ಪುರುಷನಾದ ನಾರಾಯಣರಾವ ಜೋಶಿ ಇಚಲಕರಂಜಿಕರ ಇವರು ಶೌರ್ಯತನದಿಂದ ಜೇಷ್ಠ ಸಂಬಾಜಿಘೋರಪಡೆ ಸೇನಾಪತಿ ಕರವೀರಕರ ಮಹಾರಾಜರ ಹತ್ತಿರ ಚಾಕರಿ ಮಾಡುತ್ತಿದ್ದ. ಸೈನಿಕನಂತೆ ಕೆಲಸ ಕಾರ್ಯವನ್ನು ಮಾಡುತ್ತಿದ್ದರು. ಸೇನಾಪತಿಯ ಮಗನಂತೆ ವರ್ತಿಸುತ್ತಿದ್ದರು. ಮುಂದೆ ಸೇನಾಪತಿಯು ಅವರ ನಿಷ್ಠೆ–ಪ್ರಾಮಾಣಿಕತೆಯ ವರ್ತನೆಯನ್ನು ಕಂಡು, ಒಂದೇ ತಾಟಿನಲ್ಲಿ ಊಟ ಮಾಡಲು ಸಿದ್ಧವಾಗಿದ್ದು ಕಂಡು, ಮಗನ ಜೊತೆಗೆ ಸಂಪತ್ತಿನಲ್ಲಿ ಪಾಲು ನೀಡಿದರು. ಅವನನ್ನು ಜೋಶಿ, ಹರಭಟ್ಟರನ್ನು ತಂದೆ ಎಂದೇ ಭಾವಿಸುತ್ತಿದ್ದರು. ಈ ಕಾರಣಕ್ಕಾಗಿ ತ್ರೈಂಬಕ ಹರಿಯು

ನಾರಾಯಣರಾವ ಅವರ ಬಳಿಗೆ ಹೋಗಿ, ಚಾಕರಿಯನ್ನು ಮಾಡುತ್ತ, ಯುದ್ಧವನ್ನು ಮಾಡುತ್ತಲೇ ಬೆಳೆದರು. ಮನೆಯ ಲಾಯದಲ್ಲಿ ಇನ್ನೂರು ಕುದುರೆಗಳಾದವು. ಈ ಚಾಕರಿಯಿಂದ ಖರ್ಚನ್ನು ಹೊಂದಿಸುವದು ಅಸಾಧ್ಯವಾಗುತ್ತಿತ್ತು. ಹೀಗಾಗಿ ಹಿಂದೂಸ್ತಾನಕ್ಕೆ ದಿನಗೂಲಿಗೆ ಹೋಗಬೇಕಾಗಿ ಬಂತು. ಈ ವಿಷಯ ನಾನಾಸಾಹೇಬ ಪೇಶ್ವೆಗೆ ವಿದಿತವಾಗಿ-ಶೂರ ವ್ಯಕ್ತಿಯು ಸರಕಾರದ ಕೆಲಸವನ್ನು ಮಾಡಲು ಯೋಗ್ಯವೆಂದು ಭಾವಿಸಿ, ಸರಕಾರದ ಪರವಾಗಿ ಹದಿನೈದು ಕುದುರೆಗಳ ಸವಾರಿಯ ಸರಂಜಾಮನ್ನು ನೀಡಿ ನೇಮಿಸಿಕೊಂಡರು. ಅವರ ಮಕ್ಕಳು-

೧. ನೀಲಕಂಠರಾವ, ಕರ್ನಾಟಕದ ದಂಡಯಾತ್ರೆಯ ಕಾಲಕ್ಕೆ ನವಾಬ ಹೈದರಖಾನನ ಕಾಳಗದಲ್ಲಿ ಸರಕಾರಿ ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು.

೧. ರಘುನಾಥನ ಮಗ ತ್ರ್ಯಂಬಕರಾವ, ಅವನ ಮಗ ಕೇಶವರಾವ ಬಾಬಾ ಸದ್ಯಕ್ಕಿದ್ದಾನೆ.

೧. ಶಿವರಾವ ಮಡಿದನು. ಅವನ ಪುತ್ರ-೧.ಪ್ರಥಮ ಸಂಬಂಧ ಕೃಷ್ಣರಾವ, ೨ ದ್ವಿತಿಯ ಸಂಬಂಧ೧ ನೀಲಕಂಠರಾವ

೧. ಕೊನ್ಹೇಶರಾವ ಮಡಿದನು. ಅವನೂ ಸಾಕಷ್ಟು ಸರಕಾರದ ಸೇವೆ ಮಾಡಿದನು. ಸೈನಿಕನಾಗಿದ್ದನು. ಅವನ ಮಗ ಗಣಪತರಾವ ಇದ್ದಾನೆ.

೧. ನಾಲ್ಕನೇ ಮಗ ಗೋವಿಂದಪಂತ ನಾನಾ ಶೌರ್ಯತನದ ಚಾಕರಿ ಮಾಡಲು ಪುಣೆಗೆ ತೆರಳಿ ಹಿರಿಯ ಬಾಜೀರಾವ ಸಾಹೇಬ ಪೇಶ್ವೆಯರ ಬಳಿಗೆ ಹೋದನು. ಅವನ ಜಾಣತನವನ್ನು ಅರಿತು, ಸುಪೇ ಪ್ರದೇಶದಲ್ಲಿಯ ಕಂದಾಯ ವಸೂಲಿ ಕೆಲಸಕ್ಕೆ ನೇಮಿಸಿದನು. ಇಂದ್ರೋಜಿ ಕದಂ ಸರಕಾರದ ಆಳ್ವಿಕೆಯಲ್ಲಿದ್ದು ಅವನಿಗೆ ಅಶ್ವದಳದ ದಿವಾನಗಿರಿಯ ಕೆಲಸಕ್ಕೂ ನೇಮಿಸಲಾಯಿತು. ಮುಂದೆ ಇಂದ್ರೋಜಿ ಕದಂ ತೀರಿಕೊಂಡನು. ಗೋವಿಂದಪಂತ ಶೂರನಾಗಿದ್ದ. ಸರಕಾರದ ಕೆಲಸ ಕಾರ್ಯಗಳಿಗೆ ಉಪಯೋಗಿ ಮನುಷ್ಯನಾಗಿದ್ದರಿಂದ ಅದೇ ಅಶ್ವದಳವನ್ನು ಅವನ ಹೆಸರಿಗೆ ಮಾಡಲಾಯಿತು. ಕೆಲ ದಿನಗಳ ಬಳಿಕ ೪೦೦೦ ಸೈನ್ಯದ ಸರಂಜಾಮನ್ನು ನಾನಾಸಾಹೇಬ ಪೇಶ್ವೆ ನೀಡಿದನು. ಅವರ ಮಕ್ಕಳು –

೦ ಜೇಷ್ಠಪುತ್ರ ಗೋಪಾಲರಾವನು, ನಾನಾಸಾಹೇಬರ ಪುತ್ರನಾದ ಮಾಧವರಾವ ಪೇಶ್ವೆಯ ಆಡಳಿತದಲ್ಲಿ ತುಂಬ ನಿಷ್ಠೆಯಿಂದ ಸರಕಾರದ

ಸೇವೆ ಮಾಡಿದ್ದರಿಂದ ಸರಕಾರ ಅವನಿಗೆ ಗೌರವ ನೀಡಿತು. ಅವನಿಗೆ ಮಕ್ಕಳಿಲ್ಲ.

೦ ಎರಡನೇ ಮಗ ವಾಮನರಾವ ಬಾಬಾ, ಇವರೂ ಕೆಲದಿನ ಸರಕಾರದ ಸೇವೆ ಮಾಡಿ ಮಡಿದನು.

೧. ಮೂರನೇ ಪುತ್ರ ಪಾಂಡುರಂಗರಾವ ತಾತ್ಯಾ. ಸರಕಾರದ ಆಜ್ಞೆಯಂತೆ ನವಾಬ ಹೈದರಖಾನನ ಮೇಲೆ ಏರಿ ಹೋದಾಗ, ಕಾಳಗದಲ್ಲಿ ಪರಾಭವಗೊಂಡು ಪಟ್ಟಣಕ್ಕೆ ಒಯ್ದರು. ಅಲ್ಲಿ ಅವನು ಕಾಲವಾದನು. ಅವರ ಮಕ್ಕಳು–

೦ ಮೊದಲನೆಯವನು ಹರಿರಾವ, ಸರಕಾರದ ಗೌರವ ಲಭಿಸಿತ್ತು. ಅವನು ಸತ್ತನು.

೧ ಎರಡನೆಯವನು ಚಿಂತಾಮಣಿರಾವ ಅಪ್ಪಾ.

೦ ಮೂರನೆಯವನು ವಿಠ್ಠಲರಾವ ಬಾಪೂ ಮಡಿದನು.

೧ ನಾಲ್ಕನೆಯವನು ಗಂಗಾಧರರಾವ ಬಾಳಾಸಾಹೇಬ ಅವರ ಮಕ್ಕಳು –

೦ ಮೊದಲು ಕೇಶವರಾವ ಜೇಷ್ಠ

೧ ಎರಡನೆಯವನು ನಾರಾಯಣರಾವ, ಅವನ ಮಕ್ಕಳು–

೧ ಗಣಪತರಾವ

೧ ____________

೧ ಮೂರನೆಯವನು ಮಾಧವರಾವ ಬಾಬಾ

೧ ನಾಲ್ಕನೆಯವನು ಗೋವಿಂದರಾವ ನಾನಾ ಮಡಿದನು. ಅವನ ಮಕ್ಕಳು–

೧ ವಾಮನರಾವ

೧ ಕೃಷ್ಣರಾವ

೦ ಗಂಗಾಧರರಾವ, ಗಣಪತ ಪರಶುರಾಮ ತಾಸಗಾಂವಕರ ಇವನಿಗೆ ದತ್ತಕ ನೀಡಲಾದನು.

೧ ಐದನೆಯವನು ಗೋಪಾಲರಾವ ದ್ವಿತೀಯ ಸಂಬಂಧ

ಚಿಂತಾಮಣಿರಾವ ಅಪ್ಪಾ ಮತ್ತು ಗಂಗಾಧರರಾವ ಬಾಳಾಸಾಹೇಬರ ನಡುವೆ ವೈಮನಸ್ಸು ಬೆಳೆದು ವಿಭಕ್ತರಾದರು. ಮಿರಜನಲ್ಲಿ ಬಾಳಾಸಾಹೇಬ ಮತ್ತು ಸಾಂಗಲಿಯಲ್ಲಿ ಚಿಂತಾಮಣಿರಾವ ನೆಲೆಸಬೇಕೆಂದು ನಿಶ್ಚಯಿಸಲಾಯಿತು. ಹೀಗೆ ಸರಂಜಾಮಿನ ಪಾಲಾಯಿತು. ಈಗ ಅದರಂತೆ ನೆಲೆಸಿದ್ದಾರೆ. ಮುಂದೆ ಬಾಳಾಸಾಹೇಬ ತೀರಿಕೊಂಡ. ಅವನ ಮಗನ ಪಾಲಿನ ವ್ಯವಸ್ಥೆಯು ಇತ್ತೀಚೆಗೆ ಕಂಪನಿ ಸರಕಾರದ ಅಮಲಿನಲ್ಲಾಯಿತು.

೧ ಐದನೇ ಮಗ ರಾಮಚಂದ್ರಪಂತ ಅಪ್ಪಾ ಇವನು ಶೌರ್ಯದಿಂದ ಪೇಶ್ವೆ ಸರಕಾರದ ಚಾಕರಿಗೆ ಸೇರಿ, ಶೌರ್ಯವನ್ನು ಮೆರೆದು ವಸಯಿ ಕೋಟೆಯನ್ನು ಗೆದ್ದ. ಆಗ ಕಾಳಗದ ಕಾಲಕ್ಕೆ ತುಂಬ ನಿಷ್ಠೆಯಿಂದ ದುಡಿದ. ಹೀಗಾಗಿ ಸರಕಾರವು ಅಶ್ವದಳವನ್ನು ನೀಡಿ, ೨೫ ಸವಾರರ ಸರಂಜಾಮುವನ್ನು ನೀಡಿತು. ಅವನ ಮಗನಾದ ಪರಶುರಾಮಪಂತ ಭಾವೂ ಸಾಹೇಬರು ಶೌರ್ಯ ಮತ್ತು ಏಕನಿಷ್ಠೆಗಾಗಿ ಖ್ಯಾತಿಯನ್ನು ಪಡೆದಿದ್ದು ಜಗತ್ತಿಗೇ ಗೊತ್ತಿದೆ. ಸರಕಾರದ ಆಜ್ಞೆಯ ಮೇರೆಗೆ ಖರ್ಡೆಯ ಕಾಳದಲ್ಲಿ ನಾಯಕತ್ವವನ್ನು ವಹಿಸಿಕೊಂಡು, ಶೌರ್ಯತನವನ್ನು ಮೆರೆದನು. ಈ ಕಾರಣಕ್ಕಾಗಿ ಅವನು ಪುಣೆಗೆ ಆಗಮಿಸಿದಾಗ ಸರಕಾರವು ಮುತ್ತುರತ್ನ-ವಸ್ತ್ರ ನಗಾರಿ ನೌಬತ್ತೂ ಸಹ ನೀಡಲಾಯಿತು. ಅವರ ಮಕ್ಕಳು.

೧ ಜೇಷ್ಠಪುತ್ರ ರಾಮಚಂದ್ರಪಂತ ಅಪ್ಪಾ ಸಾಹೇಬ. ಅವನು ಧಾರವಾಡ, ಖರ್ಡೆ ಮತ್ತು ಕರ್ನಾಟಕ ಮುಂತಾದ ಕಾಳಗದಲ್ಲಿ ಶೌರ್ಯವನ್ನು ಮೆರೆದದ್ದು ಜಗಜಾಹೀರವಾಗಿದೆ. ಅವನ ಮಗ ಗೋಪಾಲರಾವ ಸಾಹೇಬ.

೦ ಎರಡನೇ ಮಗ ಹರಿಪಂತ ಬಾಬಾಸಾಹೇಬ. ಶೌರ್ಯ ಪರಾಕ್ರಮದಲ್ಲಿ ಮುಂದೆ. ಖರ್ಡೆಯ ಕಾಳಗದಲ್ಲಿ ಶೌರ್ಯವನ್ನು ಮೆರೆದ. ಗಾಯವೂ ಆಗಿತ್ತು. ಅವನು ಮಡಿದ.

೧ ಮೂರನೇ ಪುತ್ರ ಮಾಧವರಾವ ದಾಜಿ ಸಾಹೇಬ. ಇವನೂ ಶೌರ್ಯದಲ್ಲಿ ಉಳಿದವರಂತೆಯೇ ಇದ್ದ. ಅವನ ಮಗ ಗೋವಿಂದರಾವ ನಾನಾಸಾಹೇಬ.

೧ ನಾಲ್ಕನೆಯವನು ಗಣಪತರಾವ ಬಾಪೂ ಸಾಹೇಬ. ಪುತ್ರ ಸಂತಾನವಿರಲಿಲ್ಲ. ಹೀಗಾಗಿ ಅಂತ್ಯಕಾಲದಲ್ಲಿ ಗೋವಿಂದರಾವ ನಾನಾ ಮಿರಜಕರ ಇವರ ಕಿರಿಯ

ಪುತ್ರನನ್ನು ದತ್ತಕ ಪಡೆದು ಪರಶುರಾಮಪಂತಭಾವೂ ಎಂದು ಹೆಸರಿಡಲಾಯಿತು. ನಾಲ್ವರು ಬಂಧುಗಳು ಒಂದೇ ಕಡೆ ನೆಲೆಸಿದ್ದರು.

ಮುಂದೆ ಹರಿಪಂತಬಾಬಾ ತೀರಿಹೋದ ಬಳಿಕ ಗಣಪತರಾವ ಬಾಪೂ ವಿಭಕ್ತನಾಗಿ ಸರಕಾರದ ಸರಂಜಾಮಿನ ಮೂರು ಪಾಲು ಮಾಡಲಾಯಿತು. ಬಳಿಕ ರಾಮಚಂದ್ರಪಂತ ಅಪ್ಪಾಸಾಹೇಬ ಮತ್ತು ಮಾಧವರಾವ ದಾಜಿ ಸಾಹೇಬರು ಕೂಡಿಯೇ ವಾಸಿಸುತ್ತಿದ್ದರು. ಆ ಉಭಯತರೂ ತೀರಿಹೋದ ಬಳಿಕ ಅಪ್ಪಾ ಸಾಹೇಬನ ಮಗ ರಾವಸಾಹೇಬ ಮತ್ತು ದಾಜಿಸಾಹೇಬನ ಮಗ ನಾನಾಸಾಹೇಬ ವಿಭಕ್ತಗೊಂಡು ಸರಂಜಾಮಿನ ಪಾಲಾಗಿದೆ.

೧ ಆರನೇ ಮಗ ಭಾಸ್ಕರಪಂತ ಅಪ್ಪಾ. ಇವನು ಸೈನಿಕನಾಗುವ ಇರಾದೆಯಿಂದ ಸರಕಾರದ ಚಾಕರಿ ಮಾಡಿದನು. ಸರಕಾರ ನೀಡಿದ ಸೈನ್ಯವೂ ಅವನ ಬಳಿಯಲ್ಲಿದೆ. ಅವನ ಮಕ್ಕಳು–

೧ ಜೇಷ್ಠಪುತ್ರ ಧೊಂಡೋಪಂತ ದಾದಾ. ಅವನ ಮಕ್ಕಳು–

೦ ವಿಠ್ಠಲರಾವ ಬಾಬಾ ಸರಕಾರದ ಕಾರ್ಯಕ್ಕಾಗಿ ಖರ್ಡೆಯ ಸೈನ್ಯ ಸೇರಿದ.

೧ ಎರಡನೇ ಪುತ್ರ ಯಶವಂತರಾವ ಅವನ ಮಕ್ಕಳು–

೧ ___________

೧ ___________

_____

೨

೧ ಎರಡನೇ ಮಗ ವಿನೋಬ ಆಬಾ. ಇವನೂ ಶೌರ್ಯದಿಂದ ಸರಕಾರದ ಚಾಕರಿ ಮಾಡಿದನು.

೧ ಮೂರನೇ ಮಗ ಹರಬಾ ಅಣ್ಣಾ ಇವನೂ ಸರಕಾರದ ಸೇವೆ ಮಾಡಿದನು. ಅವನ ಮಕ್ಕಳು–

೦ ಜೇಷ್ಠಪುತ್ರನ ಕಾಲವಾಯಿತು.

೧ ______________

____

೧

೧ ನಾಲ್ಕನೇ ಪುತ್ರ ಸದಾಶಿವಪಂತ ಭಾವೂ

೦ ಮೊದಲನೆಯವ ಖಂಡೇರಾವ

೦ ಮಾಧವರಾವ ವಾಸುದೇವಪಂತ ದಾಜಿಗೆ ದತ್ತಕ ನೀಡಲಾಯಿತು.

೧ ಮೂರನೆಯವನು ಚಿಂತಾಮಣಿರಾವ

———

೧

೧ ಐದನೆಯವನು ರಾಮಚಂದ್ರರಾವ ಮಡಿದನು.

೧ ಆರನೆಯವನು ವಾಸುದೇವಪಂತ ದಾಜಿ

೦ ಔರಸ್

೧ ಸದಾಶಿವಪಂತ ಭಾವೂ ಇವರ ಮಗ ದತ್ತಕ ಪಡೆದ

———

೧ ಮಾಧವರಾವ

ಹರಿಭಟ್ಟನ ವಂಶ ಈ ಬಗೆಯಲ್ಲಿದೆ. ಅದರಲ್ಲಿ ಸರಕಾರವು ತ್ರೈಂಬಕ ಹರಿಗೆ ೧೫೦೦ ಸವಾರಿಯು ಗೋವಿಂದಹರಿಗೆ ೪೦೦೦ ಸವಾರಿಯ, ಮತ್ತು ರಾಮಚಂದ್ರ ಹರಿಗೆ ೨೫೦೦ ಸವಾರಿಯ ನೇಮಕಾತಿ ಮಾಡಿಕೊಟ್ಟಿತು. ಸರಕಾರದ ಪೇಟೆಯಿಂದ ಅವರ ದಿನಗೂಲಿಯನ್ನು ತಲುಪಿಸಲಾಗುತ್ತಿತ್ತು. ಮುಂದೆ ಹಿಂದೂಸ್ತಾನ ಮತ್ತು ಕರ್ನಾಟಕ ಮುಂತಾದ ದೂರದ ದಂಡಯಾತ್ರೆಯಿಂದಾಗಿ ಸೈನ್ಯ ಶಿಬಿರಗಳಿಗೆ ಸಾಮಾನುಗಳನ್ನು ತಲುಪಿಸಿ, ದಿನಗೂಲಿಯನ್ನು ತಲುಪಿಸುವುದು ಅಡಚಣೆಯಾಗಲಾರಂಭಿಸಿತು. ಹೀಗಾಗಿ ಸರಕಾರವೇ ಸೈನ್ಯಕ್ಕೆ ಸರಂಜಾಮು ನೇಮಿಸಿಕೊಡಲಾಯಿತು. ಹಾಗೆಯೇ, ಇವನಿಗೂ ಮಿರಜ್ ಪ್ರಾಂತ ಮುಂತಾದ ಜಿಲ್ಲೆಗಳನ್ನು ನೀಡಿ, ಕುಟುಂಬದ ವಾಸಕ್ಕಾಗಿ ಮಿರಜ್ ಕೋಟೆಯನ್ನು ನೀಡಲಾಗಿದೆ.

೨೦

ಪಾನಸೆ

ಕೈಫಿಯತ್ ರಾಜಶ್ರೀ ದಾಮೋದರ್‌ರಾವ ಗಣೇಶ ಪಾನಶಿ ಸುರುಸನ್ ಸಲಾಸ ಸಲಾಸೀನ ಮಯಾತೈನ್ ವ ವಲಫ್.

ನಮ್ಮ ಮುತ್ತಜ್ಜನಾದ ತೀರ್ಥರೂಪ ಕೈಲಾಸವಾಸಿ ಯಶವಂತರಾವ ಲಕ್ಷ್ಮಣ ಪಾನಸಿಯೂ ಶ್ರೀ ರಾಜಾ ಶಾಹೂ ಛತ್ರಪತಿಯ ಸೈನ್ಯದಲ್ಲಿ ೩೦೦ ಕುದುರೆ ಸವಾರರ ಸರದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಬಳಿಕ ಛತ್ರಪತಿಯವರು ಶ್ರೀಮಂತ ಬಾಜೀರಾವ ಬಲ್ಲಾಳ ಪ್ರಧಾನಿಗೆ ರಾಜ್ಯದ ಬಂದೋಬಸ್ತ್ ಬಗೆಗೆ ಆಜ್ಞೆ ನೀಡಿದರು. ಆಗ ಛತ್ರಪತಿಯವರೇ ನಮ್ಮ ಮುತ್ತಜ್ಜನನ್ನು ಪೇಶ್ವೆ ಬಹಾದ್ದೂರರ ಸೈನ್ಯದಲ್ಲಿ ನೇಮಕಾತಿ ಮಾಡಿದರು. ಅಲ್ಲಿಂದ ತಾರೀಖ–೧೪, ಮಾಹೇ ಮೇ, ಸನ್ ೧೮೧೮ ಇಸವಿಯ ವರೆಗೆ ಪೇಶ್ವೆ ಸರಕಾರದ ಆಜ್ಞೆಯಂತೆ ತಂದೆಯವರೂ ತಲೆತಲಾಂತರಗಳಿಂದ ಬಂದ ಕಾರ್ಯವನ್ನು ನಿರ್ವಹಿಸಿ ಹೆಸರು ಗಳಿಸಿದರು. ಅದರ ತಪಶೀಲು –

೧ ತೀರ್ಥರೂಪ ಕೈಲಾಸವಾಸಿ ಯಶವಂತರಾವ ಪಾನಶಿಯವರು ಶ್ರೀಮಂತ ಬಾಜೀರಾವ ಸಾಹೇಬರ ಜೊತೆಯಲ್ಲಿ ಸೈನ್ಯ ಸೇರಿ ಪ್ರತಿಸಲ ಸರಕಾರದ ಸೇವೆಯಲ್ಲಿ ಶೌರ್ಯವನ್ನು ಮೆರೆದರು. ಈ ಕಾರಣಕ್ಕಾಗಿ ಶ್ರೀಮಂತ ರಾಜನು ತೋಪಖಾನೆಯ ಸರಕಾರದ ಹುದ್ದೆಯನ್ನು ನೀಡಿದನು. ಯಶವಂತರಾವ ಅವರು ಅದನ್ನು ತನ್ನ ಜೇಷ್ಠ ಸೋದರನಾದ ಮಾಧವರಾವ ಅವರ ಹೆಸರಿನಲ್ಲಿ ಸ್ವೀಕರಿಸಿ ಸೈನ್ಯ ಮತ್ತು ತೋಪಖಾನೆ ಎರಡು ಸರಕಾರದ ಕಾರ್ಯವನ್ನು ತಾವೇ ಮಾಡುತ್ತಿದ್ದರು. ಆ ಸಮಯದಲ್ಲಿ ಬಾಜೀರಾವ ಸಾಹೇಬ ಮತ್ತು ಅಪ್ಪಾಸಾಹೇಬರ ಜೊತೆಗೂಡಿ ವಸಯಿ ಮುಂತಾದ ಕಾಳಗದಲ್ಲಿ ಸಾಕಷ್ಟು ಶೌರ್ಯವನ್ನು ನಿರ್ವಹಿಸಿದರು. ಮುಂದೆ ಶ್ರೀಮಂತ ನಾನಾಸಾಹೇಬ ಪೇಶ್ವೆಯು ಸವಣೂರಕರ ನವಾಬರ ಮೇಲೆ ಏರಿಹೋದನು. ಆ ಕಾಳಗದಲ್ಲಿ ಯಶವಂತರಾವನು ನವಾಬನ ಮೇಲೆ ತೋಫಖಾನೆಯ ಸೈನ್ಯದಿಂದ ಏರಿ ಹೋಗಿ ಭೀಕರ ಕಾಳಗ ಮಾಡಿದನು. ಆ ಕಾಳಗದಲ್ಲಿ ಕಾಲಿಗೆ ಖತ್ತಿಯಿಂದ ಗಾಯವಾಯಿತು. ಹೀಗಾಗಿ ರಾಜನು ಅಂಬಾರಿ ಮತ್ತು ಆನೆಯ ನಗಾರಿಯನ್ನು ನೀಡಿದನು. ಕಲಮ್.

ಬ್ರಾಹ್ಮಣ ಸರದಾರರು

೨೧

ಮಂಚಾಲೆ ಮಠ

ಯಾದಿ ಸುಜ್ಞಾನೇಂದ್ರಸ್ವಾಮಿ ಸಂಸ್ಥಾನ ಮಂಚಾಲೆ ಮಠ ಕುಂಭಕೋಣ ಮಂಚಾಲಿ ವಾಸ್ತವ್ಯ ನಂಜನಗೂಡು ಇಲಾಖೆ ಮೈಸೂರು. ಈ ಸಂಸ್ಥಾನದ ವಿವರ ಬರೆದು ಕಳಿಸುವಂತೆ ಕೋರಿದಾಗ, ಇನಾಮ ವಗೈರೆ ಸಮಿತಿಯ ಸ್ವಾಮಿಯು ಮುಖ್ತ್ಯಾಕರಾದ ವೆಂಕಟಾಚಾರ್ಯ ಪಂಪೂ, ವಸತಿ ಹುಬ್ಬಳ್ಳಿ ಇವರಿಂದ ಪಡೆದ ಯಥಾವತ್ ಮಾಹಿತಿಯನ್ನು ಈ ಕೆಳಗಿನಂತೆ ಬರೆದು ಕಳಿಸಿದೆ.

೧) ಮುಳಿ ಶಾಲಿವಾಹನ ಶಕೆ ೧೦೦೦ರಲ್ಲಿ ಶಂಕರಾಚಾರ್ಯರ ಮತ ಪ್ರಬಲಗೊಂಡು ವೈಷ್ಣವ ಸಿದ್ಧಾಂತವನ್ನು ವಿರೋಧಿಸತೊಡಗಿತು. ಶಂಕರಾಚಾರ್ಯರ ಶಿಷ್ಯರು ವೈಷ್ಣವ ಮತವನ್ನು ದೂರ ಸರಿಸಲಾರಂಭಿಸಿದರು. ಇದರಿಂದ ಏಕೋಪಾಸನೆಯಿಂದ ಜನರು ಕೆಟ್ಟವರಾಗುತ್ತಾರೆಂದು ಭಾವಿಸಿದರು. ೧೧೫೩ರಲ್ಲಿ ಶ್ರೀ ಮಾರುತಿಯು ಏಕರೂಪಗೊಂಡು ಮಧ್ಯಗೇಹಭಟ್ಟ ಎಂಬ ಬ್ರಾಹ್ಮಣನ ಉದರದಲ್ಲಿ ಜನಿಸಿದರು. ಆಗ ಹೂಮಳೆ ಕರೆಯಿತು. ಶ್ರೀ ಮಾರುತಿ ದೇವರು ಅವತಾರ ತಾಳಿದರೆಂದು ಆಕಾಶವಾಣಿಯಾಯಿತು. ಅವರಿಗೆ ವಾಸುದೇವಭಟ ಎಂದು ಹೆಸರಿಲಾಯಿತು. ಬಳಿಕ ಶಕೆ ೧೧೦೩ರಲ್ಲಿ ವಾಸುದೇವ ಭಟ್ಟನ ಉಪನಯನ ಮಾಡಿದರು. ಶಕೆ ೧೧೦೭ರಲ್ಲಿ ವಾಸುದೇವ ಭಟ್ಟನು ಅಚ್ಯುತಪ್ರೇಕ್ಷಸ್ವಾಮಿಯವರಿಂದ ಸನ್ಯಾಸದೀಕ್ಷೆ ಸ್ವೀಕರಿಸಿ ಆನಂದತೀರ್ಥಸ್ವಾಮಿ ಎಂದು ಹೆಸರುವಾಸಿಯಾದರು. ಅವರು ನಿರಾಕರಣ ಮಾಡಿ, ಪುಂಡರಿಕ ಪುರಿ ಎಂಬ ಸ್ಮಾರ್ತ ಪಂಡಿತನನ್ನು ವಾದರಲ್ಲಿ ಸೋಲಿಸಿದರು. ಕೆಲವರು ಸ್ಮಾರ್ತಮತಾವಲಂಬಿಯಾಗಿದ್ದರು. ಅವರನ್ನೂ ಗೆದ್ದು ಮುದ್ರೆಯನ್ನು ಧಾರಣ ಮಾಡಿದರು. ದೇಶದಲ್ಲೆಲ್ಲ ಸುತ್ತಾಡಿ ವಾದದಲ್ಲಿ ಗೆದ್ದರು. ಜನರಿಗೆ ವೈಷ್ಣವ ಮುದ್ರೆ ಹಾಕಿಸಿದರು. ಅನಂತರ ಸ್ಮಾರ್ತರ ಪಕ್ಷ ನಿರಾಕರಿಸಿ ತಮ್ಮ ಪಕ್ಷವನ್ನು

ಸಾಧಿಸಿದರು. ಹಲವು ಗ್ರಂಥ ರಚಿಸಿದರು. ಬದರಿ ನಾರಾಯಣಕ್ಕೆ ಹೋಗಿ, ಅಲ್ಲಿ ಗ್ರಂಥವನ್ನು ಸಮರ್ಪಿಸಿ, ಮತ್ತೆ ಈ ದೇಶಕ್ಕೆ ಮರಳಿ ಕಡಲು ಕಿನಾರೆಯಲ್ಲಿ ವಿರಮಿಸುತ್ತಿದ್ದರು. ಅದೇ ಕಾಲಕ್ಕೆ ಒಂದು ಹಡಗು ಬರುತ್ತಲಿತ್ತು. ಅದು ಆಕಸ್ಮಿಕವಾಗಿ ಮುಳುಗಲಾರಂಭಿಸಿತು. ಜನರು ಹೆದರಿ ಕಿರುಚಲಾರಂಭಿಸಿದರು. ಆಗ ಸ್ವಾಮಿಜಿಯವರು ದಡಕ್ಕೆ ಬಾ ಎಂದು ತಮ್ಮ ಮೈಮೇಲಿನ ಬಟ್ಟೆಯಿಂದ ಸನ್ನೆ ಮಾಡಿದರು. ಕೂಡಲೇ ಆ ಹಡಗು ಸ್ವಾಮಿಜಿಯ ಬಳಿಗೆ ಬಂತು. ಆಗ ಹಡಗಿನ ಯಜಮಾನನು ಹಡಗಿನಲ್ಲಿರುವ ಬೇಕಾದ ಸಾಮಾನು ಬೇಡುವಂತೆ ತಿಳಿಸಿದನು. ಆಗ ಸ್ವಾಮಿಜಿ ನೋಡಿ ಚಂದನವನ್ನು ಮಾತ್ರ ಸ್ವೀಕರಿಸಿದರು. ಸ್ವಾಮಿಜಿ ಅದನ್ನು ಹಿಡಿದುಕೊಂಡು ವಿಷ್ಣುವಿನ ಸ್ತುತಿ ಮಾಡುತ್ತ ಉಡುಪಿಗೆ ಬಂದರು. ಆ ಗೋಪಿಚಂದನದ ಕಲ್ಲಿನಲ್ಲಿ ಶ್ರೀಕೃಷ್ಣನ ಪ್ರತಿಮೆ ಸಿಕ್ಕಿತು. ಅದನ್ನು ಉಡುಪಿಯಲ್ಲಿ ಸ್ಥಾಪಿಸಿ, ದೇವಾಲಯವನ್ನು ಕಟ್ಟಿದರು. ಬಳಿಕ ಅಲ್ಲಿಯ ಜನರಿಗೆ ವೇದಶಾಸ್ತ್ರವನ್ನು ಬೋಧಿಸಿದರು. ತಮ್ಮ ಹಲವು ಶಿಷ್ಯರಲ್ಲಿ ಒಬ್ಬರಿಗೆ ಶಕೆ ೧೧೮೯ರಲ್ಲಿ ಸನ್ಯಾಸ ನೀಡಿ, ಅವರಿಗೆ ಶ್ರೀ ಪದ್ಮನಾಭತೀರ್ಥಸ್ವಾಮಿ ಎಂದು ನಾಮಕರಣ ಮಾಡಿ, ಅವರ ಪೀಠಾರೋಹಣ ಮಾಡಿದರು. ಬಳಿಕ ಶ್ರೀ ಬದರಿಗೆ ತೆರಳಿ ಅದೃಶ್ಯರಾದರು. ಅಂದಿನಿಂದ ಯಾವ ಯಾವ ಶಿಷ್ಯರು ಎಷ್ಟು ವರುಷ ಕಾಲ ಪೀಠಾರೋಹಣ ಮಾಡಿದರು ಎಂಬ ಮಾಹಿತಿ ಈ ಕೆಳಗಿನಂತಿದೆ.

	ಸ್ವಾಮಿಯ ಹೆಸರು	ವರ್ಷ
೧	ಮೂಲ ಆನಂದತೀರ್ಥ ಸ್ವಾಮಿ	೬೨
೨	ಪದ್ಮನಾಭತೀರ್ಥ ಸ್ವಾಮಿ	೧೬
೩	ನರಹರಿತೀರ್ಥ ಸ್ವಾಮಿ	೦೯
೪	ಮಾಧವ ತೀರ್ಥ ಸ್ವಾಮಿ	೧೭
೫	ಅಕ್ಷೋಭ್ಯ ತೀರ್ಥಸ್ವಾಮಿ	೧೭
೬	ಜಯತೀರ್ಥ ಸ್ವಾಮಿ	೨೧
೭	ವಿದ್ಯಾರ್ಥಿರಾಜತೀರ್ಥ ಸ್ವಾಮಿ	೦೪
೮	ಕವೀಂದ್ರತೀರ್ಥಸ್ವಾಮಿ	೪೧
೯	ವಾಗೀಶತೀರ್ಥ ಸ್ವಾಮಿ	೩೦
೧೦	ರಾಮಚಂದ್ರತೀರ್ಥ ಸ್ವಾಮಿ	೩೩
೧೧	ವಿಭುದೇಂದ್ರತೀರ್ಥ ಸ್ವಾಮಿ	೪೯

೧೨	ಜಿತಾಮಿತ್ರ ತೀರ್ಥ ಸ್ವಾಮಿ	೨೧
೧೩	ರಘುನಂದನ ತೀರ್ಥ ಸ್ವಾಮಿ	೨೭
೧೪	ಸೂರೇಂದ್ರತೀರ್ಥ ಸ್ವಾಮಿ	೧೧
೧೫	ವಿಜಯೇಂದ್ರತೀರ್ಥ ಸ್ವಾಮಿ	೫೭
೧೬	ಸುಧಿಯಿಂದ್ರತೀರ್ಥಸ್ವಾಮಿ	೨೮
೧೭	ರಾಘವೇಂದ್ರತೀರ್ಥಸ್ವಾಮಿ	೪೨
೧೮	ಯೋಗೇಂದ್ರತೀರ್ಥಸ್ವಾಮಿ	೧೭
೧೯	ಸುರೇಂದ್ರತೀರ್ಥಸ್ವಾಮಿ	೦೪
೨೦	ಸುಮತೀರ್ಥಸ್ವಾಮಿ	೩೩
೨೧	ಉಪೇಂದ್ರತೀರ್ಥ ಸ್ವಾಮಿ	೦೩
೨೨	ವಾದೀಂದ್ರತೀರ್ಥ ಸ್ವಾಮಿ	೨೨
೨೩	ವಸುಧೇಂದ್ರತೀರ್ಥಸ್ವಾಮಿ	೧೧
೨೪	ವರದೇಂದ್ರತೀರ್ಥ ಸ್ವಾಮಿ	೨೪
೨೫	ಭುವನೇಂದ್ರತೀರ್ಥಸ್ವಾಮಿ	೧೪
೨೬	ಸುಬೋದೇಂದ್ರತೀರ್ಥಸ್ವಾಮಿ	೩೬
೨೭	ಸುಜನೇಂದ್ರ ತೀರ್ಥಸ್ವಾಮಿ	೦೨
೨೮	ಸುಜ್ಞಾನೇಂದ್ರ ತೀರ್ಥಸ್ವಾಮಿ	೧೪
	ಒಟ್ಟು ವರ್ಷಗಳು	೬೬೫

ಇಪ್ಪತ್ತೇಳು ಸ್ವಾಮಿಗಳು, ೬೫೧ ವರ್ಷ ಸಂಸ್ಥಾನದ ಆಡಳಿತ ನಡೆಸಿದರು. ನಮಗೆ ಶಕೆ ೧೭೫೮ ದುರ್ಮುಖಿನಾಮ ಸಂವತ್ಸರದಲ್ಲಿ ಆಶ್ರಮ ಸಿಕ್ಕಬಳಿಕ, ಇಂದಿನವರೆಗೆ ೧೪ ವರ್ಷ ವಹಿವಾಟು ಮಾಡುತ್ತಲಿದ್ದೇವೆ. ೬೬೫ ವರ್ಷಗಳ ಕಾಲ ಆಶ್ರಮ ನಡೆಯುತ್ತಿದೆ. ೨೪ನೇ ವರದೇಂದ್ರಸ್ವಾಮಿಯವರು ಧೀರೇಂದ್ರತೀರ್ಥ ಸ್ವಾಮಿಯವರಿಗೆ ಸನ್ಯಾಸ ನೀಡಿ, ಸಂಸ್ಥಾನದ ಅಧಿಕಾರ ನೀಡದೆ ಮಠದಲ್ಲಿ ಇರಿಸಿಕೊಂಡಿದ್ದರು. ಆಗ ಅವರಿಗೂ ವರದೇಂದ್ರಸ್ವಾಮಿಗೂ ಹೊಂದಾಣಿಕೆಯಾಗದೆ, ವರದೇಂದ್ರರು ಭುವನೇಂದ್ರಸ್ವಾಮಿಗೆ ಸನ್ಯಾಸನೀಡಿ ಇರಿಸಿದರು. ಮುಂದೆ ಧೀರೇಂದ್ರತೀರ್ಥರು ಮರಣ ಹೊಂದಿದರು. ಆಗ ವರದೇಂದ್ರರು ಭುವನೇಂದ್ರರಿಗೆ ಪೀಠಾಧಿಪತಿಯನ್ನಾಗಿ ಮಾಡಿದರು. ಬಳಿಕ ದೈವಾಧೀನರಾದರು. ಈ ರೀತಿ ಸಂಸ್ಥಾನದ ಮಾಹಿತಿಯನ್ನು ನೀಡಲಾಗಿದೆ. ತಾರೀಖು ೯ ಮಾಹೇ ಮೇ ಸನ್ ೧೮೫೦ ಇಸವಿ.

ಅಥಣಿಕರ ದೇಶಪಾಂಡೆ

ವ್ಯಕ್ತಿಗತ ಕೈಫಿಯತ್ (ಹೇಳಿಕೆ) ವೆಂಕಟರಾವ ಸಿದರಾವ ದೇಶಪಾಂಡೆ, ಪ್ರದೇಶ ಅಥಣಿ, ವಿಜಾಪುರ ಜಿಲ್ಲೆ ಸುರುಸನ್ ೧೨೨೯ ಫಸಲಿ ಬರೆದುಕೊಟ್ಟ ಕೈಫಿಯತ್ ನಾಮಾ ಹೀಗಿದೆ-ನಮ್ಮ ಹಿರಿಯ ಬಂಧು ವೆಂಕಟರಾವ ಅಪ್ಪಾಜಿ ಅವರ ಬಂಧು ರಾಮಾಜಿ ಅಣ್ಣಾಜಿ ಇವರಿಗೆ ದಖಣಿ ಇಬ್ರಾಹಿಂ ಆದಿಲಖಾನ ಬಾದಶಹಾನು ಜಗತ್ ಸುರುಸನ್ ೧೦೩೨ ಫಸಲಿ ವರ್ಷ ದೇಶಪಾಂಡೆತನದ ಪರವಾನಗೆಯನ್ನು ನೀಡಿದನು. ಅಲ್ಲಿಂದ ನಡೆದು ಬಂದ ವಹಿವಾಟು (ವ್ಯವಹಾರ) ತಪಶೀಲುವಾರ-

೧) ದಖಣಿ ಬಾದಶಹಾ ಇಬ್ರಾಹಿಂ ಆದಿಲಖಾ ಇಸ್ರ ಕಬೀಲ್ ಸನ್ ೧೦೩೨ ಫಸಲಿ ಅಲ್ಲಿಂದ ಹೈದರದಖಾನ ಬಾದಶಹಾ ಸುಲ್ತಾನ ಸಿಕಂದರ ಸನ್ ೧೧೯೫ ಫಸಲಿವರೆಗೆ ದೇಶಪಾಂಡೆಯ ವತನ ನಡೆಯುತ್ತ ಬಂದಿದೆ.
ವರ್ಷ ೭೩.

೨) ಅಮಲ ಔರಂಗಜೇಬ ಆಲಮಗಿರಿ ಇಸ್ತಕಬೀಲ್ ಸನ್ ೧೧೯೬ ಫಸಲಿ ಶುರುವಾಗಿ ಆಲಮಗಿರ ಮಹಮ್ಮದ ಬಸತ ಮಬಕಶೆ ಬಾದಶಹಾ ಮತ್ತು ಬಹಾದೂರ ಬಾದಶಹಾ ಮತ್ತು ಫರೋಕಸಿತಾರವರೆಗೆ ಸನ್ ೧೧೩೦ ಫಸಲಿವರೆಗೆ ನಡೆಯುತ್ತ ಬಂದಿದೆ. ವರ್ಷ ೩೪.

೩) ಮೊಗಲಾಯಿ ಅಮಲ ಇಪ್ತದಾಯ ಸನ್ ೧೧೩೧ವರೆಗೆ ಸನ್ ೧೧೩೫ ಫಸಲಿವರೆಗೆ ವರ್ಷ ೫.

೪) ಶಾಹೂ ರಾಜನ ಆಧಾರಸ್ತಂಭವಾದ ಉದಾಜಿ ಚವ್ಹಾಣ ಹಿಮ್ಮತ ಬಹಾದೂರ ಇವರು ಪ್ರದೇಶ ಸುಟ್ಟು ಬೂದಿಯಾಗಿರುವದನ್ನು ಅರಿತು. ತಮ್ಮ ಠಾಣೆ ಹಾಕಿ, ಅನುಮತಿ ನೀಡಿ ಮುನ್ನಡೆಸಿದರು. ಕ್ರಮೇಣ ವಸತಿ ಬೆಳೆಯುತ್ತ ಸಾಗಿತು. ಇಪ್ತರಬೀಲ್ ಸನ್ ೧೧೩೬ ಫಸಲಿವರೆಗೆ ಸನ್ ೧೧೪೭ ಫಸಲಿವರೆಗೆ
ವರ್ಷ ೧೨.

೫) ಅಮಲ ಪಂತ ಪ್ರತಿನಿಧಿಯವರು ಸದರಿ ಪ್ರದೇಶಕ್ಕೆ ಯಮಾಜಿ ಶಿವದೇವನನನ್ನು ಕಳಿಸಿದರು. ಇಸ್ಕಾಬೀಲ್ ಸನ್ ೧೧೪೮ ಫಸಲಿ. ಜಗಜೀವನ ಪರಶರಾಮ ಪ್ರತಿನಿಧಿಯು ನಮ್ಮ ಹಿರಿಯ ಬಂಧು ವೆಂಕೋಜಿ ಅಪ್ಪಾಜಿ ದೇಶಪಾಂಡೆಯವರು ದಿವಾಣ ಸೇವೆಯನ್ನು ಏಕನಿಷ್ಠರಾಗಿ ಮಾಡುತ್ತಿದ್ದಾರೆ. ಮತ್ತು ಕುಟುಂಬ ವತ್ಸಲರು, ವತನದ ಕಾಲಕ್ಕೆ ಸರಿಯಾಗಿ ಯೋಗಕ್ಷೇಮ ನಡೆಯುತ್ತಿಲ್ಲ. ಈ ಕಾರಣಕ್ಕಾಗಿ

ಸ್ವಾಮಿಯು ಒಂದು ಗ್ರಾಮವನ್ನು ಇನಾಮ ಮಾಡಿಕೊಟ್ಟರೆ, ಕುಟುಂಬಕ್ಕೆ ಅನುಕೂಲವಾಗಿ ಸ್ವಾಮಿಯ ಸೇವೆಯನ್ನು ಮಾಡಬಹುದು. ಮನಸ್ಸು ಮಾಡಿ, ನಿರ್ಣಯ ಕೈಕೊಂಡು, ಕೃಪೆದೋರಿ ಗ್ರಾಮಸೇಬಾರಗೆ ಪ್ರದೇಶ ಮಜಕೂರ ಇವನಿಗೆ ಇನಾಮ, ಜಲತರು ನಿಧಿ ನಿಕ್ಷೇಪ ಸಹಿತ ಈಗಿನ, ಮುಂದಿನದೆಲ್ಲ ಹಿಂದಿನ ಇನಾಂದರ್ ಮತ್ತು ಹಕ್ಕುದಾರನೆಂದು ನೀಡಲಾಗಿದೆ. ಆದರೂ ತಾವು ಈ ಮೇಲಿನ ಮಜಕೂರನ್ನು ಪರಿಗಣಿಸಿ ಊರಿನ-ಗ್ರಾಮದ ವಸೂಲಿಯನ್ನು ಅವನಿಗೆ ಮತ್ತು ಅವನ ಮಗ ಮೊಮ್ಮಕ್ಕಳು ವಂಶಪರಂಪರೆಯಿಂದ ನೀಡುತ್ತ ಹೋಗಬೇಕೆಂದು ಸನದು ನೀಡಲಾಗಿದೆ. ಥ ೧೦ ಜಿಲ್ಹೇಜ ಸುರುಸನ್ ತಿಸ್ಸಾ ಅರ್ಬೆನ್ ಮಾಮಾ ಮತ್ತು ಅಲಫ್.

೧ ಗ್ರಾಮ ಉಸ್ತುವಾರಿ ಮಾಡುವವನ ಹೆಸರಿಗೆ.

೧ ಜಮೀನ್ದಾರ ದೇಸಾಯಿ ಹೆಸರಿಗೆ.

೧ ವೆಂಕಟರಾವ ಅಪ್ಪಾಜಿಯ ಹೆಸರಿಗೆ.

೧ ವರ್ತಮಾನದಲ್ಲಿ ದೇಶಾಧಿಕಾರಿಯಾಗುವವನ ಹೆಸರಿಗೆ.

೪ ಒಟ್ಟು ಸದರಿಯಂತೆ ಸನದು ಜಾರಿಯಾಗಿದೆ. ಹೀಗೆ ವ್ಯವಹಾರ ನಡೆದಿದೆ. ವರ್ಷ ೧.

೧. ಸನ್ ೧೧೪೯ ಫಸಲಿ ಅಧಿಕಾರದ ಪ್ರತಿನಿಧಿ ಅಲ್ಲಿಂದ ಸನ್ ೧೧೫೯ ಪಸಲಿವರೆಗೆ ಗ್ರಾಮದ ವ್ಯವಹಾರ ನಡಿದಿದೆ.

ವರ್ಷ ೧೧

೨. ಅಧಿಕಾರ ಉದಾಜಿ ಚವ್ಹಾಣ ಹಿಮ್ಮತ ಬಹಾದೂರ ಇಸಕಬೀಲ್ ಸನ್ ೧೧೬೦ ಫಸಲಿ ಅಲ್ಲಿಂದ ಸನ್ ೧೧೭೧ವರೆಗೆ ಮುಂದುವರಿದಿದೆ.

ವರ್ಷ ೧೨.

೩. ಅಧಿಕಾರ ಪೇಶ್ವೆ ನಾಗೋರಾಮ ಮತ್ತು ಭಗವಂತ ಸಿಧನಾಥ ಮತ್ತು ಲಕ್ಷ್ಮಣ ಕಾರ್ನೇರ ಇಸ್ತಕಬೀಲ್ ಸನ್ ೧೧೭೨ ಫಸಲಿಯಿಂದ ಸನ್ ೧೧೭೩ವರೆಗೆ

ವರ್ಷ ೨.

೪. ಅಧಿಕಾರ ಆನಂದರಾವ ಭಿಕಾಜಿ ರಾಸ್ತೆ. ಸನ್ ೧೧೭೩ ಫಸಲಿನಲ್ಲಿ ಸರಂಜಾಮನ್ನು ನೀಡಿದ ಬಳಿಕ ಗ್ರಾಮದ ವ್ಯವಹಾರ ನಡೆಸಿಕೊಂಡು ಹೋಗಲು ಸನ್, ಗ್ರಾಮ ವಗ್ಯೆರೆ ಹೆಸರುಗಳ ಆಜ್ಞೆಯಾಗಬೇಕಾಗಿದೆ. ಹೀಗಾಗಿ ರಾಸ್ತೆ ಮಜಕೂರ ಅವರಿಗೆ

ನಮ್ಮ ಅಜ್ಜ ವೆಂಕಾಜಿ ಅಪ್ಪಾಜಿ ದೇಶಪಾಂಡೆಯವರು ಮಾಡಿದ್ದರಿಂದ ಸನದು ಮಾಡಲಾಯಿತು. ಛ ೪ ಮಾಹೆ ರಬಿಲಾಖರ ಸುರುಸನ್ ಖಮಸ್ ಸಿತೈನ್ ಮತ್ತು ಅಲಫ ಸನ್ ೧೧೭೪ ಫಸಲಿ. ಹೊನವಾಡೆಯ ಮುಕ್ಕಾಮಿನಲ್ಲಿ ಅರ್ಜಿ ಮಾಡಲಾಗಿ ಸನದು ಮಾಡಲಾದ ತಪಶೀಲು–

೧ ವೆಂಕಟರಾವ ಅಪ್ಪಾಜಿ

೧ ದೇಶಮುಖ ಅವರ ಹೆಸರಿಗೆ

೧ ಗ್ರಾಮದ ಹೆಸರಿಗೆ

೩ ಸದರಿಯಂತೆ ಸನದು ಆಜ್ಞೆಯಾಗಿದೆ.

ವರ್ಷ ೧.

೧. ಅಧಿಕಾರ ನ್ಯಾಯಯುತ ಮಜಕೂರು ಇಸ್ತಕಬೀಲ ಸನ್ ೧೧೭೫ ರಿಂದ ೧೨೧೦ ಫಸಲಿವರೆಗೆ ಗ್ರಾಮದ ಮಜಕೂರ ವ್ಯವಹಾರ ನಡೆಯುತ್ತಲಿದೆ.

ವರ್ಷ ೩೫.

೨. ಸನ್ ೧೨೧೧ ವರ್ಷ ಮೊದಲಿನಿಂದಲೂ ನ್ಯಾಯದ ಅಧಿಕಾರವಿದ್ದಾಗ ದೌಲತರಾವ ಶಿಂದೆ ಅವರಿಂದ ಸಖಾರಾಮ ಘಾಟಗೆ ಅವರ ಬಳಿಯ ಶಿದೋಜಿರಾವ ನಿಪ್ಪಾಣಿಕರ ಇವರು ಪ್ರದೇಶದ ಠಾಣೆಯನ್ನು ಪಡೆದ ಬಳಿಕ. ಪೇಶ್ವೆಯ ಪರವಾಗಿ ಬಾಳೋಜಿ ಕುಂಜರನ ಮಗ ಪಾಂಡೋಜಿ ಕುಂಜರ ಮತ್ತು ಆಬಾಜಿ ಶಂಕರ ಮತ್ತು ಸದಾಶಿವ ಪಾಟಕನು ಸೈನ್ಯ ಸಮೇತ ಆಗಮಿಸಿ ಯುದ್ಧ ಮಾಡಿ ಠಾಣೆಯನ್ನು ತೆಗೆದುಕೊಂಡರು. ಆ ಸಮಯದಲ್ಲಿ ಪ್ರದೇಶದಲ್ಲಿ ನಿಪ್ಪಾಣೀಕರರು ಠಾಣೆಯಲ್ಲಿದ್ದರು. ಅವರು ಗ್ರಾಮವನ್ನು ಲೂಟಿ ಮಾಡಿದರು. ಹೀಗಾಗಿ ಕುಟುಂಬದ ಆಸ್ತಿ ಮತ್ತು ವತನದ ಅನುಮತಿಯು ಕಾಗದ ಪತ್ರಗಳೆಲ್ಲ ಕಳೆದು ಹೋಯಿತು. ಸದರಿ ವತನದ ಇನಾಮಗಾಂವ ಸಬರಗೆಯ ಅಸಲಿ ಸನದು ಪತ್ರಗಳನ್ನು ವಾಯಿಯ ನ್ಯಾಯಕ್ಕಾಗಿ, ಪರಿಶೀಲನೆಗಾಗಿ ಕಳಿಸಲಾಗಿದೆ. ಅದು ವಾಯಿಯಲ್ಲಿತ್ತು. ದೇಶಪಾಂಡೆ ವತನದ ಬಾದಶಹಾನ ಆಜ್ಞಾಪತ್ರವನ್ನು ನಾಯಿಕನು ಕಳಿಸಿಕೊಡಲಿಲ್ಲ. ಮನೆಯಲ್ಲಿದ್ದದ್ದು ಲೂಟಿಯಾಯಿತು.

ವರ್ಷ ೧.

೩. ಸನ್ ೧೨೧೨ ಫಸಲಿ ಅಶ್ವೀನ ಮಾಸ ಮಾಧವರಾವ ಅನಂತ ರಾಸ್ತೆ ಇವರ ಸರಂಜಾಮು ಅಲ್ಲಿಂದ ಸನ್ ೧೨೧೪ ಫಸಲಿ ಅಶ್ವೀನ ಮಾಸದವರೆಗೆ ೧೩ ವರ್ಷ ನಿರಂತರವಾಗಿ ನಡೆಯಿತು.

೪. ಅಧಿಕಾರ ತ್ರ್ಯಂಬಕಜಿ ಡೆಂಗಳೆ ಇಸ್ತಕಬೀಲ ಸನ್ ೧೨೨೪ ಅಶ್ವಿನ ಮಾಸದಿಂದ ೧೨೨೫ ಮಾರ್ಗಶೀರ್ಷವರೆಗೆ ಒಂದು ವರ್ಷ ನಡೆಯಿತು.

೫. ಅಧಿಕಾರ ಗಂಗಾಧರ ಬಾಳಕೃಷ್ಣ ಮರಾಠೆ ಇಸ್ತಕಬೀಲ ಸನ್ ೧೨೨೫ ಫಸಲಿ ಪಾಷ್ಯದಿಂದ ಸನ್ ೧೨೨೬ ಫಸಲಿ ಪೌಷ್ಯವರೆಗೆ ಒಂದು ವರ್ಷ ನಡೆಯಿತು.

೬. ಅಧಿಕಾರ ಲಕ್ಷ್ಮಣ ಗೋವಿಂದ ಇವರ ಬಳಿಯ ಹರಿ ವಿಠ್ಠಲ ಸನ್ ೧೨೨೬ ಫಸಲಿ ಪೌಷ ತಿಂಗಳಿಂದ ಒಂದು ವರ್ಷಕಾಲ ನಡೆಯಿತು.

೭. ಅಧಿಕಾರ ಮಾಧವರಾವ ಅನಂತ ರಾಸ್ತೆ ಸನ್ ೧೨೨೭ ಫಸಲಿ ಆಷಾಢ ಶುದ್ಧ ೧೧ ರಿಂದ ವೈಶಾಖ ಕೊನೆಯವರೆಗೆ ಅಧಿಕಾರ ನಡೆಸಿದರು. ಜೇಷ್ಠ ಸರಕಾರ ಕಂಪನಿ, ಅಧಿಕಾರ ಒಂದು ವರ್ಷ ನಡೆಯಿತು.

ಈ ರೀತಿ ದೇಶಪಾಂಡೆ ವತನ ಮತ್ತು ಇನಾಮ ಊರು ಸಬರಗೆ ಅಂದಿನಿಂದ ಇಂದಿನವರೆಗೆ ನಡೆದುಬಂದಿದೆ. ಇನಾಮ ಗ್ರಾಮಿಗೆ ಸನದು ಹಾಜರ್‌ಯಿದೆ. ಪ್ರತಿನಿಧಿಯ ಸನದು ೪, ರಾಸ್ತೆಯ ಸನದು ೩, ನಗದು ಸನದು ೭ ದಸ್ತವೇಜ ಹಾಜರಯಿದೆ. ಸದರಿ ಬರೆದಂತೆ ನಮಗೆ ವತನ ಮತ್ತು ಇನಾಮ ಊರು ಅನ್ನಭೋಗ ಲಭಿಸಿದೆ. ಇದರಲ್ಲಿ ಗೊಂದಲವಿಲ್ಲ–ತಕರಾರಿಲ್ಲ. ಹಾಗೇನಾದರೂ ತಕರಾರು ಬಂದಲ್ಲಿ ಸರಕಾರದ ಸಲಹೆಯಂತೆ ಹಾಜರಿರುತ್ತೇವೆ–ಎಂದು ಬರೆದು ಕೊಟ್ಟ ಕೈಫಿಯತ್. ರುಜು ತಾರೀಖ ೮.೩೦ ಮಾಹೇ ಅಗಸ್ಟ ಸನ್ ೧೨೨೯ ಫಸಲಿ.

ಎಲಬುರಕರ್ (ಜ್ಯಾಲಿಹಾಳ) ದೇಸಾಯಿ

ಪ್ರಮಾಧಿನಾಮ ಸಂವತ್ಸರೇ ಶ್ರಾವಣ ಬಹುಳ ೧೦ನೇ ದಿನ ಕೃಷ್ಣ ದೇಸಾಯಿ ಮತ್ತು ಸರದೇಸಾಯಿ ಮತ್ತು ನಾಡ ಪಟ್ಟಣಶೆಟ್ಟಿ ಪ್ರದೇಶ ಎಲಬುರ್ ಊರು ಸರನಾಡ ಚೌಧರಿ. ಪ್ರಾಂತ ಬಾಗಲಕೋಟ ನಾಯಿಕ ಸಿರೂರ ಸನ್ ೧೨೨೯ ಫಸಲಿ ನಮ್ಮ ಬುನಿಯಾದ ಮೂಲಪುರುಷ ಆರಭ್ಯ ಹಾಲ್ ಮಿನಹೂ ವತನ ದೇಶಗತಿ ಸಂಪಾದಿಸಿದರು. ಈ ವತನ ಮುಂದುವರಿಯುತ್ತ ಬಂತು. ಅಧಿಕಾರ ಪ್ರಕಾರ ವರ್ಷ ಪ್ರಕಾರ, ವಂಶಪರಂಪರೆ, ತಪಶೀಲುದಾರು ಬರೆದು ಕೊಟ್ಟ ಕೈಫಿಯತ್ ಹೀಗಿದೆ–ನಮ್ಮ ಮೂಲ ಪುರುಷ ನಾರಾಯಣ ವಡೇರನಿಂದ ತಿಮ್ಮನಾಯಿಕ ವಡೇರವರೆಗೆ ಐವರು ಪುರುಷರು ಸಿರೂರ ನಾಯಿಕ ಸಂಪೂರ್ಣ ಊರಿನ ಕರ, ಕಂದಾಯ, ಪಟ್ಟಿಯನ್ನು ಅನುಭವಿಸುತ್ತ ಬಂದಿದ್ದರು. ಅವರ ಹೆಸರು ಸಹಿತ ಅಧಿಕಾರ

ಆನಗುಂದಿ ರಾಜನ ಅಧಿಕಾರ	ವಿಜಾಪುರ ಬಾದಶಹಾ ಅಧಿಕಾರ ಇಸ್ತಕಬೀಲ
ಶಕೆ ೧೩೨೨ ರಿಂದ ೧೪೨೬ವರೆಗೆ	೧೪೨೬ ರಿಂದ ೧೪೯೫ ಮಿನಹೂ
೩೩ ನಾರಾಯಣ ವಡೇರ ಇಸ್ತಕಬೀಲ	೩೯ ಅಚ್ಚುತ ವಡೇರ ಇಸ್ತ ಕಬೀಲ
೧೩೨೨ರಿಂದ ಶಕೆ ೧೩೫೫ ಮಿನಹೂ	೧೪೨೬ ರಿಂದ ಶಕೆ ೧೪೬೫ ಮಿನಹೂ
೩೦ ರಾಮರಾವ ವಾಡೇರ ಇಸ್ತಕಬೀಲ	೩೦ ತಿಮ ನಾಯಿಕ ವಾಡೇರ ಇಸ್ತಕಬೀಲ
೧೩೫೫ರಿಂದ ಶಕೆ ೧೩೮೫ ಮಿನಹೂ	೧೪೬೫ ರಿಂದ ೧೪೯೫ ಮಿನಹೂ
	ಇವನಿಗೆ ಅಧಿಕಾರ ಬಾದಶಾಹಿ.
೪೧ ಕೃಷ್ಣ ನಾಯಿಕ ವಡೇರ ಇಸ್ತಕಬೀಲ	೩೯
೧೩೮೫ ರಿಂದ ೧೪೨೬ ಮಿನಹೂ.	
೧೦೪	
	೧೭೩ ವರ್ಷ

ಈ ರೀತಿ ಐದು ತಲೆಮಾರಿನವರೆಗೆ ಸಿರೂರ ನಾಯಿಕಿಯನ್ನು ಕರ ಸಂದಾಯ ಪಟ್ಟಿಯನ್ನೆಲ್ಲ ಅನುಭವಿಸುತ್ತ ಬಂದರು. ಇತ್ತೀಚೆಗೆ ಆನಂದಾ ಕೃಷ್ಣಪ್ಪ ನಾಯಿಕ

ಅವರು ಸಿರೂರ ನಾಯಿಕಿಯನ್ನು ಮಾಡಿ, ಸಿರೂರ ಕರ ಕಂದಾಯ ಪಟ್ಟಿ ಕಸಬುಗಾರರ ಸಹಿತ ವತನವನ್ನು ಅನುಭವಿಸುತ್ತಿರುವಾಗ, ಭೀಕರ ಬರಗಾಲ ಬಿತ್ತು. ಹೀಗಾಗಿ ಅವನ ಪುರೋಹಿತನಾದ ತಿಮರಸಯ್ಯನು 'ಅನ್ನದಾನ ಮಾಡಿ, ಪುತ್ರರತ್ನ ಜನಿಸುತ್ತಾನೆ, ಕಲ್ಯಾಣವಾಗುತ್ತದೆ' ಎಂದು ಉಪದೇಶ ಮಾಡಿದನು. ಆದುದರಿಂದ ಅನ್ನದಾನ ಮಾಡಲಾರಂಭಿಸಿದನು. ಆಗ ಬನಶಂಕರಿ ದೇವಿ ಕುಮಾರಿಯು ಮನೆಮನೆಗೆ ತಿರುಗಾಡುತ್ತ ಬಂದಳು. ಯಾರೂ ಅವಳನ್ನು ಮನೆಯೊಳಗೆ ಕರೆಯಲಿಲ್ಲ. ಆದರೂ ಒಮ್ಮೆಲೆ ಪಾಕಶಾಲೆಗೆ ಬಂದು, ಎರಡೂ ಕಾಲನ್ನು ಒಲೆಯೊಳಗೆ ಹಾಕಿ, ಕೈಯಿಂದ ಪಾಯಸವನ್ನು ತಿರುವಲಾರಂಭಿಸಿದಳು. ಅಡಿಗೆ ಮಾಡುವಾತ ನೀನಾರು? ಎಂದು ಕೇಳಿದನು. ಆಗ ದೇವಿ ಹೇಳಿದ್ದೇನೆಂದರೆ–'ನಾನು ನಿಮ್ಮ ಯಜಮಾನ ಭಕ್ತಿಗೆ ಮೆಚ್ಚಿದ್ದೇನೆ. ನಾನು ಬದಾಮಿಯ ಬನಶಂಕರಿ. ನಿಮ್ಮ ಧನಿ ಆನಂದಾನಿ ಕೃಷ್ಣಪ್ಪ ನಾಯಿಕನಿಗೆ ಬಾದಾಮಿ ತಾಲೂಕಿನ ೧೮೮ ಗ್ರಾಮಗಳ ಬೇರಿಜ ನಾಣ್ಯ, ೧,೨೫,೦೦೦ ಹೊನ್ನಿನ ಸಂಸ್ಥಾನವನ್ನು ನೀಡುವದಾಗಿ ಹೇಳಿದಳು. ನಾನು ಬಾದಾಮಿಯ ಆಚೆ ಒಂದು ಹರದಾರಿ ದೂರದ ಚೋಳಚಗುಡ್ಡದಲ್ಲಿರುವ ಸರೋವರದ ಪೂರ್ವಕ್ಕೆ ನನ್ನ ಪಾದುಕೆಯಿದೆ.' ಎಂದು ತಿಳಿಸಿ ಅದೃಶ್ಯಳಾದಳು. ಬಳಿಕ ಆ ಅಡುಗೆಯವನು ಆನಂದಾನಿ ಕೃಷ್ಣಪ್ಪ ನಾಯಿಕನಿಗೆ ಈ ವಿಷಯವನ್ನು ತಿಳಿಸಿದನು. ಆಗ ನಾಯಿಕನು ತನ್ನ ಪುರೋಹಿತ ತಿಮರಸಯ್ಯನನ್ನು ಕರೆ ಕಳಿಸಿ, ನೀವು ಶ್ರೀ ಬನಶಂಕರಿಯ ಪಾದುಕೆಯನ್ನು ನೋಡಿ ಬರಬೇಕೆಂದು ಅಶ್ವದಳ, ಕಾಲ್ದಳವನ್ನು ನೀಡಿ ಕಳಿಸಿದನು. ತಿಮರಸಯ್ಯನು ದಳಗಳ ಸಮೇತ ಕುದುರೆ ಸವಾರಿ ಮಾಡಿ ಬದಾಮಿಯಿಂದ ಬನಶಂಕರಿ ಕ್ಷೇತ್ರಕ್ಕೆ ಆಗಮಿಸಿದನು. ಅಲ್ಲಿ ದೇವರಿರಲಿಲ್ಲ. ದೇವಿಯು ತಿಳಿಸಿದಂತೆ ಪಾದುಕೆಯು ಸರೋವರದ ಪೂರ್ವ ಭಾಗದಲ್ಲಿತ್ತು. ಅಲ್ಲಿ ವಂದನೆ, ಅರ್ಚನೆ, ನೈವೇದ್ಯ ಮಾಡಿ, ಅಲ್ಲಿಂದ ಹೊರಟು ಬದಾಮಿ ಸನಿಹದ ಗೊಲ್ಲರ ಕೊಪ್ಪಕ್ಕೆ ಬಂದು ವಾಸ್ತವ್ಯ ಮಾಡಿದನು. ಆ ರಾತ್ರಿ ಕೋತಬಲ ಕುರಹಟ್ಟಿ–ಮುಸಿಗೇರಿ ಮತ್ತು ನಿಳೂರ ದಿಲ್ಲಿಯ ಕಾಟ ನಾಯಿಕ ಮತ್ತು ಜೆಪಿ ನಾಯಿಕ ಎನ್ನುವ ಬೇಡರು ಬದಾಮಿಯ ಪೇಟೆಯನ್ನು ದೋಚಿ ಸಂಪತ್ತು ಒಯ್ಯುತ್ತಿರುವಾಗ, ತಿಮ್ಮರಸಯ್ಯನಿಗೆ ಸುದ್ದಿ ಗೊತ್ತಾಗಿ, ಸೈನ್ಯ ಸಮೇತ ಬೇಡರ ಮೇಲೆ ಏರಿಹೋಗಿ ೨೦೦೦ ಬೇಡರನ್ನು ಪರಾಭವಗೊಳಿಸಿ, ಲೂಟಿಯ ವಸ್ತು ಒಡವೆಗಳನ್ನೆಲ್ಲ ಮರಳಿ ತಂದು ಬದಾಮಿಯ ಜನರಿಗೆ ನೀಡಿದನು. ಆಗ ಬದಾಮಿಯ ಸುತ್ತಮುತ್ತಲಿನ ಜನರೆಲ್ಲ ಸೇರಿ ಮಹಮ್ಮದಶಾ ಬಾದಶಹಾನ ಪರವಾಗಿರುವ ಕಿಲ್ಲೇದಾರ, ವ್ಯಾಪಾರಿ, ಸೈದಮಿಯಾನ ಮಹ ಕಿರಾಡಿ ಮಾಮುರಖಾನರ ಬಳಿಗೆ ಬಂದು–'ರಾತ್ರಿ ೨೦೦೦ ಬೇಡರು ಬಂದು ನಮ್ಮ ಪೇಟೆಯನ್ನು ಲೂಟಿ ಮಾಡಿ ಒಯ್ಯುವಾಗ ನಿಮ್ಮ ಸೈನಿಕರಿಂದ ಯಾವ ಸಂರಕ್ಷಣೆಯೂ ಸಿಗಲಿಲ್ಲ. ಅರಾಜಕತೆಯಾಯಿತು. ಒಬ್ಬ ಹಾದಿಹೋಕ ಗೃಹಸ್ಥನು ಬೇಡರನ್ನು ಪರಾಭವಗೊಳಿಸಿ,

ನಮ್ಮ ಸಂಪತ್ತನ್ನು ನಮಗೆ ಮರಳಿ ತಂದುಕೊಟ್ಟನು. ಬೇಡರನ್ನು ಕೊಂದು ಹಾಕಿದನು'-ಎಂದು ಕಿಲ್ಲೇದಾರನ ಬಳಿ ನಿವೇದಿಸಿಕೊಂಡರು. ಆಗ ಕಿಲ್ಲೇದಾರನ ಸಂತೋಷಗೊಂಡು ತಿಮರಸಯ್ಯನನ್ನು ಭೇಟಿಯಾಗಿ, ಅವರಿಗೆ ಕೆಲವು ಉಡುಗೊರೆ ನೀಡಿ ಸನ್ಮಾನ ಮಾಡಿ, ಇಲ್ಲಿ ಅರಾಜಕತೆಯಿದೆ. ನಮ್ಮೊಂದಿಗೆ ಇರಬೇಕು ಎಂದು ಹೇಳಿ ವಿಜಾಪುರ ಬಾದಶಹಾನಿಗೊಂದು ಪತ್ರವನ್ನು ಕಳಿಸಿದನು. ಅಷ್ಟರಲ್ಲಿ ದೇಸಾಯಿಗೆ ಕನಸು ಬಿತ್ತು. 'ನಾನು ಮೂರ್ತಿಯ ರೂಪದಲ್ಲಿ ಕ್ಷೇತ್ರದಲ್ಲಿ ವಾಸಿಸುತ್ತಿದ್ದೆ. ನನ್ನನ್ನು ಬಡೆದು ಕೆರೆಯಲ್ಲಿ ಚೆಲ್ಲಿದರು. ಇದರಿಂದಾಗಿ ನಿನ್ನ ವಂಶ ಅಭಿವೃದ್ಧಿಯಾಗುವದಿಲ್ಲ. ಕೃಷ್ಣಾಜಿ ನಾಯಿಕ ಎನ್ನುವವನು ಬರಗಾಲದಲ್ಲಿ ಅನ್ನನೀಡಿ ಹಲವು ಜನರ ಸಂರಕ್ಷಣೆ ಮಾಡಿದನು. ಅವನು ಪುಣ್ಯ ಸಂಪಾದನೆ ಮಾಡಿದನು. ಅದರಿಂದಾಗಿ ಅವನ ಮನೆಯಲ್ಲಿ ಎಂಟು ವರ್ಷಗಳಿಂದ ಕುಮಾರಿಯಾಗಿ ನೆಲೆಸಿದ್ದೇನೆ. ಅವನಿಗೆ ಒಂದು ಕಾಲ ಲಕ್ಷದ ಹೆಚ್ಚಿನ ಸಂಸ್ಥಾನವನ್ನು ದೇಶಗತಿಯಾಗಿ ನೀಡುವದಾಗಿ ವಚನ ನೀಡಿದ್ದೇನೆ:ಅದರಂತೆ ಸನದು ಮಾಡಿಕೊಡಬೇಕು'-ಅದೇ ಕಾಲಕ್ಕೆ ಕಿಲ್ಲೆದಾರನ ಪಟ್ಟವೂ ಬಂತು. ಎರಡೂ ಏಕಕಾಲಕ್ಕೆ ಬಂದು ಕೂಡಿತು. ಇದರಿಂದ ಬಾದಶಹಾನು ಸಂತೋಷದಿಂದ ಕೃಷ್ಣಪ್ಪ ನಾಯಿಕ ಇವನ ಮೇಲೆ ಕೃಪಾಳು ಆಗಿ, ಅರ್ಜಿ ಮಾಡಿದಂತೆ ಸನದು ಮಾಡಿ ಕೊಟ್ಟು ಅನುಮತಿಯನ್ನು ಕಿಲ್ಲೆದಾರನಿಗೆ ಕಳಿಸಿದನು. ಕಿಲ್ಲೆದಾರನು ಆನಂದಾದಿ ಕೃಷ್ಣಾಜಿಯ ಬಳಿಗೆ ಬಂದು ಸಿರೂರ ಮುಕ್ಕಾಮಿನ ಅನುಮತಿ ಮತ್ತು ಸನದನ್ನು ನೀಡಿ ಬದಾಮಿಗೆ ಕರೆದೊಯ್ದನು. ಅನುಮತಿಯ ಜೊತೆಗೆ ಬದಾಮಿ ಪ್ರಾಂತದ ೧೮೮ ಗ್ರಾಮಗಳನ್ನೂ ವಶಪಡಿಸಿಕೊಂಡು ನೆಲೆಸಬೇಕೆಂದು ಹೇಳಿದ್ದರಿಂದ ಶ್ರೀದೇವಿಯ ಆಜ್ಞೆಯಂತೆ ಬಾದಶಹಾನ ಸನದಿನ ಆಜ್ಞೆಯಂತೆ ೧,೨೫,೦೦೦ ಹೊನ್ನಿನ ರಾಜ್ಯವು ಪ್ರಾಪ್ತವಾಯಿತು. ಅದನ್ನು ಉಪಭೋಗಿಸುತ್ತ ಉಳಿದುಕೊಂಡರು. ವಂಶಪರಂಪರೆಯ ಆಡಳಿತದ ತಪಶೀಲು-

ವಿಜಾಪುರ ಬಾದಶಹಾನ ಕಾಲದಲ್ಲಿ ೮೧ ಗ್ರಾಮಗಳು.

೩೧ ಆನಂದಾನಿ ಕೃಷ್ಣಪ್ಪಾ ನಾಯಿಕ ದೇಸಾಯಿಯು ಉಪಭೋಗಿಸಿದ್ದು. ರಾಜ್ಯಗಳನ್ನು ತಪಶೀಲು ಇಸ್ತಕಬೀಲ ೧೪೯೫ರಿಂದ ೧೫೨೬ ಮಿನಹೂ ಐರೋಬಸ್ತ ಉಪಭೋಗಿಸಿದ ತಪಶೀಲು-

೧೮ ಸುಲ್ತಾನ ಮಹಮದಶಹಾ ಬಾದಶಹಾನ ಆಡಳಿತದ ಇಸ್ರಕಬೀಲ್.

೧೩ ಅಲಿ ಆದಿಲಶಹಾ ಬಾದಶಹಾನ ಆಡಳಿತದಲ್ಲಿ ೧೬ ವರ್ಷದವರೆಗೆ ಇಸ್ರಕಮೀಲ್.

೩೧

೩೫ ಗುಡದತಿಮಪ್ಪ ಎಂಬ ಹೆಸರಿನ ಮಗ ಆನಂದಾನಿ ಕೃಷ್ಣಪ್ಪನಿಗೆ ದೇಸಾಯಿಗೆ ಜನಿಸಿದನು. ಅವನ ಕಾಲದಲ್ಲಿ ರಾಜ್ಯ ಸಂಪಾದನೆಯಾಯಿತು. ಅವನು ಇಸ್ರಕಬೀಲ ೧೫೨೬ರಿಂದ ಶಕೆ ೧೫೩೩೧ರ ವರೆಗೆ ರಾಜ್ಯವಾಳಿದ. ಆನಂದಾನಿ ಕೃಷ್ಣಪ್ಪನಂತೆ ಬಾದಾಮಿ ಮುಂತಾದ ಪ್ರಾಂತವನ್ನು ಆಳಿದನು. ಒಟ್ಟೂ ಹಳ್ಳಿಗಳಲ್ಲಿ ಒಟ್ಟೂ ೩೫ ವರ್ಷ ಆಡಳಿತ ಮಾಡಿದನು. ಅದರ ತಪಶೀಲು ವರ್ಷಗಳು-

೩ ಅಲಿ ಆದಿಲಶಾ ಬಾದಶಹಾನ ಆಡಳಿತದ ವರ್ಷ ೧೬ವರೆಗೆ

೧೪ ಸುಲ್ತಾನ ಸಿಕಂದರ ಬಾದಶಹಾನ ಆಡಳಿತದ ೧೪ ವರ್ಷಗಳ ವರೆಗೆ.

೧೮ ಆಲಮಗಿರಿ ಬಾದಶಹಾನ ಆಡಳಿತದ ೩೩ ವರ್ಷಗಳವರೆಗೆ.

೩೫

೨೫ ನರಸಪ್ಪ ನಾಯಿಕ ದೇಸಾಯಿ ಎಂಬ ಗುಡದ ತಿಮ್ಮಪ್ಪನ ಪುತ್ರನು ಉಪಭೋಗಿಸಿದನು. ಇಸ್ತಕಬೀಲ ಶಕೆ ೧೫೬೧ ರಿಂದ ೧೫೭೬ ವರೆಗೆ. ಇದರಲ್ಲಿ ಆಲಮಗಿರಿ ಬಾದಶಹಾನ ೩೩ ವರ್ಷಗಳಲ್ಲಿ ೧೫ ಸದರಿ ವರ್ಷ ಆಡಳಿತ ನಡೆದಾಗ ಗುಳೇದಗುಡ್ಡದವನು ಕಿರುಕೋಳ ಉಪದ್ರವ ನೀಡಿದನು. ಆದರೆ ಪುಣ್ಯಕ್ಕೆ ಅಂಥದ್ದೇನೂ ಆಗಲಿಲ್ಲ. ರಾಜ್ಯ ಯಥಾಸಾಂಗ ಸುರಕ್ಷಿತವಾಗುಳಿಯಿತು. ವರ್ಷ.

೧೭ ವಿಜಾಪುರ ಪ್ರಾಂತದಲ್ಲಿ ವಿಜಾಪುರ ಬಾದಶಹಾನ ಮತ್ತು ಮೊಗಲರ ನಡುವೆ ಕಾಳಗ ನಡೆದಾಗ ಅನುಭವಿಸಿದ ತಪಶೀಲು.

೧೭ ಮುರಾರಿ ನಾಯಿಕ ದೇಸಾಯಿ ಉಪಭೋಗಿಸಿದನು. ಇಸ್ರಕಬೀಲ ೧೫೭೬-೧೫೯೩ ಮಿನಹೂ ಯಜಮಾನ ದರ್ಜೆ ನಡೆಸುತ್ತ ಬಂದವರಂತೆ ದರೋಬಸ್ತ ನಡೆಯುತ್ತ ಬಂದಿತು. ಅನುಭವಿಸಿದ ವರ್ಷಗಳು. ೧ ಕದಂಬ ನಾಯಿಕದೇಸಾಯಿ ಮೂರು ತಿಂಗಳು ಸದರಿ ರಾಜ್ಯವನ್ನು ಉಪಭೋಗಿಸಿದನು.

೧೭೧

೩೪ ೧೧೧ ಮೊಗಲರ ಆಡಳಿತ, ವಿಜಾಪುರ ಬಾದಶಹಾನ ಆಳಿಕೆ ಹೋಗಿ ಮೊಗಲರದ್ದಾಯಿತು.

೨೫ ಹಿರ ಪಾವಡಿ ನಾಯಿಕ ದೇಸಾಯಿಯ ಉಪಭೋಗ ವರ್ಷಗಳು ಇಸ್ತಕಬೀಲ ಶಕೆ ೧೫೯೩೧ ರಿಂದ ಶಕೆ ೧೬೧೮೧. ಮಿನಹೂ ಸದರಿ ತಂದೆ ಉಪಭೋಗಿಸಿದ್ದ.

೧೧೧. ರಾಮಚಂದ್ರ ನಾಯಿಕ ದೇಸಾಯಿ. ತಂದೆಯಂತೆ ಅವನೂ ಒಂಭತ್ತು ತಿಂಗಳು ರಾಜ್ಯ ಅನುಭವಿಸಿದನು. ಇಸ್ತಕಬೀಲ ೧೬೧೮೧. ರಿಂದ ಶಕೆ ೧೬೧೯ವರೆಗೆ.

೯ ಅಚ್ಚೆಪ್ಪ ನಾಯಿಕ ದೇಸಾಯಿಯು ತಂದೆಯ ಉಪಭೋಗಿಸಿದ. ಇಸ್ತಕಬೀಲ ಶಕೆ ೧೬೧೯-ಶಕೆ (೧೬೨೦)

೩೪ ೧೧೧

೫೧ ಸವಣೂರ ನವಾಬರ ಆಡಳಿತದ ವರ್ಷಗಳ ಅಧಿಕಾರ.

೨೦ ಪೇಶ್ವೆ ಆಡಳಿತದ ಅಧಿಕಾರ.

೧೨ ಬೀದರ ನವಾಬರ ಆಡಳಿತ ಇಸ್ತಕಬೀಲ ೧೬೯-ಶಕೆ ೧೭೧೧ ಮಿನಹೂ.

೨೮ ಪೇಶ್ವೆಯವರ ಆಡಳಿತದಲ್ಲಿ.

೨ ಕಂಪನಿ ಸರಕಾರದ ಆಡಳಿತ ೧೭೩೯ ರಿಂದ ೧೭೪೧ ಮಿನಹೂ ಪೇಶ್ವೆಯವರ ಆಡಳಿತದಲ್ಲಿದ್ದಂತೆ ಸ್ವತಃ ಕೃಷ್ಣಾಜಿ ದೇಸಾಯಿಣಿ ಉಪಭೋಗಿಸಿದರು.

ಈ ರೀತಿ ೨೪೬ ವರ್ಷಗಳ ಕಾಲ ಆಡಳಿತ ನಡೆಯಿತು-ಎಂದು ಕೈಫಿಯತ್ ಬರೆದುಕೊಡಲಾಗಿದೆ. ತಾರೀಖ ೮ ಮಾಹೆ ಅಗಸ್ಟ.

ನಂದಗಡಕರ ಸರದೇಸಾಯಿ

ಕೈಫಿಯತ್ ಸನ್ ೧೨೩೧ ಫಸಲಿ ವಿಷ್ಯನಾಮ ಸಂವತ್ಸರ ಮಾಹೇ ಅಕ್ಟೋಬರ್ ಛ ೧೦ರಂದು ಜಯಂತಿಬಾಯಿ ವ್ಯಂಕಟಾದ್ರಿ ಶ್ರೀನಿವಾಸ ಬಹಾದೂರ ದೇಸಾಯಿ ಮತ್ತು ದೇಶಕುಲಕರ್ಣಿ ಮತ್ತು ನಾಡಗೌಡ ಪ್ರದೇಶ ಗದಗ ಮತ್ತು ರೌಡಕುಂದಾ ಸರದೇಸಾಯಿ ಪ್ರದೇಶ ಶಿದನೂರ ಮತ್ತು ನಾಡಗೌಡ ಬದಾಮಿ ಕೋಟೆ ಮತ್ತು ನಾಡಗೌಡ ದೇಶಕುಲಕರ್ಣಿ ಸಂಮತ ಕಲಕೇರಾ ಬರೆದು ಕೊಟ್ಟ ಕೈಫಿಯತ್. ಅವರಲ್ಲಿ ವೆಂಕಟಪ್ಪಯ್ಯಾ ಅವರು ಸನ್ ೧೧೮೯ ಫಸಲಿಯಲ್ಲಿ ಗದ್ದುಗೆಯ ಮೇಲೆ ಕೂತಾಗ, ಆಕ್ರಮಣ ಮುಂತಾದವುಗಳನ್ನು ಮುಗಿಸಿದ ಬಳಿಕ ಸನ್ ೧೨೨೯ ಫಸಲಿ ವರೆಗಿನ ಕೈಫಿಯತ್ ಯಥಾವತ್ ಪ್ರತಿ–

೧) ಹೈದರ ಅಲ್ಲಿಖಾನ ನವಾಬ ಇವರು ಪೇಟೆಯಲ್ಲಿದ್ದು ರೂಢಿಯಂತೆ ನಡೆದುಕೊಂಡು ಬಂದ ರೀತಿಯಲ್ಲಿ ಸಂಸ್ಥಾನವನ್ನು ಶಾಶ್ವತವಾಗಿ ಉಳಿಸಿಕೊಂಡು ಸರಣಿ ಸರಕಾರಕ್ಕೆ ನೀಡುವ ಪ್ರತಿವರ್ಷದ ರಕಮು ೩೨೫೦೦ ರೂಪಾಯಿಯನ್ನು ನೀಡಿ, ನಿರಂತರವಾಗಿ ಎಂಟು ವರ್ಷ ಉಪಭೋಗಿಸಿದರು.

೨) ಸನ್ ೧೧೯೬ ಫಸಲಿ ಪರಾಭವ ಸಂವತ್ಸರದಲ್ಲಿ ಟೀಪುಸುಲ್ತಾನನ ಆಡಳಿತ ನಡೆದು ಧಾಂಧಲೆ ನಡೆಯಲಾರಂಭಿಸಿತು. ಈ ಕಾರಣದಿಂದ ವೆಂಕಪ್ಪಯ್ಯನು ಸ್ಥಳವನ್ನು ಬಿಟ್ಟು ಕೃಷ್ಣಾತೀರ ದಂಡೆಯ ಶ್ರೀಮಂತರ ಪ್ರದೇಶದಲ್ಲಿ ವಾಸ ಮಾಡುತ್ತಿರುವಾಗ ಟೀಪೂಸುಲ್ತಾನನು ಡಂಬಳ ಕೋಟೆಯನ್ನು ವಶಪಡಿಸಿಕೊಂಡು ಸಂಸ್ಥಾನವನ್ನು ಜಪ್ತಿ ಮಾಡಿದನು. ಕೆಲವು ವರ್ಷ ಸುಲ್ತಾನನು ಸಂಸ್ಥಾನವನ್ನು ಜಪ್ತಿಗೆ ಗುರಿಪಡಿಸಿದನು. ಬಳಿಕ ಪೇಶ್ವೆಗಳಿಂದ ರಾಜಶ್ರೀ ಪರಶುರಾಮ ಪಂತಭಾವೂ ಅವರಿಗೆ ಅಧಿಕಾರ ಪ್ರಾಪ್ತಿಯಾಗಿ ಸೈನ್ಯ ಸಮೇತ ಟೀಪೂ ಸುಲ್ತಾನನನ್ನು ಸದೆ ಬಡಿಯಲು ಕರ್ನಾಟಕದ ಧಾರವಾಡದ ಮೇಲೆ ಏರಿ ಹೋದನು. ಆ ಕಾಲಕ್ಕೆ ಸದರಿ ವೆಂಕಪ್ಪಯ್ಯನು ಪುಣೆಯಲ್ಲಿದ್ದಾಗ ತನ್ನ ಸಂಸ್ಥಾನದ ಮಜಕೂರನ್ನು ಬಹಿರಂಗಪಡಿಸಿ, ಶ್ರೀಮಂತ ಮಾಧವರಾವ ಸಾಹೇಬರ ಪತ್ರವನ್ನು ರಾಜಶ್ರೀ ಪರಶುರಾಮಪಂತ ಭಾವೂ ಇವನಿಗೆ ನೀಡಿದನು. ಅದರಲ್ಲಿಯ ಒಕ್ಕಣಿಕೆ ಹೀಗಿತ್ತು– ಟೀಪೂ ಸುಲ್ತಾನನು ಡಂಬಳಕರರ ಸಂಸ್ಥಾನವನ್ನು ಬಲವಂತದಿಂದ ಕಸಿದುಕೊಂಡಿದ್ದಾನೆ. ನೀವು ಅದನ್ನು ದೇಸಾಯಿಯವರ ಆಡಳಿತಕ್ಕೆ ತರಬೇಕೆಂದು ಪತ್ರ ಕಳಿಸಲಾಗಿದೆ. ಧಾರವಾಡದ ಆ ಕಾರ್ಯಾಚರಣೆಯಲ್ಲಿ ಕರ್ನಾಟಕದ ಬಂದೋಬಸ್ತಾಗಿ ಟೀಪೂವನ್ನು ಸೋಲಿಸಿ, ಗೆದ್ದು, ಮರಳಿದ ಬಳಿಕ ನಮ್ಮ

ಸಂಸ್ಥಾನ ನಮ್ಮ ಸುಪರ್ದಿಗೆ ನೀಡಬೇಕೆಂದು ವೆಂಕಪ್ಪ ದೇಸಾಯಿ ಹೇಳಿದಾಗ ಭಾವೂ ಸಾಹೇಬರು ದುಡ್ಡಿನ ಮೇಲೆ ಕಣ್ಣಿಟ್ಟು, ಪುಣೆಗೆ ಹೋಗಿ ಸಮಾಲೋಚನೆ ಮಾಡಿ ಬಂದು, ಖರ್ಚು ನೀಡಿದ ಬಳಿಕ ಸಂಸ್ಥಾನವನ್ನು ನಿಮಗೆ ವಹಿಸಿ ಕೊಡಲಾಗುವದೆಂದು ಅಡ್ಡಿ ಮಾಡಿದರು. ಇಂದಿನವರೆಗೂ ಈ ಜಿಲ್ಲೆಯನ್ನು ತಮ್ಮ ವಶದಲ್ಲಿರಿಸಿಕೊಂಡಿದ್ದರು. ಪೇಶ್ವೆಯವರು ಒಪ್ಪಿದ ಬಳಿಕ ನಿಮ್ಮ ಸ್ವಾಧೀನವಾಗುವುದು–ಎಂದು ತಿಳಿಸಿ ಪುಣೆಗೆ ಹೊರಟಾಗ, ಜೊತೆಗೆ ತಮ್ಮ ಸಚಿವನನ್ನು ಕಳಿಸಿ, ತಾವು ಸ್ವತಃ ಕುರಂದವಾಡದಲ್ಲಿ ನೆಲೆಸಿದರು. ಪುಣೆಯಲ್ಲಿ ಈ ವಿಷಯ ಇತ್ಯರ್ಥವಾಗದೇ ನೆನೆಗುದಿಗೆ ಬಿತ್ತು. ಸದ್ಯ ಜೀವನಾಂಶಕ್ಕೆ ಖರ್ಚು ನೀಡುವ ಆಜ್ಞೆಯಾಗಬೇಕು. ಬಳಿಕ ಸಂಸ್ಥಾನವನ್ನು ಹಸ್ತಾಂತರಿಸಬೇಕೆಂದು ಹುಜೂರರ ಬಳಿಗೆ ವಿನಂತಿಸಿದಾಗ ೫೦೦೦ ರೂಪಾಯಿಯ ಖರ್ಚಿನ ವ್ಯವಸ್ಥೆಯಾಯಿತು. ಈ ಆಜ್ಞೆಯಂತೆ ೮–೧೦ ವರ್ಷಗಳವರೆಗೆ ನಗದು ಹಣವನ್ನು ಪಡೆದು ವೆಂಕಪ್ಪಯ್ಯ ಕುರಂದವಾಡದಲ್ಲಿ ನೆಲೆಸಿದನು.

೩) ಸನ್ ೧೨೧೦ ಫಸಲಿ ರೌದ್ರಿನಾಮ ಸಂವತ್ಸರೆ ಸುರುಸನ್ ಇಹಿದೇ ಮಯಾತೈನ ಅಲಫ ಪುಣೆಯಲ್ಲಿದ್ದಾಗ ಧಾಂದಲೆ ಶುರುವಾಗಿ ಸಂಸ್ಥಾನ ಕೈ ವಶಕ್ಕೆ ಬರದೆ ವೆಂಕಪ್ಪಯ್ಯ ಸಂಕಟದಲ್ಲಿ ಸಿಲುಕಿ ಕುರಂದವಾಡದಲ್ಲೇ ಉಳಿದುಕೊಂಡ. ಆ ಸಮಯದಲ್ಲಿ ಕರ್ನಾಟಕದಲ್ಲಿ ಧೋಂಡಜಿ ವಾಘನು ಗದಗ ಮುಂತಾದ ಠಾಣೆಯನ್ನು ವಶಪಡಿಸಿಕೊಳ್ಳುತ್ತಲಿದ್ದ. ಅವನನ್ನು ತಡೆದು ತನ್ನ ಡಂಬಳ ಠಾಣೆಯನ್ನು ವಶಪಡಿಸಿಕೊಂಡು ಮೂರು ತಿಂಗಳು ಈ ರಾಜ್ಯವನ್ನು ಉಪಭೋಗಿಸುತ್ತಲಿದ್ದ. ಆಗ ಹಜರತ ಜರಸೇಲ್ ವಸಲಿ ಸಾಹೇಬನು ವಾಘನ ಪಾರಿಪತ್ಯಕ್ಕಾಗಿ ಆಗಮಿಸಿದನು. ಆಗ ಬಾಪೂ ಸಾಹೇಬ ಮುಂತಾದವರು ದಾವೆಯಿಂದ ದೇಸಾಯಿಯ ಮೇಲೆ ಏನೇನೋ ತಪ್ಪು ಆರೋಪ ಹೊರಿಸಿ ವಾಘನ ಖಜಾನೆ ಮತ್ತು ಆಡಳಿತ ಸಚಿವ ಎಲ್ಲ ಡಂಬಳದಲ್ಲಿದೆ ಎಂದೆಲ್ಲ ಕಿವಿ ತುಂಬಿದಾಗ, ವೆಕಾಸುಫ ಸಾಹೇಬನು ಸೈನ್ಯ ಸಮೇತ ಡಂಬಳಗೆ ಬಂದು, ಠಾಣೆಯನ್ನು ವಶಪಡಿಸಿಕೊಂಡನು. ಸದರಿ ತಪ್ಪು ಆರೋಪದಿಂದಾಗಿ ವಾಘ ಅವರ ಖಜಾನೆಯು ಕೈ ತಪ್ಪಿ ಹೋಯಿತು. ಡಂಬಳದಲ್ಲಿ ಯಾರೂ ಇರಲಿಲ್ಲ. ನಾಯಿಕ ದೋಷಾರೋಪಕ್ಕೊಳಗಾಗಿ ನಿರ್ಗತಿಕನಾದ. ಆಗ ಕೋಟೆಯಲ್ಲಿ ವೆಂಕಪ್ಪಯ್ಯ ದೇಸಾಯಿಯಿದ್ದ. ಅವನಿಗೆ ಒತ್ತಾಯ ಮಾಡಿದನು. ಅವನು ಸೆಣಸಾಡಿದನು.

ಸನ್ ೧೨೧೦ ಫಸಲಿ ರೌದ್ರಿನಾಮೆ ಸಂವತ್ಸರ

೪) ಸನ್ ಮಜಕೂರು ಹಜರತ ವಸಲಿ ಸಾಹೇಬರು ನರಗುಂದದಲ್ಲಿ ವಾಸ್ತವ್ಯ ಮಾಡಿ ವಾಘ ಅವರ ಪಾರುಪತ್ಯ ಮಾಡಿ, ಸೈನ್ಯ ಸಮೇತ ಮರಳುವಾಗ ಸಂಸ್ಥಾನದ ಗುಮಾಸ್ತನಾದ ಭೀಮರಾವನು ಸೈನ್ಯವಿದ್ದಲ್ಲಿ ಹೋಗಿ ರಾಜಶ್ರೀ ವಿಷ್ಣೋಪಂತ ಬದಾಮಿ ಇವನ ಮೂಲಕ ಸಾಹೇಬರನ್ನು ಭೇಟಿಯಾಗಿ ಮಾಡಿಕೊಂಡ ವಿನಂತಿ ಏನೆಂದರೆ, ನಮ್ಮ ಜಮಿನ್ದಾರಿ ಸಂಸ್ಥಾನವನ್ನು ನಮಗೆ ನೀಡಿ ಉದ್ಧಾರ ಮಾಡಿ, ಮುಂದಿನ ಕಾರ್ಯದ ಬಗೆಗೆ ಆಜ್ಞೆ ಮಾಡಿ, ಮೊದಲಿನಿಂದ ನಡೆದು ಬಂದ ಪ್ರದೇಶವನ್ನೂ, ಆರ್ಥಿಕ ಸಹಾಯವನ್ನು ನೀಡಬೇಕೆಂದು ವಿಧವಿಧವಾಗಿ ವಿನಂತಿಸಿಕೊಂಡನು. ಆಗ ಸಾಹೇಬನು ಅನುಗ್ರಹಗೊಂಡು, ಸತ್ತ ದೇಸಾಯಿಯ ಮಡದಿಗೆ ದತ್ತು ಪುತ್ರ ಪಡೆದ. ಮಾಮೂಲಿಯಂತೆ ಸಂಸ್ಥಾನವನ್ನು ಮುನ್ನಡೆಸಿಕೊಂಡು ಹೋಗಲು ಅನುಮತಿ ನೀಡಿ ಸಾಹೇಬನು ಹೊರಟು ಹೋದನು. ಅನಂತರ ಭೀಮರಾವನು ವೆಂಕಪ್ಪಯ್ಯನ ಮಡದಿ ಮಧುರಾಬಾಯಿ ದೇಸಾಯಿಯ ಬಳಿಗೆ ಬಂದು ವಿಷಯವನ್ನು ಅರುಹಿ. ಸಂಸ್ಥಾನದ ಈ ಹಿಂದಿನ ರಿವಾಜಿನಂತೆ ದೇಸಾಯಿಯ ಸೋದರ ಬರಾದಕನ ೫–೬ ವರ್ಷದ ಮಗನನ್ನು ತಂದು ಸಾಕಿದರು. ಹಿಂದೂ ಪದ್ಧತಿಯಂತೆ ಅವನನ್ನು ದತ್ತಕ ಪಡೆದು ಸಿನಪ್ಪಯ್ಯನನನ್ನು ದತ್ತಕ ಮಗನನ್ನಾಗಿ ಮಾಡಿಕೊಂಡರು.

ಅದು ಸನ್ ೧೨೧೧ ಫಸಲಿ ದುರ್ಮುಖಿನಾಮ ಸಂವತ್ಸರ ಸುರುಸನ್ ಇಸನ್ನೆ ಮಯಾತೈನ ಅಲಫ

೫) ಸನ್ ೧೨೧೧ ಫಸಲಿ ಸುರುಸನ್ ಇಸನ್ನೆ ಮಯಾತೈನ ಮತ್ತು ಅಲಫ ದುರ್ಮತಿನಾಮ ಸಂವತ್ಸರದ ಕೊನೆಗೆ ಸಿನಪ್ಪಯ್ಯಾ ಮತ್ತು ಮಧುರಾಬಾಯಿಯವರು ಭೀಮರಾವ ತಿಮಾಜಿಯ ಕೈಗೆ ಸಂಸ್ಥಾನದ ಆಡಳಿತವನ್ನೆಲ್ಲ ವಹಿಸಿಕೊಟ್ಟು, ತಾವು ಡಂಬಳ ಸಂಸ್ಥಾನದ ಗದ್ದುಗೆಯ ಮೇಲೆ ಕೂತು, ಉಪಭೋಗಿಸಿ, ಯುದ್ಧವನ್ನು ಮಾಡುತ್ತ ವತನ ಇನಾಮ ವಗೈರ ಸಂಪಾದನೆ ಮಾಡಿದ ತಪಶೀಲು.

೬) ಬಾಪೂಸಾಹೇಬ ಗೋಖಲೆಯು ಸವಣೂರ ಪ್ರಾಂತದ ಸುಭೇದಾರನಾಗಿದ್ದಾಗ, ಬಾಬಾಸಾಹೇಬ ಪಟವರ್ಧನನು ೧೦–೧೨ ಸಾವಿರ ಸೈನ್ಯದೊಂದಿಗೆ ಏರಿ ಬಂದು, ಸವಣೂರ ಮುತ್ತಿಗೆ ಹಾಕಿ ಯುದ್ಧದಲ್ಲಿ ಗೋಖಲೆಯನ್ನು ಪರಾಭವಗೊಳಿಸಿ, ಕೋಟೆಯಲ್ಲಿ ಬಂಧಿಸಿಟ್ಟಾಗ, ನಮಗೆ ಗೋಖಲೆ ಬರೆದು ಕೊಟ್ಟ ಪತ್ರ ಈ ಕಾರ್ಯದಲ್ಲಿ ಸೈನ್ಯ ಸಹಿತ ಬಂದು ಸಹಾಯ ಮಾಡಬೇಕು' ಎಂದು ವಿಧವಿಧವಾಗಿ ಬೇಡಿಕೆ ಸಲ್ಲಿಸಿ ರಾಜಶ್ರೀ ಗೋವಿಂದಪಂತರನ್ನು ಡಂಬಳಗೆ

ಕಳಿಸಿದನು. ಆ ಸಮಯದಲ್ಲಿ ನಮ್ಮ ಸಚಿವನಾದ ಭೀಮರಾವನು ಸೈನ್ಯವನ್ನು ಸಂಗ್ರಹಿಸಿ, ೨೦೦೦ ಅಶ್ವದಳ ಮತ್ತು ಕಾಲ್ದಳ ೩೦೦೦ವರೆಗೆ ಸಂಗ್ರಹಿಸಿ, ಸವಣೂರಿಗೆ ತೆರಳಿ, ಬಾಬಾಸಾಹೇಬನ ಸೈನ್ಯದ ಜೊತೆಗೆ ಹೋರಾಡಿ, ಠಾಣೆಯಲ್ಲಿರುವ ಸಾಮಾನು ಸರಂಜಾಮನ್ನು ಸಾಗಿಸಿ, ಮೂರು ತಿಂಗಳು ಸದರಿ ಗೋಖಲೆಯ ಕಾರ್ಯಾಚರಣೆಗೆ ಸಹಕರಿಸಿದನು. ಆ ಕಾಲದಲ್ಲಿ ಲಕ್ಷ ರೂಪಾಯಿ ಖರ್ಚು ಮಾಡಿ, ಕಾರ್ಯಾಚರಣೆಯನ್ನು ಕೈಗೊಂಡು, ಗೋಖಲೆಯ ಸಂಸ್ಥಾನ ಶಾಶ್ವತವಾಗುಳಿಯವಂತೆ ಮಾಡಿದನು. ಅದನ್ನು ಕಂಡು ಗೋಖಲೆಯು ತುಂಬ ಸಂತೋಷಗೊಂಡು, ತನ್ನ ಸಂಸ್ಥಾನ ನಿಮ್ಮಿಂದಾಗಿ ಉಳಿಯಿತು ಎಂದೆಲ್ಲ ಹೊಗಳಿ ಆನೆ-ಒಂಟೆ ಮುಂತಾದ ಬೆಲೆ ಬಾಳುವ ವಸ್ತು-ಒಡವೆಯನ್ನು ಕಾಣಿಕೆಯಾಗಿ ನೀಡಿ, ಡಂಬಳ ಸಂಸ್ಥಾನದ ಸರಕಾರವನ್ನು ತನಗೆ ನೀಡಿ ಸನದು ಪತ್ರ ಕೊಟ್ಟರು. ಇದು ದಿಟವಾದುದು. ಸದರಿ ಕಾರ್ಯವು ಸನ್ ೧೨೧೨ ಫಸಲಿ ಸುರುಸನ್ ಸಲಾಸ ಮಯಾತೈನ್ ಮತ್ತು ಅಲಫ ದುಂದುಭಿ ನಾಮಸಂವತ್ಸರೆ.

೭) ಮೊಗಾರ ಮೀರ ಅಲಿಅಲಮ್ ಬಹಾದೂರನ ಬಳಿ ಎಷ್ಟೋ ದಿನ ಕೆಲಸ ಕಾರ್ಯ ಮಾಡಿ, ಅವನ ಕೃಪೆಯನ್ನು ಗಳಿಸಿ, ಕೊಪ್ಪಳ ತಾಲೂಕಿನ ಕಲಕೇರಾವನ್ನು ನಮ್ಮ ಸುಪರ್ದಿಗೆ ಒಪ್ಪಿಸಿ, ಇಸ್ತದ್ದಬೀಲದಿಂದಲೂ ಪ್ರಾಂತದ ಕಾರ್ಯವನ್ನು ನಿರ್ವಹಿಸುತ್ತಿರುವಾಗ ಅವನ ಬಗ್ಗೆ ಕೊಪ್ಪಳ ತಾಲೂಕಿನ ಮಾಮಲೇದಾರನಾದ ನಾಗನಾಥರಾವ ಎನ್ನುವ ವ್ಯಕ್ತಿಯು, ಎಲ್ಲ ರೀತಿಯಿಂದಲೂ ವಿರೋಧಿಸಿ ಯುದ್ಧವನ್ನು ಆರಂಭಿಸಿದನು. ಆಗ ಎರಡೂ ಪ್ರದೇಶ ಹಾಳಾಯಿತು. ಅನಂತರ ಹೈದರಾಬಾದ ಸರಕಾರದಿಂದ ಪೂರ್ವಜರಿಂದ ನಡೆದು ಬಂದಂತೆ ನಮ್ಮ ಹತ್ತಿರ ಕಲಕೇರಾ ತಾಲೂಕು ಶಾಶ್ವತವಾಗುಳಿಯಬೇಕೆಂದು ಗೊತ್ತುವಳಿ ಮಾಡಲಾಯಿತು. ಅಂದಿನಿಂದ ನಮ್ಮ ವಹೀವಾಟಿನಲ್ಲಿದ್ದ ತಾಲೂಕು ಸದ್ಯ ಸರಕಾರದ ಬಳಿಯಲ್ಲಿದೆ.

ಸದರಿ ತಾಲೂಕು ನಮ್ಮ ಹೆಸರಿಗಾಗಿರುವದು ಸನ್ ೧೨೧೪ ಫಸಲಿ.

೮) ಮೊಗಲರ ಕಾಲದಲ್ಲಿ ಕಲಕೇರಿ ಇಲಾಖೆಗಾಗಿ ಜಮೀನ್ದಾರರ ಮತ್ತು ಸರಕಾರದ ನಡುವೆ ಸಂಬಂಧ ಹದಗೆಟ್ಟಾಗ, ಉಭಯ ಪಕ್ಷಗಳಿಗೆ ಸಹಾಯ ಮಾಡಿದ ಬಳಿಕ ಮೊಗಲರ ತಾಲೂಕಿನಲ್ಲಿ ಕಲಕೇರಾ ಮುಂತಾದ ಗ್ರಾಮಗಳನ್ನು ಹೊಸದಾಗಿ ಸಂಪಾದಿಸಲಾಯಿತು. ಈಗ ಸದ್ಯಕ್ಕೆ ಅದು ಸರಕಾರಕ್ಕೆ ಸೇರಿದೆ. ಸದರಿ ಊರು ಸಂಪಾದನೆ ಮಾಡಿದ್ದು, ಸನ್ ೧೨೧೭ ಫಸಲಿ ಸುರಸನ್ ಮಯಾತೈನ ಮತ್ತು ಅಲಫ.

೯) ಶ್ರೀಮಂತ ರಾಜಶ್ರೀ ಬಾಜೀರಾವ ಸಾಹೇಬರು ಕರ್ನಾಟಕ ಪ್ರಾಂತಕ್ಕೆ ಆಗಮಿಸಿದಾಗ, ನಮ್ಮ ಭೀಮರಾವನೂ ಸಹ ವಾಸ್ತವ್ಯಕ್ಕೆ ಹೋಗಿ ಶ್ರೀಮಂತನ ಭೇಟಿ ಮಾಡಿ, ಸನ್ಮಾನ ಕಾಣಿಕೆಯನ್ನು ಪಡೆದನು. ಕರ್ನಾಟಕದ ಯಾತ್ರೆಯ ಕಾಲಕ್ಕೆ ಶ್ರೀ ಕುಮಾರಸ್ವಾಮಿಯ ದರುಶನ ಪಡೆದು, ಬಾಜೀರಾವನು ಮರಳಿ ಪುಣೆಗೆ ಹೋಗುವವರೆಗೂ, ಸೈನ್ಯಸಹಿತ ಅವರ ಜೊತೆಗಿದ್ದು, ಬಾಜೀರಾವನ ಕೃಪೆಗೆ ಪಾತ್ರನಾಗಿ, ಸದಾಶಿವ ಮಾಣಕೇಶ್ವರನು ವಿದಾಯ ಹೇಳಿದನು. ಬಳಿಕ ಸ್ವ-ತಾಣಕ್ಕೆ ಬಂದು, ಸಂಸ್ಥಾನವನ್ನು ಉಪಭೋಗಿಸುತ್ತ ವರ್ಷದ ೩೨,೫೦೦ ರೂಪಾಯಿ ಸರಕಾರಿ ಕರವನ್ನು ತುಂಬಿ ಸನ್ ೧೨೨೦ ಫಸಲಿ ವರ್ಷಗಳವರೆಗೆ ಡಂಬಳ ಗದ್ದುಗೆಯನ್ನು ಅನುಭವಿಸಿದನು.

೧೦) ಆ ಬಳಿಕ ಸನ್ ೧೨೨೦ ಫಸಲಿ ಸುರುಸನ್ ಇಹಿದೇ ಅಶದ ವರ್ಷ ಬಾಪೂ ಗೋಖಲೆಯು ನವಲಗುಂದಕ್ಕೆ ಮಗನ ಮದುವೆ ಮಾಡಲೆಂಬ ಕಾರಣಕ್ಕಾಗಿ ಪುಣೆಯಿಂದ ಹೊರಟು ಬಂದರು. ನವಲಗುಂದಕ್ಕೆ ಬಂದು ಮಗನ ಲಗ್ನ ಮಾಡಿದನು. ಬಳಿಕ ನಮ್ಮ ಸಚಿವ ಭೀಮರಾವನಿಗೆ ಸಲಹೆ ನೀಡಿ, ವಂಚಿಸಿ, ಒಮ್ಮೆಲೆ ಮೋಸತನದಿಂದ ಗದಗದಲ್ಲಿ ಬಂಧಿಸಿದನು. ಅದರ ಕಾರಣ ಹೀಗಿದೆ- ನಿಮ್ಮ ಪೇಟೆಯ ಜಮೀನ್ದಾರನು ಪೇಶ್ವೆಯನ್ನು ಭೇಟಿ ಮಾಡಿ, ಬಟ್ಟೆ, ರತ್ನವನ್ನು ಕಾಣಿಕೆಯಾಗಿ ನೀಡಿದನು. ಪೇಶ್ವೆಯ ಬಳಿಯಲ್ಲಿ ಅವನ ಬಡ್ತಿಯಾದರೆ ನಿಮ್ಮನ್ನು ಸ್ಥಳಾಂತರಿಸಬಹುದು' ಎಂದೆಲ್ಲ ಏನೇನೋ ವ್ಯವಸ್ಥೆ ಮಾಡಿ ಗೋಖಲೆ ದ್ವೇಷದಿಂದ ಭೀಮರಾವನನ್ನು ಬಂಧಿಸಿದನು. ಸವದತ್ತಿ ಕೋಟೆಯಲ್ಲಿ ಇರಿಸಿದನು. ಬಾಪೂ ಸಾಹೇಬ ಗೋಖಲೆಯ ಸೈನ್ಯ ಡಂಬಳಕ್ಕೆ ಬಂದು ಕೋಟೆಗೆ ಮುತ್ತಿಗೆ ಹಾಕಿ, ಬಲವಂತದಿಂದ ಸಂಪೂರ್ಣ ವತನಗ್ರಾಮ ವಗೈರೆ ತಾಣಗಳನ್ನು ವಶಪಡಿಸಿಕೊಂಡು, ಸ್ವಂತ ಖರ್ಚಿಗಾಗಿ ೧೫,೦೦೦ ರೂಪಾಯಿ ಸರಂಜಾಮು ಮತ್ತು ಭೀಮರಾವನ ಬಂಧು ಮತ್ತು ಮಗಳಿಗೆ ೪೦೦೦ ರೂಪಾಯಿ ಮತ್ತು ಗುಮಾಸ್ತನಿಗೆ ೧೫೦ ಮರುಭೂಮಿಯನ್ನು ನೀಡಿ, ನೇಮಕಾತಿ ಪತ್ರ ನೀಡಿ, ಸೊರಟೂರಗೆ ತಂದಿಟ್ಟನು. ಅದು ಸನ್ ೧೨೨೦ ಫಸಲಿ ಸುರುಸನ್ ಇಹಿದ್ದೆ ಅಶರಮಿಯಾತೈನ ಮತ್ತು ಅಲಫ.

೧೧) ಸನ್ ೧೨೨೦ ಫಸಲಿಯಿಂದ ಸಿನಪ್ಪಯ್ಯನು ಸೊರಟೂರದಲ್ಲಿ ವಾಸಿಸಿ ಸದರಿ ಖರ್ಚನ್ನು ನೇಮೂಣುಕಿಯಂತೆ ಉಪಭೋಗಿಸುತ್ತಲಿದ್ದನು. ಆಗ ಬಾಪೂ ಸಾಹೇಬನು ಪುಣೆಗೆ ತೆರಳಿ. ಡಂಬಳ ಸಂಸ್ಥಾನದ ಠಾಣೆಯನ್ನು ತಾನು ತೆಗೆದುಕೊಂಡಿದ್ದು. ಆ ಜಿಲ್ಲೆಯ ಸರಂಜಾಮಿಗಾಗಿ ಸೈನ್ಯದ ಖರ್ಚಿಗಾಗಿ ವ್ಯವಸ್ಥೆ

ಮಾಡಬೇಕೆಂದು ಪೇಶ್ವೆಗೆ ಅರುಹಿದನು. ಆಗ ರಾಜಶ್ರೀ ಚಿಂತೋಪಂತ ದೇಶಮುಖರು ನೀಡಿದ ಉತ್ತರವೇನೆಂದರೆ–'ಜಮೀನ್ದಾರಿ ವತನವನ್ನು ಹರಣ ಮಾಡಬಹುದು. ದೇಸಾಯಿಯವರು ಕಾಣಿಕೆಯನ್ನು ಸ್ವೀಕರಿಸಿ, ಯಾವಾಗ ಸರಕಾರದ ಸೇವೆಯಲ್ಲಿ ಸೇರಿಕೊಳ್ಳುತ್ತಾರೆ. ಆಗ ಸೈನ್ಯವನ್ನು ದೂರ ಮಾಡಲಾಗುವುದು' ಎಂದು ಉತ್ತರಿಸಿ ಸೈನ್ಯದ ಮಂಜೂರಿಗಾಗಿ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಅನಂತರ ಭೀಮರಾವನು ಆಂತರಿಕ ಸಂಸ್ಥಾನದ ಪ್ರಕರಣಕ್ಕಾಗಿ ಪೇಶ್ವೆಯನ್ನು ಪರಸ್ಪರ ಸಂಧಾನ ಭೇಟಿ ಕೈಕೊಂಡನು. ಈ ಸುದ್ಧಿ ಗೋಖಲೆಯ ಕಿವಿಗೆ ಬಿತ್ತು. ಸದಾಶಿವ ಮಾಣಕೇಶ್ವರನೂ ಡಂಬಳ ವಿಷಯದಲ್ಲಿ ಭೀಮರಾಮನನ್ನು ಹುಜೂರರ ಬಳಿಗೆ ಕರೆಯಿಸಲಿದ್ದೇವೆ ಎಂದು ಗೋಖಲೆಗೆ ಹೇಳಿದಾಗ, ಹೆದರಿ ಅವನು ಹುಜೂರರ ಬಳಿಗೆ ಬಂದರೆ ತನ್ನ ಅಪಯಶಸ್ಸಿಗೆ ಕಾರಣವಾಗಬಹುದೆಂದು ಮನಗಂಡು ಭೀಮರಾವನನ್ನು ಕೊಲ್ಲಿಸಬೇಕೆಂಬ ಯೋಜನೆಯನ್ನು ಹಾಕಿ ಸವದತ್ತಿಯಲ್ಲಿ ವಾಸ್ತವ್ಯ ಮಾಡಿದಾಗ ವಿಷಹಾಕಿ ಕೊಲ್ಲಲಾಯಿತು. ಈ ಭೀಮರಾವನ ಜನ್ಮಹತ್ಯೆಯ ಪಾಪವು ಗೋಖಲೆಯ ಮಗನಿಗೆ ಅಂಟಿಕೊಂಡಿತು. ಆ ಹೊತ್ತಿನಿಂದ ಗೋಖಲೆಯ ಮಗನಿಗೆ ಬ್ರಹ್ಮಹತ್ಯೆಯ ದೆವ್ವ ಅಂಟಿಕೊಂಡಿತು. ಸರ್ವನಾಶ ಮಾಡುತ್ತೇನೆ ಎಂದು ಪ್ರತಿದಿನ ಸ್ವತಃ ಗೋಖಲೆ ಬಾಬಾಸಾಹೇಬ ಬಡಬಡಿಸುತ್ತಲಿದ್ದ. ಇತ್ತೀಚೆಗೆ ನಾವು ಪೇಶ್ವೆಯರ ಬಳಿಗೆ ಹೋಗಿ ಸಂಸ್ಥಾನದ ಪ್ರಕರಣವನ್ನು ರದ್ದುಪಡಿಸಬೇಕು. ಗೋಖಲೆಯವರು ಭೀಮರಾವನನ್ನು ಕೊಂದಂತೆ ತಮ್ಮನ್ನು ಕೊಲ್ಲಬಹುದು ಎಂದು ಜೀವದ ಆಶೆಯಿಂದ 'ಜೀವಂ ಪಾಣಿ ಪಶ್ಯತಿ' ಎಂಬ ಶಾಸ್ತ್ರದ ಹೇಳಿಕೆಯಂತೆ ಗೋಖಲೆಯ ಬಗೆಗೆ ಮುಂಜಾಗರೂಕತೆ ವಹಿಸಿ ಸಂಸ್ಥಾನದ ಬಗೆಗೆ ಪ್ರಯತ್ನ ಮಾಡಲಿಲ್ಲ. ಏಳು ವರ್ಷ ಅವರ ಅಧಿಕಾರ ಸನ್ ೧೨೨೭ ಫಸಲಿ ಮಿನಹೂ ಇರುವವರೆಗೆ ಯಾವ ನೇಮೂಣಕಿ ಮಾಡಿ ಕೊಟ್ಟರೋ, ಅದನ್ನೇ ಉಪಭೋಗಿಸುತ್ತ ಸಿನಪ್ಪಯ್ಯ ಜೀವನ ಸಾಗಿಸಿದನು.

೧೨) ಸಾಂಪ್ರತ ಕಂಪನಿ ಅಧಿಕಾರ ೧೨೨೭ ಫಸಲಿಯಿಂದ ಸಂಸ್ಥಾನವನ್ನು ಸುಪುದರ ಮಾಡಿ ಕೊಡಬೇಕೆಂದು ಜರನೆಲ ಮನರೋಲ ಸಾಹೇಬ ಮತ್ತು ಎಲಿಫನ್‌ಸ್ಟಾನ್ ಸಾಹೇಬ ಹಾಗೂ ಚಾಪ್ಲೇನ ಸಾಹೇಬರ ಬಳಿಗೆ ನಿವೇದನೆ ಮಾಡಿಕೊಳ್ಳಲಾಯಿತು. ಅದರ ಬಗೆಗೆ ವಿಚಾರಣೆ ನಡೆದು ಸದ್ಯದ ಖರ್ಚಿಗಾಗಿ ಸರಕಾರವು ಪೆನ್ಶನ್‌ನ್ನು ಮಂಜೂರು ಮಾಡಿದ ರಕಮು ೩೦೦೦ ರೂಪಾಯಿ. ಸನ್ ೧೨೨೯ಫಸಲಿ ರುಸನ ಅಳರಿನಮಯಾತ್ಯೆನ ಅಲಫ.

ಈ ರೀತಿ ಸದರಿ ವಂಶದವರಿಗೆ ಸಂಸ್ಥಾನ ಲಭಿಸಿದ ಕೈಫಿಯತ್ ಬರೆಯಲಾಗಿದೆ. ಸದ್ಯ ಜಯಂತಿಬಾಯಿ ವೆಂಕಟಾದ್ರಿ ಶ್ರೀನಿವಾಸ ಬಹಾದೂರ ದೇಸಾಯಿ ಸಂಸ್ಥಾನವನ್ನು ಸನ್ ೧೨೨೯ ಫಸಲಿ ವಿಷ್ಯಮನಾಮ ಸಂವತ್ಸರ ಚೈತ್ರ ಮಾಸದಿಂದ ಸದರಿ ಸಂಸ್ಥಾನವನ್ನು ನೇಮಣೂಕಿಯಂತೆ ಉಪಭೋಗಿಸುತ್ತಲಿದ್ದಾನೆಂದು ಬರೆದು ಕೊಟ್ಟ ಕೈಫಿಯತ್ತು. ರುಜು ತಾರೀಖ ಥ ೧೦ ಮಾಹೇ ಅಕ್ಟೋಬರ ಸನ್ ೧೨೩೧ ಫಸಲಿ ವಿಷ್ಯ ಸಂವತ್ಸರೆ ಸುರುಸನ್ ಇಸನ್ನೆ ಆಶರಿನ್ ಮಯಾತೈನ-ಅಲಫ ಮಾಹೇ ಮೋಹರಮ್.

ರುಜು ಜಯಂತಿಬಾಯಿ ವೆಂಕಟಾದ್ರಿ ಶ್ರೀನಿವಾಸ ಬಹಾದೂರ ದೇಸಾಯಿ.

ಬಾಗಲಕೋಟಕರ ದೇಸಾಯಿ

ವಿಕ್ರಮನಾಮ ಸಂವತ್ಸರೆ, ಚೈತ್ರ ವದ್ಯ ೧೪ ತಾಲೂಕಿನ ಬಾಗಲಕೋಟಿನ ದೇಸಾಯಿ, ನಾಡಗೌಡ, ಮಿತ್ರ ದೇಶಪಾಂಡೆಯವರು ಬರೆದು ನೀಡಿದ ಕೈಫಿಯತ್ ಹೀಗಿದೆ– ಸುರುಸನ್ ೧೨೨೯ ಫಸಲಿ, ಸಾಹೇಬರ ಹುಕ್ಕುಂ ಮಾಡಿದ ಆಜ್ಞೆ ಏನೆಂದರೆ– ಬಾಗಲಕೋಟ ಕೋಟೆ ಕಟ್ಟಿದ್ದು ಯಾರು, ಕಟ್ಟಿ ಎಷ್ಟು ವರ್ಷವಾಯಿತು. ಯಾವ–ಯಾವ ಬಾದಶಾಹರ ಅಧೀನದಲ್ಲಿತ್ತು. ಆ ಸಮಯದಲ್ಲಿದ್ದ ವಚನಕಾರರು ಯಾರು, ಯಾರ–ಯಾರ ಕಾಲದಲ್ಲಿ ಯಾರ ಯಾರದ್ದು ಜಪ್ತಿಯಾಯಿತು. ಎಂಬ ವಿಷಯದ ಬಗೆಗೆ ನಾನಾರಾವ ಮಾನುಲೇದಾರರು ನಮಗೆ ಕೇಳಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟ ತಪಶೀಲು–

೩೬ ರಾಜಾರಾಮ ನರಪತಿಯವರ ಬಳಿಗೆ ವಿಜಯನಗರ ಆರಂಭದ ಶಕೆ ೧೩೬೨ ರೌದ್ರನಾಮ ಸಂವತ್ಸರದಿಂದ ಶಕೆ ೧೪೯೭ ಮನ್ಮಥನಾಮ ಸಂವತ್ಸರದವರೆಗೆ ತಿಮ್ಮಪ್ಪನು ಪ್ರಧಾನಿಯಾಗಿದ್ದ. ಅವನ ಬಳಿ ರಾಯಬಾಗ ಎಂಬವನಿದ್ದ. ಸರಪತಿಯ ಸವಾರಿಯ ತೋರಗಲ್‌ಗೆ ಬಂದ ಸಮಯದಲ್ಲಿ ಕದರೂರ್ ಉರ್ಫ್ ಹವೇಲಿಯಲ್ಲಿಯ ಕೆಲಸ ಕಾರ್ಯವನ್ನು ಹೇಳಿ, ಕೋಟೆ ಕಟ್ಟಲು ಆಜ್ಞೆ ಮಾಡಿದರು. ಈ ಕಾರಣಕ್ಕಾಗಿ ಅವನು ಕದರೂರಿನ ಹವೇಲಿಯನ್ನು ಕೆಡವಿ, ಅದನ್ನು ಬಿಟ್ಟು ಬೇರೆ ಕಡೆ ಕಟ್ಟುವದು ಸಾಧ್ಯವಿರದ್ದರಿಂದ ಅಲ್ಲೇ ಶಕೆ ೧೪೯೦, ವಿಲಂಬನಾಮ ಸಂವತ್ಸರಿಯಂದು ಶುರು ಮಾಡಿ ಕೋಟೆ ಕಟ್ಟಿ ಮಾರುಕಟ್ಟೆಯ ವಸಾಹತನ್ನು ಆರಂಭಿಸಿದನು. ಕೋಟೆಗೆ ಬಾಗಲಕೋಟೆಗೆ ಎಂದು ಹೆಸರಿಸಿ ಅಂದಿನಿಂದ ಬಾಗಲಕೋಟೆ ಪ್ರದೇಶವೆಂದು ಕರೆಯಲಾಗುತ್ತಿದೆ. ಆಗ ಜಮೀನ್ದಾರನು ವಿಜಯನಗರದ ನರಪತಿಯ ಬಳಿಗೆ ಹೋಗಿ ವಿನಂತಿಸಿಕೊಂಡಿದ್ದೇನೆಂದರೆ–ಕದರೂರ್ ಉರ್ಫ್ ತೋರಗಲ್ ಪ್ರದೇಶದಲ್ಲಿ ನಿಬಿಢವಾದ ಕಾಡು ಬೆಳೆದಿದೆ. ಮಹಾರಾಜರು ನಮಿಗಡನ್ನು ಹೊಸದಾಗಿ ಇನಾಮ ನೀಡಿದ್ದಾರೆ. ಭೂಮಿಯನ್ನು ಫಲವತ್ತುಗೊಳಿಸಿ, ಪ್ರದೇಶಕ್ಕೊಂದು ಆಕಾರವನ್ನು ತಂದು ಕೊಡುತ್ತಾನೆ ಎಂದನು. ಇದರಿಂದ ಸರಕಾರಕ್ಕೆ ಆಗುವ ಲಾಭವನ್ನು ಮನಗಂಡ ಶಕೆ ೧೩೭೫ ದ್ರಮುಖನಾಮ ಸಂವತ್ಸರದಂದು ವತನವನ್ನು ಕರಾರು ಮಾಡಿ ಕೊಡಲಾಯಿತು.

ಒಟ್ಟೂ ನರಪತಿಯ ೩೬ ವರ್ಷ ರಾಜ್ಯಾವಾಳಿದನು. ಮುಂದೆ ದಿಲ್ಲಿಯ ಬಾದಶಾಹನ ಸೈನ್ಯ ಬಂದು ಅವರಿಬ್ಬರಲ್ಲಿ ಕಾಳಗ ಏರ್ಪಟ್ಟಿತ್ತು. ಅವರು ನರಪತಿಯ ರುಂಡವನ್ನು ಕತ್ತರಿಸಿ ಒಯ್ದರು. ಆ ದೌಲತ್ತು ಮುಳುಗಿಹೋಯಿತು.

೯. ಬಿದರ ಬಾದಶಾಹಾ ಸುಲ್ತಾನ ಮಹಮ್ಮದ ಅಲಿಯು ಪೈವಸ್ತಿ ಸನ್ ೮೮೬ ಫಸಲಿ ಶಕೆ ೧೩೭೮ ದುರ್ಮುಖಿನಾಮ ಸಂವತ್ಸರದಿಂದ ಸನ್ ೮೯೪ ಫಸಲಿ ಶಕೆ ೧೪೦೬ ಕ್ರೋಧಿನಾಮ ಸಂವತ್ಸರವರೆಗೆ ರಾಜ್ಯವಾಳಿದನು. ನರಪತಿಯ ಕಾಲದಿಂದ ನಡೆದು ಬಂದಂತೆ ಒಟ್ಟೂ ವತನವನ್ನು ಉಪಭೋಗಿಸಲಾಯಿತು.

ಸದರಿ ಬಾದಶಾಹನು ವಿಜಾಪುರ ಕೋಟೆಯನ್ನು ಕಟ್ಟಿ ಅಲ್ಲಿ ಹೋಗಿನೆಲೆಸಿದನು. ೨೦೦. ಇಸುಫಖಾನ ಗೋಗಿ ಬಾದಶಾಹ ವಿಜಾಪುರ ರಾಜ್ಯವಾಳಿದನು. ಅಲ್ಲಿಂದ ಸನ್ ೮೯೫ ಫಸಲಿ ವಿಶ್ವಾವಸುನಾಮ ಸಂವತ್ಸರದವರೆಗೆ ಸುಲ್ತಾನ ಸಿಕಂದರ ಬಾದಶಾಹಾ ದೌಲತ್ ಕೊನೆಯವರೆಗೆ ಸನ್ ೧೦೯೫ ಫಸಲಿ ಶಕೆ ೧೬೦೭ ಕ್ರೋಧನಾಮ ಸಂವತ್ಸರ ಒಟ್ಟು ವರ್ಷ ೨೦೦.

೨೩. ಬಾದಶಾಹ ಇಸ್ಮಾಯಿಲ್ ಗೋಗಿ ಸನ್ ೮೭೫ ಫಸಲಿಯಿಂದ ಸನ್ ೯೧೭ ಫಸಲಿ. ಒಟ್ಟು ವರ್ಷ ೨೩.

೧೯. ಬಾದಶಾಹ ಇಸ್ಮಾಯಿಲ್ ಗೋಗಿ ಸನ್ ೯೧೮ ಫಸಲಿವರೆಗೆ ಸನ್ ೯೩೭ ಫಸಲಿ ಮಿನಹು ಒಟ್ಟೂ ವರ್ಷಹಿಂದಿನ ಇನಾಮಿನಂತೆ ಸದರಿ ಪತನದಾರ ಮುಂದುವರೆಯಿತು.

೨೬. ಬಜ್ಜಾಮ ಗೋಗಿ ಬಾದಶಾಹಾ ಮತ್ತು ಮಳುಖಾ ಬಾದಶಾಹಾ ಅಲ್ಲಿಂದ ಸನ್ ೯೩೭ ಫಸಲಿಯಿಂದ ಸನ್ ೯೬೩ ಫಸಲಿ. ಒಟ್ಟು ವರ್ಷ. ಹಿಂದಿನ ಇನಾಮ ಸದರಿ ವತನದಾರಂತೆ ಮುನ್ನಡೆಯಿತು.

೨೩. ಅಲಿ ಆದಿಲ್‌ಶಾಹ ಬಾದಶಾಹ ದೊಡ್ಡ ಬಂಡುಕೋಎ ಸನ್ ೯೬೪ ರಿಂದ ೯೮೭ ಮತ್ತು ಒಟ್ಟೂ ವರುಷ. ಆ ಸಮಯದಲ್ಲಿ ಬಾರಗಿದೇವಿ ನಾಯಿಕ್ ಮತ್ತು ಮಲಿ ನಾಯಿಕ್ ಇವರ ಬಳಿ ಬಾಗಲಕೋಟೆಯಿತ್ತು. ಬಾಗಲಕೋಟೆಯ ಕೋಟೆ ಚಿಕ್ಕದಾಗಿದೆ. ಅದನ್ನು ನೆಲಸಮ ಮಾಡಿ ಮಜಭೂತಾದ ಕೋಟೆಯನ್ನು ಕಟ್ಟಬೇಕೆಂದು ಸನ್ ೯೭೫ರಲ್ಲಿ ಆಜ್ಞೆ ಮಾಡಲಾಯಿತು. ಹೀಗಾಗಿ ಉಭಯತ ನಾಯಿಕರು ಕೋಟೆಯನ್ನು ಕಟ್ಟಲು ಆರಂಭಿಸಿ ವಿಜಾಪುರ ಬಾದಶಾಹನ ಬಳಿಗೆ ಇಬ್ಬರು ನಿಗೂಢಚಾರರನ್ನು ಕಳಿಸಿದನು. ಅವರು ಮಧ್ಯಾಹ್ನ ಹೋಗಿ ತಲುಪಿ ವಿಜಾಪುರ ದೊರೆಗೆ ಪತ್ರ ನೀಡಿ ಸಂದೇಶವನ್ನು ತಲುಪಿಸಿದರು. ಆಗ ಬಾದಶಾಹನು ಬಾಗಲಕೋಟೆಯ ಎಷ್ಟು ಕೋಸು ದೂರದಲ್ಲಿದೆ? ಎಂದು ಕೇಳಿದಾಗ ಅವರು ಇಪ್ಪತ್ತು ಕೋಸು (೪೦ ಮೈಲು) ಎಂದರು. ಆಗ ಬಾದಶಾಹನು ವಿಜಾಪುರ ಸನಿಹದಲ್ಲಿದೆ. ಭದ್ರಕೋಟೆ ಕಟ್ಟಬೇಕಿಲ್ಲ. ಕಚ್ಚಾ ಕೋಟೆಯನ್ನು ಕಟ್ಟಿದರೆ ಸಾಕು ಎಂದು ನಾಯಿಕರಿಗೆ ಆಜ್ಞೆ ಮಾಡಿದನು. ಈ ಕಾರಣದಿಂದ ನಾಯಿಕರು ಕಚ್ಚಾ

(ಹಸಿ) ಕಟ್ಟಡದ ಕೋಟೆಯನ್ನು ಕಟ್ಟಿದರು. ಆಗ ಜಮೀನ್ದಾರರು ಇನಾಮ ಭೂಮಿಯನ್ನು ಉಪಭೋಗಿಸುತ್ತ ಬಂದಿರುತ್ತಾರೆ.

೪೭. ಇಬ್ರಾಹಿಂ ಆದಿಲ್‌ಶಾಹಾ ಜಗದ್ಗುರು ಬಾದಶಾಹ ಸನ್ ೯೮೭ ಫಸಲಿಯಿಂದ ಸನ್ ೧೦೩೪ ಫಸಲಿವರೆಗೆ ಇನಾಮ ಮುಂದುವರೆಯಿತು.

೩೦. ಸುಲ್ತಾನ ಮಹಮ್ಮದ ಬಾದಶಾಹಾ ಸನ್ ೧೦೩೪ ರಿಂದ ೧೦೬೯ರ ವರೆಗೆ ಇನಾಮದಾರ ಬಳಿಗೆ ಇನಾಮ ಮುಂದುವರೆಯಿತು.

೧೯. ಅಲಿ ಆದಿಲಶಹಾ ಬಾದಶಹಾ ಸನ್ ೧೦೬೪ ರಿಂದ ೧೦೮೨ ರವರೆಗೆ ಇನಾಮ ಮುಂದುವರೆಯಿತು.

೧೩. ಸುಲ್ತಾನ ಸಿಕಂದರ ಬಾದಶಹಾ ಸನ್ ೧೦೮೨ರ ಒಟ್ಟೂ ವರುಷ.

ಒಟ್ಟೂ ೨೦೦ ವರುಷ ವಿಜಾಪುರ ಬಾದಶಹಾನು ರಾಜ್ಯವಾಳಿದನು. ಅನಂತರ ದಿಲ್ಲಿ ಗದ್ದುಗೆಯ ಬಾದಶಹಾನು ಸೈನ್ಯ ಸಮೇತ ಬಂದು ಸದರಿ ಸುಲ್ತಾನ ಸಿಕಂದರ ಬಾದಶಹಾನನ್ನು ಮುಗಿಸಿದನು. ಸನ್ ೧೦೮೬ ಫಸಲಿ.

೨೧. ಆಲಮಗಿರಿ ಬಾದಶಹಾ ದಿಲ್ಲಿ ಗದ್ದುಗೆ ಸನ್ ೧೦೮೬ ರಿಂದ ೧೧೧೬ ವರೆಗಿನ ಒಟ್ಟು ವರ್ಷ.

೪೯. ಸವಣೂರಕರ ನವಾಬ್‌ರು ಮೊಖಾರ ಹಕ್ಕಿನಿಂದ ರಾಜ್ಯವಾಳಿದನು. ೧೧೧೭–೧೧೬೫ ವರೆಗೆ ಒಟ್ಟೂ ೪೯ ವರ್ಷ.

ಒಟ್ಟೂ ೪೯ ವರ್ಷಗಳ ಕಾಲ ಮೋಖ್ಯಾರದಿಂದ ಸಂಪತ್ತ–ರಾಜ್ಯ ಅನುಭವಿಸಿದ ಬಳಿಕ ೧೧೬೫ರಲ್ಲಿ ಶ್ರೀಮಂತ ಬಾಳಾಜಿ ಬಾಜೀರಾವ ಮತ್ತು ಅವನ ಬಂಧು ಸದಾಶಿವರಾವ ಚಿಮಣಾಜಿಯವರು ಸೈನ್ಯ ಸಹಿತ ಬಂದು ಬಾಗಲಕೋಟೆಗೆ ಮುಕ್ಕಾಲು ವಾರಗಳವರೆಗೆ ಮುತ್ತಿಗೆ ಹಾಕಿದರು. ಬಳಿಕ ಕಿಲ್ಲೆದಾರ ಮುಂತಾದ ಜನರು ಸಮಾಲೋಚನೆ ಮಾಡಿ ಸವಣೂರಿಗೆ ಹೋದರು. ಅದೇ ಕಾಲಕ್ಕೆ ಶ್ರೀಮಂತ ಪೇಶ್ವೆಯವರ ಠಾಣೆಯ ಬಾಗಲಖೋಟೆ ಶಾಶ್ವತವಾಯಿತು.

೬೩. ಪೇಶ್ವೆ ಬಾಳಾಜಿ ಬಾಜೀರಾವ ಆರಂಭದ ಸನ್ ೧೧೬೫ ರಿಂದ ೧೨೨೭ವರೆಗಿನ ಕಾಲ. ಬಾಜೀರಾವ್ ರಘುನಾಥ ಪ್ರಧಾನವರೆಗೆ ಒಟ್ಟೂ ವರ್ಷ ೫೬೩.

ಒಟ್ಟು ೬೩ ವರ್ಷ ಉಪಭೋಗಿಸಿದರು. ಅನಂತರ ಪುಣೆಯ ಶ್ರೀಮಂತ ರಾಜಶ್ರೀ ಪೇಶ್ವೆಯವರಿಗೂ ಕಂಪನಿ ಸರಕಾರದವರಿಗೂ ಯುದ್ಧ ಜರುಗಿತು. ಆ

ಸಮಯದಲ್ಲಿ ಪುಣೆಯನ್ನು ತೊರೆದರು. ಬಳಿಕ ಜನರಲ್ ಮೆಂಡೊಲ್ ಸಾಹೇಬರು ಸೈನ್ಯ ಸಹಿತ ಆಗಮಿಸಿ ಬಾದಾಮಿಗೆ ಮುತ್ತಿಗೆ ಹಾಕಿ, ದಿಗ್ಬಂಧನ ಮಾಡಿ, ದಂಡೆತ್ತಿ ಹೋಗಿ ಕೋಟೆಯನ್ನು ಹಸ್ತಗತ ಮಾಡಿಕೊಂಡರು. ಈ ಸುದ್ದಿ ಬಾಗಲಕೋಟಕರ ಕಿಲ್ಲೆದಾರ ವಗೈರೆಗಳ ಕಿವಿಗೆ ಬಿದ್ದು ಮಾಘ ಶುಕ್ಲ ೧೪ ರಂದು ಕಿಲ್ಲೆದಾರ, ಮತ್ತು ಜನರು ಮತ್ತು *** ಕೋಟೆಯನ್ನು ಬಿಟ್ಟು ಹೊರಟ.

೨. ಕಂಪನಿ ಸರಕಾರವು ಇಸವಿ ಸನ್ ೧೨೨೭ ಫಸಲಿ ಮಾಘ ವದ್ಯರಂದು ಜನರಲ್ ಮೆಂಡ್ರೋಸ್‌ನನ್ನು ಕಳಿಸಿ ಕೋಟೆಯನ್ನು ಬಂದೋಬಸ್ತ ಮಾಡಿ ನಾನಾಜೀರಾವ ಅವರಿಗೆ ವಿಷಯವನ್ನು ಅರುಹಿದರು. ಅಲ್ಲಿಂದ ಸನ್ ೧೨೨೯ ಫಸಲಿವರೆಗೆ ಒಟ್ಟೂ ವರ್ಷ ಎರಡು.

ಮುಸ್ಲೀಮ್ ನವಾಬರು

೨೬

ಸವಣೂರಕರ ನವಾಬ್

(ಅ)

ಸಾಹೇಬ ಮುಷಫಕ್‌ಮೊಕರಮ್ ಮೆಹೆರಬಾನ್ ಅಲತಾಫ್ ಫರ್ಮಾಯ ಬೇಗಿಕಾ ಹೆನ್ರಿ ಬ್ರೌನ್ ಸಾಹೇಬ ಬಹಾದೂರ ಏಜಂಟ್ ಜಿಲ್ಲಾ ದಕ್ಷಣ ದಾಮ ಆಷಫಕ್.

ಆ ಜ್ಯಾನಿಬ್ ನವಾಬ ಅಬ್ದುಲ ದಲೇಲಬಾ ದಲೇರ ಜಂಗ್ ಬಹಾದೂರ ಸಾವನೂರ ಸಲಾಮ್ ಬಾದಜ ಸಲಾಮ್ ಖೈರ್ ಮತ್ತು ಷೌಕ್ ಮುಲಾಕಾತ ಬಹುಜತ ಆಯಾತ ಮಷಹೀದ ಜಮೀರ ಮುನೀರ ಗರ್ದಾನಿದಾಕೆ ಆಹೇದ. ಛಖಂ ಮಾಹೇ ಜಿಲ್ಕಾದ ಸನ್ ೧೨೬೭ ಹಿಜರಿ, ದಿನಾಂಕ ೨೭ ಸಪ್ಟಂಬರ್ ಸನ್ ೧೮೫೧ ಇಸವಿವರೆಗೆ ಇಲ್ಲಿಯ ಸುದ್ದಿ ಸಮಾಚಾರವನ್ನು ಅರಿತುಕೊಂಡು ಆ ಸಾಹೇಬರು ತಮ್ಮ ಕ್ಷೇಮ ಸಮಾಚಾರವನ್ನು ಸದಾ ತಿಳಿಸುತ್ತಿರಬೇಕು. ಆ ಸಾಹೇಬರು ದಿನಾಂಕ : ೨೬ ಮಾಹೇ ಅಗಸ್ಟ ಸನ್ ೧೮೫೧ರ ಆಜ್ಞೆ ಮಾಡಿದ್ದೇನೆಂದರೆ, ದಿನಾಂಕ : ೩೦ ಮಾಹೇ ಜುಲೈ ಸನ್ ೧೮೫೧ರ ಸರಕಾರದ ಆಜ್ಞೆಯಂತೆ ಬರೆದು ತಿಳಿಸುವುದೇನೆಂದರೆ ನಿಮಗೆ ನವಾಬ ದಲೇರಜಂಗ್ ಬಹಾದೂರ ಎಂಬ ಹುದ್ದೆಯನ್ನು ನೀಡಲಾಗಿದೆ. ಇದನ್ನು ಯಾವಾಗ, ಯಾವ ಕಾರಣಕ್ಕಾಗಿ ಮತ್ತು ಯಾರಿಂದ ಪ್ರಾಪ್ತವಾಯಿತು. ಅದರ ಬಗೆಗೆ ಮತ್ತು ಒಟ್ಟೂ ಹುದ್ದೆಯ ಬಗೆಗೆ, ಶ್ರೇಷ್ಠತೆ ಮತ್ತು ಮನೆತನದ ಇತಿಹಾಸದ ಬಗೆಗೆ ದಾಖಲೆ ಸಹಿತ ಬರೆದು ತಿಳಿಸಬೇಕು. ಹಾಗೆಯೇ ದಾಖಲೆಯಿದ್ದರೆ ಅದನ್ನೂ ಕಳಿಸಬೇಕು. ಮೌಖಿಕ ಮಜಕೂರಿನ ವಿಷಯವಿದ್ದರೆ. ಅದರ ಬಗೆಗೆ ಏನಾದರೂ ಪುರಾವೆ ಇದ್ದಲ್ಲಿ ಅದನ್ನೂ ಸ್ಪಷ್ಟ ಬರೆದು ತಿಳಿಸಬೇಕು. ಮೌಖಿಕ ಹೇಳಿಕೆಯಿದ್ದು. ಅದಕ್ಕೆ ಯಾವ ಪುರಾವೆಯಿರದಿದ್ದರೆ ಅದನ್ನೂ ಬರೆದು ತಿಳಿಸಬೇಕು. ಆದರೂ ಹಳೆಯ ಕಾಗದ ಪತ್ರದ ಮೇಲಿಂದ, ಮಾಹಿತಿ ನೀಡುವ

ಜನರಿಂದ ಎಷ್ಟು ಮಾಹಿತಿ ಸಿಗುವುದೋ ಅದನ್ನು ಬರೆದು ತಿಳಿಸಬೇಕು–ಎಂದು ತಿಳಿಸಲಾಗಿದೆ. ಅದನ್ನು ಮೊದಲಿನಿಂದಲೂ ನಮ್ಮ ಪೂರ್ವಜರು ಬಾದಶಾಹನಿಂದ ಪಡೆದ ಜಾಗೀರ ಆಗಿದೆ. ಇಂದಿನವರೆಗೆ ಮಲಿಕ್ ಅಬ್ದುಲ್ಲ ಕರಿಂಖಾನನು ಬಹಾದೂರರ ಕಾಲದಿಂದ ಹದಿನ್ಯೆದನೇ ಖುರಶಿಯ ಮಲಿಕ್ ಅವತಾರಖಾನ ಮಹಾಣೆ ಬಹಾದೂರ ತೈಮೂರಶಹಾ ಬಾದಶಹಾನ ಕಾಲದವರೆಗೂ ಸದರು ಜಹಾಗೀರನ್ನು ಅನುಭವಿಸುತ್ತ ಬಾದಶಹಾನ ಸೇವೆಯಲ್ಲಿದ್ದನು. ಸಿಕ್ತ(?) ಮತ್ತು ಖುರಶಿಯ ಮಾಲಕ್ ಮಹೂರಖಾನ ಮಯಾಣೆ ಬಹಾದೂರ ಅಂದರೆ ಬಾಬರಶಹಾ ಬಾದಶಹಾನ ಕಾಲದಲ್ಲೂ ಸದರಿ ಜಹಾಗೀರನ್ನು ಉಪಭೋಗಿಸಿದರು. ಅಲ್ಲಿಯವರೆಗೆ ಕಿತಾಬ್ ಮಲಕ್‌ನಿದ್ದ. ಮಲಕ್ ಸಾದರಖಾನ ಮಯಾಣೆ ಬಹಾದೂರ ಇವನಿಗೆ ಹುಮಾಯೂನ ಬಾದಶಹಾನು ನವಾಬಗಿರಿಯ ಕಿತಾಬ್ (ಪದವಿ) ನೀಡಿದನು. ನವಾಬ ದೋಡಾಖಾನ ಮಯಾಣೆ ಬಹಾದೂರ ಇವನಿಗೆ ಶೇರಶಹಾ ಇವನು ತನ್ನ ವಜೀರನನ್ನಾಗಿ ಬಡತಿಯನ್ನು ನೀಡಿದನು. ೧೯ನೇ ಖುರಶಿಯ ನವಾಬನಾದ ಅಬ್ದುಲ್ಲಾ ಹಸನಖಾನ ಮಯಾಣೆ ಬಹಾದ್ದೂರನಿಗೆ ದಿಲ್ಲಿಯ ಅಕಬರ ಬಾದಶಹಾನು ತನ್ನ ವಜೀರನನ್ನಾಗಿ ಮಾಡಿಕೊಂಡು, ೨೬ನೇ ಖುರಶಿಯ ನವಾಬನಾದ ಬಹಲೋಲಖಾನ ಮಯಾಣೆ ಬಹಾದ್ದೂರನು ಹಲವು ವಜೀರರನ್ನು ರದ್ದುಪಡಿಸಿದನು. ಹೀಗಾಗಿ ಈ ಜಹಗೀರು ಬಾದಶಹಾನ ಕಾಲದಲ್ಲಿ ದಿಲ್ಲಿಯಿಂದ ವಿಜಾಪುರಕ್ಕೆ ಬಂತು. ಆಗ ವಿಜಾಪುರವನ್ನು ಅಲ್ಲಿ ಆದಿಲಶಾ ಆಳುತ್ತಿದ್ದನು. ನವಾಬ ಸಾಹೇಬರು ಇದೇ ಪ್ರದೇಶದ ಮೇಲೆ ಮತ್ತು ಶೂರರ ಮೇಲೆ ಪ್ರಸನ್ನಗೊಂಡು ಕಾಣಿಕೆಯನ್ನು ನೀಡಿ, ನಾಂದೇಡ ಬಸವಂತನಿಗೆ ಜಹಗೀರದಾರರನ್ನಾಗಿ ನೇಮಿಸಿದನು. ೨೧ನೇ ಖುರಶಿಯ ನವಾಬ ಅಬ್ದುಲ ರಹೀಮಖಾನ ಮಯಾಣಿ ಬಹಾದ್ದೂರ ಎಂಬುದನ್ನು ಯುಸುಫ ಬಾದಶಹಾನ ಕಾಲದಲ್ಲಿ ಸದರಿ ಜಹಾಗೀರಿನ ಉಸ್ತುವಾರಿ ಮಾಡಿಕೊಂಡಿದ್ದನು. ೨೨ನೇ ಖುರಸಿಯ ನವಾಬ ಅಬ್ದುಲ್ಲ ಕರೀಮಖಾನ ಮಯಾಣಿ ಬಹಾದ್ದೂರನಿಗೆ ವಿಜಾಪುರದ ಸಿಕಂದರ ಬಾದಶಹಾನು ತನ್ನ ವಜೀರನ್ನು ನೀಡಿ ಬಡತಿ ನೀಡಿದನು. ಮತ್ತು ನವಾಬ ಸಾಹೇಬರು ಮಸೂದಖಾನ ವಜೀರನ ಮಗಳೊಂದಿಗೆ ಮದುವೆ ಮಾಡಿಕೊಂಡನು. ಹೀಗಾಗಿ ಬಾಗಲಕೋಟ ಪ್ರದೇಶದ ಸೈನ್ಯಾಧಿಕಾರಿಯಾಗಿ ನೇಮಿಸಿದನು. ಇದೇ ಸಮಯಕ್ಕೆ ಕರ್ನಾಟಕ ಪ್ರಾಂತದ ಜಮೀನ್ದಾರ ಮುಂತಾದವರು ಬಂಡೆದ್ದು ಬಾದಶಹಾನ ಆಜ್ಞೆಯನ್ನು ಮನ್ನಿಸದೆ ಯುದ್ಧ ಮಾಡಿ ತಮ್ಮ ಪ್ರದೇಶದ ರಕ್ಷಣೆ ಮಾಡಿದರು. ಪ್ರಾಂತದಲ್ಲಿ ಅಜಾಗರೂಕತೆ ಹೆಚ್ಚಾಗಿ ಪ್ರದೇಶ ನಾಶವಾಗುವ ಸ್ಥಿತಿಗೆ ಬಂತು. ಆದ್ದರಿಂದ ಜಮಿನ್ದಾರರಿಗೆ ಬುದ್ದಿ ಕಲಿಸಲು ಬಂಕಾಪುರ ತಾಲೂಕಿನ ಮಹಲಿನ ಬಂದೋಬಸ್ತಿಗಾಗಿ ನವಾಬ ಸಾಹೇಬರನ್ನು ಕರ್ನಾಟಕ ಪ್ರಾಂತಕ್ಕೆ ಕಳಿಸಿದರು. ಅದೂ ಅಲ್ಲದೆ ಆಲಮಗಿರ್ ಬಾದಶಹಾನು ದಿಲ್ಲಿಯಿಂದ ವಿಜಾಪುರ ರಾಜ್ಯವನ್ನು ವಶಪಡಿಸಿಕೊಳ್ಳಲು ಬಂದು, ವಿಜಾಪುರಕ್ಕೆ ಮುತ್ತಿಗೆ ಹಾಕಿದನು.

ಎಷ್ಟೋ ದಿನಗಳವರೆಗೆ ಉಭಯ ಪಕ್ಷಗಳ ನಡುವೆ ಕಾಳಗ ಜರುಗಿತು. ಬಳಿಕ ಸ್ವತಃ ಆಲಮಗಿರ ಬಾದಶಹಾನೇ ಆಸಕ್ತಿ ವಹಿಸಿ, ಸೈನಿಕರಿಗೆ ಕೋಟೆಯನ್ನು ವಶಪಡಿಸಿಕೊಳ್ಳಲು ಆಜ್ಞೆ ಮಾಡಿದನು. ಈ ಗಲಿಬಿಲಿಯಿಂದ ಗಾಬರಿಗೊಂಡ ವಿಜಾಪುರದ ಸಿಕಂದರ ಆದಿಲಶಾಹಿಯೂ ೨ಽನೇ ಖುರಶಿಯ ಅಬ್ದುಲ್ಲಾ ಕಾಫಖಾನ್ ಸಾಹೇಬನನ್ನು ಸುಂಕದ ವಸೂಲಿಗಾಗಿ ಆಲಮಗಿರ ಬಾದಶಾಹನ ಬಳಿಗೆ ಕಳಿಸಿದನು. ಖಾನ ಮೋಸುಫಾನು ತುಂಬ ಶ್ರಮವಹಿಸಿ ಸುಖಕರವಾದ ಒಪ್ಪಂದ ಮಾಡಿಸಿ ವಿಜಾಪುರ ಬಾದಶಹಾ ಮತ್ತು ಆಲಮಗಿರ ಬಾದಶಹಾ ಉಭಯತರ ಭೇಟಿ ಮಾಡಿಸಿ, ಪ್ರತಿವರ್ಷ ಲಕ್ಷರೂಪಾಯಿ ನಗದು ಕೊಡುವ ಗೊತ್ತುವಳಿಯನ್ನು ಮಾಡಿ, ವಿಜಾಪುರದ ಕೋಟೆಯನ್ನು ಆಲಮಗಿರ ಬಾದಶಹಾನ ಸ್ವಾಧೀನಕ್ಕೆ ಒಪ್ಪಿಸಿದನು. ಈ ಪರಿಶ್ರಮಕ್ಕಾಗಿ ಸಲಹೆಗಾಗಿ ಈ ಮನೆತನದ ಬಗ್ಗೆ ಗೌರವ ತೋರಿಸಿ, ಸದರಿ ಅಬ್ದುಲ್ಲಾ ಕಾಫಖಾನ ಸಾಹೇಬನಿಗೆ ಸೈನ್ಯದ ಹುದ್ದೆಯನ್ನು ಮತ್ತು ಆರು ಸಾವಿರ ಕುದುರೆ ಸವಾರರನ್ನು ಬಹುಮಾನವಾಗಿ ನೀಡಿ; ದತಿಲೇರಖಾ ಬಹಾದ್ದೂರ ದತಿಲೇರಜಂಗ ಎಂಬ ಪದವಿಯನ್ನು ನೀಡಿ, ಬಂಕಾಪುರ ಮತ್ತು ಅಜಮನಗರ ಮುಂತಾದ ಇಪ್ಪತ್ತೆರಡು ಮಹಲಿನ ಸನದನ್ನು ೧೧೯೭ ಹಿಜರಿಯಲ್ಲಿ ನೀಡಿ, ಕರ್ನಾಟಕ ಪ್ರಾಂತಕ್ಕೆ ಕಳಿಸಿದನು. ಆ ನವಾಬ ಸಾಹೇಬನು ಕರ್ನಾಟಕ ಪ್ರಾಂತಕ್ಕೆ ಬಂದು ಇಲ್ಲಿಯ ಜಹಗೀರದಾರರಿಗೆಲ್ಲ ಎಚ್ಚರಿಕೆಯನ್ನು ನೀಡಿ, ಕೆಲವೊಂದನ್ನು ನೀಡಿ, ಅದರಂತೆ ಪ್ರಜೆಗಳಿಗೆ ಸಮ್ಮತಿಯನ್ನು ನೀಡಿ, ತಾಲೂಕನ್ನು ವಿಕಾಸಗೊಳಿಸಿ, ಅದಕ್ಕೆ ಆಕಾರ ನೀಡಿದನು. ಅದು ಒಟ್ಟೂ ಕಸಬಾ ಬೆಳಗಾವ ಕೋಟೆ ಜಾತ ಜಾಹಗೀರು ಮತ್ತು ಠಾಣೆಜಾತ ಸಹಿತ ಒಟ್ಟೂ ಬೇರಿಜು ನಾಣ್ಯ ರುಪಾಯಿ ೧೭೫೫೦೭ ೧೧೧= ಹದಿನೇಳು ಲಕ್ಷ ಐವತ್ತೈದು ಸಾವಿರ ಏಳುಮುಕ್ಕಾಲು ರೂಪಾಯಿ ಎರಡಾಣೆಯ ಜಹಾಗೀರು. ೨೬ನೇ ಖುರಶಿಯ ನವಾಬ ಅಬ್ದುಲ ಗಫಾರಖಾನ ಬಹಾದ್ದೂರ ದಲೇರಜಂಗ ಇವನವರೆಗೆ ಫಾರೂಖಶೇರ ಬಾದಶಹಾನ ಕಾಲದವರೆಗೆ ಸನ್ ೧೧೫೯ ಹಿಜರಿ ಪರಿಯಂತ ಸುಖರೂಪದಿಂದ ನಡೆದು ಬಂತು. ಸನ್ ೧೧೬೦ರಲ್ಲಿ ೨೫ನೇ ಕುರಶಿಯ ನವಾಬ ಮಜೀದಖಾನ ಸಾಹೇಬ ಬಹಾದ್ದೂರ ದಲೇರಜಂಗ ಇವನ ಕಾಲದಲ್ಲಿ ಬಾಪೂಜಿ ನಾಯಿಕ ಸರದಾರ ಎಂಬ ಪೇಶ್ವೆಯ ಸಹಾಯದೊಂದಿಗೆ ಲಕ್ಷ, ಒಂದೂವರೆ ಲಕ್ಷ ಸೈನ್ಯದೊಂದಿಗೆ ಸವಣೂರ ಪ್ರಾಂತಕ್ಕೆ ಬಂದು ಮುತ್ತಿಗೆ ಹಾಕಿದನು. ಈ ಕಾಳಗವನ್ನು ಕೈ ಬಿಟ್ಟು ಒಪ್ಪಂದ ಮಾಡಿಕೊಳ್ಳಲಾಯಿತು. ಸದರಿ ಪ್ರಾಂತಕ್ಕೆ ಪ್ರತಿವರುಷ ೭೫,೦೦೦ ರೂಪಾಯಿಯ ಗೌರವ ಧನವನ್ನು ನೀಡಬೇಕು. ಅವರು ಈ ಗೆಳೆತನವನ್ನು ಉಳಿಸಿಕೊಂಡು ನವಾಬ ಸಾಹೇಬರಿಗೆ ಬೆಂಬಲ ನೀಡುತ್ತಿರಬೇಕು. ಈ ರೀತಿಯಲ್ಲಿ ಕರಾರು ಬರೆದು ಕೊಡಲಾಯಿತು. ಅದು ಸನ್ ೧೧೬೯ವರೆಗೆ ಸುರಕ್ಷಿತವಾಗಿ ಸಾಗಿಬಂತು. ಸನ್ ೧೧೭೦ ಸುರುಸಿನ್ ಸೀತ ಖಮಸೈನ ಮಯಾ ಮತು ಅಲಫ

ವರ್ಷ. ೨೬ನೇ ಖುರಶಿಯ ನವಾಬ ಅಬ್ದುಲ ಹಕೀಮಖಾನ ಸಾಹೇಬ ಬಹಾದ್ದೂರ ದಲೇರಜಂಗ ಎನ್ನುವವನು ಗದ್ದುಗೆಯಲ್ಲಿ ಕೂತಿದ್ದ. ಆ ಸಮಯದಲ್ಲಿ ಮುಜಫರಜಂಗ ಎಂಬ ಸರದಾರನು ಶ್ರೀಮಂತ ಪೇಶ್ವೆಯ ಮೂಲಕ ನವಾಬ ಹಕೀಮಖಾನರ ಬೆಂಬಲವನ್ನು ಬಯಸಿದ. ಈ ಬೆದರಿಕೆಯ ಕಾರಣದಿಂದಾಗಿ ಸ್ವತಃ ನಾನಾರಾವ ಮತ್ತು ಸದಾಶಿವರಾವ ಮತ್ತು ರಘುನಾಥರಾವ ಪೇಶ್ವೆಯವರು ೨-೩ ಲಕ್ಷ ಸೈನ್ಯ ಸಮೇತ ಸವಣೂರಿಗೆ ಬಂದರು. ಮುಜಫರಜಂಗನಿಂದ ಬೇಡಿದರು. ಅವನು ಬೆಂಬಲಿಸಲು ಕೇಳಿಕೊಂಡಿದ್ದಾನೆ. ನೀವು ಅವನಿಗೆ ಕೊಟ್ಟರೆ ಹಿಂದಿರುಗಿ ಹೋಗುತ್ತೇವೆ. ಈ ಕಾರಣಕ್ಕಾಗಿ ಯುದ್ಧಕ್ಕೆ ಬರಬೇಕಾಯಿತು. ಆರು ತಿಂಗಳು ಕಾಳಗ ಜರುಗಿ ಕೊನೆಗೆ ಒಪ್ಪಂದ ಮಾಡಿಕೊಳ್ಳಲಾಯಿತು. ಮಜಫರ್ ಜಂಗನನ್ನು ಪೇಶ್ವೆಗೆ ಒಪ್ಪಿಸಬಾರದು. ಪಾರು ಮಾಡಬೇಕು. ಅದರ ಬದಲಿಗೆ ನವಾಬ ಸಾಹೇಬರ ಬಳಿಗಿರುವ ಪ್ರದೇಶದಲ್ಲಿ ಅರ್ಧ ತಾಲೂಕನ್ನು ಪೇಶ್ವೆಯವರಿಗೆ ನೀಡಬೇಕು. ಉಳಿದ ಅರ್ಧ ನವಾಬ ಸಾಹೇಬರು ಆಳಬೇಕು. ಪರಸ್ಪರರಲ್ಲಿ ಮೈತ್ರಿಯಿರಬೇಕು. ಪೇಶ್ವೆಯವರು ಎಲ್ಲ ರೀತಿಯಿಂದಲೂ ನವಾಬ ಸಾಹೇಬರೊಂದಿಗೆ ಗೆಳೆತನ ಬೆಳೆಸಿಕೊಂಡು, ಬಿಕ್ಕಟ್ಟಿನ ಪ್ರಸಂಗಗಳಲ್ಲಿ ಸಹಾಯ ಮಾಡುತ್ತಿರಬೇಕು. ಈ ಬಗೆಯಲ್ಲಿ ಕರಾರು ಮಾಡಿ ತಾಲೂಕನ್ನು ಪಾಲು ಮಾಡಲಾಯಿತು. ಪೇಶ್ವೆಯರ ಪಾಲಿಗೆ ಬಂದ ಒಟ್ಟೂ ತಾಲೂಕು ರೂಪಾಯಿ ೮೯೫೧೯೫೮ ಕಳೆದು, ಬಾಕಿ ನವಾಬಸಾಹೇಬರ ಬಳಿಯಲ್ಲಿ ಉಳಿದದ್ದು ೮೮೪೮೬೫ ೧೧೧ ರೂಪಾಯಿ. ಸದರಿ ತಾಲೂಕು ಪಾಲಾಯಿತು. ಅದರ ಕರಾರು ವಿವರವಾಗಿ ಇದೆ. ಒಪ್ಪಂದದ ಕರಾರು ಸನ್ ೧೭೯೫ವರೆಗೆ ಸದರಿ ಜಹಗೀರು ನವಾಬ ಹಕೀಮಖಾನ ಸಾಹೇಬ ಬಹಾದ್ದೂರ ದಲೇರಜಂಗ ಇವನ ಬಳಿ ಸುರಕ್ಷಿತವಾಗಿದೆ. ಸನ್ ೧೨೦೦ರಲ್ಲಿ ಪೇಶ್ವೆಯವರು ತಮ್ಮ ಖಂಡಣಿಗಾಗಿ (ಕರ ವಸೂಲಿಗಾಗಿ) ಟೀಪೂ ಸುಲ್ತಾನನ ಮೇಲೆ ದಂಡೆತ್ತಿ ಹೋಗಲು ಪರಶರಾಮ ಪಂಡಿತ ಪಟವರ್ಧನ ಮತ್ತು ಹರಿಪಂತ ಫಡಕೆ ಹಾಗೂ ಗಣೇಶಪಂತ ಥೇರೆ ಮತ್ತು ಹೋಳ್ಕರ ಎಂಬ ನಾಲ್ವರು ಸರದಾರರನ್ನು ನೇಮಿಸಿ, ಎರಡು ಲಕ್ಷ ಸೈನ್ಯ ಸಮೇತ ಕರ್ನಾಟಕ ಪ್ರಾಂತಕ್ಕೆ ಕಳಿಸಿದರು. ಅವರು ಸವಣೂರ ಮುಕ್ಕಾಮಿಗೆ ಬಂದು ತಲುಪಿದರು. ಪಠಾಣಾದಿಂದ ಟೀಪು ಸುಲ್ತಾನನು ತನ್ನ ಸೈನ್ಯ ಸಹಿತ ಸವಣೂರ ಸನಿಹದಲ್ಲಿರುವ ಹುರಳಿಕೊಪ್ಪಕ್ಕೆ ಬಂದನು. ಪೇಶ್ವೆಯ ಸರದಾರರೊಂದಿಗೆ ಸ್ನೇಹ ಬೆಳೆಸಬಾರದೆಂದು ನವಾಬ ಹಕೀಮ ಖಾನನಿಗೆ ಪತ್ರ ಬರೆದು ತಿಳಿಸಿದನು. ಆದರೆ ಈ ಮೊದಲೇ ಒಪ್ಪಂದಿನ ಕರಾರು ಆಗಿರುವದರಿಂದ ಅವರ ಮೇಲಿನ ಉಪ್ಪೆಯನ್ನು ಬಿಡಬಾರದೆಂದು ನಿರ್ಧರಿಸಿ, ಟೀಪೂ ಸುಲ್ತಾನನೊಂದಿಗೆ ಸಂಬಂಧ ಬೆಳೆಸದೆ, ಪೇಶ್ವೆ ಸರದಾರರನ್ನೇ ಭೇಟಿಯಾಗಿ ಸವಣೂರ ನಗರದಲ್ಲೇ ಉಳಿದುಕೊಂಡನು. ಹೀಗೆ ಪೇಶ್ವೆ ಸರದಾರ ಮತ್ತು ಸುಲ್ತಾನನ ನಡುವೆ ಕಾಳಗ ಸವಣೂರಿನಲ್ಲಿ ನಡೆಯಿತು. ಕೊನೆಗೆ ಯಾವ ನಿರ್ಣಯವೂ ಆಗದೆ ಪೇಶ್ವೆ ಸರದಾರರು

ಹೊರಡಲು ಸಿದ್ಧರಾದರು. ಆಗವರು ನವಾಬ ಹಕೀಮಖಾನ ಸಾಹೇಬರನ್ನು ಜೊತೆಗೆ ಕರೆದೊಯ್ದರು. ೩-೪ ಕೋಟಿ ರೂಪಾಯಿಯ ಆಸ್ತಿ, ಪ್ರದೇಶ ಮತ್ತು ಸಂಪತ್ತು ಸಹಿತ ಪೇಶ್ವೆಯವರೊಂದಿಗೆ ಸ್ನೇಹ ಬೆಳೆಸಿ, ನವಾಬ ಸಾಹೇಬರು ಪುಣೆಗೆ ಬಂದರು. ಆಗಲಿಲ್ಲ ಮಾಧವರಾವ ಪೇಶ್ವೆ ಮತ್ತು ನಾನಾಪಂಡಿತ ಫಡ್ನಿಸರಿದ್ದರು. ಅವರು ನವಾಬ ಸಾಹೇಬರ ಆತಿಥ್ಯವನ್ನು ಮಾಡಿ ಕರಾರು ಮಾಡಿದ್ದೇನೆಂದರೆ: ಸುಲ್ತಾನನ ಸಖ್ಯ ಐದು ವರ್ಷದವರೆಗಿದೆ. ಅಲ್ಲಿಯವರೆಗೆ ಖರ್ಚಿಗಾಗಿ ನಗದು ಹಣ ನೀಡುತ್ತೇವೆ. ಅದನ್ನು ಪಡೆದು ಸುಖರೂಪಲಾಗಿ ಪುಣೆಯಲ್ಲಿ ವಾಸ್ತವ್ಯ ಮಾಡಬೇಕು. ಈ ರೀತಿ ಕರಾರು ಮಾಡಿದ ಬಳಿಕ ನವಾಬ ಸಾಹೇಬರು ಐದು ವರ್ಷ ಪುಣೆಯಲ್ಲಿ ಉಳಿದುಕೊಂಡರು. ಇದಾದ ಕೆಲದಿನಗಳ ಬಳಿಕ ಟೀಪೂಸುಲ್ತಾನನ ಮೇಲೆ ದಂಡೆತ್ತಿ ಹೋಗಲು, ಎರಡನೇ ಸಲ ಪರಶುರಾಮ ಪಂಡಿತ ಪಟವರ್ಧನನನ್ನು ಗೌರವ ಪೂರ್ವ ವಿದಾಯ ಹೇಳಿ ಒಂದು ಒಂದುವರೆ ಲಕ್ಷ ಸೈನ್ಯ ಸಮೇತ ಕರ್ನಾಟಕ ಪ್ರಾಂತಕ್ಕೆ ಕಳಿಸಲಾಯಿತು. ಹೋಗುವಾಗ ನಾನಾ ಫಡ್ನಿಸ ಮತ್ತು ಮಾಧವರಾವ ಪೇಶ್ವೆಯವರು ಯೂಸೂಫ ಎಂಬ ಸರದಾರರಿಗೆ ಆಜ್ಞೆ ಮಾಡಿದ್ದೇನೆಂದರೆ ನವಾಬ ಸಾಹೇಬರನ್ನು ಜೊತೆಗೆ ಕರೆದೊಯ್ದು ಸವಣೂರ ನಗರದಲ್ಲಿ ಬೀಡು ಬಿಟ್ಟರು. ಈಗ ತಾಲೂಕು ನೀಡಬೇಕೆಂದು ನವಾಬ ಸಾಹೇಬನು ಪರಶುರಾಮ ಪಂಡಿತನಿಗೆ ತಿಳಿಸಿದನು. ಆಗವನು ಹೇಳಿದ್ದೇನೆಂದರೆ-ದಂಡಯಾತ್ರೆ ಮುಗಿದು ಪುಣೆಗೆ ಮರಳಿ ಹೋಗುವಾಗ ತಾಲೂಕನ್ನು ತಮಗೆ ಒಪ್ಪಿಸಲಾಗುವದು. ಬಿಲ್‌ಫೆಲ್ ಕಾರಡಗಿ ಜಿಲ್ಲೆಯ ಬೆಲೆ ೭೦,೦೦೦ ಚಿನ್ನದ ನಾಣ್ಯ, ಕರಡಗಿ ಮಹಲನ್ನು ನವಾಬ ಸಾಹೇಬರಿಗೆ ಒಪ್ಪಿಸಿ ಪರಶುರಾಮ ಪಂಡಿತನು ಪಟ್ಟಣಕ್ಕೆ ಹೋದನು. ಅಲ್ಲಿ ಲಾರ್ಡ್ ಕಾರ್ನ್‌ವಾಲಿಸ ಮೆಸದ್(ಮೆಡೋಜ) ಆಂಗ್ಲ ಕಂಪನಿ ಸರಕಾರದ ವತಿಯಿಂದ ಬಂದಿದ್ದ. ಸುಲ್ತಾನ ಮತ್ತು ಸವಾರರ ಕಾಳಗ ಸಂಧಾನದಲ್ಲಿ ಪೂರ್ಣಗೊಂಡಿತ್ತು. ಪರಶುರಾಮನು ಪೇಶ್ವೆಯರ ಪರವಾಗಿ ಸವಣೂರ ತಾಲೂಕಿನ ಪಾಲು ಪಡೆದನು. ದಂಡಯಾತ್ರೆ ಮುಗಿದು ಪುಣೆಗೆ ಮರಳಿ ಹೋಗುವಾಗ ತಾಲೂಕು ಒಪ್ಪಿಸಿ ಹೋಗಬೇಕೆಂದು ನವಾಬ ಸಾಹೇಬನು ಸೂಚಿಸಿದನು. ಆಗ ಪರಶುರಾಮ ಪಂಡಿತನು ಹಿಂದಿನ ಕರಾರನ್ನು ಬದಲಾಯಿಸಿ, ಯುದ್ಧದ ಕಾಲಕ್ಕೆ ೫೦ ಲಕ್ಷ ಸಾಲವಾಗಿದೆ. ತಾಲೂಕು ಸಾಲದಲ್ಲಿದೆ. ಪೇಶ್ವೆರಾಜನಿಂದ ಈ ಸಾಲದ ಪರಿಹಾರವಾದ ಬಳಿಕ ನಿಮಗೆ ಪ್ರದೇಶ ನೀಡಲಾಗುವದು ಎಂದು ತಿಳಿಸಿದನು. ಸದ್ಯಕ್ಕೆ ಕಾರಡಗಿ ಮಹಲು ನಿಮ್ಮ ಬಳಿಯಲ್ಲೇ ಇರಲಿ ಎಂದು ತಿಳಿಸಿ ಪಂಡಿತನು ಪುಣೆಗೆ ಹೋದನು. ಮೂರನೇ ವರ್ಷಕ್ಕೆ ತಾಲೂಕಿನ ವಿಚಾರಣೆಗಾಗಿ ಸವಣೂರ ಪ್ರಾಂತಕ್ಕೆ ಆಗಮಿಸಿದ್ದರು. ಆಗವರು ಕಾರಡಗಿ ಮಹಲನ್ನು ಜಪ್ತಿ ಮಾಡಿ, ಪ್ರತಿ ತಿಂಗಳು ೪೦೦೦ ರೂಪಾಯಿ ಕಳಿಸಲು ಅಧಿಕಾರಿಯನ್ನು ನೇಮಿಸಿದರು. ಕೆಲ ದಿನ ಹಾಗೇ ನಡೆಯಿತು. ಬಳಿಕ ನವಾಬ ಹಕೀಮಖಾನ

ಸಾಹೇಬ ಸನ್ ೧೨೦೮ ಹಿಜರಿ ವರ್ಷದಲ್ಲಿ ತೀರಿಕೊಂಡನು. ಆಗ ಇಜಾನಿಬದ ಕಿಬ್‌ಲಗಾ ೨೭ನೇ ಖುರಸಿಯ ಹೊಸ ಅಬ್ದುಲ ಖೌರಖಾನ ಸಾಹೇಬ ಬಹಾದ್ದೂರ ದಲೇರಜಂಗನು ಪಟ್ಟಣದಲ್ಲಿ ಟೀಪುಸುಲ್ತಾನನ ಹತ್ತಿರವಿರುವ ಸುದ್ದಿ ತಿಳಿದಾಗ ಸುಲ್ತಾನನು ನಮ್ಮ ಕಿಬ್‌ಲಗಾ ಸಾಹೇಬರಿಗೆ ರಜೆ ನೀಡಿ, ಸವಣೂರಿಗೆ ಕಳಿಸಿಕೊಟ್ಟಿದ್ದರಿಂದ ಅವನು ಇಲ್ಲಿಗೆ ಬಂದು ಗದ್ದುಗೆ ಏರಿದನು. ಇಲ್ಲಿ ಶ್ರೀಮಂತ ಪೇಶ್ವೆಯವರ ಪರವಾಗಿ ಮೋರೊ ಬಾಪೂಜಿ ಪ್ರಾಂತವನ್ನು ನೋಡಿಕೊಳ್ಳುತ್ತಿದ್ದನು. ಕಾರಡಗಿಯ ಜಿಲ್ಲೆಯನ್ನು ಪೇಶಜಿ ನವಾಬ ಸಾಹೇಬರೇ ನೋಡಿಕೊಳ್ಳುತ್ತಿದ್ದರು. ಅದೇ ರೀತಿಯಲ್ಲಿ ನಡೆಸಿಕೊಳ್ಳಬೇಕು. ಅಥವಾ ಖರ್ಚಿಗೆ ನಗದು ಹಣ ನೀಡಬೇಕು–ಎಂದು ಈ ರೀತಿ ಉತ್ತರಿಸಿದಾಗ ತಾಜಾ ಸನದು ಬೇಕೆಂದು ಆಕ್ಷೇಪವೆತ್ತಿದರು. ಆದರೂ ಪುಣೆಗೆ ಉತ್ತರ ಕಳಿಸಿ ೪೮,೦೦೦ ಸನದನ್ನು ನನ್ನ ಹೆಸರಿನಲ್ಲಿ ತಂದು ಪ್ರಾಂತ ಜಿಲ್ಲೆಯನ್ನು ಕೆಲದಿನ ಮುನ್ನಡೆಸಲಾಯಿತು. ಅನಂತರ ಹೊಸ ಪ್ರಾಂತಾಧಿಕಾರಿಗಳು ಬರಲಾರಂಭಿಸಿದರು. ನೇಮೂಣಿಕಿಯ ರೂಪಾಯಿ ಸನದಿನ ಆಜ್ಞೆಯಂತೆ ಸುರಕ್ಷಿತವಾಗಿ ತಲುಪುತ್ತಿಲ್ಲ ಎಂದು ಕಿರುಕುಳ ಕೊಡಲಾರಂಭಿಸಿದರು. ಅಷ್ಟರಲ್ಲಿ ಮೆಹರ್‌ಬಾ ರೋಸ್ತ ಜನರಲ್ ವಸಲಿ ಸಾಹೇಬ ಬಹಾದ್ದೂರ ಇಂಗ್ಲಿಷ ಇವರು ಧೋಂಡಜಿ ವಾಘ ಇವನಿಗೆ ಎಚ್ಚರಿಕೆ ನೀಡಲು ಸವಣೂರ ಪ್ರಾಂತಕ್ಕೆ ಬಂದರು. ಆ ಸಮಯದಲ್ಲಿ ಪ್ರಾಂತವು ಬಾಳಕೃಷ್ಣ ಪಂಡಿತ ಪಟವರ್ಧನ ಇವರ ಬಳಿಯಲ್ಲಿತ್ತು. ಇಲ್ಲಿಯ ಅಹವಾಲನ್ನು ವಿಚಾರಣೆಗೆ ಎತ್ತಿಕೊಂಡು ಪ್ರಾಂತದ ಅಧಿಕಾರಿಗೆ ಆಜ್ಞೆ ಮಾಡಿದರು. ಸನದಿನ ಆಜ್ಞೆಯ ಪ್ರಕಾರ ೪೮,೦೦೦ ರೂಪಾಯಿಯ ನಗದು ನೀಡುವದು ನಿಮ್ಮಿಂದ ಸಾಧ್ಯವಾಗುತ್ತಿಲ್ಲ. ಸದರಿ ರೂಪಾಯಿಗಿಂತ ಸತತ ವಸೂಲಿಗಾಗಿ ತಾಲೂಕನ್ನು ನೀಡಬೇಕು–ಎಂದು ತಾಕೀತು ಮಾಡಿಹೋದರು. ಅನಂತರ ಪ್ರಾಂತಾಧಿಕಾರಿಯು ೪೮,೦೦೦ ರೂಪಾಯಿಯ ಬದಲಿಗೆ ಸವಣೂರ ನಗರ ಮತ್ತು ೨೫ ಗ್ರಾಮಗಳನ್ನು ಸಹ ಗರಿಷ್ಠ ಆಕಾರದಲ್ಲಿ ಇಂಜಾನಿಬನ ತಂದೆಯವರ ಹೆಸರಿಗೆ ನೀಡಲಾಗಿದೆ. ಅದು ಮುಂದುವರೆದಿದೆ. ಆದರೆ ಗ್ರಾಮಗಳು ಬರಗಾಲಗ್ರಸ್ತವಾಗಿವೆ. ಕರ ತೀರ ಕಡಿಮೆಯಿದೆ. ನಮ್ಮ ಖರ್ಚು ಮಾತ್ರ ಏರಿದೆ. ಆದಾಯ ಕಡಿಮೆಯಿರುವುದರಿಂದ ಇದರಲ್ಲಿ ಉಸ್ತುವಾರಿ ಮಾಡುವದು ಸಾಧ್ಯವಿಲ್ಲ. ಹೀಗಾಗಿ ಜೀವನ ನಿರ್ವಹಣೆ ಅಸಾಧ್ಯವಾಗಿದೆ. ಹಳೆ ಕಾಲದಿಂದ ನಮ್ಮ ಮನೆತನ ಬಾದಶಹಾರಿಂದ ಪ್ರಶಂಸೆಗೊಳಗಾಗಿ ಬಾದಶಾಹರಿಂದ ಪೋಷಿಸಲ್ಪಟ್ಟಿದೆ. ನ್ಯಾಯಯುತದಿಂದ ಭೂಮಿ ಮತ್ತು ಮನೆಯನ್ನು ಬಾದಶಹಾರಿಗೆ ನೀಡಲಾಗಿದೆ. ಹೀಗಾಗಿ ಪದ್ಧತಿಯಂತೆ ನಮ್ಮ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಇಜಾನಿಬನ ಕಿಬಂಗಾಸಾಹೇಬನು ಎಲ್‌ಫಿಸ್ಟನ್ ಸಾಹೇಬ ಬಹಾದ್ದೂರ ಗವ್ಹರ್ನರರಿಗೆ ಕೇಳಿಕೊಂಡಾಗ ಅವರು ಈ ಸಂಪತ್ತಿನ ಅಹವಾಲು ಮತ್ತು ಹಕ್ಕಿನ ಪ್ರದೇಶವನ್ನು ವಿಚಾರಣೆಗೆ ಒಳಪಡಿಸಿ, ವರ್ಷಕ್ಕೆ ೬೦೦೦ ರೂಪಾಯಿ ಪೆನ್‌ಶನ್ ಮಾಡಿಕೊಟ್ಟಿದ್ದಾರೆ.

ಇಜಾನಿಬರ ತಂದೆ ನವಾಬ ಅಬ್ದುಲ ಖೈರಖಾ ಸಾಹೇಬ ಬಹಾದ್ದೂರ ದಲೇರಜಂಗರ ಅಂತ್ಯಕಾಲದ ಬಳಿಕ ೨೮ನೇ ಖುರಶಿ ಇಜಾನಿಬ್‌ನ ಹಿರಿಯ ಬಂಧು ನವಾಬ ಫಯಾಜಖಾನ ಸಾಹೇಬ ಬಹಾದ್ದೂರ ದಲೇರಜಂಗನು ಗದ್ದುಗೆಯನ್ನು ಏರಿದನು. ಬಳಿಕ ಸುಮಾರು ೭ ತಿಂಗಳ ನಂತರ ಅವರ ಅಂತ್ಯ ಕಾಲವಾಯಿತು. ಅವರಿಗೆ ಮಕ್ಕಳು ಇಲ್ಲದ್ದರಿಂದ ಇಜಾನಿಬ್‌ನ ಎರಡನೇ ಸೋದರ ೨೯ನೇ ಖುರಶಿಯ ನವಾಬನಾದ ಮುನ್ವರಖಾನ ಸಾಹೇಬ ಬಹಾದೂರ ದಲೇರಜಂಗ ಇವನಿಗೆ ಗದ್ದುಗೆಯನ್ನು ನೀಡಲಾಯಿತು. ಅವನು ಸುಮಾರು ಆರು ವರ್ಷಗಳ ಕಾಲ ಆಡಳಿತ ನಡೆಸಿ ತೀರಿಕೊಂಡನು. ಅವನಿಗೂ ಮಕ್ಕಳು ಇಲ್ಲದ್ದರಿಂದ ಅಲ್ಲಿಷಾನ ಸರಕಾರವು ಮೆಹರಬಾನ ಮಾಡಿ ಇಂಜಾನಿಲಾಸನಿಗೆ ಗದ್ದುಗೆ ನೀಡಿತು. ಆಮುಷಫಕಾನಿ ಬರೆದ ಆ ಅಹವಾಲು ಕೆಳಗೆ ನೀಡಿದ ಸನದು ಪಟ್ಟದ ನಕಲು ಮತ್ತು ಖುರಶಿನಾಮಾ ಜಾರಿಗೆ ತಂದು, ಹಳೆಯ ಕಾಲದಿಂದ ನಡೆಯುತ್ತ ಬಂದ ಮರ್ಯಾದೆಯಂತೆ, ಪದವಿ ಮುಂತಾದವುಗಳನ್ನು ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿಯು ಆಮ್ಮುಷಫಕಾನ ಮೇಲಿದೆ. ಹಿಂದೆ ಇಂಜಾನಿಬನ ಆಡಳಿತಕ್ಕೆ ಹಲವು ಪ್ರದೇಶಗಳು ಒಳಪಟ್ಟಿದ್ದವು. ಈಗ ಅದೆಲ್ಲವೂ ಹೋಗಿ ಜುಜಬಿ ಉಳಿದುಕೊಂಡಿದೆ. ಆದರೂ ಗೌರವ ಮತ್ತು ಪದವಿಗೆ ತಕ್ಕಂತೆ ಮೊದಲಿನಿಂದಲೂ ನಡೆದು ಬಂದಂತೆ ಈ ಅಲ್ಲಿಷಾನ ಸರಕಾರಕ್ಕೆ ಇಂದಿನವರೆಗೆ ನಡೆಸಿಕೊಂಡು ಹೋಗುತ್ತಿದ್ದಾರೆ. ಇನ್ನು ಮುಂದೆಯೂ ಮುನ್ನಡೆಸಿಕೊಂಡು ಹೋಗುತ್ತಾರೆ. ಎಂಬ ನಂಬಿಕೆ ಇಂಜಾನಿಬಸರಿಗಿದೆ. ಈ ಎಲ್ಲ ಕಾರಣದಿಂದಾಗಿ ಇಂಜಾನಿಬರ ಮೇಲೆ ಆಮ್ಮುಷಫಾಕಾರ ಕೃಪೆಯಿರಲಿ. ಆಮ್ಮುಷಫಾಕಾನ ವಂಶಪರಂಪರೆಯಿಂದ ಬಂದ ಸನದು ಪತ್ರದ ನಕಲು ಕಳಿಸಲಾಗಿದೆ. ಅದರ ತಪಶೀಲು–

೧) ಆಲಮಗಿರ ಬಾದಶಹಾ ಗಾಜಿಯು ನವಾಬ ಅಬ್ದುಲ್ಲಾ ಕಾಫಖಾನ್ ಸಾಹೇಬರಿಗೆ ಅಶ್ವದಳದ ಹುದ್ದೆ ಮತ್ತು ೬೦೦೦ ಕುದುರೆ ಸವಾರರು ಮತ್ತು ಬಂಕಾಪುರ ಆಜಮನಗರ ಮುಂತಾದ ಪ್ರದೇಶಗಳು ಮತ್ತು ದಲೇರಖಾ ಬಹಾದೂರ ದಲೇರಜಂಗ ಎಂಬ ಪದವಿ ಸಹಿತ ಬಡ್ತಿ ನೀಡಿ ಸನ್ ೧೧೯೭ ಹಿಜರಿಯಲ್ಲಿ ಸನದು ನೀಡಲಾಗಿದೆ. ಅದರ ನಕಲು ಪತ್ರ.

೨) ಆಲಮಗಿರ ಬಾದಶಹಾನ ವಜೀರ ಅಮಿರುಲ್ ಉಮರಾವನು ತೋರಗಲ್ ಸರಕಾರದ ಸನದನ್ನು ನವಾಬ ದಲೇರಖಾ ಬಹಾದೂರ ದಲೇರಜಂಗನಿಗೆ ಕೊಡುಗೆಯೆಂದು ಸನ್ ೪೮ ಜುಲೈರಂದು ನೀಡಿದ ಆಜ್ಞೆ ಅದರ ನಕಲು.

೩) ಅಹಮದಶಹಾ ಬಾದಶಹಾ ಗಾಜಿಯು ವಜೀರ ಗಾಜೋದಿಖಾನ ಬಹಾದ್ದೂರ ಫೆರೋಜಜಂಗ ನಿಜಾಮುಲ್ ಮುಲಕ್‌ನು ಬಾದಶಹಾನ

ಆಜ್ಞೆಯಂತೆ ಸನ್ ೧೧೬೪ ಹಿಜರಿಯಲ್ಲಿ ಪಲ್ಲಕ್ಕಿ ಸಹಿತ ನೀಡಿದ ಸನದು, ಅದರ ನಕಲು.

೪) ಇಜಾನಿಬನ ಹಿರಿಯ ಬಂಧುವಾದ ನವಾಬ ಅಬ್ದುಲ್ಲ ಮಜೀದಖಾನ ಸಾಹೇಬ ಬಹಾದೂರ ದಲೇರಜಂಗ ಇವನ ಮತ್ತು ಬಾಳಾಜಿ ಬಾಜೀರಾವ ಪೇಶ್ವೆಯರ ನಡುವೆ ಸುರುಸನ್ ಸಬ್ಯಾ ಆಬ್‌ನನ್ ಮಯಾ ಮತ್ತು ಅಲಫ ವರ್ಷದಲ್ಲಿ ಸಂಧಾನವಾಯಿತು. ಅದರ ನಕಲು.

೫) ೨೬ನೇ ಖುರಶಿಯ ನವಾಬ ಅಬ್ದುಲ್ಲಾ ಹಕೀಮಖಾನ ಸಾಹೇಬ ಬಹಾದೂರ ದಲೇರಜಂಗನಿಗೆ ದಲೇಲಖಾನ ಎಂಬ ಮಗನಿದ್ದ. ಅವನು ಅವರ ಸಮ್ಮುಖದಲ್ಲೇ ತೀರಿಕೊಂಡ. ಮೂಲದಲ್ಲಿ ದಲೇರಖಾನನಿಗೆ ಆಜೀಜಖಾನ ಎಂಬ ಮಗನಿದ್ದ. ಅವನ ಹೆಸರಿನಲ್ಲಿ ಶಾಹಆಲಮ ಬಾದಶಹಾ ಗಾಜಿಯಿಂದ ದಿಲಾವರಜಂಗ ಎಂಬ ಪದವಿಯನ್ನು ನೀಡಿ ಸನ್ ೧೧೯೧ ಹಿಜರಿಯಲ್ಲಿ ಸನದು ಮಾಡಲಾಯಿತು. ಅದರ ನಕಲು. ಆಜೀಜಖಾನನು ಐದು ವರ್ಷದವನಿದ್ದಾಗ ನವಾಬ ಹಕೀಮಖಾನ ಸಾಹೇಬರ ಸಮಕ್ಷಮ ತೀರಿಕೊಂಡ.

೬) ಶ್ರೀಮಂತ ಬಾಜೀರಾವ ಪೇಶ್ವೆಯವರು ಇಜಾನಿಬನ ತಂದೆಗೆ ೪೦೦೦ ರೂಪಾಯಿಯ ಕರಾರು ಮಾಡಿ ಪೀರೋ ಬಾಪುಜಿಯ ಹೆಸರಿಗೆ ಸುರುಸನ್ ಮಯಾತೈನ್ ವ ಅಲಫ ವರ್ಷ ಸನದು ಮಾಡಿಕೊಟ್ಟರು. ಅದರ ನಕಲು.

೭) ಶ್ರೀಮಂತ ಬಾಜೀರಾವ ಅವರ ಸದರಿ ೪೦೦೦ ರೂಪಾಯಿಯ ಬಗ್ಗೆ ಪರಶರಾಮ ರಾಮಚಂದ್ರ, ಅವರ ಹೆಸರಿನಲ್ಲಿ ಸುರುಸನ್ ಮಯಾತೈನ ವ ಆಲಫ ವರ್ಷ ಸನದು ಮಾಡಲಾಯಿತು. ಅದರ ನಕಲು.

೮) ಶ್ರೀಮಂತ ಬಾಜೀರಾವನು ಸದರಿ ನಾಲ್ಕು ಸಾವಿರ ರೂಪಾಯಿ ಬಗ್ಗೆ ಧೋಂಡೊ ಬಲ್ಲಾಳರ ಹೆಸರಿನಲ್ಲಿ ಸುರುಸನ್ ಮಯಾಚೈನ ವ ಅಲಫ ವರ್ಷ ಸನದು ಮಾಡಿದ ನಕಲು.

೯) ಸದರಿ ನೇಮಕಾತಿಯಲ್ಲಿ ಸವಣೂರ ನಗರ ಸಹಿತ ೨೫ ಗ್ರಾಮಗಳನ್ನು ನೇಮಿಸಿಕೊಟ್ಟು ಬಾಲಕೃಷ್ಣ ಲಕ್ಷ್ಮಣನು ಕೃಷ್ಣಾಜಿ ವೆಂಕಾಜಿಯ ಹೆಸರಿಗೆ ಬರೆದ ಸನದಿನ ನಕಲು.

೧೦) ಇಜಾನಿಬನ ತಂದೆಗೆ ಪ್ರತಿವರ್ಷ ೬೦೦೦ ರೂಪಾಯಿ ಪೆನ್ಶ್ಯನ್ ನಿರ್ಧರಿಸಿ ಅಲ್ಲಿಷಾನ ಸರಕಾರವು ಸನ್ ೧೮೨೦ ಇಸವಿಯಂದು ನೀಡಿದ ಸನದಿನ ನಕಲು.

೧೧) ಇಜಾನಿಬನನು ಗದ್ದುಗೆ ಏರಿದ ಸಮಯದಲ್ಲಿ ಮೆಹೆರಬಾನ ಬಾಬರ್ ಸಾಹೇಬ ಬಹಾದೂರನು ಸನ್ ೧೮೩೪ರಲ್ಲಿ ನೀಡಿದ ಜಾಹೀರನಾಮಾದ ನಕಲು.

೧೨) ಇಜಾನಿಬನಿಗೆ ಸನದಿನ ಹೊರತು ದಿವಾಣಿ ಮತ್ತು ಪೌಜದಾರಿ ಆಖ್ತಿಯಾರ ಪೂರ್ಣವಾಗಿದೆ ಎಂದು ಆ ಅಲ್ಲಿಷಾನ ಸರಕಾರವು ಸುರುಸನ್ ಸೀತ ಮಯಾತೈನ ವ ಅಲಫವರ್ಷ ನೀಡಿದ ಪತ್ರದ ನಕಲು.

೧೩) ಖಿರಶಿನಾಮಾ.

ಈ ರೀತಿ ಇದರಲ್ಲಿ ಆಯುಷಫಕಾನನು ಮಲಫುಜನಿಗೆ ನೀಡಿದ ಫರ್ಮಾನು. ಸದಾಕಾಲ ಪತ್ರ ಬರೆದು ಸ್ನೇಹವನ್ನು ಮುಂದುವರಿಸಿಕೊಂಡು ಹೋಗಬೇಕು. ಜ್ಯಾದಾ ನವೀಸದ ಆಯಾಮ ಚಾದಮಾನಿ ಮುದಾಮ ಮುಸಾದಾಮಬಾದ.

(ಬ)

ನವಾಬ ಸಾಹೇಬ ಸವಣೂರಕರ ಇವರಿಂದ, ಅವರ ವಂಶಜರಲ್ಲಿ ಯಾರು ರಾಜ್ಯವನ್ನು ಗಳಿಸಿದರೋ ಮತ್ತು ಅಂದಿನಿಂದ ಒಬ್ಬರ ನಂತರ ಒಬ್ಬರಂತೆ ಯಾವ ಯಾವ ವರ್ಷ ಪುರುಷರು ಗದ್ದುಗೆಯನ್ನು ಏರಿದರೋ ಮತ್ತು ಅವರ ಮುದ್ರೆ ಯಾವ ಪ್ರಕಾರದ್ದಾಗಿತ್ತು ಎನ್ನುವದರ ಕುರಿತು–

ಆವಕ ನಂಬರ್ ೧೧೬ ಪೈವಸ್ತಿ ತಾರೀಕ ೮ ಅಕ್ಟೋಬರ ಸನ್ ೧೮೫೩ ಇಸವಿ. ಮುಕ್ಕಾಮ ಬೆಳಗಾವ, ಸಾಹೇಬ ಮುಷಪಕ ಮೋಕರಮ್ ಮೆಹೆರಖಾನ ಆಲತಾಫ ಫರ್ಮಾಯಾಬಂಗಥ ಮೆಸ್ತರ ಯೆಥರೀಜಸಾಹೇಬ ಬಹಾದೂರ ಇಸ್ಕೊಯರ, ಅಸಿಸ್ಟಂಟ್ ಇನಾಮ ಕಮಿಶನರ್ ದಾಮ ಆಶಫಾಮ.

ಅಜಜಾನಿವ ನವಾಬ ಅಬ್ದುಲಾ ದಲೇರಖಾನ ದಲೇರಜಂಗ ಬಹಾದೂರ ಸವಣೂರ, ಸಲಾಮ ಬಾದಂಚ್ ಸಲಾಮ. ಷರಪಷೌಕ ಮುಲಾಕಾತ ಬಹುಜತ ಆಯಾತ ಮಷಹುದ ಜಮೀರ ಮುನೀರ ಗರ್ದಾನಿದಾಮ ಆಯೆದ ಇಲ್ಲಿಯ ಹಕೀಕತ್ ತಾರೀಖ ಥ ೨೫ ಜಿಲ್ಹೆದ ಸನ್ ೧೨೬೯ ಹಿಜರಿ ತಾ.೨೯ ಮಾಹೇ ಸಪ್ಟಂಬರ ಸನ್ ೧೮೫೩ ಇಸ್ವಿವರೆಗೆ ಕ್ಷೇಮ ಅರಿತು, ಆ ಸಾಹೇಬರ ಕ್ಷೇಮ–ಸಮಾಚಾರವನ್ನು ತಿಳಿಸುತ್ತ ಸಂತೋಷದಿಂದ ಇರಬೇಕು. ದರಿ ಆಯಾಮ ಆ

ಸಾಹೇಬರು ತಾರೀಖ ೨೫ ಮಾಹೇ ಜುಲೈ ಸನ್ ೧೮೫೩ ಇಸ್ವಿಯ ಪತ್ರದಲ್ಲಿ ತಿಳಿಸಿದಂತೆ ಕಾರ್ಯಕೈಕೊಂಡು ಮರಳಿ ಉತ್ತರ ನೀಡುವದೇನೆಂದರೆ– ನಮ್ಮ ಮೂಲಪುರುಷರು ದಿಲ್ಲಿಯಿಂದ ಕರ್ನಾಟಕ ಪ್ರಾಂತಕ್ಕೆ ಬಂದು, ಸನ್ ಹಿಜರಿ ೧೧೯೭ ರಲ್ಲಿ ನವಾಬ ಅಬ್ದುಲ ರವೂಫಖಾನ ಸಾಹೇಬ, ಕಿತಾಬ್ 'ದಿಲೆರಖಾ ದಲೇರಜಂಗ ಬಹಾದೂರ' ಇವರು ರಾಜ್ಯವನ್ನು ಸಂಪಾದಿಸಿ, ಸದರಿ ವರ್ಷದಿಂದ ಸನ್ ೧೧೩೨ ಹಿಜರಿ ವರ್ಷದವರೆಗೆ, ರಾಜ್ಯವನ್ನು ಭೋಗಿಸಿ, ತೀರಿಕೊಂಡರು. ಬಳಿಕ ಸದರಿ ನವಾಬ ಸಾಹೇಬ ಇವರ ಜೇಷ್ಠ ಪುತ್ರ ನವಾಬ ಅಬ್ದುಲ್ಲಾ ಫತಾಖಾ ಸಾಹೇಬ ಬಹಾದೂರ ದಲೇರಜಂಗ ಅವನು ತಂದೆಯ ಸ್ಥಾನವನ್ನು ಅಲಂಕರಿಸಿ ಮೂರು ತಿಂಗಳ ಬಳಿಕ ಅಂತ್ಯಕಾಲವಾದನು. ನಂತರ ಸದರಿ ಫತಾಬ ಸಾಹೇಬರಿಗೆ ಮಕ್ಕಳು ಇಲ್ಲದ್ದರಿಂದ ಅವರ ಕಿರಿಯ ಸೋದರ ನವಾಬ ಅಬ್ದುಲ್ಲಾ ಮಹಮ್ಮದ ಸಾಹೇಬ ಬಹಾದೂರ ದಿಲೇರಜಂಗ ಇವನು ಆರು ತಿಂಗಳಕಾಲ ರಾಜ್ಯವಾಳಿ ತೀರಿಕೊಂಡನು. ಅನಂತರ ನವಾಬ ಅಬ್ದುಲ್ಲಾ ಗಫರಖಾ ಸಾಹೇಬ ಬಹಾದೂರಖಾ ದಿಲೇರಜಂಗ ಇವನು ಸನ್ ೧೧೩೮ವರೆಗೆ ರಾಜ್ಯ ನಡೆಸಿ ತೀರಿ ಹೋದನು. ಬಳಿಕ ನವಾಬ ಅಬ್ದುಲ್ಲಾ ಮಜೀದಖಾ ಸಾಹೇಬ ಬಹಾದೂರ ದಲೇರಜಂಗ ಇವನು ಗದ್ದುಗೆ ಏರಿ ಸನ್ ೧೧೬೮ ಹಿಜರಿವರೆಗೆ ರಾಜ್ಯವಾಳಿ ತೀರಿ ಹೋದನು. ಅನಂತರ ಸದರಿ ಸನ್ ೧೧೬೮ ಹಿಜರಿ ನವಾಬ ಅಬ್ದುಲಾ ಹಕೀಮಖಾ ಸಾಹೇಬ ದಿಲೇರಜಂಗ ಬಹಾದೂರ ಇವನಿಗೆ ಗದ್ದುಗೆ ಲಭಿಸಿ, ಅವನು ಸನ್ ೧೨೦೦ ಹಿಜರಿವರೆಗೆ ರಾಜ್ಯವನ್ನು ಆಳಿದನು. ಈ ರೀತಿ ನಮ್ಮ ಪೂರ್ವಜರು ರಾಜ್ಯವಾಳಿದ್ದಾರೆ. ಆದರೆ ಮೂಲ ಪುರುಷನಾದ ಅಬ್ದುಲ ರವೂಫಖಾ ಸಾಹೇಬ ಬಹಾದೂರ ದಲೇರಜಂಗ ಬಿನ್ ನವಾಬ ಅಬ್ದುಲ ಕರೀಮಖಾ ಸಾಹೇಬನಿಗೆ ಬಾದಶಹಾರಿಂದ ಕಿತಾಬ್ ಲಭಿಸುವ ಮುನ್ನ ತನ್ನ ಹೆಸರು ಅಬ್ದುಲ ರವೂಫ ಇಬನೇ ಅಬ್ದುಲ ಕರೀಮ ಎಂದು ಮುದ್ರೆಯನ್ನು ಮೂಡಿಸಿ ಅದೇ ಮೊಹರನ್ನು ಬಳಸುತ್ತ ಬಂದಿದ್ದರು. ಅನಂತರ ಆಲಮಗಿರ ಬಾದಶಹಾ ಗಾಜಿ ಇವನಿಂದ ದಲೇರಖಾ ದಲೇರಜಂಗ ಬಹಾದೂರ ಎಂಬ ಕಿತಾಬ ಸನ್ ೧೧೯೭ ಹಿಜರಿಯಲ್ಲಾಗಿ ಸದರಿ ಕಿತಾಬ್ ದಲೇರಖಾ ಬಹಾದೂರ ದಲೇರಜಂಗ ಎಂದು ಮೋಹರನ್ನು ತಯಾರಿಸಲಾಯಿತು. ಅದು ಎಷ್ಟೋ ದಿನ ನಡೆಯುತ್ತ ಬಂದಿದೆ. ಅನಂತರ ಯಾವ ಸನ್‌ದಲ್ಲಿ ಗದ್ದುಗೆ ಲಭಿಸಿತೋ, ಆ ಸನ್‌ನ ಹೊಸ ಮೋಹರು ತಯಾರಿಸಿ, ಪೂರ್ವದ ಕಿತಾಬ್ ದಿಲೇರಖಾ ಬಹಾದೂರ ದಲೇರಜಂಗ ಕಿತಾಬ್‌ನ್ನು ಹಾಗೇ ಉಳಿಸಿಕೊಂಡು, ಮುದ್ರೆ ಮಾಡಿಸಿ ಮುನ್ನಡೆಸುತ್ತ ಬಂದಿದ್ದೇವೆ. ಈ ರೀತಿ ಈ ರಾಜ್ಯ ಸನ್ ೧೨೦೦ ಹಿಜರಿ ಪರ್ಯಂತ ಸಾಗುತ್ತ ಬಂತು. ಅದೇ ವರ್ಷ ನಮ್ಮ ಅಜ್ಜ ನವಾಬ ಅಬ್ದುಲ ಹಕೀಮಖಾ ಸಾಹೇಬ. ಬಹಾದೂರ ದಿಲೇರಜಂಗನು ಟೀಪೂ ಸುಲ್ತಾನನ ಮುಖ್ಯ ಅಧಿಕಾರಿ (ನಾಯಕ)

ಆಗಿದ್ದನು. ಕೊನೆಗೆ ಕಾಳಗ ನಡೆದು ಎದುರಿಸುವದು ಆಗದೆ, ನಗರ ತೊರೆದು ಹೋಗುವಾಗ ಕೋಟಿಗಟ್ಟಲೆ ರೂಪಾಯಿಯ ಸಂಪತ್ತು, ಮುತ್ತುರತ್ನ ಮುಂತಾದವುಗಳನ್ನು ಬಿಟ್ಟು ಹೋದನು. ಆಗ ಖಜಾನೆಯಲ್ಲಿರುವ ಆ ಮೋಹರುಗಳನ್ನೆಲ್ಲ ಹಾಗೆ ಬಿಟ್ಟು ಹೋದರು. ಹಾಗೆ ಹೋಗುವಾಗ ತಮ್ಮ ಸಂಗಡ ಒಂದು ಚಿಕ್ಕ, ಒಂದು ದೊಡ್ಡ ಹೀಗೆ ಎರಡು ಮೊಹರು ಮಾತ್ರ ಉಳಿಸಿಕೊಂಡಿದ್ದರು. ಅದು ಈಗ ಇಜಾನಿಬನ ಬಳಿಯಲ್ಲಿದೆ. ಅದನ್ನು ಒಂದು ಕಾಗದದ ಮೇಲೆ ಮುದ್ರಿಸಿ, ಅದರ ಪಕ್ಕದಲ್ಲಿ ಶರಾ ಬರೆಯಲಾಗಿದೆ. ಅದು ಇದರೊಂದಿಗೆ ಲಗತ್ತಿಸಲಾಗಿದೆ. ಮುತಾಲಿಕ ಹೇಳುವಾಗ ಬಹಿರಂಗವಾಗುತ್ತದೆ. ಅದೂ ಅಲ್ಲದೆ ಇಲ್ಲಿಯ ರಾಜ್ಯದಲ್ಲಿ ಮಂತ್ರಿಯಾಗಿ ಸೇವೆ ಮಾಡಿದವರಿಗೆ ಇನಾಮ ವಗೈರೆ ಕೊಡಲು ಸ್ವತಂತ್ರವಾಗಿ ಏನೂ ಇಲ್ಲ. ಹಾಗೇನಾದರೂ ಇನಾಮು ವಗೈರೆ ನೀಡುವದಿದ್ದರೆ ಗದ್ದುಗೆ ಮೇಲಿದ್ದ ನವಾಬರಿಗೆ ಅರ್ಜಿ ಕಳಿಸಿ, ನವಾಬ ಸಾಹೇಬರ ಅನುಮತಿ ಪಡೆದು ಅದನ್ನು ನೀಡುವ ರಿವಾಜಯಿದೆ. ಮಂತ್ರಿಯಾಗಿ ಕಾರ್ಯ ಮಾಡಿದವರ ಮೊಹರು ನಮ್ಮಲ್ಲಿಲ್ಲ. ಸದಾಕಾಲ ಪತ್ರ ಬರೆದು ಕ್ಷೇಮ ಸಮಾಚಾರ ತಿಳಿಸಿ, ಅನುಗ್ರಹ ಮಾಡುತ್ತಿರಬೇಕು. ಜ್ಯಾದಾ ಫೆ ನವಿಸದ ಆಂಗಮ ಪಾದಮಾನಿ ಮುದಾಮ ಮಸ್ತನಾಮ ಬಂದ.

(ಕ)

ಸವಣೂರ ನವಾಬರ ಸಂಸ್ಥಾನದ ಸುರಕ್ಷಿತ ಯಾದಿಯ ಕೈಫಿಯತ್ ವಂಶಾವಳಿ ವಗೈರೆ ತಪಶೀಲು ಧಾರವಾಡ ಪ್ರಾಂತ.

೧. ಅವರಂಗ ನಾಲ್ಕರಲ್ಲಿ ಸವಣೂರಿನ ಪ್ರಸಿದ್ಧಿಯನ್ನು ಬಾದಶಹಾರ ಕೈಫಿಯತ್‌ದಲ್ಲಿ ಹೊಗಳಲಾಗಿದೆ. ಜ್ಯಾನಿಸಾರಖಾ ಅಫಗಾನ ಪಠಾಣ ಅಡ್ಡ ಹೆಸರು ಮಯಾಣಾ ಹೇಳುವ ಅಮೀರ. ವಿಜಾಪುರದ ರಾಜ್ಯವು ಆದಿಲಶಾಹಿಯದು. ಇಸ್ಮಾಯಿಲ್ ಆದಿಲಶಾಹಿಯು ೨೫೦೦ ಅಶ್ವದಳದ ಅಧಿಕಾರವನ್ನು ನೀಡಿದ್ದನು. ಖಾನಮಜಕೂರ ತೀರ ಕಪ್ಪಾಗಾಗಿದ್ದ. ಏಕೆಂದರೆ ಕಪ್ಪು ಬೆಟ್ಟ ಎಂದು ಹೆಸರಿಡಲಾಗಿತ್ತು. ಇಬ್ರಾಹಿಮ ಆದಿಲಶಹಾನ ರಾಜ್ಯದಲ್ಲಿ ದೊಡ್ಡ ಹುದ್ದೆಯನ್ನು ಪಡೆದಿದ್ದ. ಅಹಮದನಗರದ ಕಾಳಗದಲ್ಲಿ ಬಾದಶಹಾನ ಖುರಹಾನ ನಿಜಾಮಶಹಾನ ವಿರುದ್ಧ ಪರಿಶ್ರಮದಿಂದ ಹೋರಾಡಿ ತೀರಿಕೊಂಡ. ಅವನಿಗೆ ಇಬ್ಬರು ಮಕ್ಕಳಿದ್ದರು. ಹಿರಿಯ ಮಗನ ಹೆಸರು ಅಜೀಜಮಿಯಾ ಕಿತಾಬ್, ಕಿರಿಯನ ಹೆಸರು ನಬಿಬಾ ಕಿತಾಬ್ ಅವನಿಗೆ ೭೦೦ ಅಶ್ವದಳ. ಒಂಟೆಯ ನಗಾರಿ, ಸೈನ್ಯದ ಅಧಿಕಾರ ನೀಡಿ ಶಿಂಧೆಯ ಪ್ರದೇಶಕ್ಕೆ ನೇಮಿಸಿದನು. ಹಿರಿಯ ಮಗನನ್ನು ತಂದೆಯ ಗದ್ದುಗೆಯ ಮೇಲೆ ಕುಳ್ಳಿರಿಸಲಾಯಿತು. ಈ ಅಜೀಜಮಿಯಾ ಸೈನ್ಯಸೇರಿ ಶೌರ್ಯದಿಂದ ಹೋರಾಟ ಮಾಡಿದನು. ಅವನಿಗೆ ೩೦೦೦ ಅಶ್ವದಳದ

ಅಧಿಕಾರಿ. ಹಿರಿಯ ಧ್ವಜ, ನಗಾರಿಯನ್ನು ಕೊಡುಗೆಯಾಗಿ ನೀಡಲಾಯಿತು. ಖಾನ ಮಜಕೂರನು ಗುಲಬರ್ಗಾದ ಹತ್ತಿರ ಕುತುಬಶಹಾನ ಕಾಳಗದಲ್ಲಿ ಗುಂಡು ತಗುಲಿ ಸತ್ತನು. ಅವನ ಮಗನಾದ ಜಬರೆಖಾನ ಅಪ್ಪನ ಗದ್ದುಗೆ ಏರಿದನು. ಅವನು ಸೈನಿಕರ ಮನವೊಲಿಸಿ ಜಾಣತನದಿಂದ ಸಂರಕ್ಷಿಸಿದನು. ವ್ಯವಹಾರಿಕ ಜಾಣತನ ಅವನಲ್ಲಿತ್ತು. ಬಾದಶಹಾನ ಆಜ್ಞೆಯಂತೆ ನಡೆದುಕೊಳ್ಳುತ್ತಿದ್ದನು. ಇಡೀ ಸೈನ್ಯ ಸವಣೂರದಲ್ಲಿ ಬುದ್ಧಿವಂತನೆಂದು ಅನಿಸಿಕೊಂಡಿದ್ದನು. ಮುಂದೆ ಎಷ್ಟೋ ದಿನಗಳ ಬಳಿಕ ವಿಜಾಪುರದಲ್ಲಿ ಆದಿಲಶಹಾನ ಆಳ್ವಿಕೆ ಶುರುವಾದಾಗ ಎಲ್ಲ ಸೈನ್ಯದ ಅಧಿಕಾರಿಗಳಿಗೆ ಜಹಾಗೀರು ನೀಡಲಾಯಿತು. ಆಗ ಇವನಿಗೂ ಬಂಕಾಪುರ ವಗೈರೆ ೨೨ ಜುಲೈ, ಕನಿಷ್ಠ ೫ ಲಕ್ಷದಷ್ಟು ನಗದು ಮತ್ತು ಎಷ್ಟೋ ಸಾವಿರದಷ್ಟು ಜಹಗೀರು ನೀಡಿ, ಐದು ಸಾವಿರ ಸೈನ್ಯವನ್ನು ನೀಡಲಾಯಿತು. ಅವನು ೪ ಸಾವಿರ ಸವಾರರ ಚಾಕರಿ ಮಾಡಿದನು. ತನ್ನ ಮಗನಾದ ಬಹಲೋಲಖಾನನಿಗೆ ನಾಯಕತ್ವ ನೀಡಿ ರಾಜ್ಯದ ಬಂದೋಬಸ್ತಿಗಾಗಿ ಕಳಿಸಿದನು. ಇವನು ಜಹಾಗೀರಿನ ಪ್ರದೇಶಕ್ಕೆ ಬಂದನು. ಅವನು ಕಪ್ಪಾಗಿದ್ದು, ಮಲೀನ ಬಟ್ಟೆ ಧರಿಸುತ್ತಿದ್ದ. ಹೀಗಾಗಿ ಸೈನ್ಯದ ಜನರು ಅವನನ್ನು ಕಪ್ಪು ಬೆಟ್ಟ ಎಂದು ಕರೆಯುತ್ತಿದ್ದರು. ಅವನು ಜನರಿಗೆ ಉಪದ್ರವ ನೀಡುತ್ತಿದ್ದ. ಅವನಲ್ಲಿ ಅಂತಃಕರಣವೇ ಇರಲಿಲ್ಲ. ಹೀಗಾಗಿ ಅವನನ್ನು ಚಿಂದಿಬಟ್ಟೆಯ ಬಹಲೋಲಖಾನ ಕಪ್ಪುಬೆಟ್ಟ ಎಂದು ಕರೆದರು. ಇವನ ಅಪ್ಪನಾದ ಜಂಬರನಾನನು ಅನಾಗೊಂದಿಯಲ್ಲಿ ರಾಜಾ ರಾಮರಾಜನನ್ನು ಕೊಂದನು. ಎಷ್ಟೋ ಸಂಪತ್ತು ದೋಚಿದನು. ಕೊನೆಗೆ ಕಾಳಗದಲ್ಲಿ ಭಿಲ್ಲೆಯ ಇರಿತದಿಂದಾಗಿ ಸತ್ತು ಹೋದನು. ಅನಂತರ ತಂದೆಯ ಸೈನ್ಯದ ಅಧಿಕಾರ, ೨೨ ಜಿಲ್ಲೆಗಳ ಪ್ರಾಂತ ಎಲ್ಲವನ್ನು ತನ್ನ ಹೆಸರಿಗೆ ಸನದು ಮಾಡಿಕೊಂಡ. ಪ್ರದೇಶದ ಸಂರಕ್ಷಣೆ ಮಾಡಿದನು. ಪೂರ್ವಕ್ಕೆ ೧೮ ಹರದಾರಿ ದೂರದಲ್ಲಿ ಜಾನವಾರನಳ್ಳಿ ಎಂದಿತ್ತು. ಅಲ್ಲಿಯ ನೀರು ಮತ್ತು ಊರು ಚೆನ್ನಾಗಿದೆ ಎಂದು ಶ್ರೇಷ್ಠ ಕುಲೀನ ಮನೆತನದವರನ್ನು ಕರೆಯಿಸಿ, ಆಶ್ರಯ ನೀಡಿ, ವಸತಿಯನ್ನು ಬೆಳೆಸಿ ಸವಣೂರ ಎಂದು ಹೆಸರಿಸಿ, ಅಲ್ಲಿಯೇ ತಾನು ಉಳಿದುಕೊಂಡನು. ಬಂಕಾಪುರ ಕೋಟೆಯಲ್ಲಿ ಸೈನ್ಯವಿರಿಸಿದನು. ಗ್ರಂಥದಲ್ಲಿ ಬಂಕಾಪುರ ಪ್ರಸಿದ್ಧವಾಗಿದೆ. ಆಗ ಜನವಸತಿಯೂ ಚೆನ್ನಾಗಿತ್ತು. ಬಂಕಾಪುರದಿಂದ ಎರಡು ಹರದಾರಿ ದೂರದಲ್ಲಿ ಜಾಬಿನಗಡ ಎಂಬ ಕೋಟೆಯಲ್ಲಿ ಬೆಟ್ಟವಿತ್ತು. ಅಲ್ಲೊಂದು ಗುಹೆಯಿತ್ತು. ಈ ರಮ್ಯ ಸ್ಥಳದಲ್ಲಿ ತಾಪಸಿಗಳು ವಾಸ ಮಾಡುತ್ತಾರೆ. ಬೆಟ್ಟ ಮತ್ತು ಬಂಕಾಪುರದ ನಡುವೆ ಹೊಲದೋಟವಿತ್ತು. ನಗರ ಮತ್ತು ಬೆಟ್ಟದ ನಡುವೆ ಸಾಕಷ್ಟು ಹಸಿರು ಗಿಡಮರಗಳಿರುವವದರಿಂದ ವೈಕುಂಠದಂತೆ ಶೋಭಿಸುತ್ತಿತ್ತು. ಇತ್ತೀಚೆಗೆ ಜನ

ವಸತಿ ಕೆಟ್ಟದ್ದರಿಂದ ದೋಜಖಾ ಎಂಬವನು ಒಂದು ನರಕವು ಜನರಿಗಿಂತ ಕೆಡಕಾಗಿದೆ ಎಂದು ವರ್ಣಿಸಿದ್ದಾನೆ. ಎಷ್ಟೋ ದಿನಗಳ ಬಳಿಕ ವಿಜಾಪುರದ ಆದಿಲಶಹಾನ ಸೈನ್ಯದಲ್ಲಿ ಫಿತೂರಿ ನಡೆಯಿತು. ಇವನೂ ಫಿತೂರಿಯಾದ. ಇಷ್ಟರಲ್ಲಿ ಔರಂಗಜೇಬನು ದಿಲ್ಲಿಯ ಬಾದಶಹಾನ ಪರವಾಗಿ ಸೈನ್ಯ ಸಮೇತ ಬಂದು, ಪ್ರದೇಶಗಳ ಬಂದೋಬಸ್ತು ಮಾಡುತ್ತ ಅಹಮದನಗರ ವಗೈರೆ ಕೋಟೆಗಳನ್ನು ಜಯಿಸಿ ಮುನ್ನುಗ್ಗುತ್ತಿರುವಾಗ ಎಷ್ಟೊ ಧನಿಕರು ಅವನನ್ನು ಭೇಟಿ ಮಾಡಿ ಕಾಣಿಕೆ ಸಲ್ಲಿಸಿದರು. ಈ ಖಾನ ಮಜಕೂರನೂ ಸಹ ಮೂರುಲಕ್ಷ ರೂಪಾಯಿ ಕಪ್ಪ ಕಾಣಿಕೆ ತಂದನು. ಎಷ್ಟೋ ಅಪರೂಪದ ವಿರಳ ಪದಾರ್ಥ ತಿಂಡಿ ತಿನಸುಗಳನ್ನು ಸಲ್ಲಿಸಿ, ಪುರಾತನ ಸೈನ್ಯವು ಬಾದಶಹಾನ ಸೈನ್ಯದಲ್ಲಿ ಸೇರ್ಪಡೆಯಾಗಿದೆ ಎಂದು ಮನವರಿಕೆ ಮಾಡಿ ಸನದು ವಗೈರೆ ಮಾಡಿದೆ. ಕರ್ನೂಲಿನ ಸೈನ್ಯಾಧಿಕಾರಿ ಹುದ್ದೆಯನ್ನು ಕೊಡಿಸಿದನು. ಬಳಿಕ ಖಾನ ಮಜಕೂರನು ಹಲವು ಅಧಿಕಾರಿಗಳನ್ನು ನೇಮಿಸಿ ಪಾಳೆಗಾರರನ್ನು ಬಂಧಿಸಿ, ೪೯ ವರ್ಷ ಸುಖರೂಪದಿಂದ ಆಳಿಕೆ ನಡೆಸಿದನು. ವಿಜಾಪುರದ ಕೊನೆಯ ದೌಲತ ಸಿಕಂದರನಾದ ಆದಿಲಶಹಾನ ಕಾಲದಲ್ಲಿ ಬಹಲೋಲಖಾನ ತೀರಿಕೊಂಡನು. ಅವನ ಮಗನಾದ ದಿಲೇರಖಾ ಕಿತಾಬ್, ಈ ಪಿರಬಾ ಬಹಾದೂರನೇ ಅಪ್ಪನ ಗದ್ದುಗೆ ಏರಿದನು. ಪ್ರದೇಶದ ಬಂದೋಬಸ್ತ ಮಾಡಿದನು. ಆದಿಲಶಹಾನ ಕಾಲದಲ್ಲಿ ಮಹತ್ವದ ಜನರೊಂದಿಗೆ ಸಖ್ಯ ಬೆಳೆಸಿ, ಸತತ ಕಾಗದ ಪತ್ರಗಳನ್ನು ಕಳಿಸಿ ಸ್ನೇಹ ಬೆಳೆಸಿದ. ಆದರೆ ಮನಃಪೂರ್ವಕವಲ್ಲ, ಎಷ್ಟೋ ದಿನಗಳ ನಂತರ ದಿಲ್ಲಿಯ ರಾಜನು ಆಲಮಗಿರಿ ಬಾದಶಹಾನಾಗಿದ್ದರಿಂದ ದಕ್ಷಿಣದ ಬಂದೋಬಸ್ತಿಗಾಗಿ ಹೊರಟನು. ಈ ವರ್ತಮಾನವನ್ನು ಕೇಳಿ ಇವನು ೨೦೦೦ ಅಶ್ವದಳ, ೩೦೦೦ ಕಾಲ್ದಳ, ೫೦೦೦ ರುಪಾಯಿ ಸಹಿತ ಬಂದು ಹುಜೂರರನ್ನು ಭೇಟಿಯಾದನು. ಬಾದಶಹಾನ ಯೋಗಕ್ಷೇಮವನ್ನು ನೋಡಿಕೊಂಡನು. ೧೧೯೭ ಹಿಜರಿಯಲ್ಲಿ ಆಲಮಗಿರಿಯು ವಿಜಾಪುರವನ್ನು ಗೆದ್ದನು. ಆಗವನು ಹೇಳಿದ್ದು–ರಾಜಪುತ್ರ ಸುಲ್ತಾನ ಮೋಜಮ ಅಹಮದಾಬಾದ ಬೀದರ ಕೋಟೆ ಬಿಡಲು ಒಪ್ಪಿದನು. ಒಂದು ತಿಂಗಳು ಸಮಾಲೋಚನೆ ಮಾಡಿದರು. ಬಳಿಕ ಆ ಸ್ಥಳದ ಕಿಲ್ಲೇದಾರ ಮತ್ತು ಮಿರಜಾನ ನವಖಿಷಿ ಆದಿಲಶಹಾ ಕಿಲ್ಲೇದಾರ–ಇವರು ಸಿಡಿಮದ್ದು ಹಾಕಿ ಸುಟ್ಟರು. ವಿಜಯ ಸಿಕ್ಕಿತು. ಜಫರಾಬಾದ ಎಂದು ಹೆಸರಿಟ್ಟರು. ಬಳಿಕ ಕಲಜಿ ಸರದಾರನು ಕಾರಸ್ತಾನ ಮಾಡಿದನು. ಈ ಸಂಪತ್ತನ್ನೆಲ್ಲ ತಾನು ಹೊಡೆದುಕೊಳ್ಳಬೇಕೆಂದು ಮನದೊಳಗೇ ಯೋಚನೆ, ಕುತಂತ್ರ ಮಾಡಿ, ನಾನಾಬಗೆಯಲ್ಲಿ ಬೋಧನೆ ಮಾಡಿ ರಾಜಕುಮಾರನನ್ನು ಕರೆಯಿಸಿ ಬೀದರ ನಗರಕ್ಕೆ ಒಯ್ದು ಒಪ್ಪಿಗೆ ಪತ್ರ

ಬರೆಯಿಸಿಕೊಂಡನು. ಆಗ ಸುಲ್ತಾನನು ಸರದಾರರನ್ನು ಕರೆಯಿಸಿ, ರಾಜಕುಮಾರನನ್ನು ಜೀವ ಸಹಿತ ಯಾರಾದರೂ ಹಿಡಿದು ತರಬಲ್ಲಿರಾ? ಎಂದು ಕೇಳಿದನು. ಈ ಮಾತಿಗೆ ಉಳಿದ ಸರದಾರರು ಮೌನ ತಾಳಿದರು. ಆಗ ಈ ಖಾನಮಜಕೂರನು ಎದ್ದು ನಮಸ್ಕರಿಸಿ ಈ ಗುಲಾಮನಿಗೆ ಆಜ್ಞೆ ಮಾಡಿದರೆ, ತಾನು ರಾಜಕುಮಾರನನ್ನು ಬಂಧಿಸಿ ತರುವದಾಗಿ ತಿಳಿಸಿದನು. ಈ ಮಾತಿಗೆ ಒಪ್ಪಿ ಸಂತೋಷದಿಂದ ದಿಲೇರಖಾ ಎಂಬ ಕಿತಾಬ್ ಮತ್ತು ಅಂಬಾರಿ ಸಹಿತ ಆನೆ ಮುಂತಾದವುಗಳನ್ನು ನೀಡಿ ಗೌರವಿಸಲಾಯಿತು. ಬಳಿಕ ಅವನು ಅಲ್ಲಿಂದ ಹೊರಬಿದ್ದು ರಾತ್ರಿಯೇ ರಾಜಕುಮಾರನ ಬಳಿಗೆ ಬಂದನು.–'ಈ ಸೇವಕ ನಿಮ್ಮವನು ನಿಮ್ಮಿಂದಲೇ ನಮಗೆ ಸ್ಥಾನಮಾನ ಲಭಿಸಿದೆ. ನಿಮ್ಮ ಅನ್ನ ತಿಂದೇ ನಾವು ದೊಡ್ಡವರಾದೆವು ಎಂದೆಲ್ಲ ಹೇಳಿದನು. ಈ ಮಾತಿಗೆ ರಾಜಕುಮಾರನು ಇವನು ತನ್ನ ಹಿತೈಷಿಯಾಗಿದ್ದಾನೆ ಎಂದು ಭಾವಿಸಿ 'ನೀವೆ ನಂಬಿಕೆಗೆ ಅರ್ಹರು, ನಿಮ್ಮಂಥವರ ಸೇವೆ ಅಗತ್ಯ ಬೇಕು' ಎಂದು ನೇಮಿಸುವ ಆಜ್ಞೆ ಮಾಡಿದನು. ಪದ್ಧತಿಯಂತೆ ಆಜ್ಞೆ ಬಂದು ತಲುಪಿತು. ಭೇಟಿಯಾಯಿತು. ಖಾಸಾ ವ್ಯವಸ್ಥೆಗಾಗಿ ಆಚೆ ಈಚೆ ನೋಡಿದಾಗ ಗುಲಾಲಖಡ್ ಎಂಬವನು ಬನದಲ್ಲೋ ವಾಸ್ತವ್ಯದ ವ್ಯವಸ್ಥೆ ಮಾಡಿದನು. ಆತಿಥ್ಯ ಕೈಕೊಂಡನು. ಕೆಲ ದಿನಗಳಲ್ಲೇ ರಾಜಕುಮಾರ ಮತ್ತು ಇವನ ನಡುವೆ ಕನಿಷ್ಠ ಸ್ನೇಹ ಬೆಳೆಯಿತು. ಒಂದು ದಿನ ಸುತ್ತಾಡಲು ಹೋಗುವ ನಿಮಿತ್ತದಲ್ಲಿ ಎಲ್ಲ ವ್ಯವಸ್ಥೆ ಮಾಡಿ ಖಾನಮಜಕೂರನು ತನ್ನ ಆನೆಯ ಅಂಬಾರಿ ತರಿಸಿದನು. ಮೊದಲು ರಾಜಕುಮಾರನನ್ನು ಕೂರಿಸಿ, ಬಳಿಕ ತಾನು ಏರಿಕೂತು ಆನೆಯನ್ನು ಮುನ್ನಡೆಸಿದನು. ದಾರಿಯಲ್ಲಿ ರಾಜಕುಮಾರನ ಜೊತೆಗೆ ಮಾತಾಡುತ್ತ–ಮಾತಾಡುತ್ತ ಆಲಮಗಿರಿ ತಡೆಗೋಡೆಯ ಹಾದಿ ಹಿಡಿದ. ರಾಜಕುಮಾರನ ಸೈನ್ಯದವರೆಲ್ಲ ಬಂದು ಇದನ್ನು ಕಂಡು ಮೋಸವಾಯಿತು ಎಂದುಕೊಂಡು 'ಎಲ್ಲಿಗೆ ಹೋಗುತ್ತೀರಿ?' ಎಂದು ಕೇಳಿದರು. ಆಗವನು ಅವರನ್ನೆಲ್ಲ ಕೊಂದು ನೇರವಾಗಿ ಮಗನನ್ನು ಬಾದಶಹಾನ ಬಳಿಗೆ ತಂದು ಒಪ್ಪಿಸಿದನು. ಆಗ ಬಾದಶಹಾನು ಸಂತೋಷಗೊಂಡು ಗುಲಾಲ ಬಡನಿಗೆ ಬಹುಮಾನ ನೀಡಿ ಬಡ್ತಿಯನ್ನು ದಯಪಾಲಿಸಿದನು. ಈ ಎಲ್ಲ ಸರದಾರರಲ್ಲಿ ಎನಗೇ ದೊಡ್ಡ ಬಡ್ತಿ ಸಿಕ್ಕಿತೆಂದು ಖಾನ ಮಜಕೂರನಿಗೆ ಗರ್ವ ಬಂದಿತು.

ಸುರಪುರದಲ್ಲಿ ವೆಂಕಟಪ್ಪ ನಾಯಿಕ ಎಂದೊಬ್ಬನಿದ್ದ. ತುಂಬ ಶೂರ ಆಳು. ಸೈನ್ಯವೂ ಸಾಕಷ್ಟಿತ್ತು. ಸುರಪುರದ ಕೋಟೆ ಪಡೆಯಲು ಬಾದಶಹಾನು ಎರಡು ಮೂರು ವರ್ಷಗಳ ಕಾಲ ಪ್ರಯತ್ನಿಸಿದರೂ ಸಾಧ್ಯವಾಗಿರಲಿಲ್ಲ. ಆಗ ದಿಲೇರಖಾನನಿಗೆ ಆಜ್ಞೆ ಮಾಡಲಾಯಿತು. ಆಗ ಫಿತೂರಿ ಮಾಡಿ ಅವನನ್ನು ಬಂಧಿಸಿ ಬಾದಶಹಾನ

ಎದುರಿಗೆ ಹಾಜರುಪಡಿಸಲಾಯಿತು. ಆಗ ೨,೭೦,೦೦೦ ರೂಪಾಯಿ ದಂಡವನ್ನು ವಿಧಿಸಿ, ಒಂದು ಲಕ್ಷ ರೂಪಾಯಿಯನ್ನು ಅವನಿಂದ ವಸೂಲಿ ಮಾಡಿ, ಖಜಾನೆಗೆ ತುಂಬಿ, ಅವನ ಪ್ರದೇಶವನ್ನು ಅವನ ಸುಪರ್ದಿಗೆ ಒಪ್ಪಿಸಿದನು. ಮುಂದೆ ಎಷ್ಟೋ ದಿನಗಳ ಬಳಿಕ ೧೧೧೮ ಹಿಜರಿಯಲ್ಲಿ ಆಲಮಗಿರ ಬಾದಶಹಾ ತೀರಿಕೊಂಡನು. ಎಷ್ಟೋ ದಿನಗಳ ಕಾಲ ಬಂಧು ಬಳಗದವರು ಸುಖರೂಪದಿಂದ ಕಾಲ ಕಳೆದರು. ಇದಾದ ನಂತರ ಮಹಮದ ಆಜಮ ಬಹಿರಶಹಾ ಮತ್ತು ಸುಲ್ತಾನ ಮೋಜಮಶಹಾ ಈ ಇಬ್ಬರು ಸಹೋದರರ ನಡುವೆ ಸಂಪತ್ತಿಗಾಗಿ ಜಗಳ ಶುರುವಾಯಿತು. ಇಬ್ಬರ ಕಾಳಗದಲ್ಲಿ ದಿಲೇರಖಾನ ಬಿಗಪ್ಪ ನಬಿಖಾ ರಣಮಸ್ತನ ಮಗನಾದ ಆಜಮಖಾನನು ಬಾದಶಹಾನೊಂದಿಗೆ ಹೋರಾಡುವಾಗ ತೀರಿಕೊಂಡನು. ಬಳಿಕ ದಿಲೇರಖಾನ ಮರಳಿ ತನ್ನ ಠಾಣಕ್ಕೆ ಬಂದು ೩೨ ವರ್ಷಗಳ ಆಳಿಕೆ ನಡೆಸಿ ಅನಾರೋಗ್ಯದಿಂದ ಮಡಿದನು. ಬಳಿಕ ಅವನ ಸ್ಥಾನಕ್ಕೆ ಮಗನಾದ ಅಬ್ದುಲ ಗಫಾರಖಾನನು ಬಂದನು. ಖಾನಜಾಹಾಖಾನ ದಕ್ಷಿಣದವನು. ಅವನು ಆರು ಪ್ರಾಂತಗಳ ಬಂದೋಬಸ್ತಿಗಾಗಿ ಬಹಾದೂರಶಾ ಆಲಮಗಿರಿಯ ಅಪ್ಪಣೆ ಪಡೆದು ಹೊರಟನು. ಆಗ ಖಾನಮಜಕೂರನು ಔರಂಗಜೇಬನ ಪರವಾಗಿದ್ದನು. ಅವನು ಬಂದು ಖಾನಜಾಹಾನ ಜೊತೆಗೂಡಿ ತನ್ನ ತಾಲೂಕಿನ ಬಂದೋಬಸ್ತ ಮಾಡಿಸಿಕೊಂಡು, ಅವನನ್ನು ಬೀಳ್ಕೊಟ್ಟು ತನ್ನ ಠಾಣಕ್ಕೆ ಬಂದು ಉಳಿದುಕೊಂಡನು. ಹಲವು ದಿನಗಳ ನಂತರ ಶಿರಹಟ್ಟಿಯವನು ತೀರ ಪ್ರಬಲಗೊಂಡಿದ್ದಾನೆ. ಅವನಿಗೆ ತಕ್ಕ ಶಾಸ್ತಿ ಮಾಡಬೇಕೆಂದು ತಮ್ಮ ಖಾನಜಾಖಾನಮಿಯಾನನ್ನು ಸರದಾರನನ್ನಾಗಿ ಮಾಡಿ ಅವನ ಜೊತೆಗೆ ದೊಡ್ಡ ಸೈನ್ಯವನ್ನು ಕಳಿಸಿದನು. ಶಿರಹಟ್ಟಿಯವನೂ ಸೈನ್ಯ ಸಮೇತ ಬಂದನು. ಈ ಸುದ್ದಿ ಕೇಳಿ ಸಿದ್ದತೆಯೊಂದಿಗೆ ಬಂದು ರಾತ್ರಿಯೇ ಸೈನ್ಯದ ಮೇಲೆ ಹಲ್ಲೆ ಮಾಡಿ, ಎಲ್ಲರನ್ನು ಕೊಂದು ಹಾಕಿ ತಮ್ಮ-ತಮ್ಮ ಸ್ಥಾನಕ್ಕೆ ಮರಳಿದರು. ಈ ಸುದ್ದಿ ಖಾನಮಜಕೂರನ ಕಿವಿಗೆ ಬಿದ್ದು ಅವನನ್ನು ಕೊಲ್ಲಲು ಅಪಾರ ಸೈನ್ಯ, ಸರಂಜಾಮುನ್ನು ಸಿದ್ಧಪಡಿಸಿಕೊಳ್ಳಲಾರಂಭಿಸಿದನು. ಅಷ್ಟರಲ್ಲಿ ಮರಾಠರು ಬರುತ್ತಿದ್ದಾರೆ ಎಂಬ ಸುದ್ದಿ ಕೇಳಿ ಅವನೊಂದಿಗಿನ ಯುದ್ಧವನ್ನು ರದ್ದುಪಡಿಸಿ, ಹಲವು ಸರಂಜಾಮು ಪಡೆದು ಸಂಧಾನ ಮಾಡಿಕೊಂಡು ಅಲ್ಲಿಗೆ ಹೋಗುವ ಸಿದ್ಧತೆ ನಡೆಸಿದನು. ಅಷ್ಟರಲ್ಲಿ ಖಾನಜಹಾಖಾನ ತೀರಿಹೋದ. ಅವನ ಬದಲಿಗೆ ಸಯ್ಯದ ಜಾತಿಯ ಹುಸೇನ ಮೀರ ಅಲ್ಲಿಖಾನನಿಗೆ ಆಜ್ಞೆಯಾಗಿ ಬಂತು. ಆಗ ಖಾನಮಜಕೂರ ಅಬ್ದುಲ ಗಫಾರಖಾನನು ತನ್ನ ಮಗ ಗಫರಮಿಯಾನಿಗೆ ಉಡುಗೊರೆ ನೀಡಿ, ಬರಾಣಪುರದ ಮೇಲೆ ಏರಿ ಹೋದನು. ಅಲ್ಲಿಂದ ಅಪಾರ ಜಹಾಗೀರನ್ನು ಗಳಿಸಿಕೊಂಡು ಬಂದ. ಅನಂತರ ೨೮ ವರ್ಷ ಖಾನಮಜಕೂರನು ಆಳಿಕೆ ನಡೆಸಿ ತೀರಿಹೋದನು. ಬಳಿಕ ಅವನ ಮಗ ಗಫಾರಮಿಯಾ ಅಪ್ಪನ ಗದ್ದುಗೆಯ ಮೇಲೆ ಕುಳಿತ. ಅಷ್ಟರಲ್ಲಿ ಮರಾಠಾ

ಸೈನ್ಯವು ಅವನ ಪ್ರದೇಶವನ್ನು ಗೆದ್ದುಕೊಳ್ಳಲು ಹೊರಟರು. ಖಾನಮಜಕೂರನು ದೊಡ್ಡ ಸರಂಜಾಮನೊಂದಿಗೆ ಅಲ್ಲಿಗೆ ಹೋಗಿ ತಲುಪಿದನು. ಮಿಶ್ರಕೋಟೆಯಲ್ಲಿ ಅವರ ಮುಖಾಮುಖಿಯಾಯಿತು. ಭೀಕರ ಕಾಳಗವಾಯಿತು. ಅವನು ಮರಾಠರನ್ನು ವಿರೋಧಿಸಿದನು. ಮರಾಠರು ಪರಾಭವಗೊಂಡಿದ್ದರಿಂದ ಮಿಶ್ರ ಕೋಟೆಯನ್ನು ಗೆದ್ದುಕೊಂಡನು. ಬಳಿಕ ಮರಾಠರು ಘೋರಪಡೆಯ ಬಾಕಿ ಸೈನ್ಯ ಮತ್ತು ಮಿರಜಿನ ಗೋಪಾಳರಾವ ಸಾಹೇಬರ ಸೈನ್ಯವನ್ನು ಬಳಸಿ ಖಾನಮಜಕೂರನ ತಾಲೂಕನ್ನು ದೋಚಲಾರಂಭಿಸಿದರು. ಅವರು ಅವನ ಸೈನ್ಯಕ್ಕೆ ಆಘಾತ ನೀಡಿದ್ದರು. ಬಳಿಕ ಮರಾಠರು ಎಲ್ಲಿಯ ಉಪದ್ವ್ಯಾಪವೆಂದುಕೊಂಡು ಬೇಸತ್ತು ಮಿರಜನವರ ಮೂಲಕ ೬೦,೦೦೦ ರೂಪಾಯಿ ನೀಡಬೇಕು. ನೀಡಿದ ಬಳಿಕ ಖಾನಮಜಕೂರನು ಮಿಶ್ರಕೋಟೆ ಬಿಟ್ಟುಕೊಡಬೇಕು-ಎಂದು ಪ್ರಶ್ನೋತ್ತರ ನಡೆಸಿ ಕರಾರಿನಂತೆ ಹಣವನ್ನು ನೀಡಿ ಮಿಶ್ರಕೋಟೆಯನ್ನು ಬಿಡಿಸಿಕೊಂಡರು. ಅವರು ತಮ್ಮ ಸ್ಥಳಕ್ಕೆ ಹೋದರು. ಇವರು ತಮ್ಮ ಸ್ಥಳಕ್ಕೆ ಬಂದರು. ಇವರು ತಮ್ಮ ಸ್ಥಳಕ್ಕೆ ಬಂದನಂತರ ಖಾನಮಜಕೂರನು ೯ ವರ್ಷ ಆಳಿಕೆ ಮಾಡಿ ತೀರಿಹೋದನು. ಅವನ ಮಗನಾದ ಅಬ್ದುಲ ಮಹಜಿದಖಾನನು ಗದ್ದುಗೆ ಏರಿದನು. ಅನಂತರ ಅಸಫಜಾಹಿ ಸಹ ಔರಂಗಾಬಾದದಿಂದ ಗೋಲಕುಂಡಕ್ಕೆ ಬಂದನು. ಅಲ್ಲಿಂದ ಹೈದರಾಬಾದಿಗೆ ಬಂದು ಅಲ್ಲೇ ವಾಸ್ತವ್ಯ ಮಾಡುವ ನಿರ್ಧಾರ ಮಾಡಿದನು. ಆ ಬಯಲಿನಲ್ಲಿ ಎರಡು ಮಜಭೂತ ಕೋಟೆಯನ್ನು ಕಟ್ಟಿಸಿದನು. ಅಸಫಜಾಹಿ ಬಹಾದೂರ ಮತ್ತು ಸಾಯಾನೇ ಸೇರಿ ಮಗಳ ಮಗನಾದ ಹಿದಾಯತ ಮೋಹದಿನನನ್ನು ಹೆದರಿಸಲು ಮತ್ತು ಬಂದೋಬಸ್ತಿಗಾಗಿಯೂ ವಿಜಾಪುರಕ್ಕೆ ಕಳಿಸಿದರು. ಅನಂತರ ಖಾನಮಜಕೂರ ಹುಜೂರನ ಆಜ್ಞೆಯ ಹೊರತು ಗದ್ದುಗೆ ಏರಿರುವದಾಗಿ ಸುದ್ದಿಯನ್ನು ಕೇಳಿ ಸಂಬಂಧ ಹದಗೆಟ್ಟು ಸವಣೂರ ದಿಕ್ಕಿಗೆ ಕೂಚ್ ಮಾಡಿದರು. ಹೀಗೆ ಕೂಚ್ ಮಾಡುವಾಗ ಸವಾರರ ತುಳಿತಕ್ಕೆ ಸಿಕ್ಕು ಎಷ್ಟೋ ಊರುಗಳು ನೆಲಸಮಗೊಂಡವು. ಆಗ ಗದಗ, ಶಿರಹಟ್ಟಿ ಮತ್ತು ಹಲವು ಪಾಳೆಗಾರರು ಸೇರಿಕೊಂಡು ಸವಣೂರಿನವನು ತಪ್ಪು ಗ್ರಹಿಕೆಯಿಂದ ಹೀಗೆ ಮಾಡಿದ್ದಾನೆ. ಅವನ ರಾಜ್ಯವನ್ನು ಕಸಿದುಕೊಳ್ಳಬೇಕು ಎಂದು ಸಲಹೆ ನೀಡಿದರು. ಅವರ ಸಲಹೆಯನ್ನು ಖಾತ್ರಿ ಮಾಡಿಕೊಳ್ಳದೆ ಕರ್ನೂಲಿನವನ ಮೂಲಕ ಖಾನಮಜಕೂರನು ಭೇಟಿಗೆ ಬರುವಂತೆ ಪತ್ರ ಕಳಿಸಿದನು. ತಮಗೆ ಗೌರವ ನೀಡಿದರೆ ತಾನು ಭೇಟಿಗೆ ಬರುವದಾಗಿ ಖಾನ ಮಜಕೂರನು ಹೇಳಿ ಕಳಿಸಿದನು. ಬಳಿಕ ಸವಣೂರಿನವನಿಗೆ ಹೇಳಿ ಕಳಿಸಿದ್ದೇನೆಂದರೆ-ನೀವು ಮನೆತನಸ್ಥರಾಗಿದ್ದೀರಿ. ನಿಮಗೆ ಗೌರವ ನೀಡುವದು ಯೋಗ್ಯವಾಗಿದೆ-ಎಂದು ಹುಕುಮ್ ಮಾಡಿದರು. ಅನಂತರ ಸವಣೂರಿನವನು ಎಷ್ಟೋ ಹರಿವಾಣ ಹಣ್ಣು-ಹಂಪಲಗಳೊಂದಿಗೆ ಹೋಗಿ ಕಾಣಿಕೆ ನೀಡಿ ಭೇಟಿಯಾದಾಗ ಅವನ ಕೈ ಹಿಡಿದು ಬಳಿಗೆ ಕೂರಿಸಿಕೊಂಡನು. ಈ ಮೂರು ಮನೆತನದ ನವಾಬರನ್ನು ಆನೆಯ

ಮೇಲೆ ಕೂರಿಸಿ, ತಾನು ಅಂಬಾರಿಯ ಮೇಲೆ ಕುಳಿತ. ಆಗ ಸ್ವಲ್ಪ ಬಾಗಿ ನಮಸ್ಕರಿಸುವ ಪದ್ಧತಿಯಿದೆ. ಸರದಾರರು ಕೂರುವ ದಿವಾನಖಾನೆಯಲ್ಲಿ ಕೂತು ಹುಕ್ಕಾ ಸೇವಿಸುವ ಕಾಯ್ದೆಯಿದೆ ಎಂದು ಜನರು ತಿಳಿಸಿದರು. ಆದರೂ ಸಮಾಲೋಚನೆಯ ವಿಷಯವನ್ನು ಅರಿತು ಒಪ್ಪಿಕೊಳ್ಳುತ್ತಿದ್ದರು. ಸವಣೂರಿನವನು ತುಂಬ ಯೋಚಿಸುತ್ತಿದ್ದ ಅಷ್ಟೇ ಅಂತಃಕರಣಉಳ್ಳವನಾಗಿದ್ದ. ೧೧೫೭ ಹಿಜರಿಯಲ್ಲಿ ಕರ್ನಾಟಕದ ಘಟ್ಟ ಪ್ರದೇಶದ ಬಂದೋಬಸ್ತಿಗಾಗಿ ಕೂಚ್ ಮಾಡುತ್ತ ಅಲ್ಲಿಂದ ಹೊರಟರು. ಆಗ ಖಾನಸಮಜಕೂರನು ಜೊತೆಗಿದ್ದ. ಆಗ ನಥಣಿ ನಗರ ಉರ್ಫ್ ತ್ರಿಚನಾಪಳ್ಳಿಯ ಕೋಟೆಯಲ್ಲಿ ಮುರಾರಿರಾವ ಘೋರಪಡೆಯಿದ್ದರು. ಆ ಕೋಟೆಯನ್ನು ವಶಪಡಿಸಿಕೊಳ್ಳಲು ಮೈಜಮಿಯತನೂ ಬಂದ. ಅವನೂ ತನ್ನ ಸೈನ್ಯದೊಂದಿಗೆ ಹೊರಬಿದ್ದ. ಉಭಯತರ ಸೈನ್ಯ ಎದುರಾಗುವ ಜಾಗ ಸಿಮ್ಮವರ ಎಂಬಲ್ಲಿದೆ. ಅಲ್ಲಿ ಕಾವೇರಿ ನದಿ ಹರಿಯುತ್ತದೆ. ಅಲ್ಲಿ ಇವರಿಬ್ಬರ ಘನಘೋರ ಕಾಳಗ ಜರುಗಿತು. ಆಗ ಖಾನಸಮಜಕೂರನು ಶೌರ್ಯದಿಂದ ಹೋರಾಡಿದ. ನವಾಬ ಸರಕಾರದಲ್ಲಿ ಹೆಸರು ಮಾಡಿದ. ನವಾಬ ಆ ಪ್ರದೇಶದಲ್ಲಿ ಮೂರು ವರ್ಷವಿದ್ದ. ಜನರಿಂದ ಸಾಕಷ್ಟು ಸಂಪತ್ತು ಪಡೆದ. ಅಮೂಲ್ಯವಾದ ಮುತ್ತು-ರತ್ನ, ಹಣ, ಬಟ್ಟೆಗಳನ್ನೆಲ್ಲ ಪಾಳೇಗಾರರಿಂದ ಪಡೆದು ಹೈದರಾಬಾದಿಗೆ ಬಂದು ಸೇರಿದರು. ನಾಲ್ಕು ವರ್ಷ ಪೂರ್ಣಗೊಂಡು, ನಾಲ್ಕನೇ ತಾರೀಖ ಜಮಾದಿ ಸಾಗಿ ೧೧೬೧ ಹಿಜರಿಯಲ್ಲಿ ನವಾಬನು ತೀರಿಕೊಂಡನು. ಅನಂತರ ಆಸಫಜಹಾನ ಹಿರಿಯಮಗ ಸೈದ ಅಹಮ್ಮದ ನಾಸಿರಜಂಗ ಬಹಾದೂರನು ಅಪ್ಪನ ಸ್ಥಾನದಲ್ಲಿ ಕೂತನು. ಅಪ್ಪನ ಕಾಲದಲ್ಲಿ ಪ್ರದೇಶದ ಬಂದೋಬಸ್ತಿಗಾಗಿ ಹೇಳಿದ ಸಂಗತಿಗಳನ್ನು ಖಾತ್ರಿ ಮಾಡಿಕೊಳ್ಳದೆ ಮೋರೊಪಂತ ಪ್ಥಣಾರನು ವಂಚಿಸಿ ವೈರಿಗಳೊಂದಿಗೆ ಶಾಮೀಲಾಗುವದರಲ್ಲಿದ್ದ. ಆಗ ಆಸಫಜಹಾನು ಬಂಧಿಸಿದ್ದ. ಹೀಗಾಗಿ ಪ್ರದೇಶದಲ್ಲಿ ಆರೋಪ ಉಳಿದಿತ್ತು. ಅವನನ್ನು ಸೆರೆಯಿಂದ ಮುಕ್ತಗೊಳಿಸಿ, ತಾನೇ ಸಂಪತ್ತನ್ನು ನೀಡಿದನು. ಆದರೆ ಅದರಿಂದ ಏನೂ ಲಾಭವಾಗಲಿಲ್ಲ. ಎಷ್ಟೋ ದಿನಗಳು ಉರುಳಿದವು. ಬಳಿಕ ಮೊಹಮ್ಮದಶಾಹಿ ಬಾದಶಹಾನ ಆಜ್ಞೆಯಂತೆ ನಾಸರಜಂಗನು ದಿಲ್ಲಿಗೆ ಹೋಗುವಾಗ ತನ್ನ ತಂಗಿಯ ಮಗನಾದ ಹಿದಾಯತ ಮೋಹದಿನ ಮುಜಫರದೌಲನನ್ನು ತನ್ನ ಸ್ಥಾನದಲ್ಲಿ ಕುಳ್ಳಿರಿಸಿ ಹೋದನು. ಬಳಿಕ ಘಟ್ಟದ ಕೆಳಗಿನ ಅಮಿರಾ ಪಟ್ಟಣದಂಥ ಪ್ರದೇಶವನ್ನು ಗೆದ್ದರೆ ಒಳ್ಳೆಯದೆಂದು ಸಲಹೆಯನ್ನು ಮುಜಫರದೌಲನಿಗೆ ನೀಡಿ, ಆರು ಪ್ರಾಂತಗಳ ಬಂದೋಬಸ್ತಿಗಾಗಿ ಅವನ ಸಂಗಡ ಹೋದನು. ಹುಸೇನ ದೋಸ್ತಿ ಅಲ್ಲಿಖಾ ಉರ್ಫ್ ಚಂದಾಸಾಹೇಬನು ವಿರೋಧಿಸುತ್ತಾನೆಂದು ತಿಳಿದು ಕೃತ್ರಿಮವಾಗಿ ಫ್ರೆಂಚ ಸೈನ್ಯವನ್ನು ಸಹ ಕರೆಯಿಸಿ, ಗೋಷಾಮಿವಾಲೆ ಅಲವರದಿಖಾ ಷಾಯಿಮಜಂಗನಿಗೆ ಅರ್ಕಾಟಿನ ಪ್ರಾಂತಾಧಿಕಾರಿಯು ಆಸಫಜಹಾನ ಕಾಲದಲ್ಲಿ ಕೃಪೆ ತೋರಿದ್ದ. ಅವನನ್ನು ಕೊಲ್ಲುವ ಆಜ್ಞೆ ಮಾಡಿದ. ಈ ವಿಷಯ ಎಲ್ಲೆಡೆ

ಗೊತ್ತಿತ್ತು. ಗುಪ್ತಚಾರರು ಈ ಸುದ್ದಿಯನ್ನು ದಿಲ್ಲಿಯ ನಾಸರಜಂಗನ ಕಿವಿಗೆ ಹಾಕಿದರು. ಆಗ ಇವನ ಸೋದರನಾದ ಗಾಜಿವರ್ದಿಖಾನ ಹುಜೂರ ಬಳಿ ವಕೀಲನಾಗಿ ಕಾರ್ಯ ಮಾಡುತ್ತಿದ್ದನು. ಅವನು ಹೋಗಿ ತನ್ನ ಸೋದರ ನಾಸಿರಜಂಗನು ಹುಜೂರದ ಬಳಿಗೆ ಬರುವಾಗ ತಂಗಿಯ ಮಗ ಹಿದಾಯತ ಮೋಹದಿನ್ ಇವನನ್ನು ಕೆಲಸಕ್ಕೆ ಇರಿಸಿ ಬಂದಾಗ, ಅವನು ಪ್ರದೇಶದಲ್ಲಿ ಉಪಟಳ ಶುರು ಮಾಡಿರುವದಾಗಿ ತಿಳಿಸಿ, ತನ್ನ ಸೋದರನಿಗೆ ಹುಕುಂ ನೀಡಬೇಕೆಂದು ಹುಜೂರರ ಬಳಿ ಕೇಳಿಕೊಂಡಾಗ, ಹೋಗಲಿ ಎಂದು ಆಜ್ಞೆಯಾಯಿತು. ಆಗವನು ಹೊರಟು ನರ್ಮದಾ ತೀರಕ್ಕೆ ಬಂದು, ಸೈನ್ಯವನ್ನು ಅಲ್ಲೇ ಉಳಿಸಿಕೊಂಡು ಹಿದಾಯತ ಮೋಹದಿನ್‌ನನ್ನು ಕರೆಕಳಿಸುವ ವ್ಯವಸ್ಥೆ ಮಾಡಿದನು. ಆಗವನು ಚೆಂಜಿಘಟ್ಟದಲ್ಲಿದ್ದ. ಆಗ ಸೈದ ಲಷ್ಕಾರಖಾ ಅಮಿರುಲ್ ಉಮರಾವ ಷಾಹಾನವಾಜಖಾ ಸಮಸಾಮದೌಲನು ಹಜೂರ ದಿವಾನಖಾನೆಯ ಸೇನಾಪತಿ ಮತ್ತು ಅನವರಖಾ ಬಾದಶಾಹಿ ಸೈನ್ಯ ಈ ಮೂವರ ಜೊತೆಗೆ ಸೈನ್ಯ ಕಕಮುಲ್ಲಾ ಸಹವನ್ನು ನೀಡಿ ಅವನನ್ನು ಕರೆ ತರುವಂತೆ ಕಳಿಸಿದನು. ಇವರು ಹೋಗಿ ಅದಾಯತ ಮೋಹದಿನ್‌ನಿಗೆ ಬರುವಂತೆ ತಿಳಿಸಿದರು. ಅವನು ಕಕಮುಲ್ಲಾ ನೀಡಿದರೆ ಬರುವದಾಗಿ ಹೇಳಿದನು. ಆಗ ಕಕಮುಲ್ಲಾ ನೀಡಿ ಕರೆದುಕೊಂಡು ಬರಲಾರಂಭಿಸಿದನು. ಆಗ ಇತ್ತ ನಾಸರಜಂಗ ಬಳಿಯಿರುವ ಕ್ಷುದ್ರ ಜನರು ರಾಜ್ಯ ಹಾಳು ಮಾಡುವವರು. ನೋಡುವವರಿಗೆ ಗೆಳೆತನ ಮಾಡುವಂತಿದ್ದರೂ–ಮನಸ್ಸಿರಲಿಲ್ಲ. ಅಸಲೀ ಕಪಟ ಪಠಾಣರು ನಿಮ್ಮ ತಂಗಿಯ ಮಗನನ್ನು ಬಂಧಿಸಿ ತರುತ್ತಿದ್ದಾರೆ ಎಂದು ನಾಸರಜಂಗನಿಗೆ ಎಚ್ಚರಿಕೆ ನೀಡಿದರು. ಈ ಸುದ್ದಿ ಕೇಳಿ ನವಾಬನು ಸಿಟ್ಟಿಗೆದ್ದನು. ಸೈನ್ಯ ಸಮೇತ ಹೊರಟನು. ಆಗ ಸವಣೂರಿನ ಖಾನಮಜಕೂರನು ಕಪಟತನದಿಂದ ಆರೋಗ್ಯ ಹದಗೆಟ್ಟಿದೆ ಎಂದು ಹೇಳಿ, ವದಂತಿಯನ್ನು ಹಬ್ಬಿಸಿ, ತನ್ನ ಮಗ ಕರೀಮಮಿಯಾನನನ್ನು ಸೈನ್ಯದ ಜೊತೆಗೆ ಕಳಿಸಿದನು. ೧೧೬೪ ಹಿಜರಿಯಲ್ಲಿ ಪೂರ್ವ ಭಾಗದಲ್ಲಿ ಚೇಂಜಿ ಎಂಬ ಕೋಟೆಯಿದೆ. ಆ ಕೋಟೆಯಲ್ಲಿ ಫ್ರೆಂಚರ ಠಾಣೆಯಿದೆ. ಅಲ್ಲಿ ಪಠಾಣರೆಲ್ಲ ಒಕ್ಕಟ್ಟಾಗಿ ನವಾಬನ ಜೊತೆಗೆ ಕಾಳಗ ಮಾಡಿ, ನವಾಬನ ರುಂಡ ಹಾರಿಸಿ ಧ್ವಜಕ್ಕೆ ತೂಗುಹಾಕಿದರು. ಹಿದಾಯತ ಮೋಹದಿನ್‌ಖಾನನು ಆಗ ಘಟಾಟೋಪಾದಲ್ಲಿದ್ದ. ಅವನು ಹೊರಬಂದ ಸುತ್ತಲೂ ನೋಟ ಹರಿಯಿಸಿದ. ಅವನ ಮನದಲ್ಲಿ ನಾಸರಜಂಗನನ್ನು ಕೊಂದು ತಾನು ರಾಜ್ಯವಾಳಬೇಕೆಂದಿರಲಿಲ್ಲ. ಆದರೆ ಪಠಾಣರ ಭಯದಿಂದಾಗಿ ಹೀಗಾಯಿತು. ಬಳಿಕ ಮುಸಾಭೂಸಾ ಮತ್ತು ಹಲವು ಸರದಾರರು ನವಾಬ ಸಹಿತ ತಮ್ಮ ಸೈನ್ಯವನ್ನು ರಾಮಳಾಚೇರದಿಂದ ರಾಚೋಟಿಗೆ ಕಳಿಸಿದರು. ಆಗ ಪಠಾಣರು ಜಗಳದ ಕಾರಣದಿಂದ ಹಿದಾಯತ ಮೋಹದಿನಖಾನನ ಸಹವಾಸ ಮಾಡದೆ ಯುದ್ಧವಾರಂಭಿಸಿದರು. ಈ ಕಾಳಗದಲ್ಲಿ ಹಿದಾಯತ ಮೋಹದಿನಖಾನ ಮಡಿದನು. ಖಾನಮಜಕೂರನ ಮಗನಾದ ಕರೀಮನೂ

ಅಸುನೀಗಿದನು. ೧೧೬೪ರ ಹಿಜರಿಯಲ್ಲಿ ಸೂರ್ಯ ಅಸ್ತಂಗತನಾದ ಎಂದು ಬಣ್ಣಿಸಲಾಗಿದೆ. ಅನಂತರ ನಾಸರಜಂಗನ ಬಳಿ ಇವರ ಸೋದರ ಸಲಾಬತಜಂಗನು ಕಾಯಮ ಜನರ ಸೋದರನೇ ಆದ. ೫-೬ ವರ್ಷ ಮನೆ ಮತ್ತು ರಾಜ್ಯದಲ್ಲೆಲ್ಲ ಅರಾಜಕತೆಯೇ ತುಂಬಿಕೊಂಡಿತ್ತು. ಫ್ರೆಂಚರು ತಮ್ಮ ಸಚಿವನನ್ನು ಹೈದರಜಂಗನ ಸೈನ್ಯದಲ್ಲಿ ಸೇರಿಸಿ, ಚಿಕಾಕೋನ, ರಾಜಮಹೇದ್ರಿಯನ್ನು ವಶಪಡಿಸಿಕೊಂಡು ಸ್ವಾಮಿತ್ವವನ್ನು ಸ್ಥಾಪಿಸಿದರು. ಶಹಾನವಾಜಖಾನ ಸಮಗಾನದೌಲಾನು ನವಾಬ ಸಲಾಬತಜಂಗನ ವಕೀಲನು ರಾಜ್ಯವನ್ನು ಹದ್ದುಬಸ್ತಿಗೆ ತಂದನು. ಬಳಿಕ ಹೈದರಜಂಗನ ಕಾರಣದಿಂದಾಗಿ ಬಂಧನಕ್ಕೊಳಗಾದನು. ನಿಜಾಮಲ್ಲಿಖಾನ ಬಸಾಲತಜಂಗ ಈ ಉಭಯತರು ಒಕ್ಕಟ್ಟಾಗಿ ಹೈದರಜಂಗನು ಸಾಕಷ್ಟು ತೊಂದರೆ ನೀಡಿದ್ದಾನೆ. ಅವನನ್ನು ಕೊಂದೇ ಬಿಡಬೇಕೆಂದು ಚರ್ಚೆ ಮಾಡಿ, ಅವನನ್ನು ಶಿಬಿರಕ್ಕೆ ಕರೆಸಿ, ಫ್ರೆಂಚರ ಕೈಯಿಂದ ಹೈದರಜಂಗನನ್ನು ಕೊಲ್ಲಿಸಿದರು. ಇದನ್ನು ಕಂಡು ಇವರು ಭೀತಿಗೊಳಗಾದರು. ಫ್ರೆಂಚರಿಗೂ ಈ ಸುದ್ದಿ ಗೊತ್ತಾಯಿತು. ತಮ್ಮ ವಕೀಲನನ್ನು ಕೊಂದ ಸುದ್ದಿ ಕೇಳಿ ಮೈಜಮಿಯಂತನೂ ಸಹ ಸಲಾಬತಜಂಗನ ಡೇರೆಗೆ ಬಂದು ನೋಡಿದನು. ಆಗ ಇವನೂ ಸಹ ಔರಂಗಾಬಾದಿನ ಹಾದಿ ಹಿಡಿದನು. ಬಳಿಕ ಷಹಾನವಾಜಖಾನನನ್ನು ಬಂಧಿಸಲಾಯಿತು. ಅವನನ್ನು ಭುಸಾ ಮುಸಾನೆ, ಗುಂಡು ಹೊಡೆದು ಕೊಂದನು. ಅನಂತರ ಎಷ್ಟೋ ದಿನಗಳ ನಂತರ ಸಲಾಬತಖಾನನ್ನು ಬಂಧಿಸಿ ನಿಜಾಮಲ್ಲಿಖಾನನು ರಾಜ್ಯವನ್ನು ಗಳಿಸಿದನು. ಆಗ ಅಬ್ದುಲ್ಲಾ ಮಹಜಿದಖಾನನು ಬದಿಗೆ ಸರಿದು ತನ್ನ ಠಾಣೆಯಲ್ಲಿದ್ದನು. ಇವನು ೩೨ ವರ್ಷಗಳ ಕಾಲ ಆಳ್ವಿಕೆ ಮಾಡಿ ತೀರಿ ಹೋದನು. ಅವನ ಮಗ ಅಬ್ದುಲ ಹಕೀಮಖಾನನು ಅಪ್ಪನ ಸ್ಥಾನಕ್ಕೆ ಬಂದನು. ಅನಂತರ ಎಷ್ಟೋ ದಿನಗಳ ಬಳಿಕ ನಾಜಮದಖಾನನೊಂದಿಗೆ ನಿಜಾಮಲ್ಲಿಖಾ, ಬಾಳಾಜಿರಾವ ನಾನಾ, ಸವಾಯಿ ಮಾಧವರಾವ ಸೇರಿಕೊಂಡರು. ಸವಣೂರನ್ನು ಗೆಲ್ಲ ಬೇಕೆಂದು ಪಣತೊಟ್ಟು ಹೊರಟರು. ನಿಜಾಮಲ್ಲಿಖಾನನು ತನ್ನ ಸೋದರನನ್ನು ಅವರ ಅಣ್ಣ ಮತ್ತು ಅಪ್ಪ ಸೇರಿಕೊಂಡು ಕೊಂದು ಹಾಕಿದರೆಂದು ಇವರ ಪ್ರದೇಶಕ್ಕೆ ಬಂದು ಹಾಳು ಮಾಡಲಾರಂಭಿಸಿದರು. ಮರಾಠರು ಮಿಶ್ರಕೋಟ, ಗದಗ ಹಸ್ತಗತ ಮಾಡಿಕೊಂಡರು. ಅಬ್ದುಲ ಹಕೀಮಖಾನನು ಪ್ರೇಮದಲ್ಲಿ ಸಿಲುಕಿದನು. ಮಧ್ಯಕ್ಕೆ ರೋಸಿಹೋಗಿ ಬಸಾಲತಜಂಗನ ಮಂತ್ರಿಯನ್ನು ನೇಮಿಸಿ, ಸಂಪತ್ತು ಗಳಿಸಿ, ಎರಡು ಲಕ್ಷ ರೂಪಾಯಿ ನಗದು ನೀಡಿ ತನ್ನ ಠಾಣೆಯಲ್ಲೇ ಉಳಿದುಕೊಂಡನು. ಮರಾಠರ ಕೈಗೆ ಹನ್ನೊಂದು ಜಿಲ್ಲೆ ಹೋಗಿತ್ತು. ಅದನ್ನು ನಿಜಾಮಲ್ಲಿಗೆ ಹೇಳಿ ಬಿಡಿಸಿಕೊಂಡನು. ಏನೂ ಅಪರಾಧ ಮಾಡದಿದ್ದರೂ ನಾಸರಜಂಗನನ್ನು ಕೊಂದರು. ಅಂದಿನಿಂದ ಅವರ ಮನೆತನ ದ್ರೋಹಕ್ಕೆ ಒಳಗಾಯಿತೆಂದು ಜಗಳ ಶುರುವಾಯಿತು. ಈ ವಿಷಯದ ಸ್ಪಷ್ಟೀಕರಣವನ್ನು ಕರ್ನೂಲವಾಲೆಯ ಗ್ರಂಥದಲ್ಲಿ ಹೇಳಲಾಗಿದೆ. ಅನಂತರ ಹಲವು ದಿನಗಳ ಬಳಿಕ ಹೈದರಅಲಿಖಾನ ಬಹಾದೂರ

ಸಮಶೇರನು ಬಲಗೊಂಡು, ಜಾಣತನದಿಂದ ಸಾಹಸಮಾಡಿ ಸೈನ್ಯವನ್ನು ಕಟ್ಟಿ, ಸುತ್ತಮುತ್ತಲಿನ ಪಾಳೆಗಾರರನ್ನು ಬಂಧಿಸಿ, ಹೈದರನಗರ ಉರ್ಫ್ ಬಿದನೂರನ್ನು ಹಸ್ತಗತ ಮಾಡಲು ಬಂದನು. ಬಿದನೂರಿನ ರಾಣಿಯ ಸಹಾಯಕ್ಕಾಗಿ ಹಕೀಮಖಾನನು ಎರಡು ಸಾವಿರ ಸೈನ್ಯವನ್ನು ಕಳಿಸಿದ್ದ. ನವಾಬ ಬಹಾದೂರನು ರಾಣಿಯನ್ನು ಹಿಡಿದು ಖಾನ ಮಜಕೂರನ ಸೈನ್ಯವನ್ನು ಮುರಿದು, ಹೈದರಲಿಖಾನನ ಅಶ್ವದಳವನ್ನು ಖಾನಮಜಕೂರನ ಸೈನ್ಯವನ್ನು ಬೆನ್ನಟ್ಟುವಂತೆ ಮಾಡಿ ಮನೆಯವರೆಗೂ ಓಡಿಸಿಕೊಂಡು ಹೋಗಿ ಸವಣೂರನ್ನು ಮುತ್ತಿಗೆ ಹಾಕಿದನು. ಆಗ ಅಸಹಾಯಕನಾಗಿ ತಂದೆಗಳಿಸಿದ ಸಂಪತ್ತನೆಲ್ಲ ಮುಖಮಲ್ ಡೇರಾ, ಒಂಟೆ, ಆನೆಗಳನ್ನು ನೀಡಿ, ಸಂಧಾನ ಮಾಡಿಕೊಂಡು ಹೊರಟು ಹೋದನು. ಮುಂದೆ ಬಾಳಾಜಿರಾವ ನಾನಾ ಇವರ ಮಗ ಸವಾಯಿ ಮಾಧವರಾವ ಸೈನ್ಯ ಸಮೇತ ಇತ್ತ ಕಡೆ ಬಂದ. ಆಗ ಖಾನ ಮಜಕೂರ ಅವರೊಂದಿಗೆ ಶಾಮೀಲಾಗಿ, ತನ್ನ ಸೈನ್ಯವನ್ನು ಅವರೊಂದಿಗೆ ಕಳಿಸಿದ. ಆಗ ತ್ರ್ಯೆಂಬಕಮಾಮಾ ಮರಾಠಾ ದೊಡ್ಡ ಸೈನ್ಯದೊಂದಿಗೆ ಚಿರಕುಲಿಯ ಮೈದಾನಿಗೆ ಬಂದಿದ್ದ. ಚಿರಕೋಲಿಯ ಪಟ್ಟಣದ ದಕ್ಷಿಣಕ್ಕಿದೆ. ಅಲ್ಲಿ ಕಾಳಗ ನಡೆಯಿತು. ನವಾಬ ಹೈದರಾಲಿಖಾನನ ಸೈನ್ಯ ಕಾಳಗ ನಡೆದು ಪರಾಭವಗೊಂಡನು. ೧೪ ಸವಾರರೊಂದಿಗೆ ನವಾಬಗಾಜಿಖಾನು ಫರಾರಿಯಾಗಿ ಪಟ್ಟಣಕ್ಕೆ ಬಂದನು. ಬಳಿಕ ಟೀಪೂ ಗಾಯಗೊಂಡು, ಸವಾರರೊಂದಿಗೆ ಓಡಿ ಬಂದ. ಆಗ ನವಾಬ ಸಾಹೇಬರ ಸೈನ್ಯ ತೀರ ನಿರ್ವಿಣ್ಣಗೊಂಡಿತು. ಆಗ ಬಹಾದೂರನು ಜಾಣತನದಿಂದ ಸ್ನೇಹಬೆಳೆಸಿ ತನ್ನ ಪ್ರದೇಶವನ್ನು ಬಿಡಿಸಿಕೊಂಡನು. ಬಳಿಕ ಬಹಾದೂರನು ನಿಜಾಮ ಅಲ್ಲಿಖಾನನ ಸ್ನೇಹವನ್ನು ಸಂಪಾದಿಸಿ, ಅವರಿಬ್ಬರೂ ಸೇರಿ ಪಾಯನ ಘಟ್ಟದ ಸಿರಾಜದೌಲ ಮಹಮ್ಮದ ಅಲಿಖಾ ಇಂಗ್ಲಿಷರ ಸಹವಾಸದಲ್ಲಿ ಎಷ್ಟೋ ದಿನ ಕಳೆದನು. ಬಳಿಕ ಸಂಧಾನ ಮಾಡಿಕೊಂಡು ಮರಳಿದನು. ಬರುವಾಗ ದಾರಿಯಲ್ಲಿ ಈಡಪೆನಲಿ ಕರ್ನೂಲ ವೇಚ ಮುಸ್ತನನ್ನು ಸೆರೆಹಿಡಿದು ಅವನಿಂದ ಸಂಪತ್ತು ಪಡೆದು, ಮುರಾರಿರಾವ ಚಿಟವತಿಲಾಲನೊಂದಿಗೆ ಕಾಳಗ ಮಾಡಿ ಅವನ ಹಲವು ಪ್ರದೇಶಗಳನ್ನು ಕೈವಶ ಮಾಡಿಕೊಂಡು, ತನ್ನೂರಿಗೆ ಮರಳಿ ಬಂದು ಸೇರಿದನು. ಸವಣೂರಿನವನಿಗೆ ಬೆದರಿಕೆ ಹಾಕಲು ಹೋದರು. ಈ ಸುದ್ದಿ ಕೇಳಿ ಖಾನಮಜಕೂರನು ತನ್ನ ಪರವಾಗಿ ಒಬ್ಬ ವಕೀಲನನ್ನು ನೇಮಿಸಿ ಹಲವು ಬಗೆಯ ಮುತ್ತು, ರತ್ನ ವಿರಳ ಜಿನಸುಗಳನ್ನು ಕಳಿಸಿದನು. ನವಾಬ ಸಾಹೇಬರು ಸರಿಯೆಂದು ಒಪ್ಪಿ ಸಂಧಾನ ಮಾಡಿಕೊಂಡು ವಿಶ್ವಾಸದಿಂದ ಇರೋಣವೆಂದು ಆಶೀರ್ವಾದ ಕಳಿಸಿದನು. ನಿಮ್ಮ ಮನೆತನದೊಂದಿಗೆ ದೈಹಿಕ ಸಂಬಂಧ ಬೆಳೆಸುವ ಇಚ್ಛೆ, ನೀವು ಒಪ್ಪಿದರೆ, ನಿಮ್ಮದೇ ಕಲ್ಯಾಣವಾಗುತ್ತದೆ ಎಂದು ಪತ್ರ ಬರೆದು ತಿಳಿಸಿದನು. ಆಗ ಖಾನಮಜಕೂರನು ಇವನ ರಾಜ್ಯ ವೃದ್ಧಿಸಿದೆ. ಈಗ ಒಪ್ಪದಿದ್ದರೆ ಸರಿಯಾಗಲಿಕ್ಕಿಲ್ಲ. ಒಪ್ಪುವುದೇ ಯೋಗ್ಯವೆಂದು ಸಮಾಲೋಚನೆ ಮಾಡಿ ಒಪ್ಪಿಗೆ ಸೂಚಿಸಿದನು. ಹಾಗೆ ಪತ್ರವನ್ನು

ಬರೆದನು. ಈ ಸುದ್ದಿ ಓದಿ ನವಾಬನಿಗೆ ತುಂಬ ಸಂತೋಷವಾಯಿತು. ತನ್ನ ಮಗಳ ಮಗನಿಗೆ ಅಬ್ದುಲ್ಲಾ ಖೈರಖಾ ಉರ್ಫ್ ಖೈರಮಿಯಾನಿಗೆ ನೀಡಿದನು. ಅವರ ತಂಗಿಯನ್ನು ಕರಿಮಿಯಾಸನಿಗೆ ತಂದುಕೊಂಡರು. ಅದನ್ನು ೧೧೯೩ ಹಿಜರಿಯಲ್ಲಿ ಅವರ ಬಳಗದವರನ್ನೆಲ್ಲ ಪಟ್ಟಣಕ್ಕೆ ಕರೆಯಿಸಿ ಲಗ್ನದ ಕಾರ್ಯ ಮಾಡಿ ಮುಗಿಸಿದರು. ಆಗ ಇವರ ಅವರ ಸಂಬಂಧ ಬೆಳೆದು, ಇವರು ತಮ್ಮ ಹಳೆಯ ಪ್ರದೇಶ ಮರಾಠರಿಗೆ ಹೋಗಿದೆ. ನೀವು ಸ್ವಲ್ಪ ಸೈನ್ಯ ಕೊಟ್ಟರೆ ಅದನ್ನು ಮರಳಿ ಪಡೆಯಬಹುದು ಎಂದು ಬೇಡಿಕೊಂಡರು. ಸರಿ ಎಂದವರು ಒಪ್ಪಿ ತಮ್ಮ ಹಲವು ಸರದಾರರನ್ನು, ಸೈನ್ಯವನ್ನು ಕೊಟ್ಟು ಕಳಿಸಿದರು. ಅಲ್ಲಿಂದ ಸೈನ್ಯ ಬಂತು. ಅವರ ಸರದಾರರು ಮರಾಠರೊಂದಿಗೆ ಕಾಳಗ ಮಾಡಿ, ಕೆಲವು ಹಣ ನೀಡಿ, ೧೨ ಅವರು ತೆಗೆದುಕೊಂಡರು. ಅವರಿಗಿದನ್ನು ಒಪ್ಪಿಸಿ ತಮ್ಮ ಬಾದಶಹಾನ ಬಳಿಗೆ ಹೋದರು. ಬಳಿಕ ಹೈದರಲಿ ಘಟ್ಟದ ಕೆಳಗಿನ ಪ್ರದೇಶದ ಬಂದೋಬಸ್ತಿಗಾಗಿ ಹೊರಟ. ಆಗ ಇವನನ್ನು ಕರೆ ಕಳಿಸಿದರು. ಅವನು ತನ್ನ ಮಗ ನವಾಬ ಬಹಾದ್ದೂರನ ಅಳಿಯ ಖೈರ್‌ಮಿಯಾನಿಗೆ ೨೦೦ ಅಶ್ವದಳ, ೪೦೦ ಕಾಲ್ದಳ, ಕೆಂಪು ಬಟ್ಟೆ ನಿಶಾನೆಯನ್ನು ನೀಡಿ ಕಳಿಸಿದನು. ಅವರ ಜೊತೆಗೆ ಚಿಂತೊಪಂತನೆಂಬ ಅಂಗರಕ್ಷಕನನ್ನು ಕಳಿಸಿದನು. ಅವರು ಹೋಗಿ ತಲುಪಿದರು. ಅನಂತರ ಎಷ್ಟೋ ದಿನಗಳ ಬಳಿಕ ನವಾಬ ಸಾಹೇಬರಿಗೆ ತಿಳಿಸಿದರು. ತಮ್ಮ ಆರೋಗ್ಯ ಸರಿಯಿಲ್ಲ. ಅಪ್ಪಣೆ ನೀಡಿದರೆ ಊರಿಗೆ ಹೋಗಿ ಬರುತ್ತೇನೆ ಎಂದಾಗ, ಮಗಳ ದಾಕ್ಷಿಣ್ಯಕ್ಕಾಗಿ ಹೋಗಿಬನ್ನಿ ಎಂದಪ್ಪಣೆಯಾಯಿತು. ಇವರು ಚಿಂತೊಪಂತನನ್ನು ಬಿಟ್ಟು ಸವಣೂರಿಗೆ ಹೊರಟು ಬಂದರು. ಇಷ್ಟರಲ್ಲಿ ನವಾಬ ಬಹಾದೂರ ತೀರಿಕೊಂಡರು. ಆಗ ೧೧೯೭ ಹಿಜರಿ ಶಕೆ ಶುರುವಿತ್ತು. ಟೀಪೂಸುಲ್ತಾನನು ಗದ್ದುಗೆಯ ಮೇಲೆ ಕೂತಿದ್ದ. ಅವರೂ ಈ ವರ್ತಮಾನವನ್ನು ಕೇಳಿ ಇವರು ಕುಶಲವಾರ್ತೆಯನ್ನು ಕೇಳಿರುವದಾಗಿ ಪತ್ರ ಬರೆದು ಸ್ವಲ್ಪ ಕಾಣಿಕೆ ಕೊಟ್ಟರು. ಇದನ್ನು ಕಂಡು ಟೀಪೂ ಶ್ರೇಷ್ಠರಾದವರು ಸಿಂಹಾಸನವೇರಿದಾಗ ಸನ್ಮಾನದ ಪೋಷಾಕು, ನಜರಾಣಾ ವಗೈರೆ ಕಳಿಸುವ ಪದ್ಧತಿಯಿದೆ. ಆದರೆ ಇವನು ಆ ಪದ್ಧತಿಯಂತೆ ಕಳಿಸಲಿಲ್ಲ ಎಂದು ಅಸಮಾಧಾನಗೊಂಡನು. ಟೀಪೂ ಗದ್ದುಗೆ ಏರಿದಾಗ ರಾಜ್ಯದ ಬಂದೋಬಸ್ತ ಆಗಿರಲಿಲ್ಲ. ಆದರೂ ಆ ಕಾಲಕ್ಕೆ ಉಪದ್ರವ ನೀಡಲಿಲ್ಲ. ಆಗ ಧೋಂಡಜಿ ವಾಘ ಕೊನೆಗೆ ಸನ್ ೧೨೧೧ ಹಿಜರಿಯಲ್ಲಿ ಟೀಪೂ ಸುಲ್ತಾನನ ಆಶ್ರಯಕ್ಕೆ ಬಂದು ಮುಸಲ್ಮಾನನಾದ. ಅವನಿಗೆ ಹೆಸರು ಸೈದ ಅಹಮದ ಎಂದಿಟ್ಟರು. ಅನಂತರ ಮುಲುಕ ಜೋಹಾಖಾ ಎಂದು ಹೆಸರಿಟ್ಟರು. ಅವನು ಮರಾಠರ ಸೆರೆಯಲ್ಲಿದ್ದ. ಅವನು ಕಾರ್ಯದ ಶಿಫಾರಸು ಮಾಡಿ ಬಿಟ್ಟರು. ಬಿಡುಗಡೆಯಾಗಿ ಬಂದಿದ್ದ ಕೆಳಘಟ್ಟದ ದಂಡಯಾತ್ರೆಯ ಕಾಲಕ್ಕೆ ಎಷ್ಟೋ ದಿನಗಳ ಕಾಲ ಬಿಷ್ಟಪ್ಪನ ಸಹವಾಸದಲ್ಲಿದ್ದ ಸುದ್ದಿಯಿತ್ತು. ಅವನ ಜೊತೆಗೆ ಬಹಾದೂರ ಸಾಹೇಬರ ಸೈನ್ಯದಲ್ಲಿ ಚಾಕರಿಗಿದ್ದ.

ಅನಂತರ ಬಿಷ್ಷಪ್ಪ ತೀರಿಹೋದ ಬಳಿಕ ಅಲ್ಲಿಂದ ಸವಣೂರಿಗೆ ಬಂದ ಆಗ ಭರ್ತಿಯಾದ ೬೦,೦೦೦ ಸವಾರರ ವರ್ತನೆಯಿಂದಾಗಿ ನವಾಬನಿಗೆ ಮೋಸವಾಯಿತು. ನಮ್ಮ ಮನೆಗೇಕೆ ಮೋಸವಾಯಿತು ಎಂದು ನವಾಬನು ಕೇಳಿದಾಗ, ಅವನು ಎಂದನು–ವರ್ಷಕ್ಕೆ ಲಕ್ಷ ರೂಪಾಯಿ ನೀಡುವ ಮತ್ತು ನಮ್ಮ ಸವಾರರಿಂದ ಸೇವೆ ಮಾಡಿಸಿಕೊಳ್ಳುವ ಕರಾರು ಆಗಿತ್ತು. ಮತ್ತು ನನ್ನ ಎಷ್ಟೋ ಪ್ರದೇಶವನ್ನು ಮರಾಠರು ಹಸ್ತಗತ ಮಾಡಿಕೊಂಡಿದ್ದಾರೆ. ಅದನ್ನೆಲ್ಲ ಬರೆದುಕೊಡಬೇಕು. ನಾವು ಹೋರಾಟ ಮಾಡಿ ಗೆದ್ದು ನಿನಗೆ ನೀಡುತ್ತೇವೆ. ನಮ್ಮ ಕೈಯಿಂದ ಸಚಿವ ಕಾರ್ಯ ಮಾಡಿಸಿಕೊಳ್ಳಬೇಕು ಎಂದನು. ಈ ಎರಡೂ ಪ್ರಶ್ನೆಯನ್ನು ನವಾಬ ಸಾಹೇಬನು ಆಲಿಸಿ ಖಾನಮಜಕೂರನು ತನ್ನ ಬಳಿ ಸಂಪತ್ತಿಲ್ಲ ಎಂದು ಅಸಹಾಯಕನಾಗಿ ಮರಾಠರು ಹಸ್ತಗತ ಮಾಡಿಕೊಂಡ ರಾಜ್ಯವನ್ನು ಬರೆದು ಕೊಟ್ಟ. ಸನದು ಮಾಡಿಸಿಕೊಂಡು ಹೊರಟ. ಶೌರ್ಯವನ್ನು ಮೆರೆದ. ಮೂರೋ ನಾಲ್ಕೋ ಜಿಲ್ಲೆಗಳನ್ನೇ ನುಗ್ಗಿ ಕೊಲೆ ಮಾಡಿ, ಎಷ್ಟೋ ಗ್ರಾಮಗಳನ್ನು ಸುಲಿಗೆ ಮಾಡಿದನು. ಬಳಿಕ ಮಿಶ್ರಿಕೋಟೆಗೆ ಬಂದನು. ಅಲ್ಲೇ ಟಿಕಾಣಿ ಹೂಡಿ ಎರಡು ಲಕ್ಷ ಸವಣೂರು ಹೊನ್ನು, ಎಷ್ಟೋ ಪದಾರ್ಥಗಳನ್ನು ನವಾಬರ ಸೇವೆಗೆ ಕಳಸಿಕೊಟ್ಟನು. ಅನಂತರ ನವಾಬನು ಸನ್ಮಾನದ ಪೋಷಾಕು ಚವರಿ ವಿಪತ್ತಿನ ನಗಾರೆ ಮುಂತಾದ ಉಡುಗೊರೆಯನ್ನು ನೀಡಿದನು. ಆಗ ಧೋಂಡಜಿ ವಾಘನು ಸಂತೋಷ ಪಟ್ಟು ೧೦೦ ಅಶ್ವದಳ, ೨೦೦೦ ಕಾಲ್ದಳಗಳನ್ನು ಭರ್ತಿಮಾಡಿ ಟೀಪೂನ ರಾಜ್ಯದಲ್ಲಿ ನಿಜಾಮಲ್ಲಿಖಾನನ ರಾಜ್ಯದಲ್ಲಿ ಲೂಟಿ ಮಾಡಲು ಶುರು ಮಾಡಿದನು. ಆಗ ಮಿಶ್ರಿಕೋಟೆಯ ಕಿಲ್ಲೆದಾರ ತನ್ನ ಹೆಂಗಸನ್ನು ನೀಡಿದನು. ಆ ಸ್ತ್ರೀ ಪುರುಷರಿಗಿಂತ ಪರಾಕ್ರಮಶಾಲಿಯಾಗಿದ್ದಳು. ಆಗ ಟೀಪು ಸುಲ್ತಾನನು ನಗರದ ಪ್ರದೇಶ, ಕೋಡಿಮಾಲ ಬಂದರು ಪ್ರದೇಶ–ಮುಂತಾದ ಆಯಾಸಖಾನನ ಕಿಯಾನ್ ನವಾಬ ಬಹಾದೂರನ ಜೊತೆಗೆ ಫಿತೂರಿ ಮಾಡಿ ಬಹಾದೂರ ಕಾಲದಲ್ಲಿ ಎಷ್ಟೋ ಪ್ರದೇಶವನ್ನು ಆಂಗ್ಲರಿಗೆ ನೀಡಿದ್ದ. ಅನಂತರ ಆ ಎಲ್ಲ ಪ್ರದೇಶವನ್ನು ಬಿಡಿಸಿಕೊಂಡು ಬಿದನೂರಿಗೆ ಬಂದನು. ಈ ಸುದ್ದಿ ಕೇಳಿ ಖಾನಮಜಕೂರನು ಟೀಪು ನಮ್ಮ ಮೇಲೆ ತುಂಬ ಮುನಿದಿದ್ದಾನೆ. ಅವನು ಇಲ್ಲಿಗೆ ಬಂದು ತಮ್ಮ ಪ್ರದೇಶವನ್ನು ಕಸಿದುಕೊಳ್ಳುತ್ತಾನೋ ಏನೋ ಎಂದು ಹೆದರಿ, ಖೈರಮಿಯಾನ ಮೂಲಕ ೪೦,೦೦೦ ರೂಪಾಯಿ. ಎಷ್ಟೋ ಗೌರವಾನ್ವಿತ ಪೋಷಾಕು ಕೊಟ್ಟು ಕಳಿಸಿದನು. ಟೀಪೂ ತುಂಬ ಕರುಣಾಮಯಿ ಆಗಿದ್ದ. ಇದರಿಂದಾಗಿ ಮನದೊಳಗಿನ ಅಸಮಾಧಾನ ಪರಿಹಾರಗೊಂಡು, ಅವನ ಪ್ರದೇಶವನ್ನು ಅವನಿಗೇ ನೀಡಿ, ಮಜರಾಬಾದ ಉರ್ಫ್ ಬಲ್ ಮಾರ್ಗದ ಮೂಲಕ ಪಟ್ಟಣಕ್ಕೆ ಬಂದನು. ಆಗ ಆಂಗ್ಲರ ಮತ್ತು ಟೀಪೂವಿನ ನಡುವೆ ಸಂಧಾನವಾಯಿತು. ಟೀಪೂವಿನೊಂದಿಗೆ ಒಪ್ಪಂದವಾಗಿದ್ದರಿಂದ ಖಾನಮಜಕೂರನೂ ಸಂತೋಷದಿಂದ ಇದ್ದ. ಆದರೂ ಯಾವಾಗ ಮತ್ತೆ ಉಪದ್ರವ ಶುರುವಾಗುವದೋ ಎಂದು ಒಂದು ಕಣ್ಣು ಇಟ್ಟೇಇದ್ದ.

ಮುಂದೆ ೧೧೯೯ ಹಿಜರಿಯಲ್ಲಿ ಟೀಪೂಸುಲ್ತಾನನು ಬುರಹಾನದಿನನನ್ನು ಸರದಾರನನ್ನಾಗಿ ಮಾಡಿ ನರಗುಂದವನ್ನು ವಶಪಡಿಸಿಕೊಳ್ಳಲು ಕಳಿಸಿದನು. ಆಗ ನರಗುಂದದಲ್ಲಿ ಕಾಳಪ್ಪ ಎಂಬ ಹಕೀಮನಿದ್ದ. ಅವನಿಗೆ ಪರಶುರಾಮ ಭಾವೂ ಮಿರಜನವನ ಬೆಂಬಲವಿತ್ತು. ಅವನು ಸುಲ್ತಾನನ ರಾಜ್ಯದಲ್ಲಿ ಉಪದ್ರವ ನೀಡುತ್ತಿದ್ದ. ಹೀಗಾಗಿ ಸದರಿ ಸರದಾರನಿಗೆ ಹಲವು ಸರಂಜಾಮ ನೀಡಿ ಕಳಿಸಿಕೊಟ್ಟನು. ಅದೇ ವರುಷ ಪುಣೆಯವರು ನಿಜಾಮ ಅಲಿಖಾನನೊಂದಿಗೆ ಸಖ್ಯ ಬೆಳೆಸಿ, ಅವರಿಬ್ಬರೂ ಸೇರಿ ಅಪಾರ ಸೈನ್ಯದೊಂದಿಗೆ ಇವರ ರಾಜ್ಯಕ್ಕೆ ಬಂದರು. ಆಗ ತುಂಗಭದ್ರೆಯ ಈಚಿನ ಹಲವು ರಾಜ್ಯಗಳನ್ನು ಟೀಪೂ ವಶಪಡಿಸಿಕೊಂಡಿದ್ದ. ಅದು ಹೇಗೆಂದರೆ, ಅವನು ವಶಪಡಿಸಿಕೊಂಡಾಗ ಟೀಪೂ ಸುಲ್ತಾನ ಬಹಾದೂರನು ಕೋಡಿಯಾಲ ಪ್ರದೇಶದಿಂದ ಪಲಾಯನ ಮಾಡಿ ಪಟ್ಟಣಕ್ಕೆ ಬಂದನು. ಆಗ ಜಮಾದಿಸಾನಿಯು ನವವೆ ತಾರೀಖ ಅಖೇರ ಸನ್ ೧೧೯೯ ಹಿಜರಿಯಲ್ಲಿ ಅಪಾರ ಸೈನ್ಯದೊಂದಿಗೆ ಅವಧಾನಿಯತ್ತ ಕೂಚ್ ಮಾಡಿದನು. ಅವಧಾನಿ ವಶಪಡಿಸಿಕೊಂಡನು. ಆ ಕೈಫಿಯತ್‌ನ್ನು ಮೂರನೇ ಔರಂಗನ ಖುಲಾಶೆಯಲ್ಲಿ ಬರೆಯಲಾಗಿದೆ. ಅಲ್ಲಿಂದ ಲೋಚನಗಡ ಮತ್ತು ಕೇದಲಿ ಲೂಟಿ ಮಾಡಿ ಗರಗನಾಥ ದಾರಿಯ ಮೂಲಕ ತುಂಗಭದ್ರೆಗೆ ಬಂದು ಗೆರಿಲ್ಲಾ ಸೈನ್ಯವನ್ನು ಸದೆ ಬಡಿದು ವೈರಿಯನ್ನು ಪರಾಭವಗೊಳಿಸಿದನು. ಅಲ್ಲಿಂದ ಸವಣೂರದತ್ತ ಕೂಚ್ ಮಾಡಿದನು. ಆಗ ಖಾನಮಜಕೂರನು ಸಕಲಸಾಮಾನು ಸರಂಜಾಮುಗಳನ್ನೆಲ್ಲ ತೊರೆದು ತನ್ನ ಹೆಂಡತಿ ಮತ್ತು ಕೆಲವು ಮುತ್ತು ರತ್ನಗಳೊಂದಿಗೆ ಓಡಿ ಹೋಗಿ ಗೆರಿಲ್ಲಾ ಸೈನ್ಯವನ್ನು ಸೇರಿಕೊಂಡ. ಖೈರಮಿಯಾ ಮಾತ್ರ ಊರಲ್ಲೇ ಇದ್ದ. ಈ ಸುದ್ದಿ ಟೀಪೂನ ಕಿವಿಗೆ ಬಿದ್ದು. ತನ್ನ ಸಚಿವನಾದ ಮೀರಮಹಮದ ತಾದಮನನ್ನು ಊರೊಳಗೆ ಕಳಿಸಿದನು. ಅವನು ಊರೊಳಗೆ ಬಂದು, ಸಾಮಾನು ಸರಂಜಾಮುಗಳನ್ನೆಲ್ಲ ತೆಗೆದುಕೊಂಡು, ಖೈರಮಿಯಾನನ್ನು ಕುದುರೆಯ ಮೇಲೆ ಕೂರಿಸಿಕೊಂಡು ಟೀಪೂವಿನ ಬಳಿಗೆ ಬಂದನು. ಅವನಿಗೂ ಭೇಟಿ ಮಾಡಿಸಿದ. ನಿಮ್ಮ ತಂದೆ ಎಲ್ಲವನ್ನು ತೊರೆದು ಗೆರಿಲ್ಲಾ ಸೈನ್ಯವನ್ನು ಸೇರಿಕೊಂಡ ಕಾರಣವೇನು? ಎಂದು ಕೇಳಿದನು. 'ಅವನು ಮೂರ್ಖತನ ಮಾಡಿದ್ದು ತನಗೆ ಮೊದಲೇ ಗೊತ್ತಾಗಲಿಲ್ಲ. ಗೊತ್ತಾಗಿದ್ದರೆ ಯೋಗ್ಯ ಬಂದೋಬಸ್ತ ಮಾಡುತ್ತಿದ್ದೆ' ಎಂದು ಉಪಾಯದಿಂದ ಹೇಳಿ ಪಾರಾದ. ಅನಂತರ ಟೀಪೂ ತನ್ನ ಡೇರೆಯ ಹತ್ತಿರವೇ ಅವನಿಗೊಂದು ಡೇರೆ ಹಾಕಿ ಕೊಟ್ಟು, ಅಲ್ಲೇ ಉಳಿದುಕೊಳ್ಳುವ ಅವಕಾಶ ಮಾಡಿಕೊಟ್ಟ. ತಾನು ಊಟ ಮಾಡುವಾಗ ಅವನಿಗೂ ಒಂದು ತಟ್ಟೆಯಲ್ಲಿ ಊಟ ಹಾಕಿ ಕೊಡುತ್ತಿದ್ದ. ಕೆಲ ದಿನಗಳ ಬಳಿಕ ೧೨೦೧ ಹಿಜರಿಯಲ್ಲಿ ಮರಾಠರು ವಶಪಡಿಸಿಕೊಂಡಿದ್ದ ಪ್ರದೇಶವನ್ನು ಸ್ನೇಹದಿಂದ ಮರಳಿ ಪಡೆದನು. ರಾಸ್ತೆ, ಮರಾಠೆ, ಪರಶುರಾಮ ಬಾವೂ ಮತ್ತು ನಿಜಾಮಅಲಿಖಾನ ಇವರೆಲ್ಲರೂ ಸೇರಿಕೊಂಡು

ಟೀಪೂನನ್ನು ಭೇಟಿಯಾಗಿ, ಖಾನ ಮಜಕೂರನು ಮಾಡಿದ ಅಪರಾಧವನ್ನು ಮರೆತು, ಕ್ಷಮೆ ಮಾಡಿ ಅವನ ಪ್ರದೇಶವನ್ನು ಅವನಿಗೆ ಮರಳಿ ಕೊಡಬೇಕೆಂದು ಶಿಫಾರಸ್ಸು ಮಾಡಿದ್ದರಿಂದ, ಆಶ್ವಾಸನೆ ನೀಡಿದ್ದರಿಂದ ಮರಳಿ ಕೊಟ್ಟನು. ಅನಂತರ ಅವನು ಐದು ವರ್ಷಗಳ ಕಾಲ ಆಳ್ವಿಕೆ ಮಾಡಿದನು. ಹಿಂದೆ ೩೫ ವರ್ಷ ಆಳ್ವಿಕೆ ನಡೆಸಿದ್ದ. ಒಟ್ಟೂ ೪೦ ವರ್ಷ ರಾಜ್ಯಕಾರಭಾರ ಮಾಡಿ ತೀರಿಕೊಂಡ. ಅನಂತರ ಖೈರಮಿಯಾ ರಾಜ್ಯವಾಳಿದನು. ಇವನು ರಾಜ್ಯವಾಳುವಾಗ ಮರಾಠರು ಮತ್ತು ಆಂಗ್ಲರು ಸೇರಿ ಟೀಪೂವಿನ ಮೇಲೆ ಏರಿಹೋದರು. ಆಗ ಪರಶುರಾಮ ಭಾವೂ ಮತ್ತು ಹರಿಪಂತ ಫಡಕ್ಕೆ ಒಗ್ಗಟ್ಟಾಗಿ ಸವಣೂರನ್ನು ವಶಪಡಿಸಿಕೊಂಡರು. ಇದಕ್ಕೆ ಪರವಾಗಿ ಒಂದು ಜಿಲ್ಲೆಯನ್ನು ನೀಡಿದರು. ಇಂದಿನವರೆಗೆ ಇದೇ ಸ್ಥಿತಿಯಿದೆ–ಎಂದು ಗ್ರಂಥಕಾರನು ಬರೆದಿದ್ದಾನೆ.

■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ
ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359